ಹುಬ್ಬಳ್ಳಿ
ಮಂಗಳವಾರ, 19 ಮೇ 2026
ಸಂಪುಟ 16, ಸಂಚಿಕೆ 55, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ರಾಜ್ಯ ಸರ್ಕಾರಕ್ಕೆ 3 ವರ್ಷ
ಇಂದು ಸಾಧನೆಯ ಸಂಭ್ರಮ
• ಪುಟ 2

ಕಿರುಸುದ್ದಿ

ಸ್ನೇಹ ಸಮ್ಮೇಳನ ನಾಳೆ

ಧಾರವಾಡ: ಜನತಾ ಶಿಕ್ಷಣ ಸಮಿತಿ ಬನಶಂಕರಿ ಕಲಾ-ವಾಣಿಜ್ಯ ಮತ್ತು ಗುಬ್ಬಿ ವಿಜ್ಞಾನ ಕಾಲೇಜ ವಾರ್ಷಿಕ ಸ್ನೇಹ ಸಮ್ಮೇಳನ ಮೇ 20ರ ಬೆಳಗ್ಗೆ 10.15ಕ್ಕೆ ಕಾಲೇಜಿನ ಸನ್ನಿಧಿ ಕಲಾಕ್ಷೇತ್ರದಲ್ಲಿ ಜರುಗಲಿದೆ. ಜನಪದ ಗಾಯಕಿ ದಿವ್ಯಾ ಆಲೂರು ಅತಿಥಿಗಳಾಗಿ ಆಗಮಿಸಲಿದ್ದು, ಸಂಸ್ಥೆ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಅಧ್ಯಕ್ಷತೆ ವಹಿಸವರು. ಎಂಸಿಎ ವಿಭಾಗದ ನಿರ್ದೇಶಕ ಡಾ.ಸೂರಜ್ ಜೈನ್, ಪ್ರಾಚಾರ್ಯ ವೆಂಕಟೇಶ ಮುತಾಲಿಕ, ಐಕ್ಯೂಎಸಿ ಸಂಯೋಜಕ ಡಾ.ಶೌಕತ್ ಅಲಿ ಮೇಗಲಮನಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ಲಾಟ್ ನೀಡದ ರೆಹಮಾನ್‌ಗೆ ದಂಡ

ಧಾರವಾಡ: ಗ್ರಾಹಕರಿಗೆ ನಿವೇಶನ ನೀಡದೆ ವಂಚಿಸಿರುವ ಹುಬ್ಬಳ್ಳಿಯ ಮಿದಾಸ್ ಡೆವಲಪರ್‌ನ ಅತುಲ್ ರೆಹಮಾನ್‌ಗೆ ಜಿಲ್ಲಾ ಗ್ರಾಹಕರ ಆಯೋಗ ದಂಡ ಮತ್ತು ಪರಿಹಾರ ನೀಡುವಂತೆ ಆದೇಶ ಮಾಡಿದೆ.

ಹುಬ್ಬಳ್ಳಿಯ ಯಲ್ಲಾಪುರದ ಹಳ್ಳಿಯಲ್ಲಿ ಸಂಚಾರ ಪಾರ್ಕ್ ಹೆಸರಲ್ಲಿ ರೆಹಮಾನ್ ಪ್ಲಾಟ್ ಅಭಿವೃದ್ಧಿಪಡಿಸಿದ್ದು, ಹುಬ್ಬಳ್ಳಿಯ ಆಶ್ಮಾ ಕಿರೇಸೂರ ಹಾಗೂ ಜಹೀರ್ ಅಬ್ಬಾಸ್ ಪ್ಲಾಟ್ ಖರೀದಿ ಮಾಡಿದ್ದರು. ಪ್ಲಾಟ್ ಮೊತ್ತದ ಅರ್ಧ ಹಣವೂ ನೀಡಿ, ಕರಾರು ಪತ್ರವನ್ನು ಮಾಡಿಕೊಂಡಿದ್ದರು. ಅಲ್ಲದೇ, ಉಳಿದ ಹಣ ಪ್ಲಾಟ್ ಖರೀದಿ ಪತ್ರದ ವೇಳೆಯಲ್ಲಿ ಪಾವತಿಸುವಂತೆಯೂ ಸಹ ಒಪ್ಪಂದ ಮಾಡಿಕೊಂಡಿದ್ದರು. ಅತುಲ್ ರೆಹಮಾನ್ ಪ್ಲಾಟ್ ನೀಡದೆ, ಅವುಗಳನ್ನು ಪತ್ನಿ ಹೆಸರಿಗೆ ವರ್ಗಾಯಿಸಿ, ಬೇರೆಯವರಿಗೆ ಮಾರಾಟ ಮಾಡಿದ ಕುರಿತು ಜಹೀರ್ ಮತ್ತು ಆಶ್ಮಾ ಗ್ರಾಹಕರ ಆಯೋಗಕ್ಕೆ ದೂರು ನೀಡಿದ್ದರು. ದೂರಿನ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷ ಈಶಪ್ಪ ಭೂತೆ ಮತ್ತು ಸದಸ್ಯೆ ವಿಶಾಲಕ್ಷಿ ಬೋಳಶೆಟ್ಟಿ ಅತುಲ್ ರೆಹಮಾನ್ ಸೇವಾ ನ್ಯೂನ್ಯತೆ ಎಸಗಿರುವುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಲ್ಲದೇ ಪ್ಲಾಟ್ ಮೊತ್ತದ ತಲಾ ರೂ.11.50 ಲಕ್ಷ ಹಣ ಇಬ್ಬರು ದೂರುದಾರರಿಗೆ (ಒಟ್ಟು ರೂ.23.28 ಲಕ್ಷ) ತಿಂಗಳೊಳಗೆ ಸಂದಾಯ ಮಾಡಬೇಕು. ವಿಳಂಬ ಮಾಡಿದರೆ, ಶೇ.10ರ ಬಡ್ಡಿ ಹಾಕಿ ನೀಡುವಂತೆ ಆಯೋಗ ಆದೇಶ ಮಾಡಿದೆ.

ಅಧಿಕ ಮಾಸೋತ್ಸವ ಉದ್ಘಾಟನೆ



ಧಾರವಾಡ: ಸುಮಾರು ಮೂರು ವರ್ಷಕ್ಕೆ ಒಮ್ಮೆ ಬರುವ ಅಧಿಕ ಮಾಸ, ಮಲ ಮಾಸ, ಪುರುಷೋತ್ತಮ ಟಮಾಸ ಎಂದು ಪ್ರಸಿದ್ಧ ಪಡೆದ ಮಾಸ. ಈ ಮಾಸದಲ್ಲಿ ಎಲ್ಲರೂ ಶಕ್ತಿನುಸಾರ ದಾನ, ಧರ್ಮ ವ್ರುತಾಚರಣೆ ಭಗವದ್ ಚಿಂತನೆ, ಉಪವಾಸ, ಪರೋಪಕಾರ, ಪಾರಾಯಣ, ಪ್ರದಕ್ಷಿಣೆ, ಜಪ ತಪ, ಭಾಗವತ ಶ್ರವಣಗಳನ್ನು ವಿಶೇಷವಾಗಿ ಅಪೂಪ ದಾನ, ಮುಂತಾದ ಧರ್ಮಚರಣೆಗಳನ್ನು ಅವಶ್ಯವಾಗಿ ಎಲ್ಲರೂ ಮಾಡಬೇಕಾದ ಪುಣ್ಯದಾಯಕ ಮಹಿಮೆ ನಾರದ ಪುರಾಣ, ಪದ್ಮ ಪುರಾಣಗಳಲ್ಲಿ ತಿಳಿಸಿಕೊಟ್ಟಿದ್ದಾರೆ ಎಂದು ಪಂ. ಪ್ರಹ್ಲಾದಚಾರ್ಯ ಗಲಗಲಿಯವರು ತಿಳಿಸಿದರು.

ಸತ್ತೂರಿನ ನಾರಾಯಣ ಪಾರಾಯಣ ಬಳಗದ ಆಶ್ರಯದಲ್ಲಿ ರಘೋತ್ತಮ ಅವಧಾನಿಯವರ ನಿವಾಸದಲ್ಲಿ ನಡೆದ ಅಧಿಕ ಮಾಸೋತ್ಸವ 2026 ಉದ್ಘಾಟಿಸಿ ಮಾತನಾಡಿ, ಶುಭ ಅಧಿಕ ಮಾಸದಲ್ಲಿ ಸೂರ್ಯನು ಯಾವ ರಾಶಿಯಲ್ಲಿಯೂ ಸಂಕ್ರಮಣ ಮಾಡುವುದಿಲ್ಲ ಎಂಬ ಕಾರಣಕ್ಕೆ, ಯಾವ ಶುಭ ಕಾರ್ಯಗಳಾದ ಮದುವೆ, ಮುಂಜುವೆ, ಗೃಹಪ್ರವೇಶ ಮುಂತಾದವುಗಳು ಜರುಗಿದವು ಎಂದು ತಿಳಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಪಾರಾಯಣ ಬಳಗದ ಸದಸ್ಯರಿಂದ ಹರಿವಾಯು ಗುರುಗಳ ಸ್ತೋತ್ರ ಮತ್ತು ನಾರಾಯಣಿ ಭಜನಾ ಮಂಡಳಿಯಿಂದ 33 ತಾರತಮ್ಯ ಭಜನೆ ಹರಿವಾಣ ಸೇವೆ ನಡೆಯಿತು.

ಈ ವೇಳೆ ರಘೋತ್ತಮ ಅವಧಾನಿ, ಕೃಷ್ಣ ಹುನಗುಂದ, ಎಲ್.ವಿ.ಜೋಶಿ, ಆನಂದ ದೇಶಪಾಂಡೆ, ಪಾಂಡುರಂಗ ಕುಲಕರ್ಣಿ, ಧೀರೇಂದ್ರ ತಂಗೋಡ, ವಿಶ್ವನಾಥ ಕಾಂಗೋ ವಿಠ್ಠಲ ಅಂಬೇಕರ, ಪ್ರಶಾಂತ ಕುಲಕರಣಿ , ಶ್ರೀನಿವಾಸ ಪಟ್ಟಣಕೊಡಿ, ಅನಿಲ ಪುರೋಹಿತ, ಪ್ರೊ.ಸಿ.ಕೆ.ಕುಲಕರ್ಣಿ, ವಿಲಾಸ ಸಬ್ನೀಸ, ಮುಂತಾದ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.



ಹುಬ್ಬಳ್ಳಿ: ರಾಷ್ಟ್ರೀಯ ಸ್ವಯಂಸೇವಕ ಸಂಘ, ನವೀನ್ ಪಾರ್ಕ್ ನಿವಾಸಿಗಳ ಸಂಘ ಹಾಗೂ ರಾಷ್ಟ್ರೋತ್ಥಾನ ರಕ್ತ ಭಂಡಾರ ಕೇಂದ್ರದಿಂದ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ವ್ಯಾಪಾರಸ್ಥರಾದ ವಿನಾಯಕ ಆಕಳವಾಡಿ, ವಿಜಯಕುಮಾರ್ ಗುಡ್ಡದ, ರಾಷ್ಟ್ರೀಯ ಸ್ವಯಂಸೇವಕ ಸಂಘ ಕೇಶ್ವಾಪುರ ನಗರದ ಎಲ್ಲ ಸ್ವಯಂ ಸೇವಕರು ಹಾಗೂ ರಕ್ತ ಕೇಂದ್ರದ ಡಾ. ಸಂಗೊಳ್ಳಿ ಎಸ್. ಎಸ್., ದತ್ತಮೂರ್ತಿ ಕುಲಕರ್ಣಿ, ವಿನೋದಕುಮಾರ ಪಟ್ವಾ ಇದ್ದರು.

ನನ್ನ, ಜೋಶಿ ಹೆಸರು ಜೋಡಿಸಿದರೆ ಎಚ್ಚರ: ಮುನೇನಕೊಪ್ಪ

ಹುಬ್ಬಳ್ಳಿ: ಅಣ್ಣಿಗೇರಿ ಪಿಎಲ್‌ಡಿ ಬ್ಯಾಂಕ್ ವ್ಯವಹಾರಗಳ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಭಾವಚಿತ್ರ ಹಾಗೂ ತಮ್ಮ ಹೆಸರನ್ನು ಅನಗತ್ಯವಾಗಿ ಜೋಡಿಸುತ್ತಿರುವುದಕ್ಕೆ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅಣ್ಣಿಗೇರಿ ಬ್ಯಾಂಕಿನ ವಿಷಯದಲ್ಲಿ ಸಾರ್ವಜನಿಕ ವಲಯದಲ್ಲಿ ತಪ್ಪು ಮಾಹಿತಿ ಹಾಗೂ ವದಂತಿಗಳನ್ನು ಹರಡಲಾಗುತ್ತಿದೆ. ರಾಜಕೀಯ ದುರುದ್ದೇಶದಿಂದ ನಮ್ಮ ಹೆಸರುಗಳನ್ನು ಬಳಸಲಾಗುತ್ತಿದ್ದು, ಇದಕ್ಕೆ ಯಾವುದೇ ಆಧಾರಗಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಅಣ್ಣಿಗೇರಿ ಬ್ಯಾಂಕಿನ ಇತಿಹಾಸವನ್ನು ಉಲ್ಲೇಖಿಸಿದ ಮಾಜಿ ಸಚಿವರು, ಅಣ್ಣಿಗೇರಿ ಪಿಎಲ್‌ಡಿ ಬ್ಯಾಂಕ್ ಆರಂಭಗೊಂಡಿದ್ದು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ. ವಿಶೇಷವೆಂದರೆ, ಈಗ ಅದೇ ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿರುವಾಗಲೇ ನ್ಯಾಯಾಲಯವು ಬ್ಯಾಂಕ್‌ನ್ನು ಸಮಾಪಣೆಗೊಳಿಸಿ (ಲಿಕ್ವಿಡೇಟ್) ಆದೇಶ ಹೊರಡಿಸಿದೆ. ನವಲಗುಂದ ಪಿಎಲ್‌ಡಿ ಬ್ಯಾಂಕ್‌ನವರು ನ್ಯಾಯಾಲಯದ ಮೊರೆ ಹೋಗಿದ್ದರು. ಈ ಪ್ರಕ್ರಿಯೆಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ, ಹೀಗಿರುವಾಗ ಈ ಇಡೀ ಪ್ರಸಂಗದಲ್ಲಿ ನನ್ನ ಹೆಸರನ್ನು ಎಳೆದು ತರುತ್ತಿರುವುದು ಸಾರ್ವಜನಿಕರನ್ನು ಹಾದಿ ತಪ್ಪಿಸುವ ತಂತ್ರ ಎಂದು ತಿರುಗೇಟು ನೀಡಿದ್ದಾರೆ.



ಕುಂದಗೋಳ: ಪಟ್ಟಣದ ಎಫ್.ಕೆ. ಬಾಳಿಹಳ್ಳಿಮಠ ಹಿರಿಯ ಪ್ರಾಥಮಿಕ ಶಾಲೆಯ ಹಳೆ ವಿದ್ಯಾರ್ಥಿಗಳಿಂದ ಗಾಂಧಿ ಹಿಂದಿ ವಿದ್ಯಾಪೀಠದ ಆವರಣದಲ್ಲಿ ನಡೆದ ಗುರುವಂದನೆ ಕಾರ್ಯಕ್ರಮದಲ್ಲಿ ಶಾಲೆ ಶಿಕ್ಷಕರು, ಶಿಕ್ಷಕಿಯರನ್ನು ಸನ್ಮಾನಿಸಿದರು.

4ನೇ ದಿನಕ್ಕೆ ಮುಂದುವರಿದ ಸತ್ಯಾಗ್ರಹ | ವಕೀಲರು-ವಿದ್ಯಾರ್ಥಿಗಳ ಬೆಂಬಲ

ಹೋರಾಟಕ್ಕೆ ಗೀಗೀ ಪದಗಳ ಅಸ್ತ್ರ

ಧಾರವಾಡ: ಹು-ಧಾ ಮಹಾನಗರ ಪಾಲಿಕೆ ವಿಭಜಿಸಿ, ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಸತ್ಯಪ್ರತಿಪಾದನೆ ಸತ್ಯಾಗ್ರಹ ನಾಲ್ಕನೇ ದಿನಕ್ಕೆ ಲಗ್ಗೆಯಿಟ್ಟಿದ್ದು, ಸೋಮವಾರ ವಿವಿಧ ಸಂಘಟನೆಗಳು ಬೆಂಬಲ ಸೂಚಿಸಿವೆ.

ನಾಲ್ಕನೇ ದಿನ ಸತ್ಯಾಗ್ರಹ ಕೇವಲ ಮುಖಂಡರ ಭಾಷಣಗಳಿಗೆ ಸೀಮಿತವಾಗದೆ, ವಿಶಿಷ್ಟ ಕಲಾ ಪ್ರಕಾರಗಳ ಮೂಲಕ ಗಮನ ಸೆಳೆಯಿತು. ಮಹಿಳಾ ಕಲಾವಿದರು ಭಜನೆ ಮತ್ತು ಗೀಗೀ ಪದಗಳ ಸುರಮಳೆಗೂ ಪ್ರತ್ಯೇಕ ಪಾಲಿಕೆ ಸತ್ಯಾಗ್ರಹವು ಸಾಕ್ಷಿಯಾಯಿತು.

ಉತ್ತರ ಕರ್ನಾಟಕದ ಜನಪ್ರೀಯ ಕಲೆಯಾದ ಗೀಗೀ ಪದಗಳಿಂದ ಧಾರವಾಡಕ್ಕೆ ಆಗುತ್ತಿರುವ ಅನ್ಯಾಯ ಮತ್ತು ಪ್ರತ್ಯೇಕ ಪಾಲಿಕೆ ಅಗತ್ಯತೆಯನ್ನು ಮಹಿಳಾ ಕಲಾವಿದರು ಮನಮುಟ್ಟುವಂತೆ ಪ್ರಸ್ತುಪಡಿಸಿ, ಪ್ರತ್ಯೇಕತೆ ಹೋರಾಟಕ್ಕೆ ಸಾಥ್ ನೀಡಿದರು.

ವಕೀಲರ ಸಂಘ ಸಾಥ್: ಪ್ರತ್ಯೇಕ ಪಾಲಿಕೆಗೆ ಸ್ವಾಭಿಮಾನ ಹೋರಾಟ ಸಮಿತಿ ಕೈಗೊಂಡ ಈ ಸತ್ಯಾಗ್ರಹಕ್ಕೆ ಧಾರವಾಡ ಜಿಲ್ಲಾ ವಕೀಲರ ಸಂಘ ಬೆಂಬಲಿಸಿದ್ದು, ಕರಡಿ ಮಜಲು ಮೂಲಕ ವೇದಿಕೆ ಆಗಮಿಸಿ, ಪ್ರತ್ಯೇಕತೆಗೆ ಕಾನೂನು ಹೋರಾಟಕ್ಕೂ ಬೆಂಬಲ ಘೋಷಣೆ ಮಾಡಿತು.

ವಿದ್ಯಾರ್ಥಿಗಳಿಂದ ಬೆಂಬಲ: ಇನ್ನು ಹುರಕಡ್ಲಿ ಅಜ್ಜ ಮಹಾವಿದ್ಯಾಲಯದ ನೂರಾರು ವಿದ್ಯಾರ್ಥಿಗಳು ಪಾಲಿಕೆ ಹೋರಾಟದಲ್ಲಿ ಪಾಲ್ಗೊಂಡು, ಧಾರವಾಡದ ಉಜ್ವಲ ಭವಿಷ್ಯಕ್ಕೆ ಪ್ರತ್ಯೇಕ ಪಾಲಿಕೆ ಅನಿವಾರ್ಯ ಎಂದು ಘೋಷಣೆ ಕೂಗುವ ಮೂಲಕ ಹೋರಾಟಕ್ಕೆ ಬೆಂಬಲವೂ ಸೂಚಿಸಿದರು.

ಪ್ರತಿಭಟನೆಯಲ್ಲಿ ಮನೋಜ ಪಾಟೀಲ, ವೆಂಕಟೇಶ ಮಾಚಕನೂರ, ಅರವಿಂದ ಏಗನಗೌಡರ, ಈಶ್ವರ ಶಿವಳ್ಳಿ, ವಸಂತ ಅರ್ಕಚಾರ, ಕವಿತಾ ಕಬ್ಬೇರ, ಎಸ್.ಸಿ.ನೀರಾವರಿ, ಗುರುರಾಜ ಹುಣಸಿಮರದ, ರಾಜು ಕಮತಿ, ಮಹಾದೇವ ಹೊರಟ್ಟಿ ಸೇರಿದಂತೆ ಅನೇಕರು ಇದ್ದರು.



- ಧಾರವಾಡದ ಉಜ್ವಲ ಭವಿಷ್ಯಕ್ಕೆ ಪ್ರತ್ಯೇಕ ಪಾಲಿಕೆ ಅನಿವಾರ್ಯ ಎಂದು ಘೋಷಣೆ
- ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಆಗ್ರಹಿಸಿ ಹೋರಾಟಕ್ಕೆ ವಿವಿಧ ಸಂಘಟನೆಗಳು ಬೆಂಬಲ

ಉಸ್ತುವಾರಿ ಸಚಿವರ ಪತ್ರ

ತೀವ್ರ ಹೋರಾಟದ ನಡುವೆ ಜಿಲ್ಲಾ ಉಸ್ತುವಾರಿ ಸಚಿವರು ಹೋರಾಟಗಾರರಿಗೆ ಮಹತ್ವದ ಪತ್ರವೊಂದು ರವಾನಿಸಿದ್ದು, ಪ್ರತ್ಯೇಕ ಪಾಲಿಕೆ ರಚನೆ ಕಡತದ ಬಗ್ಗೆ ಚರ್ಚಿಸಲು ರಾಜ್ಯಪಾಲರು ಭೇಟಿಗೆ ದಿನಾಂಕ ನಿಗದಿಪಡಿಸಿದ ಪತ್ರ ಹಿರೇಮಠ ಓದಿದರು. ರಾಜ್ಯಪಾಲರ ಭೇಟಿಗೆ ದಿನಾಂಕ ಕೊಟ್ಟಿದ್ದು ಸಂತೋಷ. ಕೇವಲ ಭೇಟಿಯಷ್ಟೇ ನಮ್ಮ ಗುರಿಯಲ್ಲ. ರಾಜ್ಯಪಾಲರು ಪ್ರತ್ಯೇಕ ಪಾಲಿಕೆಯ ಕಡತಕ್ಕೆ ಕೂಡ ಅಂಕಿತ ಹಾಕುವವರೆಗೆ ಹೋರಾಟದ ವಿವಿಧ ಸ್ವರೂಪಗಳು ಮುಂದುವರೆಯಲಿವೆ ಎಂದು ಸ್ಪಷ್ಟಪಡಿಸಿದರು.

ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಿ

ಧಾರವಾಡ: ನಗರದ ಜಿಲ್ಲಾ ಆಸ್ಪತ್ರೆಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಸೋಮವಾರ ಭೇಟಿ ನೀಡಿ, ಆಸ್ಪತ್ರೆಯ ಮಹಿಳಾ ಮತ್ತು ಮಕ್ಕಳ ವಿಭಾಗ, ಹೆರಿಗೆ ವಾರ್ಡ್, ಚಿಕ್ಕಮಕ್ಕಳ ಕೊಠಡಿ ಹಾಗೂ ಸಂತ್ರಸ್ತ ಮಹಿಳೆಯರಿಗೆ ಆಸರೆಯಾದ ಸಖಿ ಒನ್ ಸ್ಟಾಪ್ ಸೆಂಟರ್‌ಗೂ ಭೇಟಿ ನೀಡಿ, ಸೌಕರ್ಯಗಳು ಪರಿಶೀಲಿಸಿದರು.

ಹೆರಿಗೆ ಮತ್ತು ಮಹಿಳಾ ವಾರ್ಡ್‌ಗಳಿಗೆ ಭೇಟಿ ನೀಡಿದ ಅಧ್ಯಕ್ಷೆ ಗರ್ಭಿಣಿಯರು, ಬಾಣಂತಿಯರ ಆರೋಗ್ಯ ವಿಚಾರಿಸಿ, ಉಚಿತ ಔಷಧಿ, ಪೌಷ್ಟಿಕ ಆಹಾರ ಹಾಗೂ ವೈದ್ಯಕೀಯ ಸೌಲಭ್ಯಗಳ ಮಾಹಿತಿ ಪಡೆದರು. ಅಲ್ಲದೇ, ಆಸ್ಪತ್ರೆಯ ಆವರಣದಲ್ಲಿ ಕಡ್ಡಾಯವಾಗಿ ಸ್ವಚ್ಛತೆಯನ್ನು ಕಾಪಾಡುವಂತೆ ಹಾಗೂ ರೋಗಿಗಳಿಗೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳಲು ವೈದ್ಯಕೀಯ ಸಿಬ್ಬಂದಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಡಾ.ನಾಗಲಕ್ಷ್ಮಿ ಚೌಧರಿ ಮಾತನಾಡಿ, ಮಹಿಳೆ ಮತ್ತು ಮಕ್ಕಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡುವ ಧಾರವಾಡ ಜಿಲ್ಲಾಸ್ಪತ್ರೆ ಕುರಿತಂತೆ ಹೆಮ್ಮೆ ವ್ಯಕ್ತಪಡಿಸಿದರು.

ಸಾವಿನ ದವಡೆಗೆ ಸಿಲುಕಿದ 72 ಜನ ತಾಯಂದಿರು ಉಳಿಸಿದ ಶ್ರೇಯಸ್ಸು ಜಿಲ್ಲಾ ಆಸ್ಪತ್ರೆ ಸಿಬ್ಬಂದಿಗೆ ಸಲ್ಲುತ್ತದೆ. ತಾಯಿ-ಮಗುವಿನ ಮರಣ ಪ್ರಮಾಣ ಸಹ ತಗ್ಗಿಸಿದೆ ಕುರಿತು ಅಭಿಮಾನ ವ್ಯಕ್ತಪಡಿಸಿದರು.

ಜಿಲ್ಲೆಯ 83 ಪೋಕ್ಸೋ ಪ್ರಕರಣ ಪೈಕಿ 12 ಬಾಲ್ಯ ವಿವಾಹ ಗರ್ಭಿಣಿಯರು, 33 ಅತ್ಯಾಚಾರಕ್ಕೊಳಪಟ್ಟ ಗರ್ಭಿಣಿಯರು ಮತ್ತು 22 ಗರ್ಭಪಾತ ಮಾಡಿಸಿದ ಪ್ರಕರಣಗಳ ಬಗ್ಗೆ ಬೇಸರಿಸಿದರು.

ರಾಜ್ಯದ ಎಲ್ಲ ಜಿಲ್ಲಾಸ್ಪತ್ರೆಗಳಲ್ಲೂ ವೈದ್ಯರ ಕೊರತೆ ಇದೆ. ಸಿಬ್ಬಂದಿಗಳು ನೇಮಕ ಕುರಿತು ಸರ್ಕಾರದ ಜೊತೆಗೆ ಚರ್ಚಿಸುವೆ. ಕೆಲವೊಮ್ಮೆ ಸಿಬ್ಬಂದಿ ನೇಮಿಸಿದರೂ ಸೇವೆ ಮಾಡಲು ತಯಾರಿಲ್ಲ ಎಂದರು.

ಈಸಂದರ್ಭದಲ್ಲಿಜಿಲ್ಲಾಆರೋಗ್ಯಾಧಿಕಾರಿ ಡಾ.ಎಸ್.ಎಂ.ಹೊರಕೇರಿ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಸಂಗಪ್ಪ ಗಾಬಿ, ಧಾರವಾಡ ತಹಶೀಲ್ದಾರ್ ದೊಡ್ಡಪ್ಪ ಹೂಗಾರ ಸೇರಿದಂತೆ ಅನೇಕರು ಇದ್ದರು.



ಸಖಿ ಕೇಂದ್ರಕ್ಕೆ ಭೇಟಿ

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ನೆರವು ನೀಡುವ ಸಖಿ ಕೇಂದ್ರಕ್ಕೂ ಭೇಟಿ ನೀಡಿದ ಡಾ.ನಾಗಲಕ್ಷ್ಮಿ ಚೌಧರಿ, ಅದರ ಕಾರ್ಯವೈಖರಿ ಅವಲೋಕಿಸಿ, ನೊಂದ ಮಹಿಳೆಯರಿಗೆ ಸಕಾಲಕ್ಕೆ ಕಾನೂನು ನೆರವು, ಕೌನ್ಸಲಿಂಗ್, ವೈದ್ಯಕೀಯ ನೆರವು ಒದಗಿಸಬೇಕು. ಆಶ್ರಯ ಕೋರಿ ಬಂದ ಮಹಿಳೆಯರ ಜೊತೆ ಗೌರವದಿಂದಲೂ ನಡೆದುಕೊಳ್ಳಲು ಸಿಬ್ಬಂದಿಗೆ ನಿರ್ದೇಶನ ನೀಡಿದರು.

ರಸ್ತೆ ಅಗಲೀಕರಣ ಕಾಮಗಾರಿ ಶೀಘ್ರ ಪ್ರಾರಂಭ

ಹುಬ್ಬಳ್ಳಿ: ನಗರದ ನ್ಯೂ ಇಂಗ್ಲಿಷ್ ಸ್ಕೂಲ್‌ದಿಂದ ಇಂಡಿ ಪಂಪ್‌ವರೆಗಿನ ರಸ್ತೆಯನ್ನು ಅಗಲೀಕರಣ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಶೀಘ್ರವೇ ಭೂಸ್ವಾಧೀನದ ಪ್ರಕ್ರಿಯೆ ಪ್ರಾರಂಭಿಸಬೇಕು ಎಂದು ಅಧಿಕಾರಿಗಳಿಗೆ ಸ್ಲಂ ಬೋರ್ಡ್ ಅಧ್ಯಕ್ಷ ಶಾಸಕ ಪ್ರಸಾದ ಅಬ್ಬಯ್ಯ ಸೂಚಿಸಿದರು.

ಹುಬ್ಬಳ್ಳಿಯ ಸರ್ಕಿಟ್ ಹೌಸ್‌ನಲ್ಲಿ ಜಿಲ್ಲಾಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಹಳೇ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲ್‌ದಿಂದ ಇಂಡಿ ಪಂಪ್‌ವರೆಗಿನ ರಸ್ತೆ ಸಾಕಷ್ಟು ಜನದಟ್ಟಣೆಯಿಂದ ಕೂಡಿದ್ದು, ಸುಗಮ ಸಂಚಾರಕ್ಕಾಗಿ ರಸ್ತೆ ಅಗಲೀಕರಣದ ಅವಶ್ಯಕತೆಯಿದೆ ಎಂದರು.

ಹಳೇ ಹುಬ್ಬಳ್ಳಿ ಇಂಡಿ ಪಂಪ್ ವೃತ್ತದಿಂದ ಪಿಬಿ ರಸ್ತೆಯ ನ್ಯೂ ಇಂಗ್ಲೀಷ್ ಸ್ಕೂಲ್‌ವರೆಗಿನ 1.24 ಕಿ.ಮೀ. ರಸ್ತೆಯನ್ನು ಅಗಲೀಕರಣ ಮಾಡಲಾಗುತ್ತಿದೆ. ಈ ರಸ್ತೆಯ ಬದಿಯಲ್ಲಿರುವ 261 ಕಟ್ಟಡಗಳನ್ನು ಗುರುತಿಸಲಾಗಿದೆ. ಅದರಲ್ಲಿ 243 ಖಾಸಗಿ ಹಾಗೂ 18 ಪಾಲಿಕೆ ಆಸ್ತಿಗಳಿವೆ. ಈಶ್ವರ, ವೀರಭದ್ರೇಶ್ವರ, ಬನಶಂಕರಿ, ಆಂಜನೇಯ ದೇವಸ್ಥಾನ ಸೇರಿದಂತೆ 6 ದೇವಸ್ಥಾನಗಳು ಮತ್ತು 1 ಮಸೀದಿ ಸಹ ರಸ್ತೆಯ ಪಕ್ಕದಲ್ಲಿ ಬರುತ್ತದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ಸಲ್ಲಿಸಿದರು.

ಭೂ ಸ್ವಾಧೀನಕ್ಕೆ ರೂ. 9.5 ಕೋಟಿ: ರಸ್ತೆ ಅಗಲೀಕರಣ ಸಮೀಕ್ಷಾ ವರದಿಯಲ್ಲಿ ತಿಳಿಸಿರುವಂತೆ 243 ಖಾಸಗಿ ಸ್ವತ್ತುಗಳು ಸೇರಿದಂತೆ ಭೂಸ್ವಾಧೀನಕ್ಕೆ ಅವಶ್ಯವಿರುವ ರೂ. 9.5 ಕೋಟಿಗೂ ಹೆಚ್ಚು ಅನುದಾನವನ್ನು ವಿಶೇಷ ಅನುದಾನದಿಂದ ಭರಿಸಲಾಗುವುದು. ಶೀಘ್ರವೇ ರಸ್ತೆ ಅಗಲೀಕರಣ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಇದಕ್ಕೂ ಮೊದಲು ಶಾಸಕರು, ಜಿಲ್ಲಾಧಿಕಾರಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳ ತಂಡದೊಂದಿಗೆ ಇಂಡಿ ಪಂಪ್, ನ್ಯೂ ಇಂಗ್ಲಿಷ್ ಸ್ಕೂಲ್ ರಸ್ತೆಯಲ್ಲಿ ಕಾಲ್ನಡಿಗೆಯಲ್ಲಿ ಸಂಚರಿಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಆರ್. ಸ್ನೇಹಲ್, ಎಡಿಸಿ ಸಿ.ಡಿ.ಗೀತಾ, ಉಪ ವಿಭಾಗಾಧಿಕಾರಿ ಶಾಲಂ ಹುಸೇನ್, ಡಿಸಿಪಿಗಳಾದ ಸಿ.ಆರ್. ರವೀಶ, ಎನ್.ಎಸ್.ಶ್ರುತಿ, ಹುಬ್ಬಳ್ಳಿ ಶಹರ ತಹಶೀಲ್ದಾರ್ ಮಹೇಶ ಗಸ್ತೆ, ಎಇಇ ವಿಜಯಕುಮಾರ ಇದ್ದರು.



ಯೋಧ ರಫಿಕ್ ಸೇವೆ ಶ್ಲಾಘನೀಯ

ನವಲಗುಂದ: ಭಾರತೀಯ ಸೈನ್ಯದಲ್ಲಿ ಸುದೀರ್ಘವಾಗಿ 30 ವರ್ಷಗಳು ಸೇವೆ ಸಲ್ಲಿಸಿದ ಮಹಮ್ಮದ ರಫಿಕ ಮಟ್ಟಿಗಾರ ಅವರ ಸೇವೆಯು ಸಾರ್ಥಕತೆಯನ್ನು ಹೊಂದಿದೆ ಎಂದು ಗವಿಮಠದ ಮ.ನಿ.ಪ್ರ ಬಸವಲಿಂಗ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಶಿಕ್ಷಕರ ಸಹಕಾರಿ ಕಲ್ಯಾಣ ಕೇಂದ್ರದಲ್ಲಿ ಆಯೋಜಿಸಿದ್ದ ನಿವೃತ್ತ ಯೋಧರಿಗೆ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿ, ಈ ದೇಶದಲ್ಲಿ ನಿಜವಾದ ಹೀರೋ ನಮ್ಮ ಸೈನಿಕರು. ಜನ್ಮ ಕೊಟ್ಟ ತಂದೆ-ತಾಯಿ, ಅನ್ನ ಕೊಟ್ಟ ರೈತ, ವಿದ್ಯೆ ಕೊಟ್ಟ ಗುರು ಹಾಗೂ ಸೈನಿಕರನ್ನು ಮರೆಯಬಾರದು ಎಂದರು.

ಹಿರಿಯರಾದ ರಾಯನಗೌಡ ಪಾಟೀಲ, ಜನಸ್ನೇಹಿ ಪೊಲೀಸ್ ಠಾಣೆಯ ಪಿಎಸ್‌ಐ ಜನಾರ್ಧನ ಭಟ್ರಳ್ಳಿ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎ.ಬಿ ಕೊಪ್ಪದ ಮಾತನಾಡಿದರು. ನಿವೃತ್ತ ಯೋಧ ಮಹಮ್ಮದ್ ರಫಿಕ್ ಇಮಾಮಸಾಬ ಮಟ್ಟಿಗಾರ ಅವರು ತಮ್ಮ ಕುಟುಂಬಸ್ಥರೊಂದಿಗೆ ಪಟ್ಟಣದ ರೈತಭವನದ ಪಕ್ಕದಲ್ಲಿನ ವೀರಗಲ್ಲಿಗೆ ಮಾಲಾರ್ಪಣೆ ಮಾಡಿ ರೈತ ಭವನದಲ್ಲಿ ಸನ್ಮಾನ ಸ್ವೀಕರಿಸಿ ನಂತರ ತ್ಯಾಗವೀರ ಲಿಂಗರಾಜ ದೇಸಾಯಿಯವರ ಮೂರ್ತಿಗೆ ಮಾಲಾರ್ಪಣೆ, ಅಲ್ಲಿಂದ ಪೊಲೀಸ್ ಠಾಣೆಯಲ್ಲಿರುವ ಹುತಾತ್ಮ ಪೊಲೀಸರ ವೀರಗಲ್ಲಿಗೆ ಗೌರವ ಸಮರ್ಪಣೆ ಸಲ್ಲಿಸಿದ ನಂತರ ಶಿಕ್ಷಕರ ಸಹಕಾರಿ ಕಲ್ಯಾಣ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



ಮುಸ್ಲಿಂ ಧರ್ಮ ಗುರುಗಳಾದ ಸೈಯ್ಯದ ಅಮಾನುಲ್ಲಾ ಖಾಜಿ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ನಾಗನಗೌಡ್ರ ಪಾಟೀಲ, ಉಪಾಧ್ಯಕ್ಷ ರಾಮಚಂದ್ರ ತಹಶೀಲ್ದಾರ್, ರಿಯಾಜ ಅಹ್ಮದ ಪಿರಜಾದೆ, ರೈತ ಮುಖಂಡ ಸುಭಾಷಚಂದ್ರಗೌಡ್ರ ಪಾಟೀಲ, ನಿವೃತ್ತ ಶಿಕ್ಷಕ ಎಂ.ಜೆ. ನದಾಫ್, ಎನ್.ಕೆ. ಕರ್ಜಗಿ, ಪ್ರಗತಿಪರ ರೈತರಾದ ಬಸನಗೌಡ ಪಾಟೀಲ, ಲಕ್ಷ್ಮಣ ಜವಳಗಿ, ಮಂಜುನಾಥ ಸುಬೇದಾರ, ರಮೇಶ ಪಲ್ಲೆದ, ರವಿ ತೋಟದ, ಮಾಬುಸಾಬ ಯರಗುಪ್ಪಿ, ಬಶೀರ ಅಹ್ಮದ ಹುನಗುಂದ ಇತರರಿದ್ದರು.

ಡಾ.ಪ್ರಸಾದ ನೋವುಗಳಿಗೆ ಸ್ಪಂದಿಸುವ ಹೃದಯವಂತರು: ಟೆಂಗಿನಕಾಯಿ

ಹುಬ್ಬಳ್ಳಿ: ನಗರದ ಸ್ವರ್ಣಾ ಗ್ರೂಪ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಉದ್ಯಮಿ ವಿ.ಎಸ್.ವಿ ಪ್ರಸಾದ ಅವರ 36 ನೇ ವಿವಾಹ ವಾರ್ಷಿಕೋತ್ಸವ ಅಂಗವಾಗಿ ಸ್ವಾಮಿ ವಿವೇಕಾನಂದ ರಕ್ತದಾನ ಫೌಂಡೇಶನ್ ಸಹಯೋಗದಲ್ಲಿ ನವನಗರ ಕ್ಯಾನ್ಸರ್ ಆಸ್ಪತ್ರೆಯ ರೋಗಿಗಳಿಗೆ ಹಣ್ಣು-ಹಂಪಲು ವಿತರಿಸಿ, ಅವರ ಆರೋಗ್ಯ ವಿಚಾರಿಸಿ ವೈದ್ಯಕೀಯ ತಪಾಸಣೆ ನಡೆಸಿಸಲಾಯಿತು.

ಶಾಸಕ ಮಹೇಶ್ ಟೆಂಗಿನಕಾಯಿ ಭಾಗಿಯಾಗಿ ದಂಪತಿಗೆ ಶುಭ ಹಾರೈಸಿದರು. ನಂತರ ರಾಯಾಪುರದ ನಿರಾಶಿತರ ಕೇಂದ್ರದಲ್ಲಿ ದೇವರ ಮಕ್ಕಳೊಂದಿಗೆ ಸರಳವಾಗಿ ಕೇಕ್ ಕತ್ತರಿಸಿ ವಾರ್ಷಿಕೋತ್ಸವ ಆಚರಿಸಲಾಯಿತು.

ಸಂಭ್ರಮದ ನಡುವೆ ಮಕ್ಕಳಿಗೆ ಆರೋಗ್ಯ ತಪಾಸಣೆ ನಡೆಸಿ, ದೃಷ್ಟಿದೋಷ ಹೊಂದಿದ್ದವರಿಗೆ ಉಚಿತ ಕನ್ನಡಕ ವಿತರಿಸಲಾಯಿತು. ಅಲ್ಲದೆ, ಸಮಾಜಮುಖಿ ಕಾರ್ಯಗಳಿಗೆ ಉತ್ತೇಜನವಾಗಿ ಸ್ವಾಮಿ ವಿವೇಕಾನಂದ ರಕ್ತದಾನ ಫೌಂಡೇಶನ್‌ಗೆ 2 ಲಕ್ಷ ರೂ. ಚೆಕ್‌ನ್ನು ದಂಪತಿ ಹಸ್ತಾಂತರಿಸಿದರು.

ಈ ವೇಳೆ ಮಾತನಾಡಿದ ಶಾಸಕ ಮಹೇಶ್ ಟೆಂಗಿನಕಾಯಿ, ಡಾ. ವಿಎಸ್‌ವಿ ಪ್ರಸಾದ ಅವರು ಕೇವಲ ಯಶಸ್ವಿ ಉದ್ಯಮಿಯಲ್ಲ, ಸಮಾಜದ ನೋವನ್ನು ಅರಿತು ಸ್ಪಂದಿಸುವ ಅಪರೂಪದ ಹೃದಯವಂತರು. ಉದ್ಯಮದ ಜೊತೆ ಸಮಾಜಸೇವೆಗೂ ಆದ್ಯತೆ ನೀಡುತ್ತಾ ನಿರಂತರ ಸೇವಾ ಕಾರ್ಯಗಳಲ್ಲಿ ತೊಡಗಿರುವುದು ಶ್ಲಾಘನೀಯ ಎಂದರು.



ಈ ಸಂದರ್ಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ವಿಎಸ್‌ವಿ ಪ್ರಸಾದ್ ಅವರು, ಮಾತನಾಡಿ, ಫೌಂಡೇಶನ್ ಆಶ್ರಯದಲ್ಲಿ ನಮ್ಮ ವಿವಾಹ ವಾರ್ಷಿಕೋತ್ಸವ ಅರ್ಥಪೂರ್ಣವಾಗಿ ದೇವರ ಮಕ್ಕಳೊಂದಿಗೆ ಆಚರಿಸುವ ಮೂಲಕ ನಮ್ಮ ಮನಸ್ಸಿಗೆ ಅಪಾರ ಸಂತೋಷ ತಂದಿದೆ ಎಂದು ಹೇಳಿದರು.

ಕರ್ತವ್ಯ ನಿರ್ವಹಿಸಿದ ಸರ್ಕಾರ: ಕೋನರಡ್ಡಿ

ಧಾರವಾಡ: ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ವಿಷಯದಲ್ಲಿ ರಾಜ್ಯ ಸರ್ಕಾರ ಜವಾಬ್ದಾರಿ ಪ್ರಾಮಾಣಿಕವಾಗಿ ನಿಭಾಯಿಸಿದೆ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.

ಸೋಮವಾರ ಸತ್ಯಾಗ್ರಹ ಸ್ಥಳದಲ್ಲಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಪ್ರತ್ಯೇಕತೆಗೆ ಒಪ್ಪಿದ್ದಾರೆ. ಅಲ್ಲದೇ, ಸರ್ಕಾರದ ಸಚಿವ ಸಂಪುಟ ಒಪ್ಪಿಗೆ ನೀಡಿ, ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿದೆ. ಆದರೆ, ರಾಜ್ಯಪಾಲರ ಕಚೇರಿಯಿಂದಲೇ ಈವರೆಗೂ ಯಾವುದೇ ಉತ್ತರವೇ ಬಂದಿಲ್ಲ ಎಂದರು.

ಸಚಿವ ಸಂತೋಷ ಲಾಡ್, ಪ್ರಹ್ಲಾದ್ ಜೋಶಿ ರಾಜ್ಯಪಾಲರ ಭೇಟಿಗೆ ಪತ್ರ ಬರೆದಿದ್ದು, ರಾಜ್ಯಪಾರು ಮೇ 20ಕ್ಕೆ ಸಮಯ ನೀಡಿದ್ದು, ಪ್ರತ್ಯೇಕ ಪಾಲಿಕೆಗೆ ಸಹಿ ಹಾಕುವ ವಿಶ್ವಾಸ ವ್ಯಕ್ತಪಡಿಸಿದರು.

ಮಹದಾಯಿ ಸಭೆ!: ಉತ್ತರ ಕರ್ನಾಟಕದ ಪ್ರಮುಖ ಸಮಸ್ಯೆ ಮಹಾದಾಯಿ ಮತ್ತು ಕಳಸಾ-ಬಂಡೂರಿ ನಾಲಾ ಯೋಜನೆ ವಿಚಾರಣೆ ಪಟ್ಟಿಯಿಂದ ಹೊರಗಿಡಲಾಗಿದೆ. ಇದನ್ನು ಪುನಃ ಅಧಿಕೃತ ವಿಚಾರಣಾ ಪಟ್ಟಿಗೆ ಸೇರಿಸಲು ಹೋರಾಟ ಮಾಡಲಿದೆ. ಈ ಬಗ್ಗೆ ಇದೇ ಮೇ 30, 31ರಂದು ಹುಬ್ಬಳ್ಳಿಯಲ್ಲಿ ಸಭೆ ಕರೆದು ಚರ್ಚಿಸಿ, ನಿರ್ಧಾರವೂ ಕೈಗೊಳ್ಳುವುದಾಗಿ ಶಾಸಕ ಎನ್.ಎಚ್. ಕೋನರೆಡ್ಡಿ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.



ಮಳೆಗೆ ಅಪಾರ ಹಾನಿ: ಅಧಿಕಾರಿಗಳ ಭೇಟಿ



ಕಲಘಟಗಿ: ತಾಲೂಕಿನ ತುಮರಿಕೊಪ್ಪ ಹಾಗೂ ರಂಗಾಪುರ ಗ್ರಾಮಗಳಿಗೆ ಮಳೆಯ ಅನಾಹುತದಿಂದ ಹಾನಿಗೊಳಗಾದ ಮನೆಗಳಿಗೆ ಕಂದಾಯ ಇಲಾಖೆ ಅಧಿಕಾರಿ ಯು.ಎಂ.ಬಮ್ಮಿಗಟ್ಟಿ, ಸಚಿವರ ಆಪ್ತ ಕಾರ್ಯದರ್ಶಿ ಸೋಮಶೇಖರ ಬೆನ್ನೂರ ಭೇಟಿ ನೀಡಿ ಪರಿಶೀಲಿಸಿದರು.

ಅಪಾರ ಗಾಳಿ ಹಾಗೂ ಮಳೆಯ ಆವಾತರದಿಂದ 10 ರಿಂದ 15 ಮನೆಗಳಿಗೆ ಹಾನಿ ಉಂಟಾಗಿದ್ದು, ನಿಯಮಾನುಸಾರ ಕೂಡಲೇ ಪರಿಹಾರಕ್ಕೆ ಸಚಿವ ಸಂತೋಷ ಲಾಡ್ ಅವರು ಇಲಾಖೆಗಳಿಗೆ ಸೂಚಿಸಿದ್ದಾರೆ ಎಂದು ಆಪ್ತ ಕಾರ್ಯದರ್ಶಿ ಸೋಮಶೇಖರ ಬೆನ್ನೂರ ಹೇಳಿದರು.

ಗ್ರಾಮ ಆಡಳಿತ ಅಧಿಕಾರಿ ಕೇದಾರ ತೇಲಿ, ಗ್ರಾಮದ ರೈತ ಮುಖಂಡರಾದ ಮಂಜುನಾಥ ಹೂಗಾಡಿ, ಪರಶುರಾಮ ಬಾಗಲಕೋಟಿ, ಗ್ರಾಮಸ್ಥರು ಇದ್ದರು.

ಗುರುವಂದನೆ ಕಾರ್ಯಕ್ರಮ

ಕುಂದಗೋಳ: ಪಟ್ಟಣದ ಎಫ್.ಕೆ. ಬಾಳಿಹಳ್ಳಿಮಠ ಹಿರಿಯ ಪ್ರಾಥಮಿಕ ಶಾಲೆಯ ಹಳೆ ವಿದ್ಯಾರ್ಥಿಗಳಿಂದ ಗಾಂಧಿ ಹಿಂದಿ ವಿದ್ಯಾಪೀಠದ ಆವರಣದಲ್ಲಿ ನಡೆದ ಗುರುವಂದನೆ ಕಾರ್ಯಕ್ರಮದಲ್ಲಿ ಶಾಲೆ ಶಿಕ್ಷಕರು, ಶಿಕ್ಷಕಿಯರನ್ನು ಸನ್ಮಾನಿಸಿದರು.

ಈ ವೇಳೆ ಶಾಸಕ ಎಂ.ಆರ್. ಪಾಟೀಲ ಮಾತನಾಡಿ, ಗುರು ಎಂದರೆ ಅಜ್ಞಾನವನ್ನು ಕಳೆದು ಸುಜ್ಞಾನವನ್ನು ಕಲಿಸುವಾತನು ಗುರು. ಹಾಗಾಗಿ ಅಕ್ಷರಂ ಕಲಿಸಿದಾತನು ಗುರುವಾಗಿರುತ್ತಾನೆ ಎಂದರು.

ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಡಾ.ಅರವಿಂದ ಕಟಗಿ ಮಾತನಾಡಿದರು. ಕಲ್ಯಾಣಪೂರ ಮಠದ ಬಸವಣ್ಣಜ್ಜನವರು, ಶಿವಾನಂದ ಮಠದ ಶಿವಾನಂದ ಶ್ರೀಗಳು ಸಾನ್ನಿಧ್ಯ ವಹಿಸಿದರು. ಎಫ್.ಕೆ. ಬಾಳಿಹಳ್ಳಿಮಠ ಅಧ್ಯಕ್ಷತೆ ವಹಿಸಿದರು. ಮಾಜಿ ಶಾಸಕ ಮಲ್ಲಿಕಾರ್ಜುನ ಅಕ್ಕಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಹಳೆ ವಿದ್ಯಾರ್ಥಿ ಮೃತ್ಯುಂಜಯ ಜಡಿಮಠ ಸಂಸ್ಥೆಗೆ 25 ಸಾವಿರ ರೂ. ದೇಣಿಗೆ ನೀಡಿದರು. ಈ ವೇಳೆ ಹಲವು ಶಿಕ್ಷಕರನ್ನು ಗಣ್ಯರನ್ನು ಸನ್ಮಾನಿ ಗೌರವಿಸಲಾಯಿತು.

ಮುಖ್ಯ ಅತಿಥಿಗಳಾಗಿ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಸತೀಶ ಕೊಬ್ಬಯ್ಯನವರ, ಮುಖಂಡ ಚಂದ್ರಶೇಖರ ಜುಟ್ಟಲ, ಕರವೇ ಅಧ್ಯಕ್ಷ ಕಲ್ಲಪ್ಪ ಹರಕುಣಿ, ಮಾಜಿ ಜಿಪಂ ಸದಸ್ಯ ಉಮೇಶ ಹೆಬಸೂರ, ಮಾಲತೇಶ ಶ್ಯಾಗೋಟಿ, ಶಿವಾನಂದ ಯಲಿಗಾರ, ಬಸವರಾಜ ನೆಲಗುಡ್ಡ, ಕಸ್ತೂರಿ ಕುಂಬಾರ, ಕೋರಿ ಪಿ.ಎಂ. ಅಂದಾನೆಪ್ಪ ಉಪ್ಪಿನ, ಬಸವರಾಜ ಶಿರಸಂಗಿ, ಶ್ರೀಧರ ಕುಲಕರ್ಣಿ, ಮಂಜುನಾಥ ಕಮಡೊಳ್ಳಿ, ಮುಖ್ಯ ಶಿಕ್ಷಕ ಗುರುಸ್ವಾಮಿ ಬಾಳಿಹಳ್ಳಿಮಠ, ಅಂಬಿಕಾ ಕುಲಕರ್ಣೀ, ಅನುಭಾವಿ ಬಾಳಿಹಳ್ಳಿಮಠ ಇದ್ದರು.

ಅಡಿವೆಪ್ಪ ಭಜಂತ್ರಿ ಸ್ವಾಗತಿಸಿದರು, ಉಮೇಶ ಕರ್ಜಗಿ ಪ್ರಾಸ್ತಾವಿಸಿದರು. ಮೃತ್ಯುಂಜಯ ಜಡಿಮಠ ನಿರೂಪಿಸಿದರು.

ಹುಬ್ಬಳ್ಳಿ
ಮಂಗಳವಾರ, 19 ಮೇ 2026
ಸಂಪುಟ 16, ಸಂಚಿಕೆ 55, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ನೀಟ್: ಇನ್ನೋರ್ವ ಆರೋಪಿ ಬಂಧನ | ೦೭ | ಸರ್ಕಾರದಿಂದ ಎಸ್ಮಾ ಜಾರಿ ಎಚ್ಚರಿಕೆ | ೦೫ | ಮಾತುಕತೆ ಮೂಲಕ ಸಂಘರ್ಷಕ್ಕೆ ಪರಿಹಾರ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ತದಿಗೆ, ನಕ್ಷತ್ರ : ಮೃಗಶಿರೆ

ದಿನದ ಮಾತು

ಮಗನನ್ನು ಸಜ್ಜನರು ಮೆಚ್ಚಿಕೊಂಡರೆ ಮಾತ್ರ ಅಂದೇ ತಂದೆಗೆ ನಿಜವಾದ ಪುತ್ರೋತ್ಸವ

▲ಸುಮತಿ ಶತಕ

ಜ್ಞಾನದ ಶಾಪ ನಿವಾರಣೆಗೊಂದು ವರ ಇಲ್ಲಿದೆ

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಎಲ್ಲ ಹೈಕೋರ್ಟ್‌ಗಳಲ್ಲಿ ವರ್ಚುವಲ್ ವಿಚಾರಣೆ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿಯಿಂದ ಹೆಚ್ಚುತ್ತಿರುವ ವೆಚ್ಚ ಹಾಗೂ ಇಂಧನ ಬಳಕೆ ಯನ್ನು ಕಡಿಮೆ ಮಾಡುವ ಉದ್ದೇಶದಿಂದ ದೇಶದ ಎಲ್ಲಾ ಹೈಕೋರ್ಟ್ ಗಳಲ್ಲಿ ಪ್ರತಿ ಸೋಮವಾರ ಮತ್ತು ಶುಕ್ರವಾರ ವರ್ಚುವಲ್ ವಿಚಾರಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮನವಿ ಮಾಡಿದ್ದಾರೆ.

• ಪುಟ ೭

ಇಸ್ರೇಲ್‌ಗೆ ಅಮೆರಿಕದ ಭಾರೀ ಶಸ್ತ್ರಾಸ್ತ್ರ ರವಾನೆ

• **ಟೆಲ್ ಅವಿವ್:** ಜರ್ಮನಿಯಲ್ಲಿರುವ ಅಮೆರಿಕದ ಸೈನಿಕ ನೆಲೆಗಳಿಂದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಹೊತ್ತ ಹಲವು ಅಮೆರಿಕನ್ ವಿಮಾನಗಳು ಸೋಮವಾರ ಇಸ್ರೇಲ್‌ನ ಟೆಲ್ ಅವಿವ್ ನಗರಕ್ಕೆ ಆಗಮಿಸಿವೆ ಎಂದು ವರದಿಯಾಗಿದೆ. ಈ ಬೆಳವಣಿಗೆ ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆಯನ್ನು ಹುಟ್ಟುಹಾಕಿದೆ.

• ಪುಟ ೭

ಮಹಾ, ಉ.ಪ್ರ.ದಲ್ಲಿ ಅಪಘಾತ: 21 ಸಾವು

• ಪುಟ ೭

ಅಫ್ಘಾನಿಸ್ತಾನದಲ್ಲಿ ಬಾಲ್ಯ ವಿವಾಹ ಕಾನೂನುಬದ್ಧ

• ಪುಟ ೭

ಉಗ್ರ ಮಾನಸಿಕತೆ ಬದಲಿಸಿದ ಕಾಶ್ಮೀರ

• ಪುಟ ೭

56 ಪ್ರಭೇದಗಳ ತಾಣ ಬಿಸಿಲೂರಿನ ಮೃಗಾಲಯ

• ಪುಟ ೫



ನಗರ ಮಾಲಿನ್ಯ ನಿಯಂತ್ರಣಕ್ಕೆ ರಾಮಬಾಣ!

ಭೋಪಾಲ್‌ನಲ್ಲಿ ಭಾರತದ ಮೊದಲ ಪಾಚಿ ಮರ ಅನಾವರಣ

• ಪುಟ ೭

ಸುದ್ದಿ ಸಮಗ್ರಿ

ಪ್ರಗತಿಯತ್ತ ಕರ್ನಾಟಕ ಸರ್ಕಾರದ ಸಾರ್ಥಕ ಸೇವೆಯ ಸಮರ್ಪಣೆ

ಇಂದು ಸಾಧನೆಯ ಸಂಭ್ರಮ

- ಸಚಿವ ಡಾ.ಜಿ. ಪರಮೇಶ್ವರ ಉಸ್ತುವಾರಿ
- ಖುದ್ದಾಗಿ ವ್ಯವಸ್ಥೆ ಪರಿಶೀಲಿಸಿದ ಪರಂ
- ಬೃಹತ್ ಪೆಂಡಾಲ್, ಆಸನಗಳ ವ್ಯವಸ್ಥೆ
- ವಿಶಾಲ ಎಲ್‌ಇಡಿ ಪರದೆಗಳ ಅಳವಡಿಕೆ





• **ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೇ 20ಕ್ಕೆ ಮೂರು ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಮಂಗಳವಾರ (ಮೇ 19) ತುಮಕೂರು ನಗರದಲ್ಲಿ ಕಾಂಗ್ರೆಸ್ ಸರ್ಕಾರದ ವತಿಯಿಂದ ಪ್ರಗತಿಯತ್ತ ಕರ್ನಾಟಕ ಸಾರ್ಥಕ ಸೇವೆಯ ಸಮರ್ಪಣೆ ಕಾರ್ಯಕ್ರಮ ಹಾಗೂ ಸಾಧನಾ ಸಮಾವೇಶ ನಡೆಯಲಿದೆ.

ರಾಜ್ಯ ಸರ್ಕಾರಕ್ಕೆ 3 ವರ್ಷ

ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ರಾಜ್ಯ ಸರ್ಕಾರದ ಸಾಧನಾ ಸಮಾವೇಶಕ್ಕೆ ಬೃಹತ್ ವೇದಿಕೆ ಸೇರಿದಂತೆ ಜರ್ಮನ್ ಟೆಂಟ್‌ಗಳನ್ನು ಹಾಕಲಾಗಿದೆ. ಸಮಾವೇಶಕ್ಕೆ ಆಗಮಿಸುವ ಲಕ್ಷಾಂತರ ಫಲಾನುಭವಿಗಳು, ಅಧಿಕಾರಿಗಳು, ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ ವ್ಯವಸ್ಥೆ ಮಾಡಲಾಗಿದೆ. ಬೃಹತ್ ಪೆಂಡಾಲ್, ಆಸನಗಳ ವ್ಯವಸ್ಥೆ ಹಾಗೂ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ.

ಕಾಂಗ್ರೆಸ್ ಸರ್ಕಾರದ 3 ವರ್ಷದ ಸಾಧನೆಯ ಸಮಾವೇಶವನ್ನು ಕಲ್ಪತರುನಾಡಿನಲ್ಲಿ ನಡೆಸಲು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಟೊಂಕಕಟ್ಟಿ ನಿಂತಿದ್ದು, ಸಮಾವೇಶಕ್ಕೆ ಆಗಮಿಸುವ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರುಗಳು, ಸಂಸದರು, ಶಾಸಕರುಗಳು, ಅಧಿಕಾರಿಗಳು ಹಾಗೂ ಫಲಾನುಭವಿಗಳಿಗೆ ಕಿಂಚಿತ್ತೂ ಲೋಪವಾಗದಂತೆ ಅಗತ್ಯ ವ್ಯವಸ್ಥೆ ಗಳನ್ನು ಮಾಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಅಲ್ಲದೆ ಖುದ್ದಾಗಿ ವ್ಯವಸ್ಥೆಗಳ ಮೇಲುಸ್ತುವಾರಿ ಮಾಡುತ್ತಿದ್ದಾರೆ.

1.40 ಲಕ್ಷ ಫಲಾನುಭವಿಗಳಿಗೆ ಸವಲತ್ತು ವಿತರಣೆ

ತುಮಕೂರು ಜಿಲ್ಲೆಯು 10 ತಾಲ್ಲೂಕು, 11 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಹಾಗೂ 27 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ರಾಜ್ಯದ 2ನೇ ಅತಿದೊಡ್ಡ ಜಿಲ್ಲೆಯಾಗಿದ್ದು, ತುಮಕೂರು ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ ಕೈಗೊಳ್ಳಲಾಗಿರುವ ಕಂದಾಯ ಇಲಾಖೆಯ ಬಹುಮುಖ್ಯ ಯೋಜನೆಗಳಾದ ಇ-ಪೌತಿ ಯೋಜನೆಯಲ್ಲಿ 81,523 ಫಲಾನುಭವಿಗಳು, ಹೊಸ ಕಂದಾಯ ಗ್ರಾಮ ರಚನೆ ಯೋಜನೆಯಲ್ಲಿ 20,666 ಫಲಾನುಭವಿಗಳು, ದರಖಾಸ್ತು ಪೋಡಿ ಯೋಜನೆಯಲ್ಲಿ 6,301 ಫಲಾನುಭವಿಗಳು ಹಾಗೂ ವಿವಿಧ ಪಿಂಚಣಿ ಯೋಜನೆಗಳ 31,848 ಫಲಾನುಭವಿಗಳು ಸೇರಿ ಒಟ್ಟೂ ಸುಮಾರು 1.40 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ/ಸವಲತ್ತುಗಳನ್ನು ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

600 ಹುದ್ದೆಗಳ ನೇಮಕಾತಿ ಆದೇಶ ಪತ್ರ ವಿತರಣೆ

ತುಮಕೂರು ಜಿಲ್ಲೆಯ ಕಂದಾಯ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಒಟ್ಟು 1,52,492 ಫಲಾನುಭವಿಗಳಿಗೆ ಹಕ್ಕು ಪತ್ರ/ಆದೇಶ ಪತ್ರಗಳನ್ನು ವಿತರಣೆ ಮಾಡಲಾಗುತ್ತಿದೆ. ರಾಜ್ಯದಲ್ಲಿಯೇ ದೊಡ್ಡ ಸಂಖ್ಯೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಒಟ್ಟು 600 ಹುದ್ದೆಗಳ ನೇಮಕಾತಿ ಆದೇಶವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

> ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಮೇ 20ಕ್ಕೆ ಮೂರು ವರ್ಷಗಳು ತುಂಬಲಿವೆ. ಈ ನೆನಪಿಗಾಗಿ ರಾಜ್ಯ ಸರ್ಕಾರ ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳನ್ನು ಜನತೆಗೆ ಸಮರ್ಪಣೆ ಮಾಡುವ ವಿಶೇಷ ಕಾರ್ಯಕ್ರಮ ಸಾಧನೆಯ ಸೇವೆಗಳ ಸಮರ್ಪಣೆಯನ್ನು ಮಂಗಳವಾರ ತುಮಕೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.
>
> ■ **ಡಾ.ಜಿ. ಪರಮೇಶ್ವರ್,** ಗೃಹ,ಉಸ್ತುವಾರಿ ಸಚಿವ

ಕಂದಾಯ ಇಲಾಖೆ ಸಾಧನೆಯಲ್ಲಿ ಗಿನ್ನಿಸ್

• **ತುಮಕೂರು:** ತುಮಕೂರು ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ ಅಭೂತಪೂರ್ವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಮಂಗಳವಾರ ನಡೆಯುವ ಸಾಧನಾ ಸಮಾವೇಶದಲ್ಲಿ 1.40 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ಸವಲತ್ತು ವಿತರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಗೃಹಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದ್ದಾರೆ. ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಸೋಮವಾರ ಪೂರ್ವ ಸಿದ್ಧತೆ ಪರಿಶೀಲಿಸಿದ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಈ ಸಾಧನೆಯಲ್ಲಿ ತುಮಕೂರು ಜಿಲ್ಲೆ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದು, ಗಿನ್ನಿಸ್ ವರ್ಲ್ಡ್ ಬುಕ್ ಆಫ್ ರೆಕಾರ್ಡ್ ದಾಖಲೆ ಸೇರಿದೆ. ಸಾಧನಾ ಸಮಾವೇಶ ಕಾರ್ಯಕ್ರಮದಲ್ಲಿ ಈ ಸಾಧನೆಯ ಪ್ರಶಸ್ತಿಯನ್ನು ಪ್ರದಾನ ಮಾಡಲು ಇಂಗ್ಲೆಂಡ್‌ನಿಂದ ಗಿನ್ನಿಸ್ ಸಂಸ್ಥೆಯವರು ಆಗಮಿಸಲಿದ್ದಾರೆ ಎಂದರು.


ನುಡಿದಂತೆ ನಡೆದ ಸರ್ಕಾರ

ಮೂರು ವರ್ಷಗಳ ಹಿಂದೆ ನಡೆದ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ನನ್ನ ಅಧ್ಯಕ್ಷತೆಯಲ್ಲಿ ಪಕ್ಷದ ಚುನಾವಣಾ ಪ್ರಣಾಳಿಕೆ ಸಿದ್ಧಪಡಿಸಿತ್ತು. ಐದು ಗ್ಯಾರಂಟಿಗಳೂ ಸೇರಿದಂತೆ ಆದ್ಯತಾ ವಿಷಯಗಳನ್ನು ರಾಜ್ಯದ ಜನತೆಗೆ ಆಶ್ವಾಸನೆ ನೀಡಿ ಚುನಾವಣೆ ಗೆದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ರಚನೆಗೊಂಡ ಸರ್ಕಾರ ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಎಲ್ಲ ಐದೂ ಗ್ಯಾರಂಟಿಗಳನ್ನೂ ಸಮರ್ಪಕವಾಗಿ ಅನುಷ್ಠಾನಗೊಳಿಸಿದ್ದಲ್ಲದೆ ರಾಜ್ಯವನ್ನು ಸರ್ವಾಂಗೀಣ ಅಭಿವೃದ್ಧಿ ಪಥದತ್ತ ಕೊಂಡೊಯ್ಯಲಾಗಿದೆ. ಈ ಮೂಲಕ ನಮ್ಮ ಸರ್ಕಾರ ನುಡಿದಂತೆ ನಡೆದುಕೊಂಡಿದೆ ಎಂದು ಹೇಳಿದರು.

ಶಾಶ್ವತ ಶಾಂತಿ, ಅಭಿವೃದ್ಧಿ ಖಚಿತಕ್ಕೆ ಸೂಕ್ತ ಕ್ರಮ: ಅಮಿತ್ ಶಾ

ಭದ್ರತಾ ಸಮಸ್ಯೆಗಳಿಂದ ದೇಶ ಮುಕ್ತ

• **ರಾಯ್ಪುರ:** ಭಾರತ ಈಗ ನಕ್ಸಲಿಸಂ, ಜಮ್ಮು –ಕಾಶ್ಮೀರದಲ್ಲಿ ಭಯೋತ್ಪಾದನೆ ಮತ್ತು ಈಶಾನ್ಯದಲ್ಲಿ ಬಂಡಾಯದಂತಹ ಮೂರು ಪ್ರಮುಖ ಆಂತರಿಕ ಭದ್ರತಾ ಸಮಸ್ಯೆಗಳಿಂದ ಮುಕ್ತವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.



ಮಾವೋವಾದಿಗಳ ಹಿಂದಿನ ಭದ್ರಕೋಟೆಯಾದ ಜಗದಲ್ಪುರ್, ಬಸ್ತರ್‌ನಲ್ಲಿ ಮಾತನಾಡಿದ ಶಾ, ಈ ಪ್ರದೇಶದಲ್ಲಿ ಶಾಶ್ವತ ಶಾಂತಿ ಮತ್ತು ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಪೂರ್ಣ ಬದ್ಧತೆಯಿಂದ ಕೆಲಸ ಮಾಡುತ್ತಿವೆ. ಮುಂದಿನ ಐದು ವರ್ಷಗಳಲ್ಲಿ ಇದು ದೇಶದ ಅತ್ಯಂತ ಅಭಿವೃದ್ಧಿ ಹೊಂದಿದ ಬುಡಕಟ್ಟು ಪ್ರದೇಶವಾಗಿ ಹೊರಹೊಮ್ಮಲಿದೆ ಎಂದು ಹೇಳಿದರು.

ಕೇಂದ್ರ ವಲಯದ ಮಂಡಳಿ ಸಭೆ

ಬಸ್ತರ್ ಜಿಲ್ಲೆಯ ಪ್ರಧಾನ ಕಚೇರಿಯಾದ ಜಗದಲ್ಪುರದಲ್ಲಿ ಮಂಗಳವಾರ ನಡೆಯುವ 26ನೇ ಕೇಂದ್ರ ವಲಯ ಮಂಡಳಿ ಸಭೆಯ ಅಧ್ಯಕ್ಷತೆಯನ್ನು ಸಚಿವರು ವಹಿಸಲಿದ್ದು, ಇದರಲ್ಲಿ ಛತ್ತೀಸ್‌ಗಢ, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ಉತ್ತರಾಖಂಡದ ನಾಲ್ವರು ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ.

ಮಾರ್ಚ್‌ನಲ್ಲಿ ದೇಶವನ್ನು ಮಾವೋವಾದಿ ಹಿಂಸಾಚಾರದಿಂದ ಮುಕ್ತವೆಂದು ಘೋಷಿಸಿದ ನಂತರ ಮೊದಲ ಬಾರಿಗೆ ಛತ್ತೀಸ್‌ಗಢದ ಮೂರು ದಿನಗಳ ಪ್ರವಾಸದಲ್ಲಿರುವ ಶಾ, ಶರಣಾದ ಸುಮಾರು 3,000 ನಕ್ಸಲರನ್ನು ಸ್ವೀಕರಿಸುವಂತೆ ಮತ್ತು ಅವರನ್ನು ರಾಷ್ಟ್ರೀಯ ಮುಖ್ಯವಾಹಿನಿಗೆ ಸೇರಿಸಿಕೊಳ್ಳಲು ಸಹಾಯ ಮಾಡುವಂತೆ ಬಸ್ತರ್ ಜನರನ್ನು ಒತ್ತಾಯಿಸಿದ್ದಾರೆ. ➡ಪುಟ ೪

ಕೇರಳದ ಮುಖ್ಯಮಂತ್ರಿಯಾಗಿ ವಿ.ಡಿ.ಸತೀಶನ್ ಪ್ರಮಾಣ

ಬಸ್ ಉಚಿತ ಪ್ರಯಾಣ ಘೋಷಣೆ

• **ತಿರುವನಂತಪುರಂ:** ವಡಶ್ಶೇರಿ ದಾಮೋದರ ಮೆನನ್ ಸತೀಶನ್ ಅವರು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರದ ನೇತೃತ್ವ ವಹಿಸಿ, ಕೇರಳದ 16ನೇ ಮುಖ್ಯಮಂತ್ರಿಯಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ಇಲ್ಲಿನ ಸೆಂಟ್ರಲ್ ಸ್ಟೇಡಿಯಂನಲ್ಲಿ ಸತೀಶನ್ ತಮ್ಮ 20 ಮಂದಿ ಸಂಪುಟ ಸಚಿವರ ಸಹಿತವಾಗಿ ಪ್ರಮಾಣವಚನ ಸ್ವೀಕರಿಸಿದ್ದು, ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಪ್ರಮಾಣವಚನ ಬೋಧಿಸಿದರು.



ಸಿಪಿಎಂ ನೇತೃತ್ವದ ಎಡರಂಗವನ್ನು ಅಧಿಕಾರದಿಂದ ಇಳಿಸಿ ಅಧಿಕಾರಕ್ಕೇರಿರುವ ಯುಡಿಎಫ್‌ನ ನೂತನ ಸರಕಾರದಲ್ಲಿ ಕೆಲವು ಅನುಭವಿ ಮತ್ತು ಹಲವು ಹೊಸ ಮುಖಗಳ ಸೇರ್ಪಡೆಯಾಗಿದ್ದು, ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧಿಯಾಗಿದ್ದ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರು ನೂತನ ಸರಕಾರದಲ್ಲಿ ಗೃಹಖಾತೆ ಪಡೆದಿದ್ದಾರೆ.

ಈ ಸಂದರ್ಭ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಗಾಂಧಿ ಕುಟುಂಬದ ರಾಹುಲ್ ಗಾಂಧಿ, ಪ್ರಿಯಾಂಕಾ ವಾದ್ರ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಮುಸ್ಲಿಂ ಲೀಗ್ ನಾಯಕ ಪಾಣಕ್ಕಾಡ್ ತಂಙಳ್, ಕರ್ನಾಟಕದ ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತೆಲಂಗಾಣದ ಸಿಎಂ ರೇವಂತ್ ರೆಡ್ಡಿ, ಮಾಜಿ ಮುಖ್ಯಮಂತ್ರಿ ಹಾಗೂ ಎಡರಂಗ ನಾಯಕ ಪಿಣರಾಯಿ ವಿಜಯನ್, ಕೇರಳ ರಾಜ್ಯ ಬಿಜೆಪಿ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಮುಂತಾದ ಪ್ರಮುಖರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ➡ಪುಟ ೪

ಹೊಸ ಕಲ್ಯಾಣ ಯೋಜನೆಗಳಿಗೆ ಪಶ್ಚಿಮ ಬಂಗಾಳ ಸಂಪುಟ ಅಸ್ತು

- ಧಾರ್ಮಿಕ ಮುಖಂಡರ ಗೌರವಧನ ರದ್ದು
- ಅಗ್ನಿಮಿತ್ರ ಪಾಲ್ ಮಾಹಿತಿ

• **ಕೋಲ್ಕತಾ:** ಇಮಾಮ್‌ಗಳು, ಮುಯೆಜ್ಜಿನ್‌ಗಳು ಮತ್ತು ಪುರೋಹಿತರಿಗೆ ಧಾರ್ಮಿಕ ವರ್ಗೀಕರಣದ ಆಧಾರದ ಮೇಲೆ ನೀಡಲಾಗುತ್ತಿದ್ದ ಆರ್ಥಿಕ ನೆರವನ್ನು ಈ ವರ್ಷದ ಜೂನ್‌ನಿಂದ ಸ್ಥಗಿತಗೊಳಿಸಲು ಪಶ್ಚಿಮ ಬಂಗಾಳ ಸಚಿವ ಸಂಪುಟ ಸೋಮವಾರ ನಿರ್ಧರಿಸಿದೆ.

ಈ ಗೌರವಧನಕ್ಕಾಗಿ ನೀಡಲಾಗುತ್ತಿದ್ದ ರಾಜ್ಯ ಬಜೆಟ್ ಅನುದಾನವನ್ನು ರದ್ದುಗೊಳಿಸಲಾಗುವುದು, ಎಂದು ಮಹಿಳಾ, ಮಕ್ಕಳ ಮತ್ತು ಸಾಮಾಜಿಕ ಕಲ್ಯಾಣ ಸಚಿವೆ ಅಗ್ನಿಮಿತ್ರ ಪಾಲ್ ತಿಳಿಸಿದ್ದಾರೆ. ➡ಪುಟ ೪



ಜಂಟಿ ಸಂಸದೀಯ ಅಧ್ಯಯನ ಸಮಿತಿ ಸಂವಾದ

ಶೀಘ್ರ ಒಂದು ರಾಷ್ಟ್ರ ಒಂದು ಚುನಾವಣೆ ಜಾರಿಯಾಗಲಿ

• **ಬೆಂಗಳೂರು:** ಸಮಯ, ಹಣ ಮತ್ತು ಶಕ್ತಿಯ ಉಳಿತಾಯ ಆಗಲಿರುವ ಒಂದು ರಾಷ್ಟ್ರ ಒಂದು ಚುನಾವಣೆಯನ್ನು ಶೀಘ್ರ ಜಾರಿಗೆ ತರಬೇಕು ಎಂದು ರಾಜ್ಯದ ಹಲವು ಪದ್ಮ ಪ್ರಶಸ್ತಿ ಪುರಸ್ಕೃತರು ಒಕ್ಕೊರಲಿನಿಂದ ಒತ್ತಾಯಿಸಿದ್ದಾರೆ.

ಸಂವಿಧಾನ (129ನೇ ತಿದ್ದುಪಡಿ) ಮಸೂದೆ, 2024 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು (ತಿದ್ದುಪಡಿ) ಮಸೂದೆ, 2024 ಕುರಿತ ಜಂಟಿ ಸಂಸದೀಯ ಅಧ್ಯಯನ ಸಮಿತಿಯು ಸೋಮವಾರ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಿದ ಒಂದು ರಾಷ್ಟ್ರ ಒಂದು ಚುನಾವಣೆ ಕುರಿತ ಸಂವಾದದಲ್ಲಿ ಅವರು ತಮ್ಮ ಅಭಿಪ್ರಾಯ ಮಂಡಿಸಿದರು.

ಒಂದು ರಾಷ್ಟ್ರ ಒಂದು ಚುನಾವಣೆಯ ಅನುಷ್ಠಾನದಿಂದ ಆಡಳಿತಕ್ಕೆ ಚುನಾವಣಾ ವೆಚ್ಚದ ಹೊರೆ ಕಡಿಮೆಯಾಗಲಿದೆ. ಸಮಯ, ಹಣದ ಜೊತೆಗೆ ಶಕ್ತಿಯ ಉಳಿತಾಯವೂ ಆಗಲಿದೆ.



ಒಂದು ದೇಶ ಒಂದು ಚುನಾಚಣೆಯು ಈ ಹಿಂದೆಯೂ ದೇಶದಲ್ಲಿ ಜಾರಿಯಲ್ಲಿತ್ತು. ಅದನ್ನೀಗ ಮರು ಜಾರಿಗೆ ಕ್ರಮ ತೆಗೆದುಕೊಳ್ಳುತ್ತಿರುವುದು ಸಂತಸ ತಂದಿದೆ. ಆದರೆ, ಇದರಲ್ಲಿ ಎರಡು ಕಡೆ ಚುನಾವಣೆಗೆ ಸ್ಪರ್ಧಿಸಿ, ಎರಡೂ ಕಡೆ ಗೆದ್ದರೆ ಮತ್ತೆ ಉಪ ಚುನಾವಣೆ ನಡೆಸುವ ವೆಚ್ಚವನ್ನು ಎರಡು ಕಡೆ ಗೆದ್ದಿರುವ ಅಭ್ಯರ್ಥಿಯೇ ಭರಿಸುವಂತೆ ನಿಯಮ ರೂಪಿಸಬೇಕು ಎಂದು ಆಗ್ರಹಿಸಿದರು. ➡ಪುಟ ೪

ಸಾಕಾನೆಗಳ ಕಾದಾಟ ಚೆನ್ನೈ ಮಹಿಳೆ ಸಾವು

• **ಮಡಿಕೇರಿ/ಕುಶಾಲನಗರ:** ಎಲಿಫೆಂಟ್ ಬಾತಿಂಗ್ ಸಂದರ್ಭ ಆನೆಯ ಅಡಿಗೆ ಬಿದ್ದು ಮಹಿಳೆಯರೊಬ್ಬರು ಸಾವಿಗೀಡಾಗಿ, ಆಕೆಯ ಪತಿ ಗಾಯಗೊಂಡ ಘಟನೆ ದುಬಾರೆ ಸಾಕಾನೆ ಶಿಬಿರದಲ್ಲಿ ಸೋಮವಾರ ನಡೆದಿದೆ. ಚೆನ್ನೈ ಮೂಲದ ಜಿನ್ಸು (33) ಎಂಬುವರೇ ಸಾವಿಗೀಡಾದವರಾಗಿದ್ದು, ಆಕೆಯ ಪತಿ ಜೋಯಲ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಚೆನ್ನೈನ ಪಲ್ಲಾವರಂ ಮೂಲದ ಜೋಯಲ್ ಹಾಗೂ ಜಿನ್ಸು ಕೊಡಗು ಜಿಲ್ಲೆಗೆ ಪ್ರವಾಸಕ್ಕೆಂದು ಆಗಮಿಸಿದ್ದು, ಸೋಮವಾರ ದುಬಾರೆ ಸಾಕಾನೆ ಶಿಬಿರಕ್ಕೆ ಭೇಟಿ ನೀಡಿದ್ದರು. ಶುಲ್ಕ ಪಡೆದು ಪ್ರವಾಸಿಗರಿಗೆ ಸಾಕಾನೆಗಳ ಸ್ನಾನ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು. ➡ಪುಟ ೪



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,90,000 (2,80,000) ಅಪರಂಜಿ ಚಿನ್ನ: 1,56,220 (1,56,930) ಆಭರಣ ಚಿನ್ನ: 1,43,200 (1,43,850) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) | ಷೇರು ಸೂಚ್ಯಂಕ ಬಿಎಸ್‌ಇ 73,315 (77↑) ಎನ್‌ಎಸ್‌ಇ 23,649 (6↑) | $1 = ₹96.22

ಹೇಳಿಕೆ ಬಗ್ಗೆ ಪ್ರಧಾನಿ ಸ್ಪಷ್ಟನೆ ನೀಡಲಿ

ಬೆಂಗಳೂರು: ನಿರಂತರ ಯುದ್ಧಗಳು ಮತ್ತು ಜಾಗತಿಕ ಅಸ್ಥಿರತೆಯು ದಶಕಗಳ ಅಭಿವೃದ್ಧಿಯನ್ನು ಹಿಮ್ಮೆಟ್ಟಿಸಬಹುದು ಮತ್ತು ದೊಡ್ಡ ಜನಸಂಖ್ಯೆಯನ್ನು ಮತ್ತೆ ಬಡತನಕ್ಕೆ ತಳ್ಳಬಹುದು ಎನ್ನುವ ಬಗ್ಗೆ ಪ್ರಧಾನಿ ನರೇಂದ್ರ ಅವರು ಸ್ಪಷ್ಟನೆ ನೀಡಬೇಕು ಎಂದು ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಒತ್ತಾಯಿಸಿದ್ದಾರೆ.




ಸದಾಶಿವನಗರದ ನಿವಾಸದಲ್ಲಿ ಸೋಮವಾರ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಪ್ರಧಾನ ಮಂತ್ರಿಗಳು ಯಾವ ಅರ್ಥದಲ್ಲಿಬಡತನದ ಬಗ್ಗೆ ಹೇಳಿದ್ದಾರೆ ಹಾಗೂ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಜನರಿಗೆ ಮಾಹಿತಿ ಕೊಡಬೇಕು ಎಂದು ಒತ್ತಾಯಿಸುತ್ತೇನೆ ಎಂದರು. ರಾಹುಲ್ ಗಾಂಧಿ ಯವರು ಏನೇ ಮಾತಾಡಿದ್ರು ಕೂಡ ಆರೋಪಗಳನ್ನು ಮಾಡುತ್ತಾರೆ. ಭಾರತೀಯರ ಪರಿಸ್ಥಿತಿ ಇಂತಹ ಶೋಚನೀಯ ಸ್ಥಿತಿಗೆ ಹೋಗಿದೆಯೇ ಅನ್ನೋದನ್ನು ಕೂಡ ನಾವು ಚಿಂತನೆ ಮಾಡಬೇಕಾಗಿದೆ. ನನ್ನ ಪ್ರಕಾರ ಶೋಚನೀಯ ಪರಿಸ್ಥಿತಿಗೆ ನಾವ್ಯಾರು ಕೂಡ ಹೋಗಿಲ್ಲ, ಅವರು ಕೊರೋನಾ ಸಂದರ್ಭದಲ್ಲಿ ಪ್ರಧಾನಿ ಕೊಟ್ಟ ಕರೆಗೆ ಈ ರಾಷ್ಟ್ರದ ಜನ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ರಾಹುಲ್ ಗಾಂಧಿ ವಿದೇಶದಲ್ಲಿ ಮಾತನಾಡಿದಾಗ ದೇಶದ್ರೋಹಿ ಎನ್ನುತ್ತಾರೆ. ಸ್ವತಃ ಪ್ರಧಾನಮಂತ್ರಿಗಳೇ ವಿದೇಶಿ ನೆಲದಲ್ಲಿ ನಿಂತು ಬಡತನ ಎದುರಾಗಿದೆ ಅಂತ ಮಾತನಾಡಿದ್ದಾರೆ ಎಂದಾಗ, ಯಾವ ದೃಷ್ಟಿಕೋನದಲ್ಲಿ ಹೇಳಿದ್ದಾರೆ ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು ಎಂದರು.

ಕ್ಷಮೆ ಯಾಚಿಸಲಿ

ಸಮೃದ್ಧವಾಗಿದ್ದ, ಶಕ್ತಿಯುತವಾಗಿದ್ದ ಇಡೀ ವಿಶ್ವದಲ್ಲೇ ಬಲಿಷ್ಠವಾದ ಆರ್ಥಿಕ ವ್ಯವಸ್ಥೆ ಹಾಳಾಗಿದೆ ಅಂದರೆ ಅದಕ್ಕೆ ಪ್ರಧಾನ ಮಂತ್ರಿಗಳೇ ಕಾರಣ. ಅವರು ಯಾವ ಅರ್ಥದಲ್ಲಿ ಮಾತನಾಡಿದ್ದಾರೆ ಎಂದು ಸ್ಪಷ್ಟನೆ ನೀಡಬೇಕು ಹಾಗೂ ಈ ದೇಶದ ಜನರ ಕ್ಷಮೆ ಯಾಚನೆ ಮಾಡಬೇಕು ಎಂದು ಆಗ್ರಹಿಸಿದರು.

ರಾಮ ಬಾಣ



ರಾಜ್ಯದಲ್ಲಿ ಸಾಕಷ್ಟು ತೈಲ ಸಂಗ್ರಹ

ಬೆಂಗಳೂರು: ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಸಾಕಷ್ಟು ದಾಸ್ತಾನು ಲಭ್ಯವಿದೆ ಎಂದು ಕರ್ನಾಟಕದ ತೈಲ ಉದ್ಯಮದ ರಾಜ್ಯ ಮಟ್ಟದ ಸಂಯೋಜಕರಾದ ಸಿದ್ಧಾರ್ಥ್ ಅಗರ್‌ವಾಲ್ ತಿಳಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಅವರು, ರಾಜ್ಯದ ಎಲ್ಲಾ ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ ಕಂಪನಿಗಳ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ಸಾಕಷ್ಟಿದ್ದು, ಸಂಪೂರ್ಣವಾಗಿ ಲಭ್ಯವಿದೆ.ಆದ್ದರಿಂದ ಸಾರ್ವಜನಿಕರು ಆತಂಕದಿಂದ ಇಂಧನ ಖರೀದಿಸದಂತೆ ಮನವಿ ಮಾಡಿದ್ದಾರೆ.



ಟರ್ಮಿನಲ್‌ಗಳು ಮತ್ತು ಡಿಪೋಗಳಿಂದ ಹಿಡಿದು ಸ್ಥಳೀಯ ಚಿಲ್ಲರೆ ಮಾರಾಟ ಮಳಿಗೆಗಳ ವರೆಗಿನ ಸಂಪೂರ್ಣ ಇಂಧನ ಪೂರೈಕೆ ಸರಪಳಿಯು ಯಾವುದೇ ಅಡೆತಡೆಯಿಲ್ಲದೆ, ಸಾಮಾನ್ಯ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇಂಧನ ಪೂರೈಕೆ ಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ ಮತ್ತು ರಾಜ್ಯಾದ್ಯಂತ ಮರುಪೂರಣ ಕಾರ್ಯಾಚರಣೆಗಳು ಸುಗಮವಾಗಿ ಸಾಗುತ್ತಿವೆ. ಎಲ್ಲಾ ಚಿಲ್ಲರೆ ಮಾರಾಟ ಮಳಿಗೆಗಳು ಸಾಮಾನ್ಯವಾಗಿ ಕಾರ್ಯ ನಿರ್ವಹಿಸುತ್ತಿವೆ ಮತ್ತು ಕರ್ನಾಟಕದ ಗ್ರಾಹಕರ ದೈನಂದಿನ ಇಂಧನ ಅಗತ್ಯಗಳನ್ನು ಪೂರೈಸಲು ಸಂಪೂರ್ಣವಾಗಿ ಸಜ್ಜಾಗಿವೆ ಎಂದು ತಿಳಿಸಿದ್ದಾರೆ.

ಕರ್ನಾಟಕದ ಜನರಿಗೆ ನಿರಂತರ ಇಂಧನ ಪೂರೈಕೆಯನ್ನು ಖಚಿತಪಡಿಸಲು ತೈಲ ಮಾರುಕಟ್ಟೆ ಕಂಪನಿಗಳು ಸಂಪೂರ್ಣವಾಗಿ ಬದ್ಧವಾಗಿವೆ ಮತ್ತು ಸಿದ್ಧವಾಗಿವೆ. ಅದರಂತೆ, ಸಾರ್ವಜನಿಕರು ಆತಂಕದಿಂದ ಇಂಧನ ಖರೀದಿಸುವುದು ಅಥವಾ ಅತಿಯಾಗಿ ಇಂಧನ ವನ್ನು ಸಂಗ್ರಹಿಸಿಟ್ಟುಕೊಳ್ಳುವುದನ್ನು ಮಾಡ ಬಾರದು. ಸಾರ್ವಜನಿಕರು ನಿಶ್ಚಿಂತರಾಗಿರಲು ಮತ್ತು ತಮ್ಮ ಸಾಮಾನ್ಯ ಇಂಧನ ಬಳಕೆಯನ್ನು ಮುಂದುವರಿಸಲು ಸಲಹೆ ನೀಡಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೇಜಿ

ಸಮಾಜ ಕೇವಲ ಕಾನೂನಿನ ಆಧಾರದ ಮೇಲೆ ನಡೆಯುವುದಿಲ್ಲ, ಅದು ಪರಸ್ಪರ ನಂಬಿಕೆ, ಸಹಾನುಭೂತಿ ಮತ್ತು ಆಪ್ತ ಭಾವನೆಯ ಮೇಲೆ ನಿಂತಿದೆ –ಮೋಹನ್ ಭಾಗ್ವತ್

- ಎಲ್ಲೋ ನೆರೆ ಬಂದಾಗ, ನೆರೆ ಮನೆಗೆ ಬೆಂಕಿ ಬಿದ್ದಾಗ, ಯಾರಿಗೋ ಕ್ಯಾನ್ಸರ್ ಆದಾಗ, ಭೀಕರ ಭೂಕಂಪವಾದಾಗ, ರಸ್ತೆ ಅಪಘಾತಗಳಂತಹ ಘಟನೆಗಳು ಜರಗಿದಾಗ ಅವರಿಗೆ ಸಹಕಾರ ಮಾಡಬೇಕೆಂದು ಕಾನೂನು ಪುಸ್ತಕದಲ್ಲಿ ಬರೆದಿಲ್ಲ, ಆದರೂ ಕಾನೂನನ್ನು ಮೀರಿ ಸಹಕಾರ ಮಾಡುತ್ತೇವೆ!

ದಿನ ಭವಿಷ್ಯ

ಮೇಷ ಇಂದು ಹೆಚ್ಚು ಎಚ್ಚರ ಮತ್ತು ಕುಶಲತೆಯಿಂದ ನಿಮ್ಮ ಕಾರ್ಯವ್ಯವಹಾರ ನಡೆಸಿ. ವಿರೋಧಿಗಳು ನಿಮ್ಮ ವಿರುದ್ಧ ಮಸಲತ್ತು ನಡೆಸುತ್ತಾರೆ.

ವೃಷಭ ನಿಮ್ಮ ಮಾತು ವಿವಾದ ಸೃಷ್ಟಿಸಬಹುದು. ಮಿತಮಾತು ಒಳಿತು. ನಿಮ್ಮ ಕಾರ್ಯದ ಬಗ್ಗೆ ಶ್ಲಾಘನೆ ಕೂಡಾ ಪಡೆಯುವಿರಿ. ಕೌಟುಂಬಿಕ ಸಾಮರಸ್ಯ.

ಮಿಥುನ ದಂಪತಿ ಮಧ್ಯೆ ಕಲಹ ನಡೆದೀತು. ಪರಸ್ಪರ ಸಹಕಾರ ಅವಶ್ಯ. ವೃತ್ತಿಯಲ್ಲಿ ನಿಮ್ಮ ಗುರಿ ಸಾಧನೆಗೆ ಕೆಲವು ಅಡ್ಡಿ. ಕೆಲವರ ಅಸಹಕಾರ.

ಕಟಕ ನಿಮ್ಮೆಡೆಗೆ ಬರುವ ಅವಕಾಶ ಸರಿಯಾಗಿ ಬಳಸಿಕೊಳ್ಳಿ. ವ್ಯವಹಾರ ಸುಗಮ. ಕೆಲವರ ಜತೆ ಸಂಘರ್ಷ ನಡೆದೀತು. ತಾಳ್ಮೆಯ ನಡೆ ಅವಶ್ಯ.

ಸಿಂಹ ಸಹೋದ್ಯೋಗಿ ನಿಮ್ಮ ಜತೆ ಕಾರಣವಿಲ್ಲದೆ ಜಗಳ ತೆಗೆಯಬಹುದು. ಖರ್ಚು ಹಠಾತ್ತನೆ ಏರಿಕೆ. ಪ್ರಯಾಣದಲ್ಲಿ ವಿಳಂಬ, ಕಿರಿಕಿರಿ ಉಂಟಾದೀತು.

ಕನ್ಯಾ ಕೆಲದಿನಗಳ ಒತ್ತಡ ನಿವಾರಣೆ. ಕೆಲಸ ಸರಾಗ. ಹಣಕಾಸು ಅಡ್ಡಿ ಪರಿಹಾರ. ಬಂಧುಗಳ ಜತೆಗಿನ ಭೇಟಿ ಫಲಪ್ರದ. ಕೌಟುಂಬಿಕ ಸಹಕಾರ ಹೆಚ್ಚಲಿದೆ.

ತುಲಾ ಆರ್ಥಿಕ ಚಿತ್ರಣ ತುಸು ಬದಲಾದೀತು. ಆತ್ಮೀಯರ ಜತೆ ವ್ಯವಹಾರದಲ್ಲಿ ಸಂಘರ್ಷ ಉಂಟಾದೀತು. ಎಚ್ಚರದ ಹೆಜ್ಜೆ ಇಡುವುದೊಳಿತು.

ವೃಶ್ಚಿಕ ಎಂದಿಗಿಂತ ಭಿನ್ನ ದಿನ. ಬಂಧುಗಳ ಆಗಮನದಿಂದ ಖುಷಿ. ಉದ್ಯೋಗದಲ್ಲಿ ಉನ್ನತಿ. ಆರ್ಥಿಕ ಪರಿಸ್ಥಿತಿ ತೃಪ್ತಿಕರ ಬೆಳವಣಿಗೆ.

ಧನು ಹರ್ಷದ ದಿನ. ಅನ್ಯರು ನಿಮಗೆ ಗೌರವ ಸಲ್ಲಿಸುವ ಸಾಧನೆ ತೋರುವಿರಿ. ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ಲಭಿಸಲಿದೆ.

ಮಕರ ನಿಮಗೆ ಅನಾದರ ತೋರುವ ವ್ಯಕ್ತಿಗಳನ್ನು ಒಲಿಸಲು ಹೋಗಬೇಡಿ. ಕಡೆಗಣಿಸಿಬಿಡಿ. ಆರ್ಥಿಕ ಪರಿಸ್ಥಿತಿ ಉತ್ತಮ. ವ್ಯವಹಾರದಲ್ಲಿ ಪ್ರಗತಿ.

ಕುಂಭ ನಿಮ್ಮ ಕೆಲಸ, ಪ್ರಗತಿ ನಿಧಾನಗತಿ ತೋರಲಿದೆ. ಅಪೇಕ್ಷಿಸಿದ ಫಲ ಸಿಗದು. ಸಣ್ಣದೊಂದು ವಿಷಯ ನಿರಂತರ ಕೊರಗು ಉಂಟುಮಾಡುವುದು.

ಮೀನ ಇಂದು ನಿರೀಕ್ಷಿತ ಫಲ ದೊರಕದು. ಸ್ವಲ್ಪ ಮಟ್ಟಿನ ನಿರಾಶೆ ಎದುರಿಸುವಿರಿ. ಆತ್ಮೀಯರು ಮುನಿಸು ತೋರಿಯಾರು. ತಾಳ್ಮೆಯಿಂದ ವ್ಯವಹರಿಸಿ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 9,0,5,2

ನಮ್ಮ ಭವಿಷ್ಯ –ನಮ್ಮ ಊರು ಘೋಷವಾಕ್ಯ | ಮಕ್ಕಳಿಂದ ಪ್ರತಿಭಟನೆ

ಅಣು ವಿದ್ಯುತ್‌ಗೆ ಖಂಡನೆ

ಜಿ. ನಾಗೇಶ್ ಸಾಗರ

ಸಾಗರ: 'ನಮ್ಮ ಭವಿಷ್ಯ –ನಮ್ಮ ಊರು ಘೋಷ ವಾಕ್ಯದಡಿ ಆವಿನಹಳ್ಳಿ ಹೋಬಳಿ ಮಕ್ಕಳು ನಮ್ಮ ಭಾಗಕ್ಕೆ ಅಣು ಸ್ಥಾವರ ಬೇಡ ಎಂದು ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು. ಇದೇ ಸಂದರ್ಭದಲ್ಲಿ ಗ್ರಾಪಂ ಎದುರು ರಸ್ತೆ ತಡೆ ನಡೆಸಿ ಗಮನ ಸೆಳೆದ ಮಕ್ಕಳು ನಮ್ಮೂರಿಗೆ ಅಣು ವಿದ್ಯುತ್ ಸ್ಥಾವರ ಮಾಡಿ ನಮ್ಮನ್ನೂ ಸಂತ್ರಸ್ತರನ್ನಾಗಿ ಮಾಡಬೇಡಿ. ನಮ್ಮೂರಿನಲ್ಲಿ ಅಣು ಸ್ಥಾವರ ಮಾಡಲು ಬಿಡುವುದಿಲ್ಲ ಎಂದು ಸಂಕಲ್ಪ ಕೈಗೊಂಡರು.

ಬೇಸೂರು ಅಣು ವಿದ್ಯುತ್ ಸ್ಥಾವರ ವಿರೋಧ ಹೋರಾಟ ಬೇರೆಬೇರೆ ಹಂತಕ್ಕೆ ಪದಾರ್ಪಣೆ ಮಾಡಿದ್ದು, ಮಲೆನಾಡು ಅಣು ವಿದ್ಯುತ್ ಸ್ಥಾವರ ವಿರೋಧಿ ವೇದಿಕೆ ಹೆಸರಿನಲ್ಲಿ ಹೋರಾಟದ ಮಗ್ಗುಲು ಬದಲಾಯಿಸಿದ್ದು ನಿರಂತರ ಹೋರಾಟದ ಸಂಕಲ್ಪ ಕೈಗೊಳ್ಳಲಾಗಿದೆ. ಪರಿಸರವಾದಿಗಳು, ಸಾಮಾಜಿಕ ಹೋರಾಟಗಾರರು, ರೈತ ಸಂಘಗಳು, ಪ್ರಗತಿಪರ ಚಿಂತಕರು ಹೋರಾಟಕ್ಕೆ ಬೆಂಬಲ ನೀಡಿರುವ ಬೆನ್ನಲ್ಲಿಯೆ ಇದೀಗ ಆವಿನಹಳ್ಳಿ ಹೋಬಳಿ ಭಾಗದ 200ಕ್ಕೂ ಹೆಚ್ಚು ಮಕ್ಕಳು ಸೋಮವಾರ ಅಣು ವಿದ್ಯುತ್ ಸ್ಥಾವರ ಕೈಬಿಡಿ ಎಂದು ಬೀದಿಗೆ ಇಳಿದಿದ್ದರು.

ನಮ್ಮನ್ನು ಸಂತ್ರಸ್ತರನ್ನಾಗಿ ಮಾಡಬೇಡಿ: ಈಗಾಗಲೆ ನಮ್ಮ ಮುತ್ತಾತ ಶರಾವತಿ ಹಿನ್ನೀರಿನ ಲಿಂಗನಮಕ್ಕಿಯಲ್ಲಿ ಅಣೆಕಟ್ಟು ನಿರ್ಮಿಸಲು ಭೂಮಿ ಕೊಟ್ಟಿದ್ದಾರೆ. ನೀರು ವ್ಯಾಪಿಸಿದ್ದರಿಂದ ನಮ್ಮ ಹಿರಿಯರು ಇಲ್ಲಿ ಬಂದು ನೆಲೆ ಕಂಡುಕೊಂಡಿದ್ದರು. ಇಲ್ಲಿ ನಮ್ಮ ತೋಟ, ಮನೆ, ಶಾಲೆ, ಆಸ್ಪತ್ರೆ, ನಾವಾಡುವ ಆಟದ ಮೈದಾನ, ನಾವು ಪೂಜಿಸುವ ದೇವರು ಇದೆ. ನಾವು ವಾಸಿಸುವ ಮನೆ, ಉಳುಮೆ ಮಾಡುವ ಭೂಮಿಗೆ ಈತನಕ ಹಕ್ಕು ಸಿಕ್ಕಿಲ್ಲ, ನಮ್ಮ ಮುತ್ತಜ್ಜ, ಅಜ್ಜ, ಇದೀಗ ತಂದೆ ಭೂಮಿ ಹಕ್ಕು ಪಡೆಯಲು ಬೀದಿಗೆ ಇಳಿದು ಹೋರಾಟ ಮಾಡುತ್ತಿದ್ದಾರೆ. ಇಂದಿಗೂ ನಮಗೆ ಭೂಮಿಹಕ್ಕು ಸಿಕ್ಕಿಲ್ಲ ಎಂದು ಹಿರಿಯರು ಹೇಳುತ್ತಿದ್ದಾರೆ. ಇಂತಹ ಹೊತ್ತಿನಲ್ಲಿ ಅಣು ವಿದ್ಯುತ್ ಸ್ಥಾವರದಂತಹ ಮತ್ತೊಂದು ಒಕ್ಕಲೆಬ್ಬಿಸುವ ಯೋಜನೆ ನಮ್ಮೂರಿಗೆ ಬೇಡ. ನಮ್ಮನ್ನು ಮತ್ತೊಮ್ಮೆ ಸಂತ್ರಸ್ತರನ್ನಾಗಿ ಮಾಡಬೇಡಿ. ಅಣು ವಿದ್ಯುತ್ ಸ್ಥಾವರದ ಮಾರಕತೆ ನಾವು ಓದಿ ತಿಳಿದುಕೊಂಡಿದ್ದೇವೆ. ಅದನ್ನು ನಮ್ಮೂರಿಗೆ ತಂದು ಸ್ಥಾಪನೆ ಮಾಡಿ ನಮ್ಮೂರನ್ನು ಸ್ಮಶಾನ, ಕಾಯಿಲೆಯ ಗೂಡು ಮಾಡಬೇಡಿ ಎಂದು ಮಕ್ಕಳು ಅಂಗಲಾಚಿದರು.



25 ಕಿ.ಮೀ. ಪಾದಯಾತ್ರೆ

ಅಣು ವಿದ್ಯುತ್ ಸ್ಥಾವರ ವಿರೋಧಿ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿದ್ದು ಮೇ 20ರಂದು ಬೇಸೂರು ಬಸವಣ್ಣ ದೇವಸ್ಥಾನದಿಂದ ಸಾಗರ ಉಪವಿಭಾಗಾಧಿಕಾರಿಗಳ ಕಚೇರಿವರೆಗೆ ಬೆಳಗ್ಗೆ 8ರಿಂದ 25 ಕಿ.ಮೀ. ಪಾದಯಾತ್ರೆ ನಡೆಸಲಾಗುತ್ತಿದೆ. ಮೇ 21ರಿಂದ 26ರವರೆಗೆ ಉಪವಿಭಾಗಾಧಿಕಾರಿಗಳ ಕಚೇರಿ ಎದುರು ನಿರಂತರ ಪ್ರತಿಭಟನೆ ನಡೆಸಲಾಗುತ್ತದೆ. ಮೇ 27ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಾವಿರಾರು ಜನರು ಯೋಜನೆ ವಿರೋಧಿಸಿ ಬೃಹತ್ ಪ್ರತಿಭಟನೆ ಮಾಡುತ್ತಿದ್ದೇವೆ ಎಂದು ಹೋರಾಟ ಸಮಿತಿ ಅಧ್ಯಕ್ಷ ಬೇಸೂರು ಇಂದೂಧರ ತಿಳಿಸಿದ್ದಾರೆ.

ನಮ್ಮ ಭವಿಷ್ಯ ಗಮನಿಸಿ

ವಿದ್ಯಾರ್ಥಿಗಳಾದ ವರ್ಷ, ಸೌಜನ್ಯ, ಕೀರ್ತಿ, ಸಾನ್ವಿ ಇನ್ನಿತರರು ಮಾತನಾಡಿ, ನಮ್ಮೂರಿನ ಪರಿಸರವನ್ನು ನಮ್ಮ ಹಿರಿಯರು ರಕ್ಷಣೆ ಮಾಡಿಕೊಂಡು ಬರುತ್ತಿದ್ದಾರೆ. ಏಕಾಏಕಿ ಇಲ್ಲಿ ಮಾರಕವಾದ ಅಣು ವಿದ್ಯುತ್ ಸ್ಥಾವರ ಮಾಡಲು ಬಂದಿರುವುದನ್ನು ನಾವು ಸಹಿಸುವುದಿಲ್ಲ, ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳು ನಮ್ಮೂರಿಗೆ ಅಣು ಸ್ಥಾವರ ಮಾಡುವುದನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದರು.

ಕಸ್ಟೋಡಿಯಲ್ ಡೆತ್‌ಗೆ ಶಾಶ್ವತ ಕಡಿವಾಣಕ್ಕೆ ಕ್ರಮ

ಬೆಂಗಳೂರು: ಪೊಲೀಸ್ ಕಸ್ಟಡಿಯಲ್ಲಿರುವಾಗ ಆರೋಪಿಗಳ ಮೇಲೆ ನಡೆಯುವ ದೌರ್ಜನ್ಯ ಹಾಗೂ ಕಸ್ಟೋಡಿಯಲ್ ಡೆತ್ (ವಶದಲ್ಲಿ ಸಾವು) ಪ್ರಕರಣಗಳಿಗೆ ಶಾಶ್ವತ ಕಡಿವಾಣ ಹಾಕಲು ರಾಜ್ಯ ಪೊಲೀಸ್ ಇಲಾಖೆ ಕಠಿಣ ನಿಯಮಗಳನ್ನು ಜಾರಿಗೊಳಿಸಿದೆ.

ಸೂಕ್ಷ್ಮ ಪ್ರಕರಣಗಳ ತನಿಖಾ ಅವಧಿಯಲ್ಲಿ ಸ್ಥಳೀಯ ಪೊಲೀಸರಿಂದ ನಡೆಯಬಹುದಾದ ತನಿಖಾ ವೈಫಲ್ಯ, ಕರ್ತವ್ಯ ಲೋಪ ಹಾಗೂ ಸಾಕ್ಷ್ಯನಾಶದ ಯತ್ನಗಳನ್ನು ಸಂಪೂರ್ಣವಾಗಿ ತಡೆಯುವ ಸಲುವಾಗಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ ಅವರು ಕಟ್ಟುನಿಟ್ಟಿನ ಮಾರ್ಗಸೂಚಿಯನ್ನು ಹೊರಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪೊಲೀಸ್ ಕಸ್ಟಡಿಯಲ್ಲಿ ಆರೋಪಿಗಳ ಮೇಲೆ ದೌರ್ಜನ್ಯ ಎಸಗುವ ಮತ್ತು ಲಾಕಪ್ ಡೆತ್ ಆಗುವ ಪ್ರಕರಣಗಳಲ್ಲಿ ಸ್ಥಳೀಯ ತನಿಖಾ ಅಧಿಕಾರಿಗಳು ತನಿಖೆಯ ವೇಳೆ ಲೋಪ ಎಸಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿತ್ತು. ಎಫ್‌ಐಆರ್ ದಾಖಲಿಸುವುದು, ಸ್ಥಳ ಮಹಜರು ಮಾಡುವುದು ಸೇರಿದಂತೆ ಪ್ರಮುಖ ಸಾಕ್ಷ್ಯಾಧಾರಗಳನ್ನು ಕಲೆ ಹಾಕುವಲ್ಲಿ ಸ್ಥಳೀಯ ತನಿಖಾಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದರು. ಇದು ಮುಂದಿನ ದಿನಗಳಲ್ಲಿ ಪ್ರಕರಣ ಸಿಐಡಿ ತನಿಖೆಗೆ ವರ್ಗಾವಣೆಯಾದಾಗ ತನಿಖೆಯ ದಿಕ್ಕು ತಪ್ಪಿಸಲು ಕಾರಣವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಇಡೀ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಲು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಅಡಿಯಲ್ಲಿ ಈ ಹೊಸ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ಇಲಾಖೆ ಹೊರಡಿಸಿದೆ.

ವಿಡಿಯೋ ರೆಕಾರ್ಡಿಂಗ್ ಕಡ್ಡಾಯ: ಪೊಲೀಸ್ ಕಸ್ಟಡಿಯಲ್ಲಿ ದೌರ್ಜನ್ಯ ನಡೆದ ತಕ್ಷಣವೇ ಸ್ಥಳೀಯ ಠಾಣಾಧಿಕಾರಿಗಳು ಯಾವುದೇ ವಿಳಂಬವಿಲ್ಲದೆ ಕಡ್ಡಾಯವಾಗಿ ಎಫ್‌ಐಆರ್ ದಾಖಲಿಸಬೇಕು ಮತ್ತು ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ತಕ್ಷಣವೇ ವರದಿ ಸಲ್ಲಿಸಬೇಕಾಗುತ್ತದೆ. ದೌರ್ಜನ್ಯ ಅಥವಾ ಸಾವು ಸಂಭವಿಸಿದ ತಕ್ಷಣವೇ ಸಂಬಂಧಪಟ್ಟ ಪೊಲೀಸ್ ಠಾಣೆಯ ಸಿಸಿಟಿವಿ ದೃಶ್ಯಾವಳಿಗಳನ್ನು ವಶಪಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.

ನಿಯಮ ಮೀರುವ ಅಧಿಕಾರಿಗಳ ವಿರುದ್ಧ ಕ್ರಮ

ಪೊಲೀಸ್ ಇಲಾಖೆಯ ಘನತೆಗೆ ಧಕ್ಕೆ ತರುವ ಇಂತಹ ಪ್ರಕರಣಗಳ ತನಿಖಾ ಅವಧಿಯಲ್ಲಿ ಯಾವುದೇ ಹಂತದಲ್ಲೂ ನಿಯಮ ಉಲ್ಲಂಘನೆಯಾದರೆ ಅಥವಾ ಸ್ಥಳೀಯ ಪೊಲೀಸರು ಪ್ರಭಾವ ಬೀರಲು ಯತ್ನಿಸಿದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ನಿಯಮ ಮೀರುವ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಮತ್ತು ಶಿಸ್ತು ಕ್ರಮ ಜರುಗಿಸುವುದಾಗಿ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಆದೇಶದ ಮೂಲಕ ಎಚ್ಚರಿಕೆ ನೀಡಿದ್ದಾರೆ.

ಹೊಸ ಕಲ್ಯಾಣ ಯೋಜನೆಗಳಿಗೆ ಪಶ್ಚಿಮ ಬಂಗಾಳ ಸಂಪುಟ ಅಸ್ತು

ಪುಟ 1 ಹಿಂದಿನ ಸರ್ಕಾರ ಮಾರ್ಚ್‌ನಲ್ಲಿ ಗೌರವಧನವನ್ನು 500 ರೂ.ಹೆಚ್ಚಳ ಮಾಡಿದ್ದರಿಂದ, ನೋಂದಾಯಿತ ಇಮಾಮ್‌ಗಳಿಗೆ ಮಾಸಿಕ 3,000ರೂ.ಹಾಗೂ ಮುಯೆಜ್ಜಿನ್ ಮತ್ತು ಪುರೋಹಿತರಿಗೆ 2,000 ರೂ.ಸಿಗುತ್ತಿತ್ತು. ಆದರೆ, ವಿದ್ಯಾರ್ಥಿವೇತನ ಯೋಜನೆಗಳು ಹಿಂದಿನಂತೆಯೇ ಮುಂದುವರಿಯಲಿವೆ.

ಸಮಾಜ ಕಲ್ಯಾಣ ಯೋಜನೆಗಳು: ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ, ಜೂನ್ 1 ರಿಂದ ಮಹಿಳೆಯರಿಗೆ ಮಾಸಿಕ 3,000 ರೂ. ಆರ್ಥಿಕ ನೆರವು ನೀಡುವ 'ಅನ್ನಪೂರ್ಣ' ಯೋಜನೆಗೆ ಅನುಮೋದನೆ ನೀಡಲಾಗಿದೆ. ಪ್ರಸ್ತುತ 'ಲಕ್ಷ್ಮೀರ್ ಭಂಡಾರ್' ಯೋಜನೆ ಅಡಿಯಲ್ಲಿ ನೆರವು ಪಡೆಯುತ್ತಿರುವವರು ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಸ್ವಯಂ ಚಾಲಿತವಾಗಿ ಈ ಯೋಜನೆಗೆ ಅರ್ಹರಾಗಲಿದ್ದು, ಹೊಸದಾಗಿ ಅರ್ಜಿ ಸಲ್ಲಿಸಲು ವೆಬ್ ಪೋರ್ಟಲ್ ಪ್ರಾರಂಭಿಸಲಾಗುವುದು.

ಸಿಎಎ ಅಡಿಯಲ್ಲಿ ಪೌರತ್ವಕ್ಕೆ ಅರ್ಜಿ ಸಲ್ಲಿಸಿದವರು ಮತ್ತು ಮತದಾರರ ಪಟ್ಟಿಗೆ ಹೆಸರು ಸೇರಿಸಲು ನ್ಯಾಯಾಧಿಕರಣವನ್ನು ಸಂಪರ್ಕಿಸಿದ ಮಹಿಳೆಯರೂ ಈ ಯೋಜನೆಗೆ ಅರ್ಹರಾಗಿರುತ್ತಾರೆ. ಇದರೊಂದಿಗೆ ಜೂನ್ 1 ರಿಂದ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೂ ಸಂಪುಟ ಒಪ್ಪಿಗೆ ನೀಡಿದೆ.

ಹಿಂದುಳಿದ ವರ್ಗಗಳ ಪಟ್ಟಿ ರದ್ದು

ಕಲ್ಕತ್ತಾ ಹೈಕೋರ್ಟ್‌ನ ಮೇ 22, 2024ರ ತೀರ್ಪಿಗೆ ಅನುಗುಣವಾಗಿ, ರಾಜ್ಯದ ಪ್ರಸ್ತುತ ಇತರ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯನ್ನು ಸಚಿವ ಸಂಪುಟ ರದ್ದುಗೊಳಿಸಿದೆ. ಈ ಪಟ್ಟಿಯಲ್ಲಿ ಈ ಹಿಂದೆ 77 ಸಮುದಾಯಗಳನ್ನು ಸೇರಿಸಲಾಗಿದ್ದು, ಅದರಲ್ಲಿ 75 ಮುಸ್ಲಿಂ ಸಮುದಾಯಗಳಾಗಿದ್ದವು. ಒಬಿಸಿಗೆ ಅರ್ಹತೆ ನಿರ್ಧರಿಸಲು ಹೊಸ ಸಮಿತಿ ರಚಿಸಲಾಗುವುದು. ಇದಲ್ಲದೆ, ಸರ್ಕಾರಿ ನೌಕರರು ಮತ್ತು ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳ ವೇತನ ಪರಿಷ್ಕರಣೆಗಾಗಿ 7 ನೇ ರಾಜ್ಯ ವೇತನ ಆಯೋಗವನ್ನು ರಚಿಸಲು ಸಂಪುಟ ಅನುಮೋದನೆ ನೀಡಿದೆ, ಆದರೆ ತುಟ್ಟಿಭತ್ಯೆ (ಡಿಎ) ಹೆಚ್ಚಳದ ಕುರಿತು ಸಭೆಯಲ್ಲಿ ಚರ್ಚಿಸಲಾಗಿಲ್ಲ.

ಭದ್ರತಾ ಸಮಸ್ಯೆಗಳಿಂದ ದೇಶ ಮುಕ್ತ

ಪುಟ 1 ಭಾರತವು ನಕ್ಸಲ್ ಮುಕ್ತವಾಗಿರುವುದರಿಂದ ಇಂದು ದೇಶಕ್ಕೆ ದೊಡ್ಡ ದಿನವಾಗಿದೆ. ಹಲವಾರು ಭದ್ರತಾ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ನಂತರ ಇದು ಸಾಧಿಸಲಾದ ಕನಸಾಗಿತ್ತು ಎಂದು ಬಸ್ತರ್ ಅಕಾಡೆಮಿ ಆಫ್ ಡ್ಯಾನ್ಸ್, ಆರ್ಟ್ ಅಂಡ್ ಲಿಟರೇಚರ್ (ಬದಲ್) ಕ್ಯಾಂಪಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾ ಹೇಳಿದರು. 2014ರಲ್ಲಿ ಮೋದಿ ಸರ್ಕಾರ ಅಧಿಕಾರ ವಹಿಸಿಕೊಂಡಾಗ, ಜಮ್ಮು –ಕಾಶ್ಮೀರ, ಈಶಾನ್ಯ ರಾಜ್ಯಗಳು ಮತ್ತು ಎಡಪಂಥೀಯ ಉಗ್ರವಾದದಲ್ಲಿ ಸವಾಲುಗಳು (ಆಂತರಿಕ ಭದ್ರತೆಗೆ ಸಂಬಂಧಿಸಿದ) ಇದ್ದವು. ದೇಶವು ಈ ಮೂರು ಸಮಸ್ಯೆಗಳಿಂದ ಮುಕ್ತವಾಗಿದೆ ಎಂದು ನಾನು ಈಗ ಹೇಳಬಲ್ಲೆ ಎಂದು ಶಾ ಹೇಳಿದರು

ಶೀಘ್ರ ಒಂದು ರಾಷ್ಟ್ರ ಒಂದು ಚುನಾವಣೆ ಜಾರಿಯಾಗಲಿ

ಪುಟ 1 ಪದ್ಮ ಪುರಸ್ಕೃತರಾದ ವಸಂತ ಶಾಸ್ತ್ರಿ, ಕೆ. ವೆಂಕಟೇಶ್, ಡಾ. ವಿಜಯಲಕ್ಷ್ಮಿ ದೇಶಮಾನೆ, ಕೆ.ಎಸ್. ಜಯಲಕ್ಷ್ಮೀ, ರಿಕ್ಕಿ ಕೇಜ್ ಸಹಿತ ಅನೇಕ ಜನ ಪದ್ಮ ಪುರಸ್ಕೃತರು ಪಾಲ್ಗೊಂಡು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ದೇಶದಲ್ಲಿ ಒಂದು ವರ್ಷಕ್ಕೆ 5–6 ವಿಧಾನಸಭೆ ಚುನಾವಣೆಗಳು ನಡೆಯುತ್ತವೆ. ಇದರಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವಿವಿಧ ವಲಯಗಳ ಜನರ ಮೇಲೆ ಪರಿಣಾಮ ಬೀರುತ್ತಿದೆ. ಒಂದು ರಾಜ್ಯದಲ್ಲಿ ಚುನಾವಣೆ ನಡೆದಾಗ, ಇತರ ರಾಜ್ಯಗಳ ಮೇಲೂ ಅದರ ಪರಿಣಾಮ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆ ಜಾರಿಯಾದಾಗ ಶಿಕ್ಷಕರು, ಆರಕ್ಷಕರು, ಇತರ ಚುನಾವಣಾ ಸಿಬ್ಬಂದಿಯ ಹೊರೆ ಕಡಿಮೆಯಾಗುತ್ತದೆ. ಕಾರ್ಮಿಕರು, ವಲಸಿಗರು ಸೇರಿದಂತೆ ದೇಶಾದ್ಯಂತ ಎಲ್ಲರಿಗೂ ಮತದಾನದ ಅವಕಾಶ ದೊರೆಯಬೇಕು ಎನ್ನುವುದು ಈ ಸಮಿತಿಯ ಉದ್ದೇಶ. ಹಾಗಾಗಿ ಚುನಾವಣೆಯನ್ನು ಒಂದು ಹಂತ ಅಥವಾ ಹಲವು ಹಂತಗಳಲ್ಲಿ ನಡೆಸಿದಾಗ ಎಲ್ಲರಿಗೂ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿದೆ ಎಂದು ಸಮಿತಿ ಅಧ್ಯಕ್ಷ ಪಿ.ಪಿ. ಚೌಧರಿ ಸಂವಾದದಲ್ಲಿ ಹೇಳಿದರು. ಚುನಾವಣೆ ಸುರಕ್ಷಿತವಾಗಿ ನಡೆಯುವುದಕ್ಕೆ ಚುನಾವಣಾ ಆಯೋಗ, ಗೃಹ ಸಚಿವಾಲಯ, ಇವಿಎಂ ಯಂತ್ರಗಳ ಸಿದ್ಧತೆ, ಅಂಚೆ ಮತಗಳು ಹೀಗೆ ವಿವಿಧ ರೀತಿಯ ಸಹಯೋಗ ಅವಶ್ಯ. ಸಮಿತಿಯ ಪ್ರಸ್ತಾವನೆಗಳು ಎಲ್ಲರಿಗೂ ತೃಪ್ತಿಕರವಾದಾಗ ಒಂದು ರಾಷ್ಟ್ರ ಒಂದು ಚುನಾವಣೆ ಅನುಷ್ಠಾನವೂ ಸುಲಭವಾಗುತ್ತದೆ. ಇದರಿಂದ ಚುನಾವಣೆಯ ವೆಚ್ಚವನ್ನೂ ದೊಡ್ಡ ಪ್ರಮಾಣದಲ್ಲಿ ತಗ್ಗಿಸಬಹುದು ಎಂದರು.

ಅಭಿಪ್ರಾಯ ಸಂಗ್ರಹ

ಜಂಟಿ ಸದನ ಸಮಿತಿಯು ಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಪೊಲೀಸ್ ಇಲಾಖೆ ಮುಖ್ಯಸ್ಥರು, ಹಣಕಾಸು ಇಲಾಖೆ, ಗೃಹ, ಶಿಕ್ಷಣ, ಪ್ರವಾಸೋದ್ಯಮ, ಕೃಷಿ ಇಲಾಖೆ, ಕೈಗಾರಿಕೆ, ಆರೋಗ್ಯ, ಕಾರ್ಮಿಕ ಇಲಾಖೆ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಎಚ್‌ಎಎಲ್, ಬಿಇಎಲ್, ಬಿಇಎಂಎಲ್, ಬಿಎಚ್‌ಇಎಲ್, ಕೆಐಒಸಿಎಲ್, ಕೆಪಿಸಿಎಲ್, ಐಟಿಐ ಲಿಮಿಟೆಡ್, ಐಐಎಂ, ನ್ಯಾಷನಲ್ ಸ್ಕೂಲ್ ಪ್ರತಿನಿಧಿಗಳಿಂದಲೂ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಒಂದೇ ಬಾರಿಗೆ ದೇಶದಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಆಗುವ ಸಾಧಕ–ಬಾಧಕಗಳನ್ನು ಸಮಿತಿ ಸಂಗ್ರಹಿಸಿತು.

ಸಾಕಾನೆಗಳ ಕಾದಾಟ: ಚೆನ್ನೈ ಮಹಿಳೆ ಸಾವು

ಪುಟ 1 ಆದರಂತೆ ಜೋಯಲ್ ದಂಪತಿ ಸೋಮವಾರ ಆನೆಗೆ ಸ್ನಾನ ಮಾಡಿಸುವಾಗ ಸಾಕಾನೆಗಳೆರಡರ ನಡುವೆ ಕಾದಾಟ ನಡೆದಿದೆ. ಈ ಸಂದರ್ಭ ಕಾಡಾನೆಯೊಂದು ಮಹಿಳೆಯ ಮೈಮೇಲೆ ಬಿದ್ದಿದೆ. ಪರಿಣಾಮವಾಗಿ ಅವರು ಸ್ಥಳದಲ್ಲೇ ಸಾವಿಗೀಡಾದರೆ, ಪತಿ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಿರ್ದಿಷ್ಟ ಅಂತರ ಕಾಯ್ದುಕೊಳ್ಳಲು ಕ್ರಮವಹಿಸಿ

ಆನೆಗಳು ಸೇರಿದಂತೆ ವನ್ಯಜೀವಿಗಳನ್ನು ಎಷ್ಟೇ ಪಳಗಿಸಿದ್ದರೂ, ಪ್ರಾಣಿಗಳ ಸ್ವಭಾವವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟಸಾಧ್ಯವಾಗಿದ್ದು, ಅವು ಯಾವಾಗ ಯಾವ ರೀತಿ ವರ್ತಿಸುತ್ತವೆ ಎಂದು ಊಹಿಸುವುದೂ ಕಷ್ಟವಾಗುತ್ತದೆ. ಹೀಗಾಗಿ ಆನೆಗಳ ಸೊಂಡಿಲು ಮುಟ್ಟುವುದು, ಪಕ್ಕದಲ್ಲಿ ನಿಂತು ಫೋಟೋ ತೆಗೆಸಿಕೊಳ್ಳುವುದು, ಪ್ರವಾಸಿಗರಿಗೆ ಆನೆ ಮೈ ತೊಳೆಯಲು ಅವಕಾಶ ನೀಡುವುದು, ಅವರಿಂದ ಬೆಲ್ಲ, ಬಾಳೆಹಣ್ಣು ಇತ್ಯಾದಿ ಆಹಾರ ತಿನ್ನಿಸುವುದನ್ನು ನಿರ್ಬಂಧಿಸಲು ಕ್ರಮ ವಹಿಸುವಂತೆ ಮತ್ತು ವನ್ಯಜೀವಿಗಳಿಂದ ಪ್ರವಾಸಿಗರು ನಿರ್ದಿಷ್ಟ ಅಂತರ ಕಾಯ್ದುಕೊಳ್ಳುವಂತೆ ಕ್ರಮ ವಹಿಸುವಂತೆ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಸಮಗ್ರ ತನಿಖೆಗೆ ಸಚಿವ ಸೂಚನೆ

ಮಡಿಕೇರಿ / ಕುಶಾನಲನಗರ: ಯಾರೂ ಊಹಿಸದ ರೀತಿಯಲ್ಲಿ ದುಬಾರೆ ಆನೆ ಶಿಬಿರದಲ್ಲಿ ದುರ್ಘಟನೆ ನಡೆದಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಇಂತಹ ಅಚಾತುರ್ಯಗಳು ಮರುಕಳಿಸದ ರೀತಿಯಲ್ಲಿ ಕ್ರಮ ವಹಿಸಲು ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ಕೊಡಗು ಜಿಲ್ಲೆಯ ದುಬಾರೆ ಶಿಬಿರದಲ್ಲಿ ಎರಡು ಸಾಕಾನೆಗಳ ಕಾದಾಟದ ವೇಳೆ ಅನಿರೀಕ್ಷಿತವಾಗಿ ಆಯ ತಪ್ಪಿ ಬಿದ್ದ ಆನೆಯ ಕೆಳಗೆ ಸಿಲುಕಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ಸಚಿವರು ಸಂತಾಪ ಸೂಚಿಸಿದ್ದಾರೆ. ಇದು ಅತ್ಯಂತ ಆಘಾತಕಾರಿ ಘಟನೆ, ಆನೆಗಳನ್ನು ಸ್ನಾನ ಮಾಡಿಸುವಾಗ ನದಿಯ ಬಳಿ ನಿಂತು ನೋಡುತ್ತಿದ್ದ ತಮಿಳುನಾಡಿನ ಪ್ರವಾಸಿ ಮಹಿಳೆ ಈ ಅಪಘಾತದಂತಹ ಘಟನೆಯಲ್ಲಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಮಗೆ ತಿಳಿಸಿದ್ದು, ಇದು ಅತ್ಯಂತ ನೋವಿನ ಸಂಗತಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಸಚಿವರು ಪ್ರಾರ್ಥಿಸಿದ್ದಾರೆ. ಸಾಕಾನೆಗಳಾದ ಕಂಚನ್ ಮತ್ತು ಮಾರ್ತಾಂಡ ಆನೆಗಳು ಸ್ನಾನ ಮಾಡಿಸುತ್ತಿದ್ದ ವೇಳೆ ಪರಸ್ಪರ ಕಾದಾಟ ನಡೆಸಿದ್ದು, ಮಾವುತರು ನಿಯಂತ್ರಿಸುತ್ತಿದ್ದರೂ ಮುನ್ನುಗ್ಗಿದ ಕಂಜನ್ ಆನೆ, ಮಾರ್ತಾಂಡ ಆನೆಗೆ ಗುದ್ದಿದೆ. ಮಾರ್ತಾಂಡ ಆಯ ತಪ್ಪಿ ಕೆಳಗೆ ಬಿದ್ದಾಗ, ಈ ಮಹಿಳೆ ಆನೆಯ ಕೆಳಗೆ ಸಿಲುಕಿ ಮೃತಪಟ್ಟಿದ್ದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಬಸ್ ಉಚಿತ ಪ್ರಯಾಣ ಘೋಷಣೆ

ಪುಟ 1 ಒಂದೂವರೆ ಗಂಟೆಕಾಲ ನಡೆದ ಪ್ರಮಾಣವಚನದ ಬೆನ್ನಿಗೇ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರ ಅಧ್ಯಕ್ಷತೆಯಲ್ಲಿ ಸಂಪುಟ ಸಭೆ ನಡೆದು ಕೆಎಸ್ಆರ್‌ಟಿಸಿ (ಕೇರಳ ಸಾರಿಗೆ) ಬಸ್ಸುಗಳಲ್ಲಿ ಜೂ.15ರಿಂದ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ , ಹಿರಿಯ ನಾಗರಿಕರಿಗಾಗಿ ಇಲಾಖೆ ರಚನೆ ಮತ್ತು ಆಶಾ ಕಾರ್ಯಕರ್ತೆಯರ ಗೌರವಧನವನ್ನು 3000ರೂ.ಗಳಿಗೆ ಹೆಚ್ಚಿಸಲು ಅಂಗೀಕಾರ ನೀಡಲಾಯಿತು. ಯುಡಿಎಫ್ ಚುನಾವಣೆಯ ಸಮಯದಲ್ಲಿ ನೀಡಿದ ಇತರ ಭರವಸೆಗಳಲ್ಲಿ ಕಾಲೇಜು ಹೆಣ್ಣುಮಕ್ಕಳಿಗೆ ತಿಂಗಳಿಗೆ 1000ರೂ., ಕಲ್ಯಾಣ ಪಿಂಚಣಿ 3000ರೂ.ಗೆ ಹೆಚ್ಚಳ, ಪ್ರತಿ ಕುಟುಂಬಕ್ಕೆ 25ಲ.ರೂ.ಗಳ ವಿಮಾ ಸೌಲಭ್ಯ, ಯುವ ಉದ್ಯಮಿಗಳಿಗೆ 5ಲ.ರೂ.ವರೆಗೆ ಬಡ್ಡಿರಹಿತ ಸಾಲ ನೀಡಿಕೆ ಸೇರಿದ್ದು , ಈ ಬಗ್ಗೆ ಯಾವುದೇ ನಿರ್ಧಾರ ಪ್ರಕಟಿಸಿಲ್ಲ, ಈ ಭರವಸೆಗಳನ್ನು ಹಂತಹಂತವಾಗಿ ಜಾರಿಗೊಳಿಸಲಾಗುವುದು ಎಂದು ಸತೀಶನ್ ಹೇಳಿದರು.

ಅಂಗನವಾಡಿ ಸಹಾಯಕರ ಮಾಸಿಕ ಸಂಭಾವನೆ 1000 ರೂ.ಗಳ ಹೆಚ್ಚಳ, ಶಾಲೆಗಳ ಬಿಸಿಯೂಟದ ಸಿಬ್ಬಂದಿಗೆ ತಿಂಗಳಿಗೆ ಹೆಚ್ಚುವರಿಯಾಗಿ 1000 ರೂ., ಪೂರ್ವ ಪ್ರಾಥಮಿಕ ಶಿಕ್ಷಕಿಯರು ಮತ್ತು ಆಯಾಗಳ ಗೌರವ ಧನವನ್ನು 1000 ರೂ.ಗಳಷ್ಟು ಹೆಚ್ಚಿಸಲಾಗುವುದು ಎಂದೂ ಅವರು ತಿಳಿಸಿದರು.

ರಾಜ್ಯದಲ್ಲಿ ಆರ್ಥಿಕ ಸಂಕಷ್ಟ: ಹಿಂದಿನ ಎಲ್‌ಡಿಎಫ್ ಸರಕಾರ ರಾಜ್ಯದ ಆರ್ಥಿಕ ಸ್ಥಿತಿಯನ್ನು ವಿಷಮ ಸ್ಥಿತಿಗೆ ತಳ್ಳಿರುವುದಾಗಿ ಯುಡಿಎಫ್ ಆರೋಪಿಸಿದ್ದು, ಇದೀಗ ರಾಜ್ಯದ ಹಣಕಾಸು ಸ್ಥಿತಿಗತಿ ಮತ್ತು ಸರಕಾರಿ ಬೊಕ್ಕಸದ ಕುರಿತಂತೆ ಶ್ವೇತಪತ್ರ ಬಿಡುಗಡೆಗೊಳಿಸಲಾಗುವುದು ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ನೂತನ ವಿಧಾನಸಭೆಯ ಅಧಿವೇಶನ ಮೇ 21 ಮತ್ತು 22ರಂದು ನಡೆಯಲಿದ್ದು, ಅಲ್ಲಿ ವಿಧಾನಸಭಾಧ್ಯಕ್ಷರ ಚುನಾವಣೆ ಮತ್ತು ನೂತನ ಶಾಸಕರು ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದೂ ಅವರು ಪ್ರಕಟಿಸಿದರು. ಮೇ 29ರಂದು ರಾಜ್ಯಪಾಲರು ಸದನವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಸಂಪುಟ ಸಭೆಯಲ್ಲಿ ಕೈಗೊಳ್ಳಲಾದ ಇನ್ನೊಂದು ನಿರ್ಧಾರದಂತೆ, ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಅಂಗರಕ್ಷಕರಿಂದ ಇಬ್ಬರು ಯುವಕಾಂಗ್ರೆಸ್ ಕಾರ್ಯಕರ್ತರ ಮೇಲೆ ನಡೆದ ಹಲ್ಲೆ (2023ರಲ್ಲಿ ಆಲಪ್ಪುಳದಲ್ಲಿ ನಡೆದ ನವಕೇರಳ ಯಾತ್ರೆಯ ವೇಳೆ)ಯ ಬಗ್ಗೆ ಮರುತನಿಖೆಗೆ ವಿಶೇಷ ತನಿಖಾ ತಂಡ ರಚಿಸಲಾಗುವುದು ಎಂದು ತಿಳಿಸಲಾಗಿದೆ.

ದೇವರ ಹೆಸರಲ್ಲಿ ಪ್ರಮಾಣ: ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು (ಪರಾವೂರ್ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ) ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಪ್ರಮಾಣವಚನಕ್ಕಾಗಿ ಅವರ ಪೂರ್ಣ ಹೆಸರನ್ನು ಕೂಗುತ್ತಿದ್ದಂತೆಯೇ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಬೆಂಬಲಿಗರು ಹರ್ಷೋದ್ಗಾರಗೈದರು. ಈ ಬಾರಿಯ ಚುನಾವಣೆಯಲ್ಲಿ 140 ಸದಸ್ಯಬಲದ ವಿಧಾನಸಭೆಯಲ್ಲಿ ಯುಡಿಎಫ್ 102 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿದ್ದರೆ, ಆಡಳಿತದಲ್ಲಿದ್ದ ಎಲ್‌ಡಿಎಫ್ 35 ಸ್ಥಾನಗಳೊಂದಿಗೆ ಹೀನಾಯ ಸೋಲುಂಡಿದೆ. ಬಿಜೆಪಿ ಇದೇ ಮೊದಲ ಬಾರಿಗೆ 3 ಸದಸ್ಯರೊಂದಿಗೆ ವಿಧಾನಸಭೆಯನ್ನು ಪ್ರವೇಶಿಸುತ್ತಿದೆ.

ನೂತನಸಚಿವರು: ರಮೇಶ್ ಚೆನ್ನಿತ್ತಲ,ಕೆ.ಮುರಳೀಧರನ್, ಎ.ಪಿ.ಅನಿಲ್ ಕುಮಾರ್, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಸನ್ನಿ ಜೋಸೆಫ್, ಮುಸ್ಲಿಂ ಲೀಗಿನ ಕುಂಞಾಲಿಕುಟ್ಟಿ, ಆರ್‌ಎಸ್‌ಪಿ ನಾಯಕ ಶಿಬು ಬೇಬಿ ಜಾನ್ , ಕೇರಳ ಕಾಂಗ್ರೆಸ್ ನಾಯಕ ಮಾನ್ಸ್ ಜೋಸೆಫ್, ಕೇರಳ ಕಾಂಗ್ರೆಸ್ (ಜಾಕೋಬ್)ನ ಅನೂಪ್ ಜಾಕೋಬ್, ಸಿಎಂಪಿ ನಾಯಕ ಸಿ.ಪಿ.ಜಾನ್ , ಎನ್.ಶಂಸುದ್ದೀನ್, ವಿಷ್ಣುನಾಥ್, ಬಿಂದುಕೃಷ್ಣ, ರೋಜಿ ಎಂ.ಜಾನ್, ಎಂ.ಲಿಜು, ಕೆ.ಎಂ.ಶಾಜಿ, ವಿ.ಇ.ಅಬ್ದುಲ್ ಗಫೂರ್, ಟಿ.ಸಿದ್ದಿಕಿ, ಕೆ.ಎ.ತುಳಸಿ, ಒ.ಜೆ.ಜನೀಶ್ ಅವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ''ಟೀಮ್ ಯುಡಿಎಫ್'' ಘೋಷಣೆ ಮುಗಿಲುಮುಟ್ಟಿತ್ತು.

3 ಸಾವಿರ ಬಸ್‌ಗಳ ಸೌಲಭ್ಯ | ಉಪಾಹಾರ ವ್ಯವಸ್ಥೆ | ಅಧಿಕಾರಿಗಳ ನಿಯೋಜನೆ | ವಾಹನಗಳ ಮೇಲೆ ಜಿಪಿಎಸ್‌ನಿಗಾ

ತುಮಕೂರಲ್ಲಿಂದು ಸರ್ಕಾರದ ಸಾಧನೆಯ ಸಂಭ್ರಮ



• **ತುಮಕೂರು:** ಮಂಗಳವಾರ ನಗರದಲ್ಲಿ ನಡೆಯಲಿರುವ ಸಾಧನೆಯ ಸೇವೆಗಳ ಸಮರ್ಪಣೆ ಕಾರ್ಯಕ್ರಮಕ್ಕೆ ಕಂದಾಯ ಇಲಾಖೆ ಹಾಗೂ ಪಂಚಾಯಿತಿ ಹಂತದಲ್ಲಿ ಎಲ್ಲಾ ತಾಲೂಕುಗಳಿಂದ ಸುಮಾರು 3,000 ಬಸ್‌ಗಳಲ್ಲಿ ಫಲಾನುಭವಿಗಳು ಆಗಮಿಸುತ್ತಿದ್ದಾರೆ. ಹಾಗಾಗಿ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ.ಪರಮೇಶ್ವರ ತಿಳಿಸಿದರು.

ಸೋಮವಾರ ಕಾರ್ಯಕ್ರಮ ನಡೆಯಲಿರುವ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿನ ಪೂರ್ವ ಸಿದ್ಧತೆ ಪರಿಶೀಲಿಸಿದ ನಂತರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಬಸ್ ಹೊರಡುವ ಜಾಗದಲ್ಲಿಯೇ ಫಲಾನುಭವಿಗಳಿಗೆ ಉಪಾಹಾರದವ್ಯವಸ್ಥೆಮಾಡಲಾಗಿದೆ. ಅಲ್ಲದೆ, ಫಲಾನುಭವಿಗಳನ್ನು ಸುರಕ್ಷತೆಯಿಂದ ಕರೆತರಲು ಮತ್ತು ವಾಪಸ್ ಕರೆದುಕೊಂಡು ಹೋಗಲು ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಬಸ್ ಹೊರಡುವ ಜಾಗದಿಂದ ಜಿಪಿಎಸ್ ವ್ಯವಸ್ಥೆ ಮೂಲಕ ಮಾರ್ಗದ ಮೇಲೆ ನಿಗಾವಹಿಸಲು ಸೂಚಿಸಲಾಗಿದೆ. ಜಿಲ್ಲೆಯಾದ್ಯಂತ ಸುಮಾರು 1,52,000ಕ್ಕೂ ಹೆಚ್ಚು ಫಲಾನುಭವಿ ಗಳೇ ಇದ್ದು, ಒಟ್ಟು ಸುಮಾರು 2 ಲಕ್ಷಕ್ಕೂ ಹೆಚ್ಚಿನ ಜನರು ಈ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದುಸಚಿವರುವಿವರಿಸಿದರು. ಶಾಸಕಎಚ್.ವಿ.ವೆಂಕಟೇಶ್, ಗ್ಯಾರಂಟಿ ಸಮಿತಿಯ ಜಿಲ್ಲಾ ಅಧ್ಯಕ್ಷ ಚಂದ್ರಶೇಖರ್ ಗೌಡ, ಬಿಎಟಿಸಿ ಉಪಾಧ್ಯಕ್ಷ ನಿಕೇತ್ ರಾಜ್ ಎಂ., ಡಿಸಿ ಶುಭ ಕಲ್ಯಾಣ್ ಇದ್ದರು.

ಪ್ರತಿಪಕ್ಷದ ಮುಖಂಡರು ಭಾಗಿ

ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಎಲ್ಲಾ ಸಚಿವರಿಗೆ, ಶಾಸಕರಿಗೆ ಖುದ್ದು ಆಹ್ವಾನ ನೀಡಲಾಗಿದೆ. ಅಲ್ಲದೆ, ಪ್ರತಿಪಕ್ಷ ನಾಯಕರೂ, ಸಂಸದರೂ, ನಿಗಮ ಮಂಡಳಿ ಅಧ್ಯಕ್ಷರು, ಉಪಾಧ್ಯಕ್ಷರು, ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಚಿವರು ತಿಳಿಸಿದರು.

ಕೈ ಸರ್ಕಾರಕ್ಕೆ 3 ವರ್ಷ

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೇ 20 ಕ್ಕೆ ಮೂರು ವರ್ಷ ಪೂರ್ಣಗೊಳ್ಳಲಿದೆ. ಹಿನ್ನೆಲೆಯಲ್ಲಿ ಇಡೀ ಜಿಲ್ಲಾಡಳಿತದ ಅಧಿಕಾರಿಗಳು ಕಳೆದ 15 ದಿನಗಳಿಂದಲೇ ಸರ್ಕಾರದ ಸಾಧನಾ ಸಮಾವೇಶವನ್ನು ಅದ್ದೂರಿಯಾಗಿ ಹಾಗೂ ಯಶಸ್ವಿಯಾಗಿ ನಡೆಸಲು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ತುಮಕೂರು ನಗರದ ಪ್ರಮುಖ ರಸ್ತೆಗಳಲ್ಲಿ ಈಗಾಗಲೇ ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಹಾಗೂ ಸಾಧನೆಗಳ ಪಟ್ಟಿಯನ್ನೊಳಗೊಂಡ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಸಚಿವರುಗಳ ಭಾವಚಿತ್ರ ಇರುವ ಫ್ಲೆಕ್ಸ್, ಕಟೌಟ್‌ಗಳು ರಾರಾಜಿಸುತ್ತಿವೆ. ಸಮಾವೇಶಕ್ಕೆ ಫಲಾನುಭವಿಗಳನ್ನು ಕರೆತರಲು ಕಂದಾಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಸಮಾವೇಶಕ್ಕೆ ಆಗಮಿಸುವ ಫಲಾನುಭವಿಗಳಿಗೆ ಊಟ, ಕುಡಿಯುವ ನೀರಿನ ವ್ಯವಸ್ಥೆ ಸಹ ಮಾಡಲಾಗಿದೆ.



15 ಅಂಬುಲೆನ್ಸ್‌ಗಳ ವ್ಯವಸ್ಥೆ

ಸುರಕ್ಷತೆ ದೃಷ್ಟಿಯಿಂದ ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ ಹಾಗೂ ಕಾರ್ಯಕ್ರಮದ ಸ್ಥಳದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ 15 ಅಂಬುಲೆನ್ಸ್‌ಗಳನ್ನು ನುರಿತ ವೈದ್ಯಕೀಯ ಸಿಬ್ಬಂದಿಗಳೊಂದಿಗೆ ನಿಯೋಜನೆ ಮಾಡಲಾಗಿದೆ. ಅಗ್ನಿನಂದಕ ವಾಹನಗಳನ್ನು ನಿಯೋಜನೆ ಮಾಡಲಾಗಿದೆ. ಕಾರ್ಯಕ್ರಮದ ಸ್ಥಳದಲ್ಲಿ ಆಯಾ ಗ್ಯಾಲರಿಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು ಮತ್ತು ಮಜ್ಜಿಗೆಯ ವ್ಯವಸ್ಥೆಯನ್ನು ಮಾಡಲಾಗಿದ್ದು, ಅದರ ನಿರ್ವಹಣೆಗಾಗಿ ವಿವಿಧ ಜಿಲ್ಲಾ/ತಾಲೂಕು ಮಟ್ಟದ ಅಧಿಕಾರಿ/ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ ಎಂದು ವಿವರಿಸಿದರು.

ತಾಲೂಕುವಾರು ವಿವಿಧ ಯೋಜನೆಗಳ ಫಲಾನುಭವಿಗಳ ವಿವರ

ಕ್ರ. ಸಂ.	ತಾಲೂಕು	ಇ-ಪೌತಿ	ಕಂದಾಯ ಗ್ರಾಮ	ದರಖಾಸ್ತು ಪೋಡಿ	ಪಿಂಚಣಿ ಯೋಜನೆ	ಒಟ್ಟು
01	ತುಮಕೂರು	5641	1368	50	4516	11575
02	ಗುಬ್ಬಿ	7828	4743	809	2314	15694
03	ಕುಣಿಗಲ್	9110	648	529	3610	13897
04	ತಿಪಟೂರು	8872	1239	853	3618	14582
05	ತುರುವೇಕೆರೆ	7322	2671	744	2478	13215
06	ಚಿಕ್ಕನಾಯಕನಹಳ್ಳಿ	9556	1980	446	2218	14200
07	ಮಧುಗಿರಿ	9563	2307	273	3814	15957
08	ಶಿರಾ	10582	1891	1908	3239	17623
09	ಪಾವಗಡ	5028	2049	435	2919	10430
10	ಕೊರಟಗೆರೆ	8018	1770	254	3123	13165
	ಒಟ್ಟು	81523	20666	6301	31848	140338

2ಲಕ್ಷ ಜನ ಬರುವ ನಿರೀಕ್ಷೆ

ಫಲಾನುಭವಿಗಳನ್ನು ಸುರಕ್ಷತೆಯಿಂದ ಕರೆತರಲು ಮತ್ತು ವಾಪಸ್ ಕರೆದುಕೊಂಡು ಹೋಗಲು ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಬಸ್ ಹೊರಡುವ ಜಾಗದಿಂದ ಜಿಪಿಎಸ್ ವ್ಯವಸ್ಥೆ ಮೂಲಕ ಮಾರ್ಗದ ಮೇಲೆ ನಿಗಾವಹಿಸಲು ಸೂಚಿಸಲಾಗಿದೆ. ಜಿಲ್ಲೆಯಾದ್ಯಂತ ಸುಮಾರು 1,52,000ಕ್ಕೂ ಹೆಚ್ಚು ಫಲಾನುಭವಿಗಳೇ ಇದ್ದು, ಒಟ್ಟು ಸುಮಾರು 2 ಲಕ್ಷಕ್ಕೂ ಹೆಚ್ಚಿನ ಜನರು ಈ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದು ಸಚಿವರು ವಿವರಿಸಿದರು.



1.40 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ, ಸವಲತ್ತು, ಆದೇಶ ಪತ್ರಗಳ ವಿತರಣೆ

ರಾಜ್ಯದಲ್ಲಿ ಒಂದು ಜಿಲ್ಲೆಯ ಹಂತದಲ್ಲಿ ಅತಿ ಹೆಚ್ಚು ಕಂದಾಯ ಇಲಾಖೆಯ ಫಲಾನುಭವಿಗಳನ್ನು ಹೊಂದಿರುವ ಜಿಲ್ಲೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಹಿಂದೆ ಹಾವೇರಿ ಮತ್ತು ಹೊಸಪೇಟೆಯಲ್ಲಿ ರಾಜ್ಯ ಮಟ್ಟದಲ್ಲಿ ಕಂದಾಯ ಇಲಾಖೆಯ ಸವಲತ್ತುಗಳ ವಿತರಣಾ ಸಮಾರಂಭಗಳನ್ನು ಆಯೋಜನೆ ಮಾಡಲಾಗಿತ್ತು. ಈಗ ತುಮಕೂರು ನಗರದಲ್ಲಿ ಕಂದಾಯ ಇಲಾಖೆಯ ವಿವಿಧ ಯೋಜನೆಗಳ 1.40 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ/ಸವಲತ್ತು/ಆದೇಶ ಪತ್ರಗಳನ್ನು ವಿತರಣೆ ಮಾಡಲು ರಾಜ್ಯಮಟ್ಟದ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರ ಜತೆಗೆ ತುಮಕೂರು ಜಿಲ್ಲಾ ವ್ಯಾಪ್ತಿಯ ಇತರೆ ಇಲಾಖೆಗಳ ವಿವಿಧ ಯೋಜನೆಯ ಸುಮಾರು 70 ಸಾವಿರ ಅರ್ಹ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಣೆ ಮಾಡಲಾಗುವುದು ಹಾಗೂ ಅಂದಾಜು ರೂ. 500.00 ಕೋಟಿ ರೂ.ಮೊತ್ತದ ತುಮಕೂರು ಜಿಲ್ಲಾ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಕೆಲವು ಪೂರ್ಣಗೊಂಡ ಕಾಮಗಾರಿಗಳ ಲೋಕಾರ್ಪಣೆಯೂ ನಡೆಯಲಿದೆ. ಉದ್ಘಾಟನೆ ಹಾಗೂ ನೂತನ ಕಾಮಗಾರಿಗಳಿಗೆ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಂಟಿಯಾಗಿ ನೆರವೇರಿಸಲಿದ್ದಾರೆ.



ಪೊಲೀಸ್ ಬಂದೋಬಸ್ತ್

3 ವರ್ಷದ ಸಾಧನಾ ಸಮಾವೇಶವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲು ಸರ್ಕಾರ ನಿರ್ಧರಿಸಿರುವ ಹಿನ್ನೆಲೆಯಲ್ಲಿ, ಮುಖ್ಯಮಂತ್ರಿಯಾದಿಯಾಗಿ ಎಲ್ಲಾ ಸಚಿವರು, ಶಾಸಕರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಅಲ್ಲದೇ ಒಂದೂವರೇ ಲಕ್ಷಕ್ಕೂ ಹೆಚ್ಚು ಜನರು ಸೇರುವ ಹಿನ್ನೆಲೆಯಲ್ಲಿ ತುಮಕೂರು ನಗರಾದ್ಯಂತ ಈಗಾಗಲೇ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಗಿದೆ. ಅಲ್ಲದೇ, ಹೊರ ಜಿಲ್ಲೆಗಳಿಂದಲೂ ಪೊಲೀಸ್ ಸಿಬ್ಬಂದಿ ಬಂದಿಳಿದಿದ್ದಾರೆ.

ಕಿರುಸುದ್ದಿ

ಕೆಪಿಸಿಸಿ ಕಚೇರಿಯಲ್ಲಿ ಗಲಾಟೆ

• **ಬೆಂಗಳೂರು:** ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ಮತ್ತು ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಬೆಂಬಲಿಗರ ನಡುವೆ ಸೋಮವಾರ ಕೆಪಿಸಿಸಿ ಕಚೇರಿಯಲ್ಲಿ ಗಲಾಟೆ ನಡೆದಿದ್ದು, ಉಪಾಧ್ಯಕ್ಷೆ ದೀಪಿಕಾ ರೆಡ್ಡಿ, ಬಿಂದುಗೌಡ ಸೇರಿದಂತೆ 15 ಪದಾಧಿಕಾರಿಗಳನ್ನು ವಜಾ ಮಾಡಿದ್ದೆ ಗಲಾಟೆಗೆ ಕಾರಣವಾಗಿದೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಪ್ರತಿಭಟನೆ ನಡೆಸಲು ಕೆಪಿಸಿಸಿ ಕಚೇರಿಯಲ್ಲಿ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಇಬ್ಬರು ಬೆಂಬಲಿಗರ ನಡುವೆ ತೀವ್ರ ವಾಗ್ವಾದ, ತಳ್ಳಾಟ ನೂಕಾಟ ನಡೆದು ಕೊನೆಗೆ ಪರಿಸ್ಥಿತಿ ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿತು. ಹುದ್ದೆ ತಡೆಹಿಡಿದಿದ್ದು ಕಾನೂನು ಬಾಹಿರ ಹಾಗೂ ಪ್ರತೀಕಾರದ ಕ್ರಮ. ಇದು ಶಿಸ್ತಿನ ಕ್ರಮವಲ್ಲ, ವೈಯಕ್ತಿಕ ಸೇಡು. ಸ್ತ್ರೀ ದ್ವೇಷದ ಪಿತೂರಿ ಮತ್ತು ಸೇಡಿನ ರಾಜಕೀಯಕ್ಕೆ ಮೌನವಾಗುವುದಿಲ್ಲ, ಕಾಂಗ್ರೆಸ್ ಪಕ್ಷ ಹಾಗೂ ಹೈಕಮಾಂಡ್ ಮೇಲಿನ ನಿಷ್ಠೆ ಅಚಲ ಎಂದು ದೀಪಿಕಾ ರೆಡ್ಡಿ ಮಾಧ್ಯಮ ಹೇಳಿಕೆ ನೀಡಿದ್ದಾರೆ.

ಸಿಇಟಿ: ದಾಖಲೆ ಪರಿಶೀಲನೆಗೆ ಮೇ 21 ರವರೆಗೆ ಕಾಲಾವಕಾಶ

• **ಬೆಂಗಳೂರು:** ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಿ, ಇನ್ನೂ ದಾಖಲೆ ಪರಿಶೀಲನೆ ಮಾಡಿಕೊಳ್ಳದ ಅಭ್ಯರ್ಥಿಗಳು ಅಗತ್ಯ ಮೂಲ ದಾಖಲೆಗಳ ಸಮೇತ ಹತ್ತಿರದ ಸರ್ಕಾರಿ ಪಿಯು ಕಾಲೇಜುಗಳಿಗೆ ಮೇ 21ರೊಳಗೆ ಹೋಗಿ ಪರಿಶೀಲನೆ ಮಾಡಿಸಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೂಚಿಸಿದೆ. ಅಭ್ಯರ್ಥಿಗಳ ಕ್ಲೇಮ್ಸ್ ಸರ್ಟಿಫಿಕೇಟ್‌ನಲ್ಲಿ ಕ್ಲೇಮ್ಸ್ ನಾಟ್ ವೆರಿಫೈಯ್ಡ್ ಎಂದು ಮುದ್ರಿತವಾಗಿದ್ದಲ್ಲಿ ಅಂತಹವರು ಮಾತ್ರ ಸರ್ಕಾರಿ ಪಿಯು ಕಾಲೇಜಿಗೆ ಹೋಗಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಈ ಹಿಂದೆ ಅವಕಾಶ ನೀಡಿದ್ದಾಗಲೂ ಕೆಲವು ಅಭ್ಯರ್ಥಿಗಳು ತಮ್ಮ ಕಾಲೇಜುಗಳಲ್ಲಿ ದಾಖಲೆ ಪರಿಶೀಲನೆ ಮಾಡಿಕೊಂಡಿರುವುದಿಲ್ಲ, ಹೀಗಾಗಿ ಮತ್ತೊಮ್ಮೆ ಅವಕಾಶ ನೀಡಲಾಗಿದೆ. ಕ್ಲೇಮ್ಡ್ ಮತ್ತು ವೆರಿಫೈಯ್ಡ್ ಎಂದು ಅರ್ಜಿಯಲ್ಲಿ ಮುದ್ರಿತವಾಗಿರುವವರು ದಾಖಲೆ ಪರಿಶೀಲನೆಗೆ ಹೋಗುವ ಅಗತ್ಯ ಇರುವುದಿಲ್ಲ ಎಂದು ತಿಳಿಸಿದ್ದಾರೆ. ಕನ್ನಡ ಮಾಧ್ಯಮ ವ್ಯಾಸಂಗ, ಗ್ರಾಮೀಣ ವ್ಯಾಸಂಗ, ಭಾಷಾ ಅಲ್ಪಸಂಖ್ಯಾತ, ಧಾರ್ಮಿಕ ಅಲ್ಪಸಂಖ್ಯಾತ ಮೀಸಲಾತಿ ಕ್ಲೇಮ್ ಮಾಡಿ, ಕ್ಲೇಮ್ಸ್ ಸರ್ಟಿಫಿಕೇಟ್‌ನಲ್ಲಿ ನಾಟ್ ವೆರಿಫೈಯ್ಡ್ ಎಂದು ಮುದ್ರಿತವಾಗಿರುವವರು ಮಾತ್ರ ಕಾಲೇಜುಗಳಿಗೆ ಹೋಗಿ ಪರಿಶೀಲನೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಸಿಎಂ ಬದಲಾವಣೆಗೆ ಶೀಘ್ರ ತೆರೆ: ಜಾರಕಿಹೊಳಿ

• **ಬೆಳಗಾವಿ:** ರಾಜ್ಯ ರಾಜಕಾರಣದಲ್ಲಿ ತಲ್ಲಣ ಸೃಷ್ಟಿಸಿರುವ ಸಚಿವ ಕೆ.ಎನ್.ರಾಜಣ್ಣ ಅವರ 'ಮುಂದಿನ ಸಿಎಂ ಪರಮೇಶ್ವರ್' ಎಂಬ ಹೇಳಿಕೆಗೆ ಹೈಕಮಾಂಡ್ ಮಟ್ಟದಲ್ಲೇ ಶೀಘ್ರದಲ್ಲಿ ತೆರೆ ಬೀಳಲಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಸೋಮವಾರ ಬೆಳಗಾವಿ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಾಜಿ ಸಚಿವ ರಾಜಣ್ಣ ಅವರ ಮುಂದಿನ ಸಿಎಂ ಪರಮೇಶ್ವರ ಆಗಲಿ ಎಂಬ ಹೇಳಿಕೆಗೆ ಆದಷ್ಟು ಬೇಗ ದೆಹಲಿಯಿಂದ ಬುಲಾವ್ ಬರಲಿದ್ದು, ಈ ವಿಚಾರಗಳು ಅಲ್ಲಿ ಚರ್ಚೆಯಾಗಿ ಶೀಘ್ರದಲ್ಲೇ ತೆರೆ ಬೀಳಲಿದೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

ವಂಚನೆ ಪ್ರಕರಣ: 10 ದಿನ ಸಿಐಡಿ ಕಸ್ಟಡಿಗೆ ಶಿವಾನಂದ ನೀಲಣ್ಣವರ

• **ಬೆಳಗಾವಿ:** ಬಹುಕೋಟಿ ಹಗರಣದ ಕಿಂಗ್‌ಪಿನ್ ಶಿವಾನಂದ ನೀಲಣ್ಣವರನನ್ನು ನ್ಯಾಯಾಲಯ 10 ದಿನ ಸಿಐಡಿ ಕಸ್ಟಡಿಗೆ ಒಪ್ಪಿಸಿದೆ. ವಿಚಾರಣೆ ವೇಳೆ ಕೋರ್ಟ್ ಹಾಲ್‌ನಲ್ಲಿ ನ್ಯಾಯಾಧೀಶರು ಹಾಗೂ ಆರೋಪಿ ನಡುವೆ ಮಹತ್ವದ ಸಂಭಾಷಣೆ ನಡೆದಿದ್ದು, ಸದ್ಯ ಆರೋಪಿಯನ್ನು ಹೆಚ್ಚಿನ ವಿಚಾರಣೆಗಾಗಿ ಬೆಂಗಳೂರಿಗೆ ಶಿಫ್ಟ್ ಮಾಡಲಾಗುತ್ತಿದೆ.

ಬೆಳಗಾವಿಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗಂಗಾಧರ್ ಕೆ.ಎನ್. ಅವರು ಈ ಮಹತ್ವದ ಆದೇಶ ಹೊರಡಿಸಿದ್ದಾರೆ. ಸುಮಾರು 35 ಸಾವಿರ ಹೂಡಿಕೆದಾರರ 1 ಸಾವಿರ ಕೋಟಿ ರೂಪಾಯಿ ಹಗರಣ ಇದಾಗಿದ್ದು, ರಾಜ್ಯ ಹಾಗೂ ಹೊರ ರಾಜ್ಯಗಳಿಗೂ ತೆರಳಿ ತನಿಖೆ ನಡೆಸಬೇಕಿರುವುದರಿಂದ ಕಸ್ಟಡಿಗೆ ನೀಡುವಂತೆ ಸಿಐಡಿ ಅಧಿಕಾರಿಗಳು ಕೋರಿದ್ದರು.

ಇದೇ ವೇಳೆ ಆರೋಪಿ ತನಗೆ ಶುಗರ್ ಮತ್ತು ಹಾರ್ಟ್ ಪ್ರಾಬ್ಲಮ್ ಇರುವುದಾಗಿ ಹೇಳಿಕೊಂಡಾಗ ವೈದ್ಯಕೀಯ ವ್ಯವಸ್ಥೆ ಕಲ್ಪಿಸಲು ನ್ಯಾಯಾಧೀಶರು ಸೂಚಿಸಿದರು.

ಇನ್ನು 35 ಸಾವಿರ ಜನರಿಗೆ ಹಣ ಬೇಕಿಲ್ಲ ನಾನು ಬೇಕಾಗಿದ್ದೇನೆ ಎಂದ ಆರೋಪಿಗೆ ತಿರುಗೇಟು ನೀಡಿದ ನ್ಯಾಯಾಧೀಶರು, ಅಮಾಯಕ ಜನರ ರಕ್ಷಣೆ ಮಾಡುವುದು ಸರ್ಕಾರದ ಜವಾಬ್ದಾರಿ. ಸಾಕಷ್ಟು ಜನ ಹಣ ತಗೊಂಡು ಓಡಿ ಹೋಗಿದ್ದಾರೆ. ಇತಿಹಾಸದಿಂದ ಪಾಠ ಕಲಿಯಲು ಈ ಕಾನೂನು ತಂದಿದ್ದಾರೆ. ಧರ್ಮೋ ರಕ್ಷತಿ ರಕ್ಷಿತಃ ಎಂದು ಶ್ಲೋಕದ ಉದಾಹರಣೆ ನೀಡಿ ಬುದ್ಧಿವಾದ ಹೇಳಿದರು. ಕೊನೆಗೆ ಕೋರ್ಟ್ ಹಾಲ್‌ನಿಂದ ಹೊರ ಬರುತ್ತಿದ್ದಂತೆ ಸಹೋದರರನ್ನು ಕಂಡು ಶಿವಾನಂದ ನೀಲಣ್ಣವರ ಕಣ್ಣೀರು ಹಾಕಿದ್ದಾರೆ.

ಸಿಐಡಿ ಡಿಜಿಪಿ ಭೀಮಾಶಂಕರ ಗುಳೇದ್ ನೇತೃತ್ವದ ತಂಡ ಈಗಾಗಲೇ ಪ್ರಾಥಮಿಕ ತನಿಖೆ ಮುಗಿಸಿದ್ದು, ಮಾಳಮಾರುತಿ ಪೊಲೀಸರು ಕಲೆ ಹಾಕಿದ್ದ ಎಲ್ಲ



» 35 ಸಾವಿರ ಹೂಡಿಕೆದಾರರ 1 ಸಾವಿರ ಕೋಟಿ ರೂಪಾಯಿ ಹಗರಣ

» ಆರೋಪಿಗೆ ವೈದ್ಯಕೀಯ ವ್ಯವಸ್ಥೆ ಕಲ್ಪಿಸಲು ನ್ಯಾಯಾಧೀಶರ ಸೂಚನೆ

ಮಹತ್ವದ ದಾಖಲೆಗಳೊಂದಿಗೆ ಆರೋಪಿಯನ್ನು ಸೋಮವಾರ ಬೆಂಗಳೂರಿಗೆ ಕರೆದೊಯ್ದು ತೀವ್ರ ವಿಚಾರಣೆ ನಡೆಸಲಿದೆ.

ಹೂಡಿಕೆದಾರರ ಹಣ ನೀಡಲು ರೆಡಿ ಇದ್ದಾರೆ ಎಂಬ ಆರೋಪಿ ಪರ ವಕೀಲರ ವಾದವನ್ನು ಸದ್ಯಕ್ಕೆ ಆಲಿಸಲು ನ್ಯಾಯಾಧೀಶರು ನಿರಾಕರಿಸಿದ್ದರು. ಇನ್ನೊಂದೆಡೆ, ಆರೋಪಿ ಪರ ವಕೀಲರಾದ ಮಂಜುನಾಥ ಜಿ.ಎಲ್. ಅವರು, ಇದು ಕೇವಲ ತಾಂತ್ರಿಕ ಕಾರಣಗಳಿಗಾಗಿ ಆರ್‌ಬಿಐ ಗೈಡ್‌ಲೈನ್ಸ್ ಉಲ್ಲಂಘನೆಯಾಗಿದೆ ಎಂದು ಪೊಲೀಸರೆ, ದಾಖಲಿಸಿರುವ ಸುಮೋಟೋ ಕೇಸ್ ಆಗಿದೆ. ಗ್ರಾಹಕರು ಯಾರೂ ದೂರು ನೀಡಿಲ್ಲ, ಯಾರೂ ಆತಂಕಪಡುವ ಅಗತ್ಯವಿಲ್ಲ. ವಿರೋಧಿಗಳು ತಪ್ಪು ಮಾಹಿತಿ ಹರಡುತ್ತಿದ್ದು ಈಗಾಗಲೇ ಬೇಲ್‌ಗಾಗಿ ಅರ್ಜಿ ಸಲ್ಲಿಸಿದ್ದೇವೆ'ಎಂದು ಶಿವಾನಂದ ನೀಲಣ್ಣವರ ಪರ ವಕೀಲರು ಹೇಳಿದರು.

ಸಾರಿಗೆ ನೌಕರರ ವಿರುದ್ಧ ಸರ್ಕಾರ ಎಸ್ಮಾ ಜಾರಿ ಎಚ್ಚರಿಕೆ

ನೌಕರರ ಬೇಡಿಕೆ ಈಡೇರಿಸುವಲ್ಲಿ ಸರ್ಕಾರ ಯಶಸ್ವಿ

ರಾಜ್ಯ ಸರ್ಕಾರವು 2025 ಏ.1ರಿಂದ ಜಾರಿಗೆ ಬರುವಂತೆ ಶೇ.12.50 ವೇತನ ಪರಿಷ್ಕರಣೆಗೆ ರಾಜ್ಯ ಸರ್ಕಾರವು ಅನುಮೋದನೆ ನೀಡಿದೆ. 38 ತಿಂಗಳ ಪೈಕಿ 26 ತಿಂಗಳ ಹಿಂಬಾಕಿ ಮೊತ್ತ 1271.92 ಕೋಟಿ ರೂ. ಪಾವತಿಸಲು ಸರ್ಕಾರ ಅನುಮೋದಿಸಿದ್ದು, ಇದರನ್ವಯ ಮೊದಲ ಕಂತಿನ 450 ಕೋಟಿ ರೂ. ಬಿಡುಗಡೆಗೊಳಿಸಿದೆ ಆ ಮೂಲಕ ಸಾರಿಗೆ ನೌಕರರ ಬೇಡಿಕೆ ಈಡೇರಿಸಿ, ಪ್ರತಿಭಟನೆ ತಡೆಯುವ ಕೆಲಸವನ್ನು ಮಾಡಿದೆ.

» ವೇತನ ಪರಿಷ್ಕರಣೆಗಾಗಿ ನಾಳೆ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾದ ಸಂಘಟನೆಗಳು



• **ಬೆಂಗಳೂರು:** ವೇತನ ಪರಿಷ್ಕರಣೆ ಹಾಗೂ ಹಿಂಬಾಕಿ ಮೊತ್ತ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೇ 20 ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಮುಂದಾಗಿದ್ದ ಕ.ರಾ.ರ.ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನೌಕರರ ವಿರುದ್ಧ ರಾಜ್ಯ ಸರ್ಕಾರವು ಎಸ್ಮಾ ಜಾರಿ ಮಾಡುವ ಮೂಲಕ ಎಚ್ಚರಿಕೆ ನೀಡಿದೆ.

ರಾಜ್ಯ ರಸ್ತೆ ಸಾರಿಗೆ ನಿಗಮಗಳ ರಾಜ್ಯದ ಜನಸಾಮಾನ್ಯರಿಗೆ ಸಮರ್ಪಕವಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಒದಗಿಸುವ ಮಹತ್ವದ ಜವಾಬ್ದಾರಿ ಹೊಂದಿದ್ದು, ಅದಕ್ಕನುಗುಣವಾಗಿ ಸಾರಿಗೆ ನಿಗಮಗಳ ಸೇವೆಯನ್ನು ಕರ್ನಾಟಕ ಅಗತ್ಯ ಸೇವಾ ನಿರ್ವಹಣಾ ಕಾಯಿದೆ -2013 (ಎಸ್ಮಾ) ಅಧಿಸೂಚನೆಯನ್ನು ರಾಜ್ಯ ಸರ್ಕಾರವು ಹೊರಡಿಸಿದೆ. ಅದರನ್ವಯ ರಸ್ತೆ ಸಾರಿಗೆ ನಿಗಮದ ನೌಕರರು ಯಾವುದೇ ಮುಷ್ಕರ ಹೂಡುವಂತೆ ಪ್ರಚೋದಿಸುವಂತಿಲ್ಲ ಹಾಗೂ ಬೆಂಬಲವನ್ನು ವ್ಯಕ್ತಪಡಿಸುವಂತಿಲ್ಲ, ಇದರೊಂದಿಗೆ ಕರ್ತವ್ಯಕ್ಕೆ ಗೈರುಹಾಜರಾಗುವ ನೌಕರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಕೆಲಸ ಮಾಡದಿದ್ದರೆ ವೇತನವಿಲ್ಲ: ಮುಷ್ಕರದ ಅವಧಿಯಲ್ಲಿ ಕೆಲಸಕ್ಕೆ ಗೈರಾಗುವ ನೌಕರರ ವಿರುದ್ಧ ಕೆಲಸ ಮಾಡದಿದ್ದಾಗ ವೇತನವಿಲ್ಲ, ಮೇ 20ರಿಂದ ಜಾರಿಗೆ ಬರುವಂತೆ ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದು. ಮುಷ್ಕರದ ಅವಧಿಯಲ್ಲಿ ಕರ್ತವ್ಯಕ್ಕೆ ಗೈರಾಗುವ ನೌಕರರ ಪಟ್ಟಿಯನ್ನು ಘಟಕವಾರು ಹಾಗೂ ವರ್ಗವಾರು ಸಿದ್ಧಪಡಿಸಿ, ನೌಕರರ ವೇತನ ಕಡಿತಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಿತವ್ಯಯ ಕಳಕಳಿ ಕೈಗೆ ಅರ್ಥವಾಗಿಲ್ಲ

• **ಬೆಂಗಳೂರು:** ಮಿತವ್ಯಯದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಕಳಕಳಿಯನ್ನು ಇಡೀ ದೇಶವೇ ಅರ್ಥ ಮಾಡಿಕೊಂಡಿದೆ. ಕಾಂಗ್ರೆಸ್ ಪಕ್ಷಕ್ಕೆ ಅರ್ಥವಾಗದಿರುವುದು ದುರದೃಷ್ಟಕರ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.



ನಗರದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ನರೇಂದ್ರ ಮೋದಿ ಅವರ ಕಾಳಜಿ, ಕಳಕಳಿಯನ್ನು ಅರ್ಥೈಸಿಕೊಂಡು ಜವಾಬ್ದಾರಿಯುತವಾಗಿ ವರ್ತಿಸಿ ಸಾರ್ವಜನಿಕರಲ್ಲಿ ತಿಳಿವಳಿಕೆ ಮೂಡಿಸಬೇಕಿದ್ದ ಪ್ರತಿಪಕ್ಷವು ಸಣ್ಣತನದಿಂದ ಅಪಪ್ರಚಾರದಲ್ಲಿ ನಿರತವಾಗಿದೆ ಎಂದರು. ಮುನ್ನೆಚ್ಚರಿಕೆಯ ದೃಷ್ಟಿಯಿಂದ ಪ್ರಧಾನಿಗಳು ಒಂದು ವರ್ಷ ಕಾಲ ಚಿನ್ನ ಖರೀದಿಸದೆ ಆದಷ್ಟು ಮಿತವ್ಯಯ ಪಾಲಿಸಿ ಎಂದು ಹೇಳಿರುವುದು ರಾಷ್ಟ್ರದ ಹಿತದೃಷ್ಟಿಯಿಂದ ಸರಿ ಇದೆ. ಭವಿಷ್ಯದಲ್ಲಿ ರಾಷ್ಟ್ರವು ಆರ್ಥಿಕ ಸಂಕಷ್ಟಕ್ಕೆ ಸಿಲುಕಬಾರದು ಎನ್ನುವ ಏಕೈಕ ಉದ್ದೇಶದಿಂದ ಪ್ರಧಾನಿಗಳು ಪ್ರಜೆಗಳಲ್ಲಿ ಮನವಿ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷವು ಇದರಲ್ಲಿ ಹುಳುಕು ಹುಡುಕುವುದು ಸರಿಯಲ್ಲ ಎಂದರು.

ಪ್ರಧಾನಿಗಳ ಹಿತವಚನವನ್ನು ಪ್ರಜೆಗಳೆಲ್ಲರೂ ಒಪ್ಪಿದ್ದಾರೆ. ಆದರೆ ವಿಪಕ್ಷಗಳು ಮಾತ್ರ ವಿರೋಧಿಸುತ್ತಿವೆ. ನಿಜಕ್ಕೂ ಇದು ವಿಪರ್ಯಾಸ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿದ್ದಿದ್ದರೆ ಏನು ಮಾಡುತ್ತಿತ್ತು? ಸುಖಾಸುಮ್ಮನೆ ರಾಜಕೀಯ ಉದ್ದೇಶದಿಂದ ಟೀಕೆ ಮಾಡುವುದು ಸರಿಯಲ್ಲ, ಕಾಂಗ್ರೆಸ್ ನಾಯಕರು ಸಣ್ಣ ಬುದ್ಧಿಯನ್ನು ಬಿಡಬೇಕು ಎಂದು ತರಾಟೆಗೆ ತೆಗೆದುಕೊಂಡರು. ದೇವೇಗೌಡರು ರಾಜ್ಯಸಭೆ ಸದಸ್ಯರಾಗಿ ಮುಂದುವರಿಯುವ ವಿಚಾರದ ಬಗ್ಗೆ ಮಾಧ್ಯಮಗಳಲ್ಲಿ ಚರ್ಚೆ ಆಗುತ್ತಿರುವುದನ್ನು ಗಮನಿಸಿದ್ದೇನೆ ಎಂದರು.

ಕಲಬುರಗಿ ಮೃಗಾಲಯ ಲೋಕಾರ್ಪಣೆ | ಅರಣ್ಯ ಸಚಿವ ಈಶ್ವರ ಖಂಡ್ರೆ ಅಭಿಪ್ರಾಯ

56 ಪ್ರಭೇದಗಳ ತಾಣ ಬಿಸಿಲೂರಿನ ಮೃಗಾಲಯ

• **ಕಲಬುರಗಿ:** ಪರಿಸರ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಪ್ರಾಣಿ, ಪಕ್ಷಿ, ಸಸ್ಯ, ಕೀಟ ಪ್ರಭೇದಗಳ ಸಂರಕ್ಷಣೆ ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಕಲಬುರಗಿ ಅತ್ಯಾಕರ್ಷಕ ಮೃಗಾಲಯವು ವನ್ಯಜೀವಿಗಳ ಮೇಲಿನ ಕಾಳಜಿ ಹೆಚ್ಚಿಸುವುದರ ಜೊತೆಗೆ ಪ್ರದೇಶದ ಪರಿಸರ ಪ್ರೇಮಿ, ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಹಾಗೂ ಪ್ರವಾಸಿ ತಾಣವಾಗಿ ಇದು ರೂಪಗೊಳ್ಳಲಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಜಿಲ್ಲಾಡಳಿತ,ಅರಣ್ಯ ಇಲಾಖೆ, ಕೆ.ಕೆ.ಆರ್.ಡಿ.ಬಿ. ಮಂಡಳಿ ಹಾಗೂ ಮೂರ್ತಿ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಸೋಮವಾರ ಚಿತ್ತಾಪುರ ತಾಲೂಕಿನ ಮಾಡಬೂಳ ಗ್ರಾಮದಲ್ಲಿ ಸುಮಾರು 43 ಎಕರೆ ಪ್ರದೇಶದ ವಿಸ್ತೀರ್ಣದಲ್ಲಿ 35 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಕಲಬುರಗಿ ಮೃಗಾಲಯವನ್ನು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಉದ್ಘಾಟಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ಸರ್ಕಾರ ಬಂದ ಮೇಲೆ ನನೆಗುದಿಗೆ ಬಿದ್ದಿದ್ದ ಈ ಕಾರ್ಯಕ್ಕೆ ಸಚಿವ ಖರ್ಗೆ ಅವರ ವಿಶೇಷ ಆಸಕ್ತಿ ವಹಿಸಿ ಚುರುಕುಗೊಳಿಸಿದ ಪರಿಣಾಮ ಇಂದಿಲ್ಲಿ ಕಲ್ಯಾಣ ಕರ್ನಾಟಕದ ಎರಡನೇ ಮೃಗಾಲಯ ಲೋಕಾರ್ಪಣೆ ಮಾಡಲಾಗಿದೆ ಎಂದರು. ಕೆಕೆಆರ್‌ಡಿಬಿ ಮಂಡಳಿಯಿಂದ 29 ಕೋಟಿ ರೂ. ಮೃಗಾಲಯ ಪ್ರಾಧಿಕಾರದಿಂದ 6 ಕೋಟಿ ರೂ. ಹಾಗೂ ಇನ್ಫೋಸಿಸ್ ಸಂಸ್ಥೆಯ 3.20 ಕೋಟಿ ರೂ. ನೆರವಿನಿಂದ ಇಂದಿಲ್ಲಿ ಸುಂದರ ಮೃಗಾಲಯ ಸ್ಥಾಪನೆಯಾಗಿದೆ. ಕಲಬುರಗಿ ಮೃಗಾಲಯ ರಾಜ್ಯದ 9ನೇ ಮೃಗಾಲಯವಾಗಿದ್ದು, ದೇಶದಲ್ಲಿ ಮೃಗಾಲಯ ಸಂಖ್ಯೆಯಲ್ಲಿ ರಾಜ್ಯ ಮುಂಚೂಣಿಯಲ್ಲಿದೆ ಎಂದ ಅವರು, 2022ರ ಪ್ರಾಣಿ ಜನಗಣತಿ ಪ್ರಕಾರ ರಾಜ್ಯದಲ್ಲಿ 6,395 ಆನೆ, 563 ಹುಲಿಗಳಿವೆ ಎಂದರು.

ನೂತನ ಮೃಗಾಲಯದಲ್ಲಿ 56 ವಿವಿಧ ಪ್ರಭೇದದ ಪ್ರಾಣಿ-ಪಕ್ಷಿಗಳು ವೀಕ್ಷಣೆಗೆ ಲಭ್ಯ ಇರಲಿವೆ. ಎರಡು ಸಿಂಹಗಳನ್ನು ಬನ್ನೇರುಘಟ್ಟದಿಂದ ಈಗಾಗಲೇ ತರಲಾಗಿದೆ. ಮೊಸಳೆ, ನರಿ, ಇತ್ಯಾದಿ ಪ್ರಾಣಿಗಳು ನೋಡಲು ಸಿಗುತ್ತಿವೆ. ಮುಂಬರುವ ದಿನಗಳಲ್ಲಿ ಬೇರೆ ಬೇರೆ ಪ್ರಭೇದ ಪ್ರಾಣಿ, ಪಕ್ಷಿಗಳನ್ನು ತರಿಸಲಾಗುವುದು ಎಂದು ಸಚಿವ ಈಶ್ವರ ಖಂಡ್ರೆ ಸಮೀಪದ ಚಿಂಚೋಳಿ ವನ್ಯಜೀವಿ ಧಾಮ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗುವುದು. ಈಗಾಗಲೇ ಅಲ್ಲಿ ಬೋಟಿಂಗ್, ಸಫಾರಿಗೆ ಚಾಲನೆ ನೀಡಿದರು.



ಬೆಳಗ್ಗೆ 9.30ರಿಂದ ಸಂಜೆ 5.30 ವೀಕ್ಷಣೆಗೆ ಲಭ್ಯ

ಮೃಗಾಲಯವು ಬೆಳಗ್ಗೆ 9.30ರಿಂದ ಸಂಜೆ 5.30ರ ವರೆಗೆ ತೆರೆಯಲಿದ್ದು, ಪ್ರಾಣಿ-ಪಕ್ಷಿಗಳ ವೀಕ್ಷಣೆಗೆ ಲಭ್ಯವಾಗಿರಲಿದೆ. ಪ್ರತಿ ಮಂಗಳವಾರ ರಜೆ ಇರಲಿದೆ. 12 ವರ್ಷ ಮೇಲ್ಪಟ್ಟವರಿಗೆ 75 ರೂ., 12 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ 40 ರೂ. ಹಾಗೂ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ 25 ರೂ. ಟಿಕೆಟ್ ದರ ನಿಗದಿ ಮಾಡಲಾಗಿದೆ. ಮೃಗಾಲಯದ ಟಿಕೆಟ್ ಕೌಂಟರ್‌ನಲ್ಲಿ ಟಿಕೆಟ್ ಪಡೆದು ವೀಕ್ಷಣೆ ಮಾಡಬಹುದಾಗಿದೆ.

ಎಚ್ಡಿ ದೇವೇಗೌಡರಿಗೆ ಗಣ್ಯರ ಶುಭಾಶಯ

• **ಬೆಂಗಳೂರು:** 94ನೇ ವರ್ಷಕ್ಕೆ ಪದಾರ್ಪಣೆ ಮಾಡಿರುವ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರಿಗೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ರಾಜ್ಯ ಮತ್ತು ರಾಷ್ಟ್ರೀಯ ನಾಯಕರು ಹಾಗೂ ಗಣ್ಯರು ಶುಭಾಶಯ ಕೋರಿದ್ದಾರೆ.




ಸಾರ್ವಜನಿಕ ಜೀವನದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿರುವ ದೇವೇಗೌಡರು ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ನೀತಿ ಸಂಬಂಧಿತ ವಿಷಯಗಳ ಕುರಿತು ಅವರ ಆಳವಾದ ತಿಳುವಳಿಕೆ ಮತ್ತು ಅತೀ ಹಿಂದುಳಿದವರ ಸೇವೆಯತ್ತ ಇರುವ ಅವರ ಸಮರ್ಪಣಾಭಾವ ಎಲ್ಲರಿಗೂ ಪ್ರೇರಣೆಯಾಗಿದೆ. ಅವರಿಗೆ ದೀರ್ಘಾಯುಷ್ಯ ಹಾಗೂ ಉತ್ತಮ ಆರೋಗ್ಯ ದೊರಕಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಎಕ್ಸ್‌ನಲ್ಲಿ ಶುಭಾಶಯ ತಿಳಿಸಿದ್ದಾರೆ. ಸೋಮವಾರ ಪದ್ಮನಾಭನಗರ ನಿವಾಸಕ್ಕೆ ಆಗಮಿಸಿದ ಪಕ್ಷದ ಮುಖಂಡರು, ಕಾರ್ಯಕರ್ತರು ದೇವೇಗೌಡರನ್ನು ಭೇಟಿಯಾಗಿ ಹುಟ್ಟುಹಬ್ಬದ ಶುಭಾಶಯ ತಿಳಿಸಿದರು. ಪುತ್ರ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಕುಟುಂಬಸ್ಥರು ಆಶೀರ್ವಾದ ಪಡೆದು ಶುಭಾಶಯ ತಿಳಿಸಿದರು.

ಸಂಪಾದಕೀಯ

ಎಸ್ಐಆರ್: ವೃಥಾ ವಿರೋಧ ಬೇಡ

ಬಿಹಾರ, ಪಶ್ಚಿಮಬಂಗಾಳ, ತಮಿಳ್ನಾಡುಗಳ ಬಳಿಕ ಇನ್ನೀಗ ಕರ್ನಾಟಕವೂ ಸೇರಿದಂತೆ 16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್ಐಆರ್) ನಡೆಯಲಿದೆಯೆಂದು ಚುನಾವಣಾ ಆಯೋಗವು ಪ್ರಕಟಿಸಿದೆ. ಮತದಾರ ಪಟ್ಟಿಯಲ್ಲಿ ಕಾಲಕಾಲಕ್ಕೆ ಇಂತಹ ಪರಿಷ್ಕರಣೆ ನಡೆಯುವುದು ಸಂವಿಧಾನಬದ್ಧವೇ ಆಗಿದ್ದರೂ ಕೆಲವರು ಈ ಪ್ರಕ್ರಿಯೆ ಕುರಿತಂತೆ ವೃಥಾ ವಿರೋಧವ್ಯಕ್ತಪಡಿಸುತ್ತಿರುವುದು ಹಾಗೂ ಅದನ್ನು ದುರುದ್ದೇಶಪೂರಿತವೆಂದು ಬಣ್ಣಿಸುವುದು ಕಂಡುಬರುತ್ತಿದೆ. ಮೃತಪಟ್ಟವರ ಮತ್ತು ನಕಲಿ ಮತದಾರರ



ಹೆಸರುಗಳನ್ನು ತೆಗೆದುಹಾಕುವುದು, ಒಂದಕ್ಕೊಂದು ಹೆಚ್ಚು ಕ್ಷೇತ್ರಗಳಲ್ಲಿ ಒಬ್ಬರ ಹೆಸರಿದ್ದರೆ ಅದನ್ನು ಸರಿಪಡಿಸುವುದು, ಅಕ್ರಮವಾಗಿ ನೆಲೆಸಿರುವ ವಿದೇಶಿಯರನ್ನು ಪಟ್ಟಿಯಿಂದ ತೆಗೆಯುವುದು ಮೊದಲಾದ ಸದುದ್ದೇಶಗಳನ್ನು ಈ ಎಸ್ಐಆರ್ ಹೊಂದಿದೆ. ಚುನಾವಣೆಯು ಸರಕಾರ ರಚನೆಯಲ್ಲಿ ಪ್ರಧಾನ ಪಾತ್ರ ವಹಿಸುವುದರಿಂದ ಅಸಲಿ ಮತದಾರರಷ್ಟೇ ಸರಕಾರ ರಚಿಸುವ ಹಕ್ಕು ಹೊಂದಿರುವುದು ನ್ಯಾಯವಾಗಿದೆ ಕೂಡಾ. ಆದರೆ ಕೆಲವು ಸಮುದಾಯದವರು, ರಾಜಕೀಯ ಪಕ್ಷಗಳು ಎಸ್ಐಆರ್ ಪ್ರಕ್ರಿಯೆಯಲ್ಲಿ ಅನವಶ್ಯ ಹುಳುಕು ಹುಡುಕುತ್ತಿರುವುದು, ಈ ಪ್ರಕ್ರಿಯೆಯೇ ರಾಜಕೀಯಪ್ರೇರಿತವೆಂದು ಜರೆಯುವುದು ಕಂಡುಬರುತ್ತಿದ್ದು ಇದು ಖಂಡಿತಕ್ಕೂ ಸಲ್ಲುವ ನಡೆಯಲ್ಲ.

ಬಿಹಾರ ಮತ್ತು ಪಶ್ಚಿಮಬಂಗಾಳಗಳಲ್ಲಿ ಚುನಾವಣಾ ಪೂರ್ವದಲ್ಲಿ ಎಸ್ಐಆರ್ ನಡೆದಿದ್ದುದರಿಂದ ಅನವಶ್ಯ ವಿವಾದ ಸೃಷ್ಟಿಸಲಾಗಿತ್ತು. ಅದು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿದೆಯೆಂದು ಆರೋಪಿಸಲಾಗಿತ್ತು. ಈ ಕುರಿತಂತೆ ನ್ಯಾಯಾಲಯದ ಮೆಟ್ಟಿಲನ್ನೂ ಏರಲಾಗಿತ್ತು. ಆದರೆ ನ್ಯಾಯಾಲಯವು ಈ ಪ್ರಕ್ರಿಯೆಗೆ ಅಭ್ಯಂತರ ಹೇಳಿರಲಿಲ್ಲ, ಕೆಲವು ನಿಯಮಾವಳಿಗಳನ್ನು ಪಾಲಿಸಬೇಕೆಂದು ಸೂಚನೆ ನೀಡಿತ್ತಷ್ಟೆ. ಅಂತಹ ನಿಯಮಾವಳಿಗಳಿಗೆ ಅನುಸಾರವಾಗಿಯೇ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ ನಡೆಯುತ್ತಿದೆ. ಈ ಪ್ರಕ್ರಿಯೆಯು ಪ್ರಾಮಾಣಿಕವಾಗಿ ಮತ್ತು ಪಾರದರ್ಶಕವಾಗಿ ನಡೆಯುವ ನಿಟ್ಟಿನಲ್ಲಿ ಕೂಡಾ ಚುನಾವಣಾ ಆಯೋಗವು ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಅದರಂತೆ ಕರ್ನಾಟಕದಲ್ಲಿ ಮುಂದಿನ ದಿನಗಳಲ್ಲಿ ಬಿಎಲ್ಒಗಳು ಮನೆಮನೆಗೆ ಭೇಟಿ ನೀಡಿ ಮತದಾರರ ಮಾಹಿತಿ ಸಂಗ್ರಹಿಸಲಿದ್ದಾರೆ. ಆ ಸಂದರ್ಭದಲ್ಲಿ ಅವರೊಂದಿಗೆ ಸಹಕರಿಸುವುದು, ಪೂರಕ ನೈಜ ಮಾಹಿತಿಗಳನ್ನು ನೀಡುವುದು ಪ್ರತಿಯೊಬ್ಬ ಮತದಾರರ ಕರ್ತವ್ಯವಾಗಿದೆ. ಕರಡು ಪಟ್ಟಿ ಮತ್ತು ಅಂತಿಮ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಿದ್ದರೆ ಅದಕ್ಕೆ ಆಕ್ಷೇಪ ಸಲ್ಲಿಸಲೂ ಅವಕಾಶವಿದೆ. ಹಾಗಾಗಿ ಎಸ್ಐಆರ್ ಬಗ್ಗೆ ಅನವಶ್ಯ ಗುಲ್ಲೆಬ್ಬಿಸದೆ ಅದರ ಯಶಸ್ಸಿಗೆ ಪ್ರಾಮಾಣಿಕವಾಗಿ ಸಹಕರಿಸುವುದು ಮಾಡಬೇಕಾದ ಕೆಲಸವಾಗಿದೆ.

ಜ್ಞಾನದ ಶಾಪ ನಿವಾರಣೆಗೊಂದು ವರ ಇಲ್ಲಿದೆ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ನಮ್ಮ ಜೀವನವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದರೆ ಅದರಲ್ಲಿ ನಾವು ಎರಡು ಭಾಗಗಳನ್ನು ಕಲಿಯುವುದರಲ್ಲೂ, ಇನ್ನೊಂದು ಭಾಗವನ್ನು ಏನೂ ಮಾಡದೇ ಸುಮ್ಮನೇ ಕಳೆಯುವುದರಲ್ಲೂ, ಇನ್ನೊಂದು ಭಾಗವನ್ನು ನಾವು ಕಲಿತದ್ದನ್ನು ಬೇರೆಯವರಿಗೆ ಬೇರೆ ಬೇರೆ ರೀತಿಯಲ್ಲಿ ವಿವರಿಸುವುದರಲ್ಲೂ ಕಳೆಯುತ್ತೇವೆ. ನಾವು ಏನಾದರೂ ಮಾಡುತ್ತಿರುವಾಗಲೂ ಅದು ಕಲಿಕೆಯೆಂಬ ಮೊದಲೆರಡು ಭಾಗಕ್ಕೇ ಸೇರುತ್ತದೆ. ಅದಾಗಲೇ ನೂರು ಬಾರಿ ಮಾಡಿರುವ ಕ್ರಿಯೆಯನ್ನೇ ನೂರಾ ಒಂದನೇ ಬಾರಿ ಮಾಡುವಾಗ, ನಮ್ಮ ಮೆದುಳು 'ಇದನ್ನು ಹಿಂದಿನ ಬಾರಿಗಿಂತ ಹೆಚ್ಚು ಸುಲಭವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುವುದು ಹೇಗೆ' ಎಂದು ಕಲಿಯುತ್ತಲೇ ಇರುತ್ತದೆ. ಆದ್ದರಿಂದ ಕ್ರಿಯೆಯೂ ಕೂಡಾ ಕಲಿಕೆಯೇ. ಇದರಿಂದಲೇ ಪರಿಣತಿ ಎಂಬುದು ಸಾಧ್ಯವಾಗುವುದು. ವೈಜ್ಞಾನಿಕ ಅಧ್ಯಯನಗಳ ಪ್ರಕಾರ ನಮ್ಮ ಮೆದುಳು ಈ ಕಲಿಕೆಯನ್ನು ಬಹಳ ಸಂತೋಷದಿಂದಲೇ ಮಾಡುತ್ತದಂತೆ. ಏನನ್ನೂ ಮಾಡದೇ ಸುಮ್ಮನಿರುವುದನ್ನೂ ಸಹ ಯಾವುದೇ ಗೊಣಗಾಟವಿಲ್ಲದೇ ಮಾಡುತ್ತದಂತೆ. ಆದರೆ ಹೆಚ್ಚಿನವರಿಗೆ ಕೊನೆಯ ಭಾಗ ಅಂದರೆ 'ತಮಗೆ ತಿಳಿದದ್ದನ್ನು ಬೇರೆಯವರಿಗೆ ತಿಳಿಸುವ' ಕೆಲಸ ಮಾತ್ರ ಬಹಳ ಕಷ್ಟವೆನಿಸುತ್ತದೆ.

ನಿಮಗೆ ಯಾವಾಗಲಾದರೂ ಬೇರೆಯವರೊಂದಿಗೆ ಮಾತನಾಡುವಾಗ ಇಷ್ಟು ವಯಸ್ಸಿನವನಾಗಿ, ಇಂತಹ ಪ್ರಶ್ನೆ ಕೇಳ್ತಾನಲ್ಲ, ಇದು ಪ್ರೈಮರಿ ಸ್ಕೂಲಿನ ಮಕ್ಕಳೂ ಯೋಚಿಸಬಹುದಾದ ವಿಚಾರ ಅಂತಲೋ, ಎರಡು ಮಕ್ಕಳ ತಾಯಿಯಾಗಿ, ಈಕೆಗೆ ನಾನು ಮಕ್ಕಳೊಂದಿಗೆ ನಿಧಾನಕ್ಕೆ ಯಾಕೆ ಮಾತನಾಡಬೇಕು ಅಂದರೆ ಅರ್ಥವೇ ಆಗುತ್ತಿಲ್ಲವಲ್ಲ! ಅಂತಲೋ ಅಥವಾ ಹೇಳೋಕೆ ಈತ ನನ್ನ ಬಾಸ್, ನನಗಿಂತ ಏಳುವರ್ಷ ಹೆಚ್ಚಿನ ಅನುಭವ ಕೂಡಾ ಇದೆ. ಆದರೂ ಇಂತಹಾ ನಿರ್ಧಾರ ತಗೊಳ್ತಾ ಇದ್ದಾನಲ್ಲ! ಏನು ಹೇಳಬೇಕು ಇವನ ಬುದ್ಧಿಗೆ ಅನ್ನಿಸಿದ್ದಿದೆಯಾ? ಇವರೇ ಮಂದಬುದ್ಧಿಯವರಾ, ಅಥವಾ ಮನುಷ್ಯನಿಗೆ ಇಷ್ಟಾದರೂ ಗೊತ್ತಿರಬೇಕು ಅನ್ನೋ ನನ್ನ ನಿರೀಕ್ಷೆಗಳೇ ತಪ್ಪಾ!? ಅಂತಾ ಅನಿಸಿದ್ದರೆ, ಬೇಸರ ಪಡಬೇಡಿ. ಈ ರೀತಿ ಆಗುವುದು ಬಹಳ ಸಹಜ ಅಂತ ವಿಜ್ಞಾನಿಗಳು ಹೇಳುತ್ತಾರೆ.

ನೀವು ಅವೆಂಜರ್ಸ್ ಎಂಬ ಹಾಲಿವುಡ್ ಚಿತ್ರಸರಣಿ ನೋಡಿದ್ದರೆ, ನಿಮಗೆ ಚಿತ್ರದ ಮುಖ್ಯ ನಾಯಕರಲ್ಲೊಬ್ಬನಾದ ಟೋನಿ ಸ್ಟಾರ್ಕ್ ಅಲಿಯಾಸ್ ಐರನ್ ಮ್ಯಾನ್ ಹಾಗೂ ಚಿತ್ರದ ಮುಖ್ಯ ವಿಲನ್ ಆದ ಥಾನೋಸ್ ಬಗ್ಗೆ ತಿಳಿದಿರುತ್ತದೆ. ಇವೆರಡೂ ಪಾತ್ರಗಳು ಮೊದಲ ಬಾರಿಗೆ ಬೇಟಿಯಾಗಿ, ತನ್ನನ್ನು ಪರಿಚಯಿಸಿಕೊಳ್ಳುವಾಗ ಥಾನೋಸ್ "You are not the only one curse with knowledge" ಎಂಬ ಮಾತನ್ನು ಹೇಳುತ್ತಾನೆ. ಟೋನಿ ಭೂಮಿಯ ಮೇಲೆ ವಾಸವಿರುವ ಜೀವಿಗಳಲ್ಲಿ ಅತ್ಯಂತ ಬುದ್ಧಿವಂತರಲ್ಲೊಬ್ಬ, ಭೂಮಿಯ ಮೇಲೆ ವಿಜ್ಞಾನದ ವಿಚಾರದಲ್ಲಿ ಆತ ಪರಮಜ್ಞಾನಿಯೇ ಹೌದು. ಅದೇ ರೀತಿ ಭೂಮಿಯಿಂದ ಕೋಟ್ಯಂತರ ಜ್ಯೋತಿರ್ವರ್ಷಗಳ ದೂರದಲ್ಲಿರುವ ಟೈಟಾನ್ ಗ್ರಹದ ವಾಸಿಯಾದ ಥಾನೋಸ್ ಕೂಡಾ ಜಗತ್ತಿನ ಬಗ್ಗೆ ಅಪಾರ ಜ್ಞಾನ ಹೊಂದಿರುವವನು. ಅವನ ಜ್ಞಾನ ವಿಜ್ಞಾನಕ್ಕೆ ಮಾತ್ರ ಸಂಬಂಧಿಸಿದ್ದಲ್ಲ, ತನ್ನ ಗ್ರಹ ಸುಭಿಕ್ಷವಾಗಿ ಉಳಿಯಬೇಕಾದರೆ ಅದರಲ್ಲಿನ ಜನಸಂಖ್ಯೆ ಅರ್ಧಕ್ಕಿಳಿಯಬೇಕು ಎಂಬುದನ್ನು ಕಂಡುಕೊಂಡ ಥಾನೋಸ್, ಅದನ್ನು ಸಾಕಾರಗೊಳಿಸಿ, ಆಮೇಲೆ ಅದೇ ತತ್ವವನ್ನು ಇಡೀ ಜಗತ್ತಿಗೇ ಅನ್ವಯಿಸುತ್ತಾ ಬೇರೆ ಬೇರೆ ಗ್ರಹಗಳನ್ನು ಆಕ್ರಮಿಸಿಕೊಂಡು ತನ್ನ ಶಕ್ತಿಯಿಂದ ಗೆದ್ದು, ಜನಸಂಖ್ಯೆಯನ್ನು ಅರ್ಧಕ್ಕಿಳಿಸುತ್ತಾ ಇರುತ್ತಾನೆ. ನಾನು ಆತನ ಜ್ಞಾನವೊಂದು ಶಾಪ ಎಂಬ ಮಾತಿಗೆ ಗೊಂದಲಕ್ಕೊಳಗಾಗಿದ್ದೆ. ಅಜ್ಞಾನದಿಂದಲೇ ತೊಂದರೆಗಳ ಉಗಮ ಹಾಗೂ ಜ್ಞಾನವೊಂದೇ ಆ ತೊಂದರೆಗಳನ್ನು ನಿವಾರಿಸುವ ದಾರಿಯೆಂದಾದ ಮೇಲೆ, ಜ್ಞಾನ ಶಾಪ ಹೇಗೆ ಅನ್ನೋದು ನನಗೆ ಬಹಳ ತಲೆ ತಿಂದ ವಿಷಯ.

ಆದರೆ ನಿಜಕ್ಕೂ ಜ್ಞಾನ ಶಾಪವೇ ಹೌದು. ತತ್ವಶಾಸ್ತ್ರ ಮತ್ತು ಮನೋವಿಜ್ಞಾನದಲ್ಲಿ 'ಜ್ಞಾನದ ಶಾಪ' (Curse of Knowledge) ಎಂಬ ಒಂದು ಪೂರ್ವಗ್ರಹವೇ ಇದೆ. ಒಂದು ವಿಚಾರದ ಬಗ್ಗೆ ನಿಮಗೆ ಬಹಳಷ್ಟು ತಿಳಿದುಬಂದಾಗ, 'ಅದನ್ನು ತಿಳಿಯದೇ ಇರುವುದು ಹೇಗೆ' ಎಂಬುದನ್ನೇ ನಿಮ್ಮ ಮೆದುಳು ಮರೆತುಬಿಡುತ್ತದೆ. ಕಾರು ಓಡಿಸುವುದನ್ನು ಕಲಿಯುವ ಮುನ್ನ ನಿಮಗೆ ಅದರ ಮಾಹಿತಿಯೇ ಇಲ್ಲದಿದ್ದಾಗ, ನಿಮ್ಮ ಮೆದುಳು ಆಕ್ಸಲರೇಟರ್, ಬ್ರೇಕ್, ಕ್ಲಚ್ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನೇ ತಿಳಿಯದೇ ಹಾಯಾಗಿರುತ್ತದೆ. ಒಂದು ಬಾರಿ ಡ್ರೈವಿಂಗ್ ಕಲಿತಾದ ಮೇಲೆ, ಕಾರನ್ನು ಒಂದು ಐದು ಹತ್ತು ವರ್ಷ ಓಡಿಸಿಯಾದ ಮೇಲೆ, ಆ ಕಲಿಕೆ ನಿಮ್ಮ ಮೆದುಳಿನ ಅವಿಭಾಜ್ಯ ಅಂಗವೇ ಆಗಿ ಹೋದ ಮೇಲೆ, ನಿಮ್ಮ ಹೆಂಡತಿಗೋ, ಮಕ್ಕಳಿಗೋ ವಾಹನ ಓಡಿಸುವುದನ್ನು ಕಲಿಸುವಾಗ ಅಥವಾ ನಿಮ್ಮ ಪಕ್ಕದಲ್ಲೇ ಗಾಡಿ ಓಡಿಸುತ್ತಿರುವವ ಇಂಡಿಕೇಟರ್ ಇಲ್ಲದೇ ನಿಮ್ಮ ಲೇನಿಗೆ ಬಂದರೆ, ಒಂದೇ ಬಾರಿಗೆ ಬ್ರೇಕ್ ಹಾಕಿದಾಗ ನಿಮಗೆ ಇಷ್ಟೂ ಗೊತ್ತಾಗಲ್ವಾ? ಯಾರ್ರೀ ಲೈಸೆನ್ಸ್ ಕೊಟ್ಟವರು ನಿಮಗೆ ಅಂತಾ ಹೇಳುವಷ್ಟು ಸಿಟ್ಟುಕ್ಕುವುದು. ಯಾಕೆಂದರೆ ನಿಮ್ಮ ಮೆದುಳಿಗೆ ಮೆದುಳಲ್ಲಿ ಈ ಮಾಹಿತಿ ಇಲ್ಲದಿರುವುದು ಎಂಬ ಪರಿಸ್ಥಿತಿಯೇ ಅರ್ಥವಾಗುವುದು ನಿಂತುಹೋಗಿದೆ! ನಿಮ್ಮ ಮೆದುಳು ಈಗ 'ಇಷ್ಟು ಸರಳ ವಿಚಾರ ನನಗೆ ಗೊತ್ತಿದೆ ಎಂದ ಮೇಲೆ, ವಾಹನ ಓಡಿಸುತ್ತಿರುವ ಉಳಿದವರಿಗೂ ಗೊತ್ತಿರಲೇಬೇಕು' ಎಂಬ ಜ್ಞಾನದಿಂದ ಶಾಪಗ್ರಸ್ಥವಾಗಿದೆ.

ಇನ್ನು ಕೆಲವರು ತಾವು ವಾಹನ ಓಡಿಸುವಾಗ ಯಾರಾದರೂ ಪಾದಚಾರಿಗಳೋ, ದನ ನಾಯಿಗಳೋ ಅಡ್ಡಬಂದರೆ, ಅವಕ್ಕೂ ಕೂಡಾ ನನ್ನ ಕಾರು ಬರ್ತಿರೋದು ಕಾಣ್ತಿಲ್ಲವಾ? ಕಣ್ಣಿದ್ದ ಮೇಲೆ ಪಕ್ಕಕ್ಕೆ ಸರಿದು ನಿಲ್ಲಬೇಕು ತಾನೇ!? ಎಂದು ಬೈಯ್ಯುವುದುಂಟು. ಅಂದರೆ ಅವರ ಮೆದುಳು 'ನನ್ನ ಬಳಿ ವಾಹನ ಇದೆ, ಹಾಗೂ ನನಗೆ ವಾಹನ ಓಡಿಸುವುದು ಗೊತ್ತಿದೆ. ಆದ್ದರಿಂದ ಅವರ ಬಳಿ ವಾಹನ ಇಲ್ಲದಿದ್ದರೂ ರಸ್ತೆಯ ನಿಯಮಗಳ ಬಗ್ಗೆ ತಿಳಿದಿರಬೇಕು' ಎಂಬ ನಿರೀಕ್ಷೆಗೆ ಹಾಗೂ ನಿರ್ಧಾರಕ್ಕೆ ಬಂದಾಗಿದೆ. ಇದೇ ಕಾರಣಕ್ಕೆ ಎಷ್ಟೋ ಬಾರಿ ಶಿಕ್ಷಕರು ಕೆಲ ಪಾಠಗಳನ್ನು ಬಹಳ ವೇಗವಾಗಿ ಓಡಿಸಿ ಪಾಠ ಮಾಡುವುದು. ಮ್ಯಾನೇಜರುಗಳು ತಮ್ಮ ಕೈಕೆಳಗೆ ಕೆಲಸ ಮಾಡುವವರಿಗೆ ಪೂರ್ತಿ ಮಾಹಿತಿ ಕೊಡದೆಯೇ ಕೆಲಸ ಮಾಡು ಎನ್ನುವುದು. ಮಕ್ಕಳು ಕೆಲ ಸರಳ ಪ್ರಶ್ನೆಗಳನ್ನು ಕೇಳಿದಾಗ ಪೋಷಕರು ಸಿಟ್ಟಾಗುವುದು. ಯಾಕೆಂದರೆ ಅವರ ಪ್ರಕಾರ 'ಇದು ಅತ್ಯಂತ ಸರಳ ವಿಚಾರ. ಇದೂ ಗೊತ್ತಿಲ್ಲದಿದ್ದರೆ ಹೇಗೆ?' ಇದೇ ಜ್ಞಾನದ ಶಾಪ ಅಥವಾ Curse of Knowledge.

ಹಾಗಂತಾ ಇದು ದುರಹಂಕಾರವಲ್ಲ, ನಮ್ಮ ಮೆದುಳು ಕೆಲಸ ಮಾಡುವ ರೀತಿಯೇ ಹಾಗೆ. ಅದರ ವೈರಿಂಗ್ ಆಗಿರುವುದೇ 'ಈ ಕೆಲಸವನ್ನು ಅತ್ಯಂತ ಕಡಿಮೆ ಸಮಯದಲ್ಲಿ, ಅತ್ಯಂತ ದಕ್ಷತೆಯಿಂದ ಮಾಡುವುದು ಹೇಗೆ' ಎನ್ನುವುದರ ಸುತ್ತ. ಹಾಗಾಗಿಯೇ ಒಂದು ಬಾರಿ ಒಂದು ಕೆಲಸವನ್ನು ಕಲಿತ ಮೇಲೆ, ಪ್ರತಿಬಾರಿಯೂ ಆ ಕೆಲಸವನ್ನು ಮಾಡುವಾಗ ನಮ್ಮ ಮೆದುಳು ಅದನ್ನು ಮತ್ತೆ ಮತ್ತೆ ಕಲಿಯುತ್ತಾ, ತನ್ನನ್ನು ಹಾಗೂ ನಮ್ಮ ಅಂಗಾಗಗಳನ್ನು ಆ ಕೆಲಸಕ್ಕೆ ತೀರಾ ಯಾಂತ್ರಿಕವಾಗಿ ಒಗ್ಗಿಸಿಬಿಡುತ್ತದೆ. ಈ ಪ್ರಕ್ರಿಯೆಯಲ್ಲಿ ಮುಳುಗಿಹೋದ ಮೆದುಳು ಪರಿಣತಿಯನ್ನೇನೋ ಪಡೆಯುತ್ತದೆ, ಆದರೆ ಅದನ್ನು ನಾನು ಹೇಗೆ ಕಲಿತೆ ಎನ್ನುವ ದಾರಿಯನ್ನೇ ಮರೆತುಬಿಡುತ್ತದೆ. ಟೈಪ್-ರೈಟರುಗಳು ಕೀಬೋರ್ಡನ್ನೇ ನೋಡದೇ ಟೈಪಿಸುತ್ತಾರಲ್ಲ, ಅವರ ಬಳಿ ಟಿಇದನ್ನು ಹೇಗೆ ಸಾಧಿಸಿದೆ ಎಂದು ಒಮ್ಮೆ ಕೇಳಿ ನೋಡಿ. ಯಾವುದೇ ದೊಡ್ಡ ಉತ್ತರವಿಲ್ಲದೇ, ಹಾಗೇ ಕಲಿತುಬಿಟ್ಟೆ ಎಂದು ನಕ್ಕು ಸುಮ್ಮನಾಗುತ್ತಾರೆ. ಆದರೆ, ಆ ಕಲಿಕೆಯ ಹಿಂದೆ ಒಂದಲ್ಲಾ ಒಂದು ತಂತ್ರವನ್ನು ಅವರೂ ಬಳಸಿರುತ್ತಾರೆ. ಆದರೆ ಇದನ್ನು ಕಲಿಯಬೇಕಾಗಿದ್ದೇ ಹೀಗೆ ಎಂಬ ಸಾಲಿಗೆ ಒಗ್ಗಿಹೋದ ಅವರ ಮೆದುಳು, ಅದನ್ನೊಂದು ವಿಶೇಷ ತಂತ್ರವೆಂದು ಒಪ್ಪಿಕೊಳ್ಳಲಿಕ್ಕೇ ತಯಾರಿರುವುದಿಲ್ಲ.

ಇದೇ ಕಾರಣಕ್ಕೆ, ಬೇರೆಯವರು 'ಇದನ್ನು ನನಗೂ ಹೇಳಿಕೊಡು' ಎಂದಾಗ ಹೆಚ್ಚಿನವರು ಮುಖ್ಯವಾದ ಹಂತಗಳನ್ನೇ ಮರೆತು 'ಅದು ಗೊತ್ತಲ್ಲಾ, ಅದನ್ನ ಹೀಗೆ ಮಾಡಿ, ಇದನ್ನ ಹೀಗೆ ಮಾಡಿ, ಅಲ್ಲಿರುವ ಅದನ್ನ ಎಳೆದು ತಂದರೆ' ಆಗಿ ಹೋಯ್ತು ಎಂದುಬಿಡುತ್ತಾರೆ. ಆ ಪ್ರತಿಯೊಂದು ಅದು, ಇದು, ಅಲ್ಲಿರುವ, ಹೀಗೆ ಇವೆಲ್ಲವನ್ನೂ ತಿಳಿಯಲಿಕ್ಕೆ ಬೇರೆ ಬೇರೆ ತಂತ್ರಗಳಿವೆ ಎಂಬುದು ಕ್ಷಣಕ್ಕೆ ತಲೆಗೆ ಹೊಳೆಯುವುದೇ ಇಲ್ಲ, ಆ ವಿಷಯವನ್ನೂ ಇನ್ನೂ ಕಲಿಯುತ್ತಿರುವ ಇನ್ನೊಬ್ಬರ ದೃಷ್ಟಿಕೋನದಿಂದ ನೋಡಲಿಕ್ಕೇ ಸಾಧ್ಯವಾಗುವುದೇ ಇಲ್ಲ, ನನಗೆ ಯಾರಾದರೂ ಏನನ್ನಾದರೂ ಕೇಳಿದಾಗ ನಾನು ಅವರ ವಯಸ್ಸನ್ನು ಅರ್ಧಕ್ಕೆ ಇಳಿಸಿ, ಆ ವಯೋಮಾನದವರಿಗೆ ಹೇಗೆ ವಿವರಿಸಬಹುದೋ ಹಾಗೆ ವಿವರಿಸುತ್ತೇನೆ. ನನ್ನ ಗೆಳೆಯ ಇರಾನ್-ಇಸ್ರೇಲ್ ಯುದ್ಧದ ಬಗ್ಗೆ ಏನಾದರೂ ಕೇಳಿದರೆ, ನಾನು ನನ್ನ ಮುಂದೆ ಇಪ್ಪತ್ತು ವರ್ಷದ ಕಾಲೇಜು ಹುಡುಗ ಕುಳಿತಿದ್ದಾನೆ ಎಂದುಕೊಂಡು '1979ರಲ್ಲಿ ಏನಾಯ್ತು ಗೊತ್ತಾ' ಅಂತಲೇ ಶುರುಮಾಡ್ತೀನಿ. ಕೆಲವು ವಿಚಾರಗಳಲ್ಲಂತೂ ಇನ್ನೂ ಕೆಳಗಿನ ವಯೋಮಾನಕ್ಕೆ ಇಳಿಸಬೇಕು. ನನ್ನ ಅಪ್ಪನಿಗೂ ನನ್ನ ಮಗಳಿಗೂ ಇಂಟರ್ನೆಟ್ ಬಗ್ಗೆ ವಿವರಿಸಬೇಕೆಂದರೆ ನಾನು ಐದುವರ್ಷದ ಮಗುವಿಗೆ ವಿವರಿಸುವಂತೆಯೇ ವಿವರಿಸಬೇಕು. ದೊಡ್ಡ ವಿಷಯವನ್ನು ಸಣ್ಣ ಸಣ್ಣ ಮೂರ್ನಾಲ್ಕು ವಿಚಾರಗಳಾಗಿ ಬೇರ್ಪಡಿಸಿ ವಿವರಿಸಿ, ಆಮೇಲೆ ಆ ಎಲ್ಲಾ ಭಾಗಗಳನ್ನು ಇನ್ನೊಂದು ಸಾಲಿನಿಂದ ಹೊಲಿದು ಪೂರ್ಣವಾಗಿ ವಿವರಿಸಿ ನೋಡಿ. ಅದರ ನಂತರ ನಿಧಾನಕ್ಕೆ ಕ್ಲಿಷ್ಟತೆಯನ್ನು ಹೆಚ್ಚಿಸುತ್ತಾ ಹೋಗಬಹುದು. ಇದರಿಂದ ನಿಮಗಿರುವ ಜ್ಞಾನದ ಶಾಪವನ್ನು ನೀಗಿಸಿಕೊಂಡು, ಇನ್ನೊಬ್ಬರಿಗೆ ಜ್ಞಾನದ ವರವನ್ನು ನೀವು ಕೊಡಬಹುದು.

ಖಾಲಿ ಕೈಯಲ್ಲಿ ಹೋಗಬಾರದು

ಅಗ್ನಿಹೋತ್ರ, ಗೃಹಂ ಕ್ಷೇತ್ರಂ ಗರ್ಭಿಣೀಂ ವೃದ್ಧ ಬಾಲಕೌ ।
ರಿಕ್ತಹಸ್ತೇನ ನೋಪೇಯಾತ್ ರಾಜಾನಾಂ ದೇವತಾಂ ಗುರುಮ್ ॥ – ಮಹಾಭಾರತ

ಅಗ್ನಿಹೋತ್ರ ಗೃಹಕ್ಕೆ (ತೀರ್ಥ) ಕ್ಷೇತ್ರಕ್ಕೆ, ಗರ್ಭಿಣಿಯ ಬಳಿಗೆ, ವೃದ್ಧರ ಮತ್ತು ಬಾಲಕರ, ದೇವರು ಮತ್ತು ಗುರುಗಳ ಹತ್ತಿರಕ್ಕೆ ಬರಿಗೈಯಿಂದ ಬರಬಾರದು– ಎಂಬುದು ಶ್ಲೋಕಾರ್ಥ.



ಮೊದಲು ತುಂಬಾ ಇತ್ತು, ಈಗಲೂ ಈ ಪದ್ಧತಿಯಿದೆ. ಅದೆಂದರೆ ಕೆಲವರನ್ನು ಕಾಣಲು ಹೋಗುವಾಗ, ಕೆಲವು ಕಡೆ ಹೋಗುವಾಗ ಬರಿಗೈಯಲ್ಲಿ ಹೋಗಬಾರದು ಎಂಬುದಾಗಿ. ನಾವೆಲ್ಲ ಚಿಕ್ಕವರಿರುವಾಗ ಮನೆಗೆ ಬರುವ ನೆಂಟರಿಷ್ಟರು ಪೆಪ್ಪರ್‌ಮೆಂಟ್, ಬಿಸ್ಕಿಟ್ ಅಥವಾ ಮನೆಯಲ್ಲಿ ಮಾಡಿದ ಸಿಹಿತಿಂಡಿಯನ್ನೋ ತಂದು ಮಕ್ಕಳಿಗೆ ಕೊಡುತ್ತಿದ್ದರು.

ದೇವಸ್ಥಾನದಲ್ಲೋ, ಮನೆಯಲ್ಲೊ, ಮಠದಲ್ಲೋ ಪೂಜೆ ಸಮಾರಾಧನೆ ನಡೆಯುತ್ತಿದ್ದರೆ ಮನೆಯಿಂದ ಹೂ, ತೆಂಗಿನಕಾಯಿ ತೆಗೆದುಕೊಂಡು ಹೋಗುತ್ತಿದ್ದರು. ಈಗಲೂ ಕೂಡ ಆ ಪದ್ಧತಿಯನ್ನು ಕಾಣುತ್ತೇವೆ. ಕೆಲವಷ್ಟು ಪದ್ಧತಿ ದೂರಾಗಿದೆ. ಹಲವಷ್ಟು ಅಲ್ಪಸ್ವಲ್ಪವಾದರೂ ಇಂದಿಗೂ ಉಳಿದುಕೊಂಡಿವೆ.

ಈ ಬಗೆಯ ಆಚರಣೆಯಲ್ಲಿ ಉದಾತ್ತ ಭಾವನೆಯಿದೆ. ದೇವಸ್ಥಾನಕ್ಕೆ ಕೊಂಡೊಯ್ಯುವಾಗ ಹೂ, ಹಣ್ಣು ಎಂದು ಕರೆಸಿಕೊಳ್ಳುವ ವಸ್ತು ದೇವರಿಗೆ ಸಮರ್ಪಿಸಿ ಹಿಂದಿರುಗಿ ಪಡೆಯುವಾಗ ಪ್ರಸಾದ ಎಂದು ಕರೆಸಿಕೊಳ್ಳುತ್ತದೆ. ಪವಿತ್ರವೆನಿಸುತ್ತದೆ. ಅದನ್ನು ಕಣ್ಣಿಗೆ ಒತ್ತಿಕೊಂಡು ಮುಡಿಯುತ್ತೇವೆ. ಭಕ್ತಿಯಿಂದ ಪ್ರಸಾದವೆಂದು ಸೇವಿಸುತ್ತೇವೆ. ದೇವರಿಗೆ ಸಮರ್ಪಿಸುವುದರಿಂದ ಅದರ ಬಗೆಗಿರುವ ನಮ್ಮ ಚಿಂತನೆಯಲ್ಲಿ ಬದಲಾಗುತ್ತದೆ.

ಅಗ್ನಿಹೋತ್ರ, ಹೋಮ, ಹವನ ನಡೆಯುವ ಸ್ಥಳಕ್ಕೆ ಹೋಗುವಾಗ ಅವುಗಳಿಗೆ ಪೂರಕವಾದ ವಸ್ತುಗಳನ್ನು ಒಯ್ಯಬೇಕು. ಭಗವತ್ ಕಾರ್ಯದಲ್ಲಿ ನಮ್ಮದಾದ ಕಿಂಚಿತ್ ಕೊಡುಗೆಯಿಂದ ನೆಮ್ಮದಿ ದೊರೆಯುತ್ತದೆ. ಗುರುಗಳ ಬಗ್ಗೆ ಅಪಾರ ಗೌರವ. 'ಹರ ಮುನಿದರೂ ಗುರು ಕಾಯ್ವ' ಎಂಬ ನಂಬಿಕೆ. ಗುರುಗಳ ದರ್ಶನಕ್ಕೆ ಹೋಗುವಾಗ ಏನನ್ನಾದರೂ ಒಯ್ಯಬೇಕು. ಗುರುಗಳು ಅದನ್ನು ಫಲಮಂತ್ರಾಕ್ಷತೆ ರೂಪದಲ್ಲಿ ನೀಡುತ್ತಾರೆ.

ಇನ್ನು ಗರ್ಭಿಣಿ, ವೃದ್ಧರು, ರೋಗಿಗಳು, ಬಾಲಕರು, ಇರುವಲ್ಲಿಗೆ ಹೋಗುವಾಗಲೂ ಬರಿಗೈಯಲ್ಲಿ ಹೋಗಬಾರದು. ಅವರಿಗೂ ಪೂರಕವಾದ ವಸ್ತುವನ್ನು ಒಯ್ಯಬೇಕು. ಇದು ಶಿಷ್ಟಾಚಾರ. ನಾವು ತುಂಬಾ ಒಯ್ಯಬೇಕಿಲ್ಲ ಅಥವಾ ಏನನ್ನೂ ಒಯ್ಯದಿದ್ದರೂ ಏನೂ ಹೇಳುವುದಿಲ್ಲ, ಇವೆಲ್ಲವೂ ಒಳ್ಳೆಯ ಸಂಸ್ಕಾರದ ದ್ಯೋತಕ. ಸತ್ ಸಂಪ್ರದಾಯ ಸಭ್ಯತೆಯ ಲಕ್ಷಣ.

ಇಂತಹ ಪದ್ಧತಿ ಒಳ್ಳೆಯ ಸಂಸ್ಕಾರವನ್ನು ಸೂಚಿಸುತ್ತದೆ. ಅವರಿಗೇನೋ ಕಡಿಮೆಯಿದೆ ಎಂಬ ಕಾರಣಕ್ಕಾಗಿ ಅಲ್ಲ. ಇದೊಂದು ಸನಾತನ ಪರಂಪರೆಯ ಆಚರಣೆ.

ಮಕ್ಕಳಿರುವ ಮನೆಗೆ ತಿಂಡಿ ಒಯ್ದಾಗ ಮಕ್ಕಳು ನಮ್ಮನ್ನು ಪ್ರೀತಿಸುತ್ತಾರೆ. ನಾವು ನೀಡಿದ ಸಿಹಿಯಿಂದ ಸಂತೋಷಪಡುತ್ತಾರೆ. ಇವೆಲ್ಲವೂ ಸಂಬಂಧವನ್ನು ಬೆಸೆಯುವ, ಸಮಷ್ಟಿಯನ್ನು ಎತ್ತಿಹಿಡಿಯುವ, ಸಂಸ್ಕಾರವನ್ನು ಅನಾವರಣಗೊಳಿಸುವ ಕ್ರಮ. ಇದನ್ನು ನಾವು ರೂಢಿಸಿಕೊಂಡರೆ ಒಳ್ಳೆಯದು.

ಮಮತಾ ಬ್ಯಾನರ್ಜಿ ಅಧಃಪತನಕ್ಕೆ ಗೋವು ಕಾರಣ

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ ಹೊಸ ಅಲೆ ಎದ್ದಿರುವುದು ಅತಿ ಸ್ಪಷ್ಟವಾಗಿದೆ. ಅಲ್ಲಿಯ ಜನ ಹದಿನೈದು ವರ್ಷಗಳ ಹಿಂದಿನ ಹಿಂದೂ ವಿರೋಧಿ ಸರ್ಕಾರವನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಹದಿನೈದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ಮಮತಾ ಬ್ಯಾನರ್ಜಿಯೇ ಸೋಲುವುದರೊಂದಿಗೆ ವಿಧಾನಸಭೆ ಪ್ರವೇಶವನ್ನು ಕಳೆದುಕೊಂಡಿದ್ದಾರೆ. ಒಂದರ್ಥದಲ್ಲಿ ಹಿಂದೂಗಳು ದೇಶದಲ್ಲೇ ಮೊದಲ ಬಾರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಮತಾ ಸರ್ಕಾರವನ್ನು ತಿರಸ್ಕರಿಸಿ ಭಾಜಪವನ್ನು ಬಿಗಿದಪ್ಪಿಕೊಂಡಿದ್ದಾರೆ. ಹಿಂದೂಗಳು ಅಲ್ಲಿ ಬದುಕುವುದೇ ಕಷ್ಟ ಎಂಬಂತಹ ಸ್ಥಿತಿ ನಿರ್ಮಾಣವಾಗಿತ್ತು. ಮುಂದಾಗುವ ಅನಾಹುತದ ಕಲ್ಪನೆ ಅಲ್ಲಿಯ ಪ್ರತಿಯೊಬ್ಬ ಹಿಂದೂವಿಗೂ ಮನವರಿಕೆಯಾಗಿತ್ತು. ಈ ಬಾರಿ ಭಾಜಪಾ ಅಲ್ಲಿ ಬರದೇ ಹೋಗಿದ್ದರೆ ಬಹುಶಃ ಪಶ್ಚಿಮ ಬಂಗಾಳ ಈ ದೇಶದಿಂದ ವಿಭಜನೆಯಾಗಿ ಹೋಗುತ್ತಿತ್ತು ಎಂಬೆಲ್ಲಾ ಮಾತುಗಳು ಬಲವಾಗಿ ಕೇಳಿ ಬಂದಿತ್ತು. ಮುಖ್ಯವಾಗಿ ಮಮತಾರ ಅಧಃಪತನಕ್ಕೆ ಗೋವಿನ ಶಾಪವೂ ಕಾರಣ ಎಂಬ ಮಾತು ಸಹ ಹರಿದಾಡಿತ್ತು. ಇದಕ್ಕೆ ಕಾರಣವನ್ನು ಹುಡುಕುತ್ತಾ ಹೊರಟಾಗ ಎರಡು ದಶಮಾನಗಳ ಹಿಂದಿನ ಚಿತ್ರಣ ತೆರೆದುಕೊಳ್ಳುತ್ತದೆ.

ಒಮ್ಮೆ ಸ್ವರ್ಗೀಯ ಸ್ವದೇಶಿ ಚಳುವಳಿಯ ಹರಿಕಾರರಾದ ರಾಜೀವ್ ದೀಕ್ಷಿತರು ಗೋಹತ್ಯೆ ನಿಷೇಧದ ವಿಧೇಯಕ ಸಂಸತ್ತಿನಲ್ಲಿ ಮಂಡನೆಯಾಗುತ್ತಿರುವುದನ್ನು ಅರಿತು ವಿಧೇಯಕದ ಮೇಲೆ ನಡೆಯಲಿರುವ ಚರ್ಚೆಯನ್ನು ಸಮೀಪದಿಂದ ನೋಡಲು ಅಲ್ಲಿಗೆ ಧಾವಿಸಿದ್ದರು. ಯಾವ್ಯಾವ ಸಂಸದರು ಏನೇನು ಈ ವಿಧೇಯಕದ ಕುರಿತಂತೆ ಮಾತನಾಡುತ್ತಾರೆ, ಯಾರೆಲ್ಲಾ ಬೆಂಬಲಿಸುತ್ತಾರೆ ಮತ್ತು ಯಾರೆಲ್ಲಾ ವಿರೋಧಿಸುತ್ತಾರೆ ಎಂಬುದನ್ನು ಗಮನಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ಅಂದು ಎಂದಿನಂತೆ ಗೋಹತ್ಯಾ ನಿಷೇಧ ವಿಧೇಯಕ ಮಂಡನೆಯಾಯಿತು. ಇದ್ದ ಬಹುತೇಕ ಸಂಸದರು ಗೋಹತ್ಯಾ ನಿಷೇಧ ಕಾನೂನು ಜಾರಿಯಾಗಬೇಕೆಂದು ಆಗ್ರಹಿಸಿದರು. ಮುಸ್ಲಿಂ ಸಂಸದರಾಗಿದ್ದ ಜಿ.ಎಂ. ಬನತ್‌ವಾಲ ಈ ಮಸೂದೆ ಜಾರಿಯಾಗುವುದಾದರೆ ಮೊದಲ ಮತ ನನ್ನದೆ ಎಂಬುದಾಗಿ ಘೋಷಿಸಿದರು. ಇವರಂತೆ ಅಲ್ಲಿದ್ದ ಎಲ್ಲಾ ಮುಸ್ಲಿಂ ಸಂಸದರು ಸಹ ಗೋಹತ್ಯಾ ನಿಷೇಧದ ವಿಧೇಯಕಕ್ಕೆ ನಮ್ಮ ವಿರೋಧವಿಲ್ಲ, ಇದಕ್ಕೆ ಸಂಬಂಧಿಸಿದಂತೆ ಕಠಿಣ ಕಾನೂನು ಜಾರಿಯಾಗಬೇಕು ಎಂಬುದಾಗಿ ಆಗ್ರಹಿಸಿದರು. ಪರಿಸ್ಥಿತಿ ಹೀಗಿರುವಾಗ ಒಂದು ಹೆಣ್ಣು ಧ್ವನಿ ಮಾತ್ರ ಎದ್ದು ನಿಂತು ತೀವ್ರ ವಿರೋಧವನ್ನು ವ್ಯಕ್ತಪಡಿಸಿತು. ಆ ಧ್ವನಿಯೇ ಇಂದು ಪಶ್ಚಿಮ ಬಂಗಾಳದಲ್ಲಿ ಸೋತು ಸುಣ್ಣವಾಗಿರುವ ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕಿಯಾಗಿರುವ ಮಮತಾ ಬ್ಯಾನರ್ಜಿ.

ಅಂದು ಆಕೆ ಸಂಸತ್ತಿನಲ್ಲಿ ಎದ್ದು ನಿಂತು ಗೋಮಾಂಸ ತಿನ್ನುವುದು ನನ್ನ ಮೂಲಭೂತ ಹಕ್ಕು. ಹೀಗಾಗಿ ಗೋಹತ್ಯಾ ನಿಷೇಧ ಕಾನೂನು ಜಾರಿಯಾಗಲು ನನ್ನ ವಿರೋಧವಿದೆ ಎಂದು ಹೇಳುತ್ತಾ, ಈ ಹಿಂದೆ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶದ ಪ್ರತಿಯನ್ನು ಹಿಡಿದು ಅದರಲ್ಲಿ ಹೇಳಲಾಗಿದ್ದ ಕಸಾಯಿಗಳ ಮೂಲಭೂತ ಹಕ್ಕಿನ ಕುರಿತಂತೆ ಮಾತನಾಡುತ್ತಾ, ಗೋಹತ್ಯಾ ನಿಷೇಧ ಕಾನೂನು ಜಾರಿಯಾದಲ್ಲಿ ನ್ಯಾಯಾಂಗದ ಉಲ್ಲಂಘನೆಯಾಗುತ್ತದೆ ಎಂಬುದಾಗಿ ವಾದಿಸತೊಡಗಿದರು. ಹೀಗಾಗಿ ಮತ್ತೊಮ್ಮೆ ಗೋಹತ್ಯಾ ನಿಷೇಧದ ವಿಧೇಯಕ ನೆಲ ಕಚ್ಚುವಂತಾಯಿತು.

ಈ ದೇಶದಲ್ಲಿ ಗೋಹತ್ಯಾ ನಿಷೇಧ ಕಾನೂನು ಜಾರಿಯಾಗಲೇಬೇಕೆಂದು ಇಚ್ಛಿಸಿದ ಪ್ರಧಾನಿಗಳಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಸಹ ಒಬ್ಬರು. ಇವರು ಅಂದು ಬೆಳಗ್ಗೆ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಿ, ಸಂಜೆಗೆ ಅದನ್ನು ಹಿಂಪಡೆಯಲು ಬಲವಾದ ಕಾರಣವಿತ್ತು. ಅಂದು ವಾಜಪೇಯಿಯವರಿಗೆ ದೇಶದ ಎರಡು ರಾಜಕೀಯ ಪಕ್ಷಗಳಾದ ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗು ದೇಶಂ ಹಾಗೂ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಬೆಂಬಲವನ್ನು ಸೂಚಿಸಿದ್ದವು. ಅಂದು ಈ ಎರಡು ಪಕ್ಷದ ಮುಖಂಡರು ಗೋಹತ್ಯಾ ನಿಷೇಧದ ವಿಧೇಯಕ ಸಂಸತ್ತಿನಲ್ಲಿ ಮಂಡನೆಯಾಗಿ ಚರ್ಚೆಯಾದಲ್ಲಿ ತಾವು ನೀಡಿದ ಬೆಂಬಲವನ್ನು ಹಿಂಪಡೆದು, ಸರ್ಕಾರವನ್ನು ಉರುಳಿಸುತ್ತೇವೆ ಎಂಬುದಾಗಿ ಹೇಳಿದ್ದುದು ವಿಧೇಯಕ ಮಂಡನೆಗೆ ಅಡ್ಡಿಯಾಗಿತ್ತು.

ಅಂದು ವಿಧೇಯಕವನ್ನು ವಿರೋಧಿಸಿದ್ದ ಮಮತಾ ಬ್ಯಾನರ್ಜಿಯನ್ನು "ನೀವೊಬ್ಬ ಬಂಗಾಳಿ ಬ್ರಾಹ್ಮಣರಾಗಿದ್ದು ಬಹಳ ದಿನಗಳಿಂದ ಚರ್ಚೆಯಲ್ಲಿರುವ ಈ ವಿಧೇಯಕವನ್ನು ಏಕೆ ವಿರೋಧಿಸಿದಿರಿ" ಎಂಬುದಾಗಿ ಪತ್ರಕರ್ತರು ಪ್ರಶ್ನಿಸಿದ್ದರು. ಅದಕ್ಕೆ ಆಕೆ ಎಂದಿನಂತೆ, ಗೋಮಾಂಸ ತಿನ್ನುವುದು ನನ್ನ ಮೂಲಭೂತ ಹಕ್ಕು, ಹೀಗಾಗಿ ನಾನು ವಿರೋಧಿಸಿದೆ ಎಂಬ ಸೊಕ್ಕಿನ ಉತ್ತರವನ್ನು ನೀಡಿದ್ದರು. ಈ ಕಾರಣದಿಂದಲೇ ಅಂದು ಪ್ರಧಾನಿಯಾಗಿದ್ದ ವಾಜಪೇಯಿಯವರು ಸರ್ಕಾರವನ್ನು ಉಳಿಸುವ ಉದ್ದೇಶದಿಂದ ಬೆಳಗ್ಗೆ ಮಂಡನೆ ಮಾಡಿದ್ದ ಈ ವಿಧೇಯಕವನ್ನು ಸಂಜೆ ಚರ್ಚೆ ಮಾಡದೆಯೇ ಹಿಂಪಡೆದಿದ್ದರು.

ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ್ದ ರಾಜೀವ್ ದೀಕ್ಷಿತರು ಅಂದು ಪ್ರಧಾನಿಯಾಗಿದ್ದ ವಾಜಪೇಯಿಯವರಿಗೆ ಪತ್ರವೊಂದನ್ನು ಬರೆದು, ನೀವು ಅಂದು ಸಂಸತ್ತಿನಲ್ಲಿ ಗೋಹತ್ಯಾ ನಿಷೇಧದ ವಿಧೇಯಕವನ್ನು ಜಾರಿಗೆ ತರಬೇಕಿತ್ತು. ಸರ್ಕಾರ ಬಿದ್ದು ಹೋದರೂ ಪರವಾಗಿರಲಿಲ್ಲ. ನೀವು ಮುಂದಿನ ಸಲ ಭಾರೀ ಬಹುಮತದಿಂದ ಚುನಾಯಿತರಾಗಿ ಅಧಿಕಾರಕ್ಕೆ ಬರುತ್ತಿದ್ದಿರಿ. ಏಕೆಂದರೆ ಗೋಹತ್ಯೆ ಎಂಬುದು ಎಂಬತ್ತು ಕೋಟಿ ಭಾರತೀಯರ ಹೃದಯಕ್ಕೆ ಸಂಬಂಧಿಸಿದ ಮತ್ತು ಹೃದಯದೊಂದಿಗೆ ಬೆಸೆಯಲ್ಪಟ್ಟ ವಿಚಾರವಾಗಿದೆ ಎಂಬುದಾಗಿ ತಿಳಿಸಿದ್ದರು. ನಂತರ ಸಾಕಷ್ಟು ಬಾರಿ ಈ ಕುರಿತಂತೆ ಯೋಚಿಸಿದಾಗ ಅವರಿಗೆ ಅರಿವಾದದ್ದೇನೆಂದರೆ ಕೆಲವೊಂದು ಗೋಮುಖ ವ್ಯಾಘ್ರಗಳಿಂದ ಈ ವಿಧೇಯಕಕ್ಕೆ ತಡೆಯಾಗುತ್ತಿದೆ. ಹೀಗೆ ಸಮಾಜದಲ್ಲಿ ಎರಡೆರಡು ಮುಖವನ್ನು ಹೊತ್ತು ತಿರುಗುತ್ತಿರುವ ಇಂತಹವರನ್ನು ಮೊದಲು ಹುಡುಕುವುದರೊಂದಿಗೆ ಈ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕು. ಮುಂದಾದರೂ ಒಂದು ದಿನ ಈ ಸಮಸ್ಯೆಗೆ ಪರಿಹಾರವನ್ನು ಹುಡುಕಲೇ ಬೇಕಿದೆ. ಹೇಗೆ ಭಾರತ ಪಾಕಿಸ್ತಾನದ ವಿಭಜನೆ ಪರಿಹಾರವಾಯಿತೋ, ಹೇಗೆ ಚೀನಾದೊಂದಿಗಿನ ಗಡಿ ವಿವಾದ ಪರಿಹಾರವಾಯಿತೋ ಹಾಗೆಯೇ ಇದಕ್ಕೂ ಒಂದು ದಿನ ಪರಿಹಾರ ಸಿಗಲಿದೆ. ಕೋಟಿ ಕೋಟಿ ಭಾರತೀಯರ ಅಂತಃಕರಣದ ಕೂಗು ಒಂದು ದಿನ ಕೊನೆಯಾಗಲಿದೆ ಎಂಬುದಾಗಿ ಯೋಚಿಸಿ ಮುಂದಿನ ಕಾರ್ಯಯೋಜನೆಗೆ ಸಿದ್ಧರಾಗಿದ್ದರು.

ಈ ದೇಶದಲ್ಲಿ ಗೋಹತ್ಯೆ ಎಂಬುದು ನಿರಂತರವಾಗಿ ನಡೆಯುತ್ತಲೇ ಇರಬೇಕು ಎಂಬುದರ ಹಿಂದೆ ಬಹುದೊಡ್ಡ ಷಡ್ಯಂತ್ರವಿರುವುದಂತೂ ಸತ್ಯ. ಹಿಂದಿನಿಂದಲೂ ಸಂಸತ್ತಿನಲ್ಲಿ ಗೋಹತ್ಯಾ ನಿಷೇಧ ವಿಧೇಯಕ ಮಂಡನೆಯಾಗಿ ವಾದ ವಿವಾದಗಳು ನಡೆದು ಒಂದಲ್ಲ ಒಂದು ಅಚ್ಚರಿಯ ಘಟನೆ ಘಟಿಸಿ ವಿಧೇಯಕ ನಂತರ ಬಿದ್ದು ಹೋಗುವುದು ಸಾಮಾನ್ಯ ಸಂಗತಿಯಾಗಿದೆ. ಹೀಗೆ ಗೋಹತ್ಯಾ ನಿಷೇಧ ವಿಧೇಯಕಕ್ಕೆ ತಡೆಯಾಗುವ ಸಾಕಷ್ಟು ಗೋಮುಖ ವ್ಯಾಘ್ರಗಳ ಸಾಲಿನಲ್ಲಿ ಈ ಮಮತಾ ಸಹ ಒಬ್ಬರಷ್ಟೇ.

ಅಂದು ಮಾಡಿದ ಆ ತಪ್ಪನ್ನು ಆಕೆ ಸರಿಪಡಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ಮತ್ತು ಸಂದರ್ಭಗಳು ಕೂಡಿ ಬಂದಿದ್ದವು. ಆದರೂ ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ, ಅಧಿಕಾರಕ್ಕಾಗಿ ಕೋಟ್ಯಂತರ ಅಮಾಯಕ ಮೂಕ ಜೀವಿಗಳ ಸಾವಿಗೆ ಈಕೆಯೇ ಕಾರಣರಾಗಿದ್ದು ದುರಂತ. ಎಲ್ಲೋ ದೇಶದ ಮೂಲೆಯಲ್ಲಿ ಹುಟ್ಟಿದ ಗೋವುಗಳು ಪಶ್ಚಿಮ ಬಂಗಾಳದ ಗಡಿಯಿಂದ ಬಾಂಗ್ಲಾಗೆ ರಫ್ತಾಗುವುದರೊಂದಿಗೆ ಬಾಂಗ್ಲಾದ ಆರ್ಥಿಕ ಸ್ಥಿತಿ ಭದ್ರವಾಗುವಂತಾಯಿತು. ಹಾಗೆಯೇ ಚರ್ಮ ಮತ್ತು ಮೂಳೆಯ ರಫ್ತಿನಲ್ಲಿ ಉತ್ತುಂಗಕ್ಕೇರುವಂತಾಯಿತು. ಒಂದು ಹೇಳಿಕೆಯ ಪ್ರಕಾರ ಈಕೆಯ ಆಡಳಿತಾವಧಿಯಲ್ಲಿ ಪ್ರತಿನಿತ್ಯ ಏನಿಲ್ಲವೆಂದರೂ ಐವತ್ತು ಸಾವಿರದಿಂದ ಒಂದು ಲಕ್ಷಕ್ಕೂ ಹೆಚ್ಚು ಗೋವುಗಳು ನಿರಾಯಾಸವಾಗಿ ಈ ದೇಶದ ಗಡಿಯನ್ನು ದಾಟಿ ಬಾಂಗ್ಲಾ ಪ್ರಯಾಣಿಸುತ್ತಿದ್ದವಂತೆ. ಇದರಲ್ಲಿ ಸಣ್ಣ ಸಣ್ಣ ಅಧಿಕಾರಿಗಳಿಂದ ಹಿಡಿದು ದೊಡ್ಡ ದೊಡ್ಡ ರಾಜಕೀಯ ನಾಯಕರೇ ನೇರವಾಗಿ ಶಾಮಿಲಾಗಿದ್ದರಂತೆ. ಬಾಂಗ್ಲ ವಲಸಿಗರಿಗೆ ಇದೊಂದು ಹಣ ಮಾಡುವ ದೊಡ್ಡ ದಂಧೆಯಾಗಿ ಅವರ ದುಷ್ಟ ಸಂತಾನಗಳು ದುಪ್ಪಟ್ಟಾಗಲು ಇದು ಸಹಕಾರಿಯಾಯಿತಂತೆ. ಮುಖ್ಯವಾಗಿ ಈ ದಂಧೆಯಿಂದ ಬರುತ್ತಿದ್ದ ಹಣದ ಒಂದಷ್ಟು ಪಾಲು ಚುನಾವಣಾ ಖರ್ಚಿಗಾಗುತ್ತಿತ್ತಂತೆ. ಇದೇ ಹಣದಲ್ಲಿ ಈಕೆ ಪ್ರತಿಯೊಂದು ಚುನಾವಣೆಯಲ್ಲೂ ಗೆದ್ದು ಬರುತ್ತಿದ್ದರಂತೆ. ಎಂತಹ ವಿಪರ್ಯಾಸವಲ್ಲವೇ?

ಈಗ ಬಂದಿರುವ ಹೊಸ ಸರ್ಕಾರ ಮೊದಲಿಗೆ ಬಹುಸಂಖ್ಯಾತ ಹಿಂದೂಗಳ ಭಾವನೆಗೆ ಬೆಲೆ ಕೊಡುತ್ತಾ ಈಕೆಯ ಎಲ್ಲಾ ಅಕ್ರಮ ಚಟುವಟಿಕೆಗಳಿಗೆ ಬ್ರೇಕ್ ಹಾಕಬೇಕಿದೆ. ಗೋಸಂಪತ್ತು ಈ ದೇಶದ ಗಡಿ ದಾಟದಂತೆ ಎಚ್ಚರವಹಿಸಬೇಕಿದೆ. ಎಲ್ಲಿಯವರೆಗೆಂದರೆ ಈ ದೇಶದ ಒಂದೇ ಒಂದು ಗೋವು ಸಹ ಬಾಂಗ್ಲಾ ಗಡಿ ದಾಟದಂತೆ ನೋಡಿಕೊಳ್ಳಬೇಕಿದೆ. ಈ ರೀತಿ ಮಾಡಿದ್ದೇ ಆದಲ್ಲಿ ಗೋ ಸಂಪತ್ತು ಇಲ್ಲಿಯೇ ಉಳಿಯುವುದರಿಂದ ಇಲ್ಲಿಯ ಆರ್ಥಿಕ ಸ್ಥಿತಿ ಸುಧಾರಿಸುವುದರೊಂದಿಗೆ ಬಾಂಗ್ಲಾದ ಆರ್ಥಿಕ ಸ್ಥಿತಿ ಇನ್ನಷ್ಟು ಹದಗೆಡಲಿದೆ. ಆಗಷ್ಟೇ ಪಾಕಿಸ್ತಾನದಂತೆ ಬಾಂಗ್ಲಾ ಸಹ ದಿವಾಳಿಯಾಗುವ ಸಾಧ್ಯತೆ ದಟ್ಟವಾಗಿದೆ. ಇದನ್ನೇ ಅಲ್ಲವೇ ನಾವು ನೀವುಗಳು ಬಹು ಆತುರದಿಂದ ಕಾಯುತ್ತಿರುವುದು!

ಜಾಗತಿಕ ವ್ಯವಸ್ಥೆ ಕಂಗೆಡಿಸುತ್ತಿರುವ ಟ್ರಂಪ್-ಕ್ಸಿ

ಜಗತ್ತಿನ ಇನ್ನಿತರ ಶಕ್ತಿಗಳ ಜತೆ ವೇದಿಕೆ ಹಂಚಿಕೊಳ್ಳಲು ಅಮೆರಿಕ ಮತ್ತು ಚೀನಾ ಎರಡೂ ಈಗ ನಿರಾಸಕ್ತಿ ಹೊಂದಿವೆ.

▸ ರಾಮ್ ಮಾಧವ್

ಜಗತ್ತಿನಲ್ಲಿ ಈಗ ಉಂಟಾಗುತ್ತಿರುವ ಬದಲಾವಣೆಗಳನ್ನು ಗಮನಿಸಿದರೆ ವಿಶ್ವವು ಮತ್ತೆ ದ್ವಿ-ಧ್ರುವೀಯ ವ್ಯವಸ್ಥೆ ಯತ್ತ ಮರಳುತ್ತಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಇತ್ತೀಚೆಗೆ ಅಮೆರಿಕದ ಅಧ್ಯಕ್ಷ ಟ್ರಂಪ್ ಚೀನಾಕ್ಕೆ ನೀಡಿದ ಭೇಟಿಗೆ ಜಾಗತಿಕವಾಗಿ ಕೊಡಲಾದ ಮಹತ್ವ ಕೂಡಾ ಜಾಗತಿಕ ವ್ಯವಸ್ಥೆ ಬದಲಾಗುತ್ತಿರುವುದರ ಸಂಕೇತ ನೀಡಿದೆ.

1991ರಲ್ಲಿ ಸೋವಿಯತ್ ಒಕ್ಕೂಟದಲ್ಲಿ ಕಮ್ಯುನಿಸ್ಟ್ ವ್ಯವಸ್ಥೆಯು ಕುಸಿದಾಗ ಜಗತ್ತು ಅಮೆರಿಕ ನೇತೃತ್ವದ ಏಕಧ್ರುವ ವ್ಯವಸ್ಥೆಗೆ ಮರಳುತ್ತದೆಂದು ಅಮೆರಿಕದ ಕೆಲವು ಚಿಂತಕರು ಕನಸು ಕಂಡಿದ್ದರು. 'ಜಗತ್ತಿಗೆ ಇನ್ನು ಮುಂದೆ ಪ್ರಗತಿಗೆ ಒಂದೇ ದಾರಿಯಿರುವುದು, ಅದು ಅಮೆರಿಕನ್ ಮಾದರಿಯ ಉದಾರವಾದಿ ಪ್ರಜಾತಾಂತ್ರಿಕ ದಾರಿ' ಎಂದು ರಾಜಕೀಯ ಪಂಡಿತ ಫ್ರಾನ್ಸಿಸ್ ಫುಕುಯಾಮ ಬರೆದಿದ್ದರು. ಆದರೆ ಅವರ ರಾಜಕೀಯ ಗುರುವಾದ ಸ್ಯಾಮುಯೆಲ್ ಹಂಟಿಂಗ್ಟನ್ ಎರಡು ವರ್ಷಗಳ ಬಳಿಕ ಬರೆದ ಖ್ಯಾತ 'ದಿ ಕ್ಲ್ಯಾಶ್ ಆಫ್ ಸಿವಿಲೈಸೇಷನ್ಸ್' ಪುಸ್ತಕದಲ್ಲಿ 'ನಾಗರಿಕ ಸಂಘರ್ಷ ಇನ್ನೂ ಮುಂದುವರಿಯಲಿದೆ. ಅಮೆರಿಕಕ್ಕೆ ಇನ್ನಿತರ ಪ್ರಾದೇಶಿಕ ಶಕ್ತಿಗಳು ಸವಾಲೊಡ್ಡಲಿವೆ' ಎಂದು ಬರೆದಿದ್ದರು. ಅವರ ಮಾತು ತಪ್ಪಾಗಲಿಲ್ಲ. ಕೆಲ ಸಮಯದಲ್ಲೇ ಇಸ್ಲಾಮಿಕ್ ಜಗತ್ತು ಅಮೆರಿಕದ ಸಾರ್ವಭೌಮತ್ವಕ್ಕೆ ಸವಾಲೊಡ್ಡಿತು. ಇಸ್ಲಾಮಿಕ್ ಭಯೋತ್ಪಾದಕರು ಪದೇಪದೇ ಅಮೆರಿಕದ ಗುರಿಗಳ ಮೇಲೆ ದಾಳಿ ನಡೆಸಿದರು.

21ನೇ ಶತಮಾನದ ಆರಂಭದಲ್ಲಿ ಕೆಲವಾರು ಮಧ್ಯಮ ಶಕ್ತಿಗಳು ಮತ್ತು ಪುಟ್ಟ ರಾಷ್ಟ್ರಗಳು ಕೂಡಾ ಗುಂಪುಗಳನ್ನು ಸೃಷ್ಟಿಸಿಕೊಂಡು ಜಗತ್ತಿನಲ್ಲಿ ಪ್ರಮುಖ ಪಾತ್ರ ವಹಿಸತೊಡಗಿದವು. ಇದರಿಂದಾಗಿ ಜಗತ್ತು ಬಹುಧ್ರುವೀಯ ವ್ಯವಸ್ಥೆಯೆಡೆಗೆ ಸಾಗುತ್ತಿರುವ ಸಂಕೇತ ತೋರಿಬಂತು. ಅಮೆರಿಕದ ಪಾರಮ್ಯಕ್ಕೆ ಸವಾಲು ತೋರಿಬಂತು. ಪ್ರಾದೇಶಿಕತೆ ಮತ್ತು ಸ್ಥಳೀಯ ವಿಷಯಗಳೇ ಜಾಗತಿಕ ಆಗುಹೋಗುಗಳಲ್ಲಿ ಪ್ರಮುಖ ಪಾತ್ರ ವಹಿಸುವುದೆಂದು ಕೆಲವರು ಪ್ರತಿಪಾದಿಸತೊಡಗಿದರು. ಆದರೆ ಅಮೆರಿಕದ ಕೆಲವು ಚಿಂತಕರು ಇದನ್ನು ತಿರಸ್ಕರಿಸತೊಡಗಿದರು. ಅಮೆರಿಕದ ಪಾರಮ್ಯವನ್ನು ಯಾರೂ ಪ್ರಶ್ನಿಸಲು ಸಾಧ್ಯವಿಲ್ಲ ಎಂಬುದು ಅವರ ವಾದವಾಗಿತ್ತು. ಯಾವುದೇ ದೇಶವೂ ಅಮೆರಿಕದ ಆರ್ಥಿಕ ಶಕ್ತಿ, ತಂತ್ರಜ್ಞಾನ ಮತ್ತು ಮಿಲಿಟರಿ ಶಕ್ತಿಯನ್ನು ಸರಿಗಟ್ಟಲು ಸಾಧ್ಯವಿಲ್ಲ ಎಂಬುದು ಅವರ ವಾದವಾಗಿತ್ತು. ಆದರೆ ಕಳೆದೆರಡು ದಶಕಗಳಲ್ಲಿ ಉಂಟಾಗಿರುವ



ಕೆಲವಾರು ಬೆಳವಣಿಗೆಗಳು ಹಾಗೂ ಇತ್ತೀಚಿನ ಇರಾನ್ ಸಮರವು 'ಶಕ್ತಿಯುತ ರಾಷ್ಟ್ರಗಳೇ ಯಾವತ್ತೂ ಸಫಲತೆ ಸಾಧಿಸುತ್ತವೆ ಎನ್ನುವಂತಿಲ್ಲ' ಎಂಬುದನ್ನು ಸಾಬೀತುಪಡಿಸಿದವು. ಹಲವಾರು ಮಧ್ಯಮ ಶಕ್ತಿಯ ರಾಷ್ಟ್ರಗಳಾದ ಭಾರತ, ರಷ್ಯಾ, ಬ್ರೆಜಿಲ್, ಟರ್ಕಿ, ಫ್ರಾನ್ಸ್ ಮತ್ತು ದ. ಆಫ್ರಿಕಾ ಹಾಗೂ ಏಷಿಯಾನ್, ಐರೋಪ್ಯ ಒಕ್ಕೂಟ, ಕ್ವಾಡ್ ಕೂಟ ಮತ್ತು ಬ್ರಿಕ್ಸ್ ಮೊದಲಾದ ಕೂಟಗಳು ಜಾಗತಿಕ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸತೊಡಗಿದವು. ಜಗತ್ತು ಬಹುಧ್ರುವೀಯ ವ್ಯವಸ್ಥೆಯನ್ನು ಅಪ್ಪಿಕೊಳ್ಳತೊಡಗಿತು.

ಈ ಚಿತ್ರಣ ಕೂಡಾ ಈಗ ಬದಲಾಗುತ್ತಿದೆ. ಎರಡು ಸೂಪರ್ ಪವರ್‌ಗಳಾದ ಅಮೆರಿಕ ಮತ್ತು ಚೀನಾಗಳು ಈಗ ಜಾಗತಿಕ ವ್ಯವಹಾರವನ್ನು ತಾವೇ ನಿಯಂತ್ರಿಸಲು ಯತ್ನಿಸುತ್ತಿವೆ. ಚೀನಾ ಈಗ ಅಮೆರಿಕದ ಪಾರಮ್ಯಕ್ಕೆ ಪ್ರಬಲ ಸವಾಲು ಒಡ್ಡಬಲ್ಲ ಶಕ್ತಿಯಾಗಿ ಬೆಳೆದಿದೆ ಎಂಬ ಅರಿವು ಕಳೆದ 15 ವರ್ಷಗಳಲ್ಲಿ ಅಮೆರಿಕಕ್ಕೆ ಉಂಟಾಗತೊಡಗಿದೆ. ಆರಂಭದಲ್ಲಿ ಅಮೆರಿಕದ ಅಧ್ಯಕ್ಷರಾದ ಬಿಲ್ ಕ್ಲಿಂಟನ್ ಮತ್ತು ಜಾರ್ಜ್ ಬುಷ್ ಚೀನಾದೊಂದಿಗೆ ಹೆಚ್ಚು ಸಹಕಾರ, ವ್ಯವಹಾರ ನಡೆಸಿದರು. ಅಮೆರಿಕದ ಸಖ್ಯದೊಂದಿಗೆ ಚೀನಾ ಕೂಡಾ ಪ್ರಜಾತಾಂತ್ರಿಕ, ಲಿಬರಲ್ ಮತ್ತು ಹೊಣೆಯರಿತ ರಾಷ್ಟ್ರವಾಗಿ ಬದಲಾಗಬಹುದು ಎಂಬುದು ಅವರ ನಿರೀಕ್ಷೆಯಾಗಿತ್ತು. ಅವರಿಬ್ಬರು ಹಲವಾರು ಬಾರಿ ಚೀನಾಕ್ಕೆ ಭೇಟಿ ಕೊಟ್ಟಿದ್ದರು. ಆದರೆ ಚೀನಾ ಅಮೆರಿಕದ ಹಾದಿಯನ್ನು ತುಳಿಯುವುದಿಲ್ಲ, ಬದಲಾಗಿ ಅಮೆರಿಕಕ್ಕೆ ಪ್ರತಿರೋಧ ಶಕ್ತಿಯಾಗಿ ಬೆಳೆಯುತ್ತಿದೆ ಎಂಬುದು ತಿಳಿಯಲು ಹೆಚ್ಚು ಕಾಲ ಬೇಕಾಗಲಿಲ್ಲ.

2013ರಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ತಮ್ಮ ಅಧಿಕಾರ ಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಂಡ ಬಳಿಕ ಚೀನಾ ಜಾಗತಿಕ ಸೂಪರ್ ಪವರ್ ಆಗುವ ಮಹತ್ವಾಕಾಂಕ್ಷೆ ಹೊಂದಿರುವುದು ನಿಚ್ಚಳವಾಯಿತು. ತಂತ್ರಜ್ಞಾನ, ರಕ್ಷಣೆ ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ಚೀನಾ ಅದ್ಭುತ ಪ್ರಗತಿ ಸಾಧಿಸತೊಡಗಿತು. ಹಲವಾರು ಕ್ಷೇತ್ರಗಳಲ್ಲಿ ಅಮೆರಿಕಕ್ಕೆ ಸರಿಸಮನಾಗಿ ಬೆಳೆಯತೊಡಗಿತು. "ಚೀನಾ ಈಗ ಅಮೆರಿಕದ ಸಮಾನವಾಗಿ ಬೆಳೆದಿದೆ" ಎಂಬ ಸಂದೇಶವನ್ನು ಜಿನ್‌ಪಿಂಗ್ ಹಲವಾರು ಜಾಗತಿಕ ವೇದಿಕೆಗಳಲ್ಲಿ ರವಾನಿಸತೊಡಗಿದ್ದಾರೆ.

ಜಿನ್‌ಪಿಂಗ್ ಇತ್ತೀಚಿನ ದಿನಗಳಲ್ಲಿ ಅಮೆರಿಕ ಮತ್ತು ಚೀನಾದ ಸಂಬಂಧವನ್ನು 'ದೈತ್ಯ ನೌಕೆ'ಗೆ ಹೋಲಿಸಲಾರಂಭಿಸಿದ್ದಾರೆ. ಹಲವಾರು ಸಂದರ್ಭಗಳಲ್ಲಿ ಅವರು ಇದನ್ನು ಪುನರುಚ್ಚರಿಸಿದ್ದಾರೆ. ಜಾಗತಿಕ ಕೋಲಾಹಲದ ಸಾಗರದಲ್ಲಿ ಅಮೆರಿಕ ಮತ್ತು ಚೀನಾದ ಸಂಬಂಧವು ಈ ದೈತ್ಯ ನೌಕೆಯನ್ನು ಸುರಕ್ಷಿತವಾಗಿ ದಡ ಸೇರಿಸಬಲ್ಲದು ಎಂಬುದು ಅವರ ಮಾತಿನ ಅರ್ಥ. ಇತ್ತ ಟ್ರಂಪ್ ಕೂಡಾ ಹಲವಾರು ಸಂದರ್ಭಗಳಲ್ಲಿ 'ಜಿ-2' ದೇಶಗಳ ಕುರಿತಂತೆ ಮಾತನಾಡತೊಡಗಿದ್ದಾರೆ. ಅವರ ಪ್ರಕಾರ ಜಿ-2 ರಾಷ್ಟ್ರಗಳೆಂದರೆ ಅಮೆರಿಕ ಮತ್ತು ಚೀನಾ. ಈ ಎರಡು ದೇಶಗಳು ಶೀಘ್ರದಲ್ಲೇ ಸಹಕಾರಕ್ಕಾಗಿ ಕೈಜೋಡಿಸಲಿವೆ ಎಂಬಂತಹ ಸಂದೇಶವನ್ನು ಅವರೂ ರವಾನಿಸಲಾರಂಭಿಸಿದ್ದಾರೆ.

ಈ ಎಲ್ಲ ಬೆಳವಣಿಗೆಗಳಿಂದಾಗಿ ಜಗತ್ತಿನ ಇನ್ನಿತರ ಶಕ್ತಿಗಳ ಜತೆ ವೇದಿಕೆ ಹಂಚಿಕೊಳ್ಳಲು ಅಮೆರಿಕ ಮತ್ತು ಚೀನಾ ಎರಡೂ ಈಗ ನಿರಾಸಕ್ತಿ ಹೊಂದಿವೆ. ಅಮೆರಿಕಕ್ಕೆ ಕ್ವಾಡ್, ನ್ಯಾಟೋ ಕುರಿತು ಆಸಕ್ತಿ ಕುಂದಿದೆ. ಚೀನಾವು ಜಿ-20, ಬ್ರಿಕ್ಸ್‌ನಂತಹ ವೇದಿಕೆಯನ್ನು ಕಡೆಗಣಿಸುತ್ತಿದೆ. ಜಿ20, ಬ್ರಿಕ್ಸ್‌ನಲ್ಲಿ ಭಾರತವು ನಾಯಕತ್ವ ಹೊಂದಿರುವುದೂ ಚೀನಾಕ್ಕೆ ಸಹ್ಯವಾಗುತ್ತಿಲ್ಲ.

ಇವೆಲ್ಲವೂ ಜಗತ್ತು ಬಹುಧ್ರುವೀಯ ವ್ಯವಸ್ಥೆಯಿಂದ ದ್ವಿ-ಧ್ರುವೀಯ ವ್ಯವಸ್ಥೆಯೆಡೆಗೆ ಸಾಗುತ್ತಿರುವ ಸಂಕೇತಗಳನ್ನು ನೀಡುತ್ತಿವೆ. ದಶಕಗಳ ಹಿಂದಿನ ಹಳೆಯ ಜಾಗತಿಕ ವ್ಯವಸ್ಥೆ ಮರುಕಳಿಸುತ್ತಿರುವಂತಿದೆ.

ನಾರ್ವೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಕರೆ

ಮಾತುಕತೆ ಮಾರ್ಗ ಬಿಕ್ಕಟ್ಟಿಗೆ ಪರಿಹಾರ

ಓಸ್ಲೋ: ಪಶ್ಚಿಮ ಏಷ್ಯಾ ಬಿಕ್ಕಟ್ಟು ಮತ್ತು ಉಕ್ರೇನ್ ಸಂಘರ್ಷವನ್ನು ಕೇವಲ ಮಿಲಿಟರಿ ಕ್ರಮಗಳಿಂದ ಬಗೆಹರಿಸಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ, ಇವುಗಳಿಗೆ ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಶಾಂತಿಯುತ ಪರಿಹಾರ ಕಂಡುಕೊಳ್ಳುವಂತೆ ಸೋಮವಾರ ಕರೆ ನೀಡಿದ್ದಾರೆ.

ನಾರ್ವೆ ಪ್ರಧಾನಿ ಜೋನಾಸ್ ಗಹರ್ ಸ್ಟೋರ್ ಅವರೊಂದಿಗೆ ನಡೆಸಿದ ದ್ವಿಪಕ್ಷೀಯ ಮಾತುಕತೆಯ ನಂತರ ಮೋದಿ ಮಾತನಾಡಿದರು. ಉಭಯ ದೇಶಗಳು ಜಾಗತಿಕ ನಿಯಮ ಆಧಾರಿತ ವ್ಯವಸ್ಥೆಯನ್ನು ಬೆಂಬಲಿಸಲು ಒಪ್ಪಿಕೊಂಡಿದ್ದು, ಅಂತಾರಾಷ್ಟ್ರೀಯ ಸವಾಲುಗಳನ್ನು ಎದುರಿಸಲು ಜಾಗತಿಕ ಸಂಸ್ಥೆಗಳಲ್ಲಿ ರಚನಾತ್ಮಕ ಸುಧಾರಣೆಗಳನ್ನು ತರಲು ನಿರ್ಧರಿಸಿವೆ. ಇದರೊಂದಿಗೆ, ಕಡಲ ಭದ್ರತೆ, ಸಾಗರ ಆರ್ಥಿಕತೆ ಮತ್ತು ಸಾಮರ್ಥ್ಯ ವೃದ್ಧಿಯಲ್ಲಿ ಪರಸ್ಪರ ಸಹಕಾರ ಹೆಚ್ಚಿಸಲು ಭಾರತದ ನೇತೃತ್ವದ 'ಇಂಡೋ-ಪೆಸಿಫಿಕ್ ಸಾಗರಗಳ ಯೋಜನೆ'ಗೆ (ಐಪಿಒಐ) ಸೇರಲು ನಾರ್ವೆ ನಿರ್ಧರಿಸಿದೆ.

ಭಯೋತ್ಪಾದನೆ ನಿರ್ಮೂಲನೆಗೆ ಸಂಕಲ್ಪ: ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಉಭಯ ನಾಯಕರು ಬದ್ಧತೆ ಪ್ರಕಟಿಸಿದರು. ಕಳೆದ ವರ್ಷ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನರು ಮೃತಪಟ್ಟಾಗ ಭಾರತದ ಪರವಾಗಿ ನಿಂತಿದ್ದಕ್ಕಾಗಿ ಮೋದಿ ನಾರ್ವೆಗೆ ಕೃತಜ್ಞತೆ ಸಲ್ಲಿಸಿದರು. ನಾಲ್ಕು ರಾಷ್ಟ್ರಗಳ ಯುರೋಪ್ ಪ್ರವಾಸದ ಭಾಗವಾಗಿ ಮೋದಿ ಸೋಮವಾರ ಸ್ವೀಡನ್‌ನಿಂದ ಓಸ್ಲೋಗೆ ಆಗಮಿಸಿದ್ದಾರೆ.

ಮೋದಿಗೆ ನಾರ್ವೆಯ ಅತ್ಯುನ್ನತ ಗೌರವ



ಮೋದಿ ಅವರಿಗೆ ನಾರ್ವೆಯ ಅತ್ಯುನ್ನತ ನಾಗರಿಕ ಗೌರವವಾದ 'ಗ್ರಾಂಡ್ ಕ್ರಾಸ್ ಆಫ್ ದಿ ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್' ಪ್ರಶಸ್ತಿ ನೀಡಿ ಗೌರವಿಸಲಾಗಿದ್ದು, ಇದು ಅವರ 32ನೇ ಅಂತಾರಾಷ್ಟ್ರೀಯ ಗೌರವವಾಗಿದೆ. ಈ ಪ್ರಶಸ್ತಿ, ನಾರ್ವೆಯ ಹಿತಾಸಕ್ತಿಗಳು ಮತ್ತು ಅಂತಾರಾಷ್ಟ್ರೀಯ ಸಂಬಂಧಗಳನ್ನು ವೃದ್ಧಿಸುವಲ್ಲಿ ನೀಡಿದ ಅಸಾಧಾರಣ ಸೇವೆಯನ್ನು ಗುರುತಿಸಿ ನೀಡಲಾಗುತ್ತದೆ. 43 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ನಾರ್ವೆಗೆ ಭೇಟಿ ನೀಡುತ್ತಿರುವುದು ಇದೇ ಮೊದಲ ಬಾರಿಯಾಗಿದ್ದು, ಮೋದಿ ಅವರ ಚೊಚ್ಚಲ ಪ್ರವಾಸ ಇದಾಗಿದೆ. ಇದಕ್ಕೂ ಒಂದು ದಿನ ಮುಂಚಿತವಾಗಿ ಮೋದಿ, ಸ್ವೀಡನ್‌ನ ಅತ್ಯುನ್ನತ ಗೌರವವಾದ 'ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್ ಡಿಗ್ರಿ, ಕಮಾಂಡರ್ ಗ್ರಾಂಡ್ ಕ್ರಾಸ್' ಪ್ರಶಸ್ತಿಯನ್ನೂ ಸ್ವೀಕರಿಸಿದ್ದರು.

ಇಂದು ಭಾರತ-ನಾರ್ಡಿಕ್ ಶೃಂಗ

ಓಸ್ಲೋದಲ್ಲಿ ಮೇ 19ರಂದು ನಡೆಯಲಿರುವ 3ನೇ ಭಾರತ-ನಾರ್ಡಿಕ್ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಭಾಗವಹಿಸಲಿದ್ದಾರೆ. ಅಲ್ಲಿ ಅವರು ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳು, ರಾಷ್ಟ್ರಗಳ ನಡುವಿನ ಸಹಕಾರಗಳ ಕುರಿತು ಅಲ್ಲಿನ ಉನ್ನತ ಮಟ್ಟದ ಅಧಿಕಾರಿಗಳ ಜತೆ ಚರ್ಚಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ, ಪ್ರಧಾನಿ ಮೋದಿ ಅವರು ನಾರ್ವೆ ಪ್ರಧಾನಿಯೊಂದಿಗೆ ಭಾರತ - ನಾರ್ವೆ ವ್ಯವಹಾರ ಮತ್ತು ಸಂಶೋಧನಾ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಶೃಂಗಸಭೆಯು ವ್ಯಾಪಾರ, ಶುದ್ಧ ಇಂಧನ, ತಂತ್ರಜ್ಞಾನ, ನಾವೀನ್ಯತೆ ಮತ್ತು ಸುಸ್ಥಿರ ಅಭಿವೃದ್ಧಿಯಂತಹ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸುವ ನಿರೀಕ್ಷೆಯಿದೆ.



ರೈಲ್ವೆ ಸಚಿವಾಲಯದಿಂದ ಮುಂಬೈ -ಅಹಮದಾಬಾದ್ ನಡುವೆ ಚಲಿಸುವ ದೇಶದ ಮೊದಲ ಬುಲೆಟ್ ರೈಲಿನ ಮೊದಲ ಚಿತ್ರ ಅನಾವರಣ.

ನಕಲಿ ಮರ!

- ಭೋಪಾಲ್‌ನ ಆಲ್ಗೀ ಟ್ರೀ 25 ನೈಸರ್ಗಿಕ ಮರಗಳಂತೆ ಕೆಲಸ ಮಾಡುತ್ತದೆ.
- ಈ ವ್ಯವಸ್ಥೆ ವಾರ್ಷಿಕವಾಗಿ 1.5 ಟನ್ ಕಾರ್ಬನ್ ಡೈಆಕ್ಸೈಡ್ ಹೀರಿಕೊಳ್ಳುತ್ತದೆ.
- ಸೌರಶಕ್ತಿ ಚಾಲಿತ ಈ ಘಟಕ, ಪಿಎಂ 2.5 ಕಣಗಳನ್ನು ಶೇ.45-55ರಷ್ಟು ಕಡಿಮೆ ಮಾಡುತ್ತದೆ.
- ಈ ಲಂಬ ರಚನೆ, ನೀರು ಮತ್ತು ಸೂಕ್ಷ್ಮ ಪಾಚಿಗಳ ದ್ಯುತಿಸಂಶ್ಲೇಷಣೆಯನ್ನು ಬಳಸುತ್ತದೆ.
- ಈ ತಂತ್ರಜ್ಞಾನ, ನೈಸರ್ಗಿಕ ಕಾಡುಗಳಿಗೆ ಪರ್ಯಾಯವಲ್ಲ, ಪೂರಕವಷ್ಟೇ

ಭೋಪಾಲ್‌ನಲ್ಲಿ ಭಾರತದ ಮೊದಲ ಪಾಚಿ ಮರ ಅನಾವರಣ



ನಗರ ಪ್ರದೇಶಗಳಲ್ಲಿನ ಮಾಲಿನ್ಯ ನಿಯಂತ್ರಿಸಲು ಮತ್ತು ವಾಯು ಗುಣಮಟ್ಟ ಸುಧಾರಿಸಲು ಭಾರತದ ಮೊದಲ ''ಪಾಚಿ ಮರ''ವನ್ನು (ಆಲ್ಗೀ ಟ್ರೀ) ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಅನಾವರಣಗೊಳಿಸಲಾಗಿದೆ. ಇದು ಕಾರ್ಬನ್ ಡೈ ಆಕ್ಸೈಡ್ ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುವ ಆಧುನಿಕ ಜೈವಿಕ-ಎಂಜಿನಿಯರಿಂಗ್ ರಚನೆ. ಭವಿಷ್ಯದ ತಂತ್ರಜ್ಞಾನದಂತಿರುವ ಈ ಹಸಿರು-ತಂತ್ರಜ್ಞಾನದ ಆವಿಷ್ಕಾರ, ಬರೋಬ್ಬರಿ 25 ನೈಸರ್ಗಿಕ ಮರಗಳು ನಿರ್ವಹಿಸುವ ಕೆಲಸವನ್ನು ಏಕಾಂಗಿಯಾಗಿ ಮಾಡುತ್ತದೆ ಎಂದು ವರದಿಯಾಗಿದ್ದು, ಕಾಡುಗಳನ್ನು ಬೆಳೆಸಲು ಸ್ಥಳಾವಕಾಶದ ಕೊರತೆ ಎದುರಿಸುತ್ತಿರುವ ನಗರಗಳಿಗೆ ಇದು ಆಶಾಕಿರಣವಾಗಲಿದೆ ಎನ್ನಲಾಗಿದೆ.

ನಗರ ಮಾಲಿನ್ಯ ನಿಯಂತ್ರಣಕ್ಕೆ ರಾಮಬಾಣ!

ತಾಂತ್ರಿಕ ವೈಶಿಷ್ಟ್ಯಗಳು ಮತ್ತು ಪರಿಸರದ ಮೇಲಿನ ಪ್ರಭಾವ

ಭೋಪಾಲ್‌ನಲ್ಲಿ ಅಳವಡಿಸಲಾಗಿರುವ ಈ ಒಂದು ಘಟಕ, ವಾರ್ಷಿಕವಾಗಿ ಸುಮಾರು 1.5 ಟನ್ ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಸುಮಾರು 1 ಟನ್ ಆಮ್ಲಜನಕವನ್ನು ಉತ್ಪಾದಿಸುತ್ತದೆ. ಸಂಪೂರ್ಣವಾಗಿ ಸೌರಶಕ್ತಿಯಿಂದ ಕಾರ್ಯನಿರ್ವಹಿಸುವ ಈ ಕಡಿಮೆ-ಇಂಧನ ಪರಿಸರ ವ್ಯವಸ್ಥೆ, ಸುತ್ತಮುತ್ತಲಿನ ಗಾಳಿಯನ್ನು ನಿರಂತರವಾಗಿ ಸಂಸ್ಕರಿಸಿ ಧೂಳು ಮತ್ತು ಕಣಗಳನ್ನು ಹಿಡಿದಿಟ್ಟುಕೊಳ್ಳುತ್ತದೆ. ಈ ತಂತ್ರಜ್ಞಾನ 15 ಮೀಟರ್ ವ್ಯಾಪ್ತಿಯಲ್ಲಿ ಪಿಎಂ 2.5 ಕಣಗಳನ್ನು ಶೇ.45ರಿಂದ 55ರಷ್ಟು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಗಿಡಗಳನ್ನು ನೆಟ್ಟು ಬೆಳೆಸಲು ಸ್ಥಳಾವಕಾಶವಿಲ್ಲದ ಜನದಟ್ಟಣೆಯ ರಸ್ತೆಬದಿಗಳು ಮತ್ತು ಸಾರ್ವಜನಿಕ ಸ್ಥಳಗಳಿಗೆ ಈ ವ್ಯವಸ್ಥೆ ಹೆಚ್ಚು ಪ್ರಾಯೋಗಿಕವಾಗಿದೆ.

ಜೈವಿಕ-ಎಂಜಿನಿಯರಿಂಗ್ ವ್ಯವಸ್ಥೆ

ಹೆಸರೇ ಸೂಚಿಸುವಂತೆ ಇದು ಕೇವಲ ಮರವಲ್ಲ, ಬದಲಿಗೆ ನೀರು ಮತ್ತು ಸೂಕ್ಷ್ಮ ದರ್ಶಕೀಯ ಪಾಚಿಗಳಿಂದ (ಮೈಕ್ರೋ ಆಲ್ಗೀ) ತುಂಬಿದ ಲಂಬವಾದ ಜೈವಿಕ-ಎಂಜಿನಿಯರಿಂಗ್ ರಚನೆ. ಇದನ್ನು ಜೀವಂತ ವಾಯು ಸಂಸ್ಕಾರಕ (ಏರ್ ಪ್ಯೂರಿಫೈಯರ್) ಎಂದೂ ಕರೆಯಬಹುದು. ಕಲುಷಿತ ಗಾಳಿಯನ್ನು ಈ ವ್ಯವಸ್ಥೆ ತನ್ನೊಳಗೆ ಎಳೆದುಕೊಳ್ಳುತ್ತದೆ, ಅಲ್ಲಿರುವ ಸೂಕ್ಷ್ಮ ಪಾಚಿಗಳು ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಳ್ಳುತ್ತವೆ. ನಂತರ ದ್ಯುತಿಸಂಶ್ಲೇಷಣೆ ಪ್ರಕ್ರಿಯೆಯ ಮೂಲಕ ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಈ ಮೂಲಕ ಮಾಲಿನ್ಯವನ್ನು ಉಸಿರಾಡಿ, ಶುದ್ಧ ಗಾಳಿಯನ್ನು ಹೊರಬಿಡುವ ಮೂಲಕ ಸ್ಥಳೀಯ ವಾಯು ಗುಣಮಟ್ಟವನ್ನು ಸುಧಾರಿಸುತ್ತದೆ.



ಅಭಿವೃದ್ಧಿ ಹೇಗಾಯಿತು?

ಲಿಕ್ವಿಡ್ ಟ್ರೀ ಅಥವಾ ಬಯೋರಿಯಾಕ್ಟರ್ ಎಂದು ಕರೆಯಲಾಗುವ ಈ ಪಾಚಿ ಮರದ ತಂತ್ರಜ್ಞಾನವನ್ನು ನಗರಾಭಿವೃದ್ಧಿ ಮತ್ತು ಜೈವಿಕ ತಂತ್ರಜ್ಞಾನವನ್ನು ಸಂಯೋಜಿಸುವ ಉದ್ದೇಶದಿಂದ ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ. ಇದರ ಮೊದಲ ಪ್ರಮುಖ ಮಾದರಿಯನ್ನು ಬೆಲ್‌ಗ್ರೇಡ್ ವಿಶ್ವವಿದ್ಯಾಲಯದ ಮಲ್ಟಿಡಿಸಿಪ್ಲಿನರಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಡಾ. ಇವಾನ್ ಸ್ಪಾಸೊಜೆವಿಕ್ ಮತ್ತು ವಿಜ್ಞಾನಿಗಳ ತಂಡ, ಲಿಕ್ವಿಡ್ 3 ಹೆಸರಿನಲ್ಲಿ ವಿನ್ಯಾಸಗೊಳಿಸಿತು. ಬಳಿಕ, ಜಾಗತಿಕವಾಗಿ ವಿವಿಧ ಪರಿಸರ ಎಂಜಿನಿಯರಿಂಗ್ ಸ್ಟಾರ್ಟ್ ಅಪ್‌ಗಳು ಮತ್ತು ಸಂಶೋಧನಾ ಸಂಸ್ಥೆಗಳು ಈ ಮೂಲ ಪರಿಕಲ್ಪನೆಯನ್ನು ಅಳವಡಿಸಿಕೊಂಡು ಪ್ರಾದೇಶಿಕ ಮಾದರಿಗಳನ್ನು ತಯಾರಿಸಿವೆ. ಭೋಪಾಲ್‌ನಲ್ಲಿ ಅಳವಡಿಸಲಾಗಿರುವ ಸಾಧನವೂ ಇದೇ ತಂತ್ರಜ್ಞಾನವನ್ನು ಆಧರಿಸಿದೆ.

ತಯಾರಿ, ಬಳಕೆ ಅನುಮೋದನೆ

ಈ ಸಾಧನದ ಬಾಹ್ಯ ರಚನೆಯನ್ನು ನಗರದ ಕಠಿಣ ಹವಾಮಾನವನ್ನು ತಡೆದುಕೊಳ್ಳುವ ಸಲುವಾಗಿ ಉತ್ತಮ ಗುಣಮಟ್ಟದ ಸ್ಟೇನ್‌ಲೆಸ್ ಸ್ಟೀಲ್, ಪ್ಲೆಕ್ಸಿ ಗ್ಲಾಸ್ ಅಥವಾ ಬಲವರ್ಧಿತ ಗಾಜಿನಂತಹ ಬಾಳಿಕೆ ಬರುವ ಸಾಮಗ್ರಿಗಳಿಂದ ತಯಾರಿಸಲಾಗುತ್ತದೆ. ಇದರ ಒಳಭಾಗದಲ್ಲಿ ನೀರಿನ ಪಂಪ್, ಸೌರಶಕ್ತಿ ಚಾಲಿತ ವಿದ್ಯುತ್ ವ್ಯವಸ್ಥೆ ಮತ್ತು ಸಿಹಿನೀರಿನ ಏಕಕೋಶೀಯ ಸೂಕ್ಷ್ಮ ಪಾಚಿಗಳನ್ನು ಅಳವಡಿಸಲಾಗಿರುತ್ತದೆ. ಈ ವ್ಯವಸ್ಥೆಯನ್ನು ಪ್ರಸ್ತುತ ಪ್ರಾಯೋಗಿಕ ಹವಾಮಾನ ತಂತ್ರಜ್ಞಾನ ಮತ್ತು ಪೈಲಟ್ ಯೋಜನೆ ಎಂದು ಪರಿಗಣಿಸಲಾಗಿದೆ. ನಿರ್ದಿಷ್ಟ ಮುನಿಸಿಪಲ್ ವಲಯಗಳಲ್ಲಿ ಇದನ್ನು ಅಳವಡಿಸಲು ಸ್ಥಳೀಯ ಸರ್ಕಾರಗಳು ಬೆಂಬಲ ನೀಡಿದ್ದರೂ, ಇದು ಇನ್ನೂ ನೈಜ ಪರಿಸ್ಥಿತಿಯಲ್ಲಿ ಅದರ ಕಾರ್ಯನಿರ್ವಹಣೆಯ ಪರೀಕ್ಷೆಯ ಹಂತದಲ್ಲಿದೆ.

ನೈಸರ್ಗಿಕ ಪರಿಸರ ವ್ಯವಸ್ಥೆಗೆ ಪೂರಕ ತಂತ್ರಜ್ಞಾನ

ಪರಿಸರ ತಜ್ಞರ ಪ್ರಕಾರ, ಇದು ಕೇವಲ ಪ್ರಾಯೋಗಿಕ ಹವಾಮಾನ ತಂತ್ರಜ್ಞಾನವಾಗಿದ್ದು, ಅಸ್ತಿತ್ವದಲ್ಲಿರುವ ನೈಸರ್ಗಿಕ ಮರಗಳಿಗೆ ಪೂರಕವಾಗಿ ಕೆಲಸ ಮಾಡಬಹುದೇ ಹೊರತು ಅವುಗಳಿಗೆ ಪರ್ಯಾಯವಲ್ಲ. ನೈಸರ್ಗಿಕ ಕಾಡುಗಳು ಮತ್ತು ನೈಜ ಮರಗಳು ಜೀವವೈವಿಧ್ಯತೆಯ ಮೇಲೆ ಹೆಚ್ಚಿನ ಪ್ರಭಾವ ಬೀರುವುದರಿಂದ ಅವುಗಳ ಸ್ಥಾನವನ್ನು ಯಾವುದೇ ಯಂತ್ರ ತುಂಬಲು ಸಾಧ್ಯವಿಲ್ಲ. ಕೃತಕ ವಿಧಾನಗಳಿಗಿಂತ ನೈಸರ್ಗಿಕ ಪರಿಸರ ವ್ಯವಸ್ಥೆಯ ಕೊಡುಗೆಯೇ ಹೆಚ್ಚು ಮಹತ್ವದ್ದು. ಮಾಲಿನ್ಯದ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಇಂತಹ ಪರಿಸರಸ್ನೇಹಿ ತಂತ್ರಜ್ಞಾನಗಳು ಶೀಘ್ರದಲ್ಲೇ ಭಾರತದ ಇತರ ನಗರಗಳಿಗೂ ವಿಸ್ತರಣೆಯಾಗುವ ಸಾಧ್ಯತೆಯಿದೆ.



ನಗರಗಳ ಹವಾಮಾನ ಸಮಸ್ಯೆಗಳಿಗೆ ಪರಿಹಾರ?

ಭಾರತದ ನಗರಗಳು ಹೆಚ್ಚುತ್ತಿರುವ ತಾಪಮಾನ, ಹದಗೆಡುತ್ತಿರುವ ವಾಯು ಗುಣಮಟ್ಟ, ಬಿಸಿಗಾಳಿ ಮತ್ತು ಕ್ಷೀಣಿಸುತ್ತಿರುವ ಹಸಿರು ಹೊದಿಕೆಯ ಸವಾಲುಗಳನ್ನು ಎದುರಿಸುತ್ತಿರುವ ಸಮಯದಲ್ಲಿ ಈ ತಂತ್ರಜ್ಞಾನ ಗಮನ ಸೆಳೆದಿದೆ. ವಾಹನಗಳ ಹೊರಸೂಸುವಿಕೆ ಮತ್ತು ನಿರ್ಮಾಣ ಚಟುವಟಿಕೆಗಳಿಂದಾಗಿ ಪಿಎಂ 2.5 ಮತ್ತು ಪಿಎಂ 10 ಮಾಲಿನ್ಯಕಾರಕಗಳ ಮಟ್ಟ ನಿರಂತರವಾಗಿ ಹೆಚ್ಚುತ್ತಿದೆ. ಇಂತಹ ದಟ್ಟಣೆಯ ಪ್ರದೇಶಗಳಲ್ಲಿ ಸಾವಿರಾರು ಮರಗಳನ್ನು ನೆಡುವುದು ಪ್ರಾಯೋಗಿಕವಲ್ಲ. ಹೀಗಾಗಿ, ಈ ಪಾಚಿ ಆಧಾರಿತ ವ್ಯವಸ್ಥೆ ಸಾಂಪ್ರದಾಯಿಕ ಹಸಿರೀಕರಣ ವಿಧಾನಗಳಿಗೆ ಪೂರಕವಾಗಿ ತಂತ್ರಜ್ಞಾನ-ಸಂಯೋಜಿತ ಪರಿಹಾರ ಒದಗಿಸುತ್ತದೆ. ಈ ನವೀನ ಶೈಲಿ ನೆಟ್ಟಿಗರಲ್ಲಿ ತೀವ್ರ ಆಸಕ್ತಿ ಕೆರಳಿಸಿದೆ.

ಕಿರುಸುದ್ದಿ

ನ್ಯಾ.ಯಶ್ವಂತ್ ವಿರುದ್ಧ ಸ್ಪೀಕರ್‌ಗೆ ವರದಿ ಸಲ್ಲಿಕೆ



ಬೆಂಗಳೂರು: ದಿಲ್ಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಯಶ್ವಂತ್ ವರ್ಮಾ ಅವರ ಮೇಲಿನ ಆರೋಪ ಗಳ ಕುರಿತು ತನಿಖೆ ನಡೆಸಲು ರಚಿಸಲಾಗಿದ್ದ ಉನ್ನತಮಟ್ಟದ ನ್ಯಾಯಮೂರ್ತಿಗಳ ತನಿಖಾ ಸಮಿತಿಯು ತನ್ನ ಸಮಗ್ರ ವರದಿಯನ್ನು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಸೋಮವಾರ ಸಂಸತ್ ಭವನದಲ್ಲಿ ಅಧಿಕೃತವಾಗಿ ಹಸ್ತಾಂತರಿಸಿದೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಹಾಗೂ ತನಿಖಾ ಸಮಿತಿಯ ಅಧ್ಯಕ್ಷರಾದ ಅರವಿಂದ್ ಕುಮಾರ್, ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯ ಮೂರ್ತಿ ಚಂದ್ರಶೇಖರ್ ಮತ್ತು ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲರಾದ ಬಿ.ವಿ. ಆಚಾರ್ಯ ಅವರು ಸಂಸತ್ ಭವನದಲ್ಲಿ ಲೋಕಸಭಾ ಸ್ಪೀಕರ್‌ರನ್ನು ಭೇಟಿ ಮಾಡಿ ಈ ವರದಿಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ತನಿಖಾ ಸಮಿತಿಯ ಕಾರ್ಯದರ್ಶಿಯಾದ ಗಣಪತಿ ಭಟ್ ಅವರು ಉಪಸ್ಥಿತರಿದ್ದರು. ನ್ಯಾಯಾಧೀಶರ (ತನಿಖೆ) ಕಾಯ್ದೆ, 1968ರ ಶಾಸನಬದ್ಧ ನಿಯಮಾವಳಿಗಳಿಗೆ ಅನುಗುಣವಾಗಿ ಈ ವರದಿಯನ್ನು ಸಿದ್ಧಪಡಿಸಲಾಗಿದ್ದು, ಮುಂಬರುವ ದಿನಗಳಲ್ಲಿ ಇದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸಲಾಗುವುದು ಎಂದು ತಿಳಿದುಬಂದಿದೆ.

ಅಫ್ಘಾನಿಸ್ತಾನದಲ್ಲಿ ಬಾಲ್ಯ ವಿವಾಹ ಕಾನೂನು ಬದ್ಧ

ಕಾಬೂಲ್: ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಸರ್ಕಾರವು ಬಾಲ್ಯವಿವಾಹವನ್ನು ಕಾನೂನುಬದ್ಧಗೊಳಿಸಿದೆ. ವಿವಾಹ, ವಿಚ್ಛೇದನ, ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಹೊಸ ಕುಟುಂಬ ಕಾನೂನನ್ನು ತಾಲಿಬಾನ್ ಸರ್ಕಾರ ಜಾರಿಗೆ ತಂದಿದೆ. ಹೊಸ ನಿಯಮದ ಪ್ರಕಾರ ಪ್ರಾಯಕ್ಕೆ ಬಂದ ಕನ್ಯೆ ವಿವಾಹ ಪ್ರಸ್ತಾಪಕ್ಕೆ ಮೌನವಾಗಿದ್ದರೆ, ಅದನ್ನು ಆಕೆಯ ಸಮ್ಮತಿ ಎಂದು ಪರಿಗಣಿಸಲಾಗುತ್ತದೆ. ಆದರೇ ಒಬ್ಬ ಹುಡುಗ ಅಥವಾ ಈ ಮೊದಲೇ ವಿವಾಹವಾಗಿದ್ದ ಮಹಿಳೆಯ ಮೌನವನ್ನು ಸಮ್ಮತಿ ಎಂದು ಪರಿಗಣಿಸಲಾಗುವುದಿಲ್ಲ.

ಮಹಾ, ಉ.ಪ್ರ.ದಲ್ಲಿ ಅಪಘಾತ: 21 ಸಾವು

ಮುಂಬೈ/ಲಖನೌ: ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ಸೋಮವಾರ ಸಂಭವಿಸಿದ ಎರಡು ಭೀಕರ ರಸ್ತೆ ಅಪಘಾತಗಳಲ್ಲಿ ಒಟ್ಟು 21 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಮುಂಬೈ-ಅಹಮದಾಬಾದ್ ಹೆದ್ದಾರಿಯಲ್ಲಿ ನಿಶ್ಚಿತಾರ್ಥ ಸಮಾರಂಭಕ್ಕೆ ತೆರಳುತ್ತಿದ್ದ ಟೆಂಪೋ ಮತ್ತು ವೇಗವಾಗಿ ಬಂದ ಕಂಟೈನರ್ ಟ್ರಕ್ ನಡುವೆ ಡಿಕ್ಕಿ ಸಂಭವಿಸಿ ಕನಿಷ್ಠ 11 ಮಂದಿ ಮೃತಪಟ್ಟಿದ್ದಾರೆ. 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಅವರನ್ನು ಕಾಸಾ ಉಪಜಿಲ್ಲಾ ಆಸ್ಪತ್ರೆ ಸೇರಿದಂತೆ ಸಮೀಪದ ವೈದ್ಯಕೀಯ ಕೇಂದ್ರಗಳಿಗೆ ದಾಖಲಿಸಲಾಗಿದೆ.

ದಹಾನು ತಾಲ್ಲೂಕಿನ ಧನಿವಾರಿ ಗ್ರಾಮದ ಬಳಿ ಈ ದುರ್ಘಟನೆ ನಡೆದಿದೆ. ಅಪಘಾತಕ್ಕೀಡಾದ ಟೆಂಪೋದಲ್ಲಿ 50ಕ್ಕೂ ಹೆಚ್ಚು ಮಂದಿ ಪ್ರಯಾಣಿಸುತ್ತಿದ್ದರು. ಡಿಕ್ಕಿಯ ತೀವ್ರತೆಗೆ ಟೆಂಪೋ ಮತ್ತು ಕಂಟೈನರ್ ಎರಡೂ ಉರುಳಿ ಬಿದ್ದಿವೆ. ಅತಿವೇಗ, ರಸ್ತೆ ಕಿರಿದಾಗಿರುವುದು ಹಾಗೂ ಚಾಲಕ ನಿಯಂತ್ರಣ ಕಳೆದುಕೊಂಡಿರುವುದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ಇನ್ನೊಂದೆಡೆ, ಉತ್ತರ ಪ್ರದೇಶದ ಲಖಿಂಪುರ್ ಖೇರಿಯಲ್ಲಿ ವ್ಯಾನ್ ಮತ್ತು ಟ್ರಕ್ ಮುಖಾಮುಖಿ ಡಿಕ್ಕಿಯಾಗಿ 10 ಮಂದಿ ಮೃತಪಟ್ಟಿದ್ದಾರೆ. ವ್ಯಾನ್‌ನಲ್ಲಿ ಪ್ರಯಾಣಿಸುತ್ತಿದ್ದ 9 ಮಂದಿ ಹಾಗೂ ಚಾಲಕ ಮೃತಪಟ್ಟಿದ್ದಾರೆ.

ಅಪಘಾತದ ಬಗ್ಗೆ ಸಂತಾಪ ಸೂಚಿಸಿರುವ ಸಿಎಂ ಯೋಗಿ ಆದಿತ್ಯನಾಥ್ ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ್ದು, ಗಾಯಾಳುಗಳಿಗೆ ತಕ್ಷಣ ಚಿಕಿತ್ಸೆ ಒದಗಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಎಲ್ಲ ಹೈಕೋರ್ಟ್‌ಗಳಲ್ಲಿ ವರ್ಚುವಲ್ ವಿಚಾರಣೆ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿಯಿಂದ ಹೆಚ್ಚುತ್ತಿರುವ ವೆಚ್ಚ ಹಾಗೂ ಇಂಧನ ಬಳಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ದೇಶದ ಎಲ್ಲಾ ಹೈಕೋರ್ಟ್‌ಗಳಲ್ಲಿ ಪ್ರತಿ ಸೋಮವಾರ ಮತ್ತು ಶುಕ್ರವಾರ ವರ್ಚುವಲ್ ವಿಚಾರಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮನವಿ ಮಾಡಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಸುಪ್ರೀಂ ಕೋರ್ಟ್ ಈಗಾಗಲೇ ಮೇ 15ರಿಂದ ವಾರದಲ್ಲಿ ಎರಡು ದಿನ ವಿಡಿಯೋ ಕಾನ್ಫರೆನ್ಸ್ ಮೂಲಕ ಅರ್ಜಿಗಳ ವಿಚಾರಣೆ ನಡೆಸಲು ನಿರ್ಧರಿಸಿದೆ ಎಂದು ತಿಳಿಸಿದರು. ಇಂಧನ ಉಳಿತಾಯದ ಭಾಗವಾಗಿ ನ್ಯಾಯಾಧೀಶರು ಕಾರ್ ಪೂಲಿಂಗ್ ವ್ಯವಸ್ಥೆ ಅನುಸರಿಸುವುದಕ್ಕೂ ಒಮ್ಮತ ವ್ಯಕ್ತಪಡಿಸಿದ್ದಾರೆ ಎಂದರು.

ಪ್ರಧಾನಿ ನರೇಂದ್ರ ಮೋದಿ ನೀಡಿರುವ ಅನಗತ್ಯ ವೆಚ್ಚ ಕಡಿತಗೊಳಿಸುವ ಕರೆಗೆ ಸ್ಪಂದಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದೆ ಸಿಜೆಐ ಸೂರ್ಯಕಾಂತ್ ಅವರು, ಸಾಧ್ಯವಾದಷ್ಟು ಬೇಗ ಎಲ್ಲಾ ಹೈಕೋರ್ಟ್‌ಗಳು ಈ ವಿಧಾನ ಅನುಸರಿಸಬೇಕು ಎಂದು ವಿನಂತಿಸಿದರು. ವಿಚಾರಣೆಯ ವೇಳೆ ಹಿರಿಯ ವಕೀಲ ಮುಕುಲ್ ರೋಹಟಗಿ, ಆನ್‌ಲೈನ್ ವಿಚಾರಣೆ ವ್ಯವಸ್ಥೆಯನ್ನು ಶ್ಲಾಘಿಸಿ, ಡಿಜಿಟಲ್ ಮೂಲಕ ನಡೆದ ವಿಚಾರಣೆಗಳು ಯಾವುದೇ ಅಡಚಣೆ ಇಲ್ಲದೆ ಸುಗಮವಾಗಿ ನಡೆದವು ಎಂದು ಹೇಳಿದರು. ನ್ಯಾಯಮೂರ್ತಿಗಳು ಸಹ ತಾಳ್ಮೆಯಿಂದ ಕಾರ್ಯನಿರ್ವಹಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು. ಇದಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಕೂಡ ಬೆಂಬಲ ವ್ಯಕ್ತಪಡಿಸಿದರು.

ಇಸ್ರೇಲ್‌ಗೆ ಅಮೆರಿಕದ ಭಾರೀ ಶಸ್ತ್ರಾಸ್ತ್ರ ರವಾನೆ

ಟೆಲ್ ಅವಿವ್: ಜರ್ಮನಿಯಲ್ಲಿರುವ ಅಮೆರಿಕದ ಸೈನಿಕ ನೆಲೆಗಳಿಂದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಹೊತ್ತ ಹಲವು ಅಮೆರಿಕನ್ ವಿಮಾನಗಳು ಸೋಮವಾರ ಇಸ್ರೇಲ್‌ನ ಟೆಲ್ ಅವಿವ್ ನಗರಕ್ಕೆ ಆಗಮಿಸಿವೆ ಎಂದು ವರದಿಯಾಗಿದೆ. ಈ ಬೆಳವಣಿಗೆ ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆಯನ್ನು ಹುಟ್ಟುಹಾಕಿದೆ.

ಅಲ್ ಜಜೀರಾ ವರದಿ ಪ್ರಕಾರ, ಇಸ್ರೇಲ್‌ನ ಚಾನೆಲ್ 13 ಈ ಮಾಹಿತಿಯನ್ನು ಬಹಿರಂಗಪಡಿಸಿದ್ದು, ಕಳೆದ 24 ಗಂಟೆಗಳಲ್ಲಿ ನಡೆದ ಈ ಸೈನಿಕ ಚಟುವಟಿಕೆ ಇರಾನ್ ವಿರುದ್ಧದ ಮುಂದಿನ ಯುದ್ಧ ಸಿದ್ಧತೆಯ ಭಾಗವಾಗಿರಬಹುದು ಎಂದು ವಿಶ್ಲೇಷಿಸಲಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ವಿರುದ್ಧ ಮತ್ತಷ್ಟು ಕಠಿಣ ಕ್ರಮ ಕೈಗೊಳ್ಳುವ ಸೂಚನೆ ನೀಡಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಮಧ್ಯಪ್ರಾಚ್ಯದಲ್ಲಿ ತಿಂಗಳುಗಳಿಂದ ಮುಂದುವರಿದಿರುವ ಸಂಘರ್ಷದ ನಡುವೆ, ಯುರೇನಿಯಂ ಸಂಗ್ರಹ, ಆರ್ಥಿಕ ನಿರ್ಬಂಧ ತೆರವು ಹಾಗೂ ಯುದ್ಧ ಅಂತ್ಯಕ್ಕೆ ಸಂಬಂಧಿಸಿದ ಮಾತುಕತೆಗಳು ಸ್ಥಗಿತಗೊಂಡಿವೆ. ಇದೇ ವೇಳೆ ಟ್ರಂಪ್ ಅವರು ಇರಾನ್‌ಗೆ ತೀವ್ರ ಎಚ್ಚರಿಕೆ ನೀಡಿದ್ದು, ಸಮಯ ವೇಗವಾಗಿ ಕಳೆಯುತ್ತಿದೆ. ಇರಾನ್ ತಕ್ಷಣ ನಿರ್ಧಾರ ಕೈಗೊಳ್ಳಬೇಕು, ಇಲ್ಲವಾದರೆ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಲಿದೆ ಎಂದು ತಮ್ಮ ಟ್ರುತ್ ಸೋಶಿಯಲ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಈ ಬೆಳವಣಿಗೆಗಳಿಂದ ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತಷ್ಟು ಉದ್ವಿಗ್ನಗೊಳ್ಳುವ ಭೀತಿ ವ್ಯಕ್ತವಾಗಿದೆ.

ನೀಟ್: ಇನ್ನೋರ್ವ ಆರೋಪಿ ಬಂಧನ

ಹೊಸದಿಲ್ಲಿ: ನೀಟ್-ಯುಜಿ 2026 ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ(ಸಿಬಿಐ) ಮಹಾರಾಷ್ಟ್ರದ ಲಾತೂರಿನ ರೇಣುಕಾಯ್ ಕೆಮಿಸ್ಟ್ರಿ ಕ್ಲಾಸ್ (ಆರ್‌ಸಿಸಿ) ಕೋಚಿಂಗ್ ಇನ್ಸ್ಟಿಟ್ಯೂಟ್ ಪ್ರಾಧ್ಯಾಪಕ ಮತ್ತು ಮಾಲೀಕ ಶಿವರಾಜ್ ಮೋಟೆಗಾಂವ್ಕರ್ ಎಂಬ ಮತ್ತೊಬ್ಬ ಪ್ರಮುಖ ಆರೋಪಿಯನ್ನು ಬಂಧಿಸಿದೆ. ಈ ಪ್ರಕರಣದಲ್ಲಿ ಇದುವರೆಗೆ ಹತ್ತು ಜನರನ್ನು ಬಂಧಿಸಲಾಗಿದೆ. ಮೋಟೆಗಾಂವ್ಕರನ್ನು ಸಿಬಿಐ 10 ದಿನಗಳ ಕಸ್ಟಡಿಯನ್ನು ಕೋರಿದ್ದು, ವಿಶೇಷ ಸಿಬಿಐ ನ್ಯಾಯಾಧೀಶ ಅಜಯ್ ಗುಪ್ತಾ ಅವರು ಆರೋಪಿಯನ್ನು 9 ದಿನಗಳ ಕಸ್ಟಡಿ ವಿಚಾರಣೆಗೆ ಅನುಮತಿ ನೀಡಿದ್ದಾರೆ. ಸಿಬಿಐ ತನ್ನ ರಿಮಾಂಡ್ ಅರ್ಜಿಯಲ್ಲಿ, ಶಿವರಾಜ್ ರಘುನಾಥ್ ಮೋಟೆಗಾಂಕರ್ ನೀಟ್-ಯುಜಿ ಪರೀಕ್ಷೆಯ ಪ್ರಶ್ನೆಗಳು-2026 ಸೋರಿಕೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಇತರ ಆರೋಪಿಗಳೊಂದಿಗೆ ಪಿತೂರಿಯಲ್ಲಿ, ಅವರು ರಸಾಯನಶಾಸ್ತ್ರದ ಪ್ರಶ್ನೆಗಳನ್ನು ಮತ್ತು ಪರೀಕ್ಷೆಯ ಉತ್ತರಗಳನ್ನು ಪರೀಕ್ಷೆಗೆ ಮುಂಚಿತವಾಗಿ ಪಡೆದುಕೊಂಡಿದ್ದಾರೆ ಎಂದು ಹೇಳಿದೆ. ಈ ಬೆನ್ನಲ್ಲೇ ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಸುಧಾರಣೆಗಳನ್ನು ಪರಿಶೀಲಿಸಲು ಸಂಸದೀಯ ಸಮಿತಿಯು ಸೋಮವಾರ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮುಖ್ಯಸ್ಥರಿಗೆ ಸಮನ್ಸ್ ಜಾರಿ ಮಾಡಿದೆ.

ಗಡಿ ನುಸುಳಿದ ಉದ್ದೇಶ ಮರೆತು ಕೂದಲು ಕಸಿ ಮಾಡಿಸಿಕೊಂಡ!

ಉಗ್ರ ಮಾನಸಿಕತೆ ಬದಲಿಸಿದ ಕಾಶ್ಮೀರ

ಶ್ರೀನಗರ: ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿ ನಡೆಸಲು ಯೋಜಿಸಿ ಗಡಿ ನುಸುಳಿ ಭಾರತಕ್ಕೆ ಬಂದಿದ್ದ ಪಾಕಿಸ್ತಾನ ಉಗ್ರನೊಬ್ಬ ತಾನು ಗಡಿನುಸುಳಿ ಬಂದ ಮೂಲ ಉದ್ದೇಶವನ್ನೇ ಬದಿಗಿಟ್ಟು ಶ್ರೀನಗರದಲ್ಲಿ ಕೂದಲು ಕಸಿ(ಹೈರ್ ಟ್ರಾನ್ಸ್‌ಪ್ಲಾಂಟ್) ಮಾಡಿಸಿಕೊಂಡಿರುವ ವಿಚಿತ್ರ ಪ್ರಕರಣ ಎನ್‌ಐಎ ತನಿಖೆಯಿಂದ ಬಹಿರಂಗಗೊಂಡಿದೆ. ಈತನನ್ನು ನಿಷೇಧಿತ ಸಂಘಟನೆಯ ಉಗ್ರ ಮೊಹಮ್ಮದ್ ಉಸ್ಮಾನ್ ಜಟ್ ಅಲಿಯಾಸ್ ಚೈನೀಸ್ ಎಂದು ಗುರುತಿಸಲಾಗಿದೆ.

ಕಳೆದ ತಿಂಗಳು ಶ್ರೀನಗರ ಪೊಲೀಸರಿಂದ ಬಂಧಿಸಲ್ಪಟ್ಟ ಉಸ್ಮಾನ್, ಜಮ್ಮು ಮತ್ತು ಕಾಶ್ಮೀರದ ಹೊರಗೆ ಸ್ಲೀಪರ್ ಸೆಲ್‌ಗಳನ್ನು ಸ್ಥಾಪಿಸುವ ಮೂಲಕ ಭಾರತದಲ್ಲಿ ಭಯೋತ್ಪಾದಕ ದಾಳಿಗಳನ್ನು ನಡೆಸುವ ಕಾರ್ಯ ತನಗೆ ವಹಿಸಲಾಗಿದೆ ಎಂದು ಎನ್‌ಐಎಯ ತನಿಖಾಧಿಕಾರಿಗಳಿಗೆ ತಿಳಿಸಿದ್ದಾನೆ. ವಿಚಾರಣೆಯ ವೇಳೆ ಉಸ್ಮಾನ್ ತಾನು ಗಡಿ ದಾಟಿದ ನಂತರ ಶ್ರೀನಗರದಲ್ಲಿ ಕೂದಲು ಕಸಿ ಮಾಡಿಸಿಕೊಂಡಿದ್ದನ್ನು ಬಹಿರಂಗಪಡಿಸಿದ್ದಾನೆ.

ತರಬೇತಿಯಲ್ಲಿ ನೀಡಿದ ಮಾಹಿತಿಗಿಂತ ಇಲ್ಲಿ ಭಿನ್ನ: ಕಾಶ್ಮೀರದ ದೈನಂದಿನ ಜೀವನದ ವಾಸ್ತವತೆಯನ್ನು ನೋಡಿದ ನಂತರ ತನ್ನ ಉದ್ದೇಶಗಳು ಸಂಪೂರ್ಣವಾಗಿ ಬದಲಾಗಿವೆ. ಇದು ಗಡಿಯಲ್ಲಿ ಲಷ್ಕರ್ ತರಬೇತಿಯ ವೇಳೆ ಆತನಿಗೆ ಹೇಳಿರುವಂತಹ ಜೀವನಶೈಲಿಗಿಂತ ಸಂಪೂರ್ಣವಾಗಿ ವಿರುದ್ಧವಾಗಿದೆ. ಆದ್ದರಿಂದ ಕೂದಲ ಕಸಿ ಕಾರ್ಯ ಮುಗಿದ ಕೂಡಲೇ ನಕಲಿ ಪಾಸ್‌ಪೋರ್ಟ್ ಮತ್ತು ಇತರ ದಾಖಲೆ ಮೂಲಕ ಪಾಕ್‌ಗೆ ಮರಳಲು ಯೋಜಿಸಿದ್ದೆ ಎಂದು ವಿಚಾರಣೆಯಲ್ಲಿ ಹೇಳಿಕೊಂಡಿದ್ದಾನೆ.

ಕಾಶ್ಮೀರ ಜೀವನ ಶೈಲಿಗೆ ಮನಸೋತ ಉಸ್ಮಾನ್

ಲಾಹೋರ್ ಮೂಲದ ಉಸ್ಮಾನ್, ಕಾಶ್ಮೀರದ ದೈನಂದಿನ ಜೀವನದ ವಾಸ್ತವತೆ ನೋಡಿದ ನಂತರ ತನ್ನ ಉದ್ದೇಶಗಳು ಸಂಪೂರ್ಣವಾಗಿ ಬದಲಾಗಿವೆ ಎಂದು ಎನ್‌ಐಎ ಅಧಿಕಾರಿಗಳಿಗೆ ತಿಳಿಸಿದ್ದಾನೆ. ಉಸ್ಮಾನ್ ಹಲವು ವರ್ಷಗಳಿಂದ ತೀವ್ರ ಕೂದಲು ಉದುರುವಿಕೆಯನ್ನು ಎದುರಿಸುತ್ತಿದ್ದ. ಇದು ಆತನ ಆತ್ಮಗೌರವದ ಮೇಲೆ ಆಳವಾದ ಪರಿಣಾಮ ಬೀರಿತ್ತು. ಕೂದಲ ಕಸಿ ಬಗ್ಗೆ ಈತ ಈ ಹಿಂದೆ ಕೇಳಿದ್ದರೂ, ಅವು ಪಶ್ಚಿಮದಲ್ಲಿ ಮಾತ್ರ ಲಭ್ಯವಿರುವ ಐಷಾರಾಮಿ ಎಂದು ಅವರು ಭಾವಿಸಿದ್ದ ಎಂದು ತನಿಖೆಯಲ್ಲಿ ಬಹಿರಂಗಗೊಂಡಿದೆ.



ಭಾರತ-ಸ್ವೀಡನ್ ನಡುವೆ ತಂತ್ರಜ್ಞಾನ ಸಹಭಾಗಿತ್ವಕ್ಕೆ ಹೊಸ ದಿಕ್ಕು

5 ವರ್ಷದಲ್ಲಿ ದ್ವಿಪಕ್ಷೀಯ ವ್ಯಾಪಾರ ದ್ವಿಗುಣ

ಗೊಥೆನ್‌ಬರ್ಗ್: ತಂತ್ರಜ್ಞಾನ, ತಂತ್ರಾತ್ಮಕ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಭಾರತ ಮತ್ತು ಸ್ವೀಡನ್ ದೇಶಗಳು ಕೃತಕ ಬುದ್ಧಿಮತ್ತೆ (ಎಐ), ಪ್ರಮುಖ ಖನಿಜಗಳು, ನವೀನತೆ, ವ್ಯಾಪಾರ ಹಾಗೂ ಸಾಂಸ್ಕೃತಿಕ ವಿನಿಮಯ ಸೇರಿದಂತೆ ಹಲವು ಕ್ಷೇತ್ರಗಳನ್ನು ಒಳಗೊಂಡ ಮಹತ್ವಾಕಾಂಕ್ಷಿ ಕಾರ್ಯತಂತ್ರದ ಮಾರ್ಗಸೂಚಿಯನ್ನು ಅನಾವರಣಗೊಳಿಸಿವೆ.

ಇಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟರ್‌ಸನ್ ದ್ವಿಪಕ್ಷೀಯ ಸಂಬಂಧಗಳನ್ನು ಪರಿಶೀಲಿಸಿ, ತಂತ್ರಾತ್ಮಕ, ಆರ್ಥಿಕ ಮತ್ತು ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸಿದರು. ಇದೇ ವೇಳೆ, ಮುಂದಿನ ಐದು ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ದ್ವಿಗುಣಗೊಳಿಸುವ ದಿಶೆಯಲ್ಲಿ ಕೆಲಸ ಮಾಡಲು ಉಭಯ ನಾಯಕರು ಒಪ್ಪಿಕೊಂಡರು.

ಹೊಸ ಒಪ್ಪಂದಗಳು ಮತ್ತು ವ್ಯಾಪಾರ: ಹೊಸ ಪಾಲುದಾರಿಕೆ, ಸ್ಥಿರತೆ ಮತ್ತು ಭದ್ರತೆ, ಮುಂದಿನ ಪೀಳಿಗೆಯ ಆರ್ಥಿಕ ಪಾಲುದಾರಿಕೆ, ಉದಯೋನ್ಮುಖ ತಂತ್ರಜ್ಞಾನಗಳು ಹಾಗೂ ಸುಸ್ಥಿರತೆ ಆಧಾರಿತ ಸಹಕಾರ ಎಂಬ ನಾಲ್ಕು ಪ್ರಮುಖ ಸ್ತಂಭಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲಿದೆ. ಕೃತಕ ಬುದ್ಧಿಮತ್ತೆ(ಎಐ), 6ಜಿ, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ವರ್ಚುವಲ್ ಜಂಟಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಸ್ಥಾಪಿಸಲು ಉಭಯ ದೇಶಗಳು ಭಾರತ-ಸ್ವೀಡನ್ ಜಂಟಿ ಆವಿಷ್ಕಾರ ಪಾಲುದಾರಿಕೆ 2.0 ಅನ್ನು ಪ್ರಾರಂಭಿಸಿವೆ. ಇದರೊಂದಿಗೆ ಕೈಗಾರಿಕೆಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಸಂಶೋಧನಾ ಸಂಸ್ಥೆಗಳನ್ನು ಜೋಡಿಸಲು ಭಾರತ-ಸ್ವೀಡನ್ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕಾರಿಡಾರ್ ಅಭಿವೃದ್ಧಿಗೂ ಅನುಮೋದನೆ ನೀಡಲಾಗಿದೆ.



ಜಾಗತಿಕ ಮತ್ತು ಪ್ರಾದೇಶಿಕ ಜಂಟಿ ಘೋಷಣೆಗಳು: ಖನಿಜ ಸಂಸ್ಕರಣಾ ಸಾಮರ್ಥ್ಯವನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಮೂಲಕ ಪೂರೈಕೆ ಸರಪಳಿಯನ್ನು ಬಲಪಡಿಸಲು ಉಭಯ ದೇಶಗಳು ಒಪ್ಪಿಕೊಂಡಿವೆ. ಜಂಟಿ ಹೇಳಿಕೆಯಲ್ಲಿ ಉಭಯ ನಾಯಕರು ಭಯೋತ್ಪಾದನೆಯನ್ನು ತೀವ್ರವಾಗಿ ಖಂಡಿಸಿದೆ.

ಪುರಸಭೆ ಕಾರ್ಯಾಲಯ, ನವಲಗುಂದ

ಕ್ರ.ಸಂ.ಪುಸನ/ಅಭಿವೃದ್ಧಿ/ಟೆಂಡರ್/ವಹಿ/2026-27/135 ದಿನಾಂಕ: 18-05-2026

ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ನವಲಗುಂದ ಪುರಸಭೆಯಿಂದ 2025-26 ನೇ ಸಾಲಿನ ಎಸ್.ಎಫ್.ಸಿ ಅನುದಾನದಡಿ(Grants for infrastructure of Upgraded ULBs and new ULBS from gps) ಇಂಡೆಂಟ್ ನಂ. **DMA/2026-27/BD/ WORK_ INDENT58205**, ಅಂದಾಜು ಮೊತ್ತ **ರೂ.712.94** ಲಕ್ಷಗಳು ನೇದ್ದರ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000 ಪ್ರಕಾರ ಆಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **19.06.2026** ರಂದು ನಿಗದಿಪಡಿಸಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

ಸೂಚನೆ: ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗಿದೆ.

ಸಹಿ/-
(ಎಸ್.ಪಿ. ಪೂಜಾರ)
ಮುಖ್ಯಾಧಿಕಾರಿ, ಪುರಸಭೆ, ನವಲಗುಂದ.

ವಾಸಾಸಂಇ/ಧಾ/ದಿಶಾ/194/2026-27

ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ, 582101

ಜಿಲ್ಲಾ : ಗದಗ ರಾಜ್ಯ : ಕರ್ನಾಟಕ
ದೂ:08372-259932 ಇ-ಮೇಲ್ : ka.gadag.betageri.cmc@gmail.com

ಸಂ.ಗಬೆನಸ/ತಾಂ.ವಿ/ವಹಿ/ಟೆಂಡರ್/2026-27 ದಿನಾಂಕ: 16-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ 2025-26ನೇ ಸಾಲಿನ ನಗರಸಭೆ ಅನುದಾನದಲ್ಲಿ 2ನೇ ಕರೆಯ ಒಟ್ಟು 03 ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ **ರೂ.39.51** ಲಕ್ಷಗಳಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, ಇಂಡೆಂಟ್ ನಂ:- **1)DMA/2025-26/OW/WORK_INDENT-56369 (SC) (CALL-2), (2) DMA/2026-27/OW/WORK_INDENT-57192 (CALL-2) (3) DMA/2026-27/OW/WORK_INDENT-57194 (CALL-2) http://kppp.karnataka.gov.in**ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ನಿಗಧಿ ಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	**25-05-2026 Up to 16.00 Hours**
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	**26-05-2026 Up to 16.30 Hours**

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ-
ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ

ವಾ.ಸಾ.ಸಂ.ಇ/ಗದಗ/69/ದೇಶಪಾಂಡೆಪಬ್ಲಿಸಿಟಿ/2026-27

CHANGE OF NAME

I, **KOMAL PRAKASH IRKAL** (Old Name) Resident at H no 01, Kuberpuram, Behind Oxford College, Kusugal road Keshwapur Hubballi -580023, in the Distret of Dharwad in Kamataka state, have changed my name as **KOMAL HABIB** (New Name) for all purposes affidavit Dated.: 18-05-2026 sworn before notary **M. B. Sunkad**.

CHANGE OF NAME

I, KALLANAGOWD BASANAGOWD PATIL (Old Name) R/o Hallikeri, Gadag have changed my name to **KALLANAGOUD PATIL (New Name)** Vide Affidavit Sworn Before Notary M.M. Hiremath on 15-05-2026

ಕಲಬುರಗಿಯಲ್ಲಿ ಪ್ರತಿಭಟನೆಗೆ ನಿರಾಕರಣೆ

ಬಾಲಕ ರಿತೇಶ್ ಸಾವು ಪ್ರಕರಣ | 150ಕ್ಕೂ ಹೆಚ್ಚು ಪೊಲೀಸರ ನಿಯೋಜನೆ

◆**ಕಲಬುರಗಿ:** ಚಿತ್ತಾಪುರ ತಾಲೂಕಿನ ಕೊಂಚೂರು ಡಿಗ್ಗಿ ತಾಂಡಾದಲ್ಲಿ ಗಣಿ ಹೊಂಡಕ್ಕೆ ಬಿದ್ದು 11 ವರ್ಷದ ಬಾಲಕ ರಿತೇಶ್ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ, ಸೋಮವಾರ ಹಮ್ಮಿಕೊಳ್ಳಲಾಗಿದ್ದ ಬೃಹತ್ ಪ್ರತಿಭಟನೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ನಗರದಾದ್ಯಂತ ಭಾರೀ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಸೋಮವಾರ ಬಿಜೆಪಿ ಮುಖಂಡ ಮಣಿಕಾಂತ ರಾಠೋಡ್ ನೇತೃತ್ವದಲ್ಲಿ ಜಗತ್ ವೃತ್ತದಿಂದ ಐಜಿಪಿ ನಿವಾಸದವರೆಗೆ ಬೃಹತ್ ಹಿಂದೂ ಸಮಾಜದ ವತಿಯಿಂದ ಪ್ರತಿಭಟನಾ ರ್‍ಯಾಲಿ ನಡೆಸಲು ಯೋಜಿಸಲಾಗಿತ್ತು. ಆದರೆ, ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಇದಕ್ಕೆ ಅನುಮತಿ ನಿರಾಕರಿಸಿದ ಪೊಲೀಸರು, ನಗರದಾದ್ಯಂತ ತೀವ್ರ ನಿಗಾ ವಹಿಸಿದರು.

ಜಗತ್ ವೃತ್ತದ ಬಳಿ ಡಿಸಿಪಿ ಶಾಲೂ ನೇತೃತ್ವದಲ್ಲಿ ಎಸಿಪಿಗಳಾದ ಶರಣಪ್ಪ ಸುಬೇದಾರ್ ಹಾಗೂ ಶಿವಣ್ಣಗೌಡ ಪಾಟೀಲ್ ಮಾರ್ಗದರ್ಶನದಲ್ಲಿ ವಿವಿಧ ಠಾಣೆಗಳ ಪಿಎಸ್‌ಐಗಳು, ಸಿಸಿಬಿ ಪೊಲೀಸರು ಹಾಗೂ 2 ಕೆಎಸ್‌ಆರ್‌ಪಿ ತುಕಡಿಗಳು ಸೇರಿದಂತೆ ಒಟ್ಟು 150ಕ್ಕೂ ಹೆಚ್ಚು ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಸ್ಥಳಕ್ಕೆ ಬಂದವರನ್ನು ವಾಪಸ್ ಕಳುಹಿಸಲಾಗಿದ್ದು, ಮಾತು ಕೇಳದವರನ್ನು ಬಂಧಿಸಲು ಆದೇಶಿಸಲಾಗಿತ್ತು.

ಸೋಮವಾರ ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಜಗತ್ ವೃತ್ತದಲ್ಲಿ ಉರಿಬಿಸಿಲನ್ನೂ ಲೆಕ್ಕಿಸದೆ ಕರ್ತವ್ಯ ನಿರ್ವಹಿಸಿದ ಪೊಲೀಸ್ ಸಿಬ್ಬಂದಿ, ಮೇಲಧಿಕಾರಿಗಳ ಆದೇಶವನ್ನು ಚಾಚೂ ತಪ್ಪದೆ ಪಾಲಿಸಿದರು. ತೀವ್ರ ನಿಗಾ ವಹಿಸುವ ಮೂಲಕ ಪ್ರತಿಭಟನೆ ತಡೆಯುವಲ್ಲಿ ಇಲಾಖೆ ಭಾರೀ ಯಶಸ್ಸು ಸಾಧಿಸಿತು.



ಸಾಗರ ಎಂಬುವವರು ಪ್ರತಿಭಟನೆಗೆ ಅನುಮತಿ ಕೋರಿದ್ದರು.ಆದರೆ, ಅವರ ಮೇಲೆ ಈಗಾಗಲೇ ಮೂರು ಪ್ರಕರಣಗಳಿರುವುದರಿಂದ ಅನುಮತಿ ನಿರಾಕರಿಸಲಾಗಿದೆ. ಅಲ್ಲದೆ, ಅಕ್ರಮ ಗಣಿಗಾರಿಕೆ ನಡೆದಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿ, ಅನುಮತಿ ಇಲ್ಲದಿದ್ದರೂ ಪ್ರತಿಭಟನೆ ಇದೆ ಎಂದು ಜನರಿಗೆ ತಪ್ಪು ಸಂದೇಶ ನೀಡಲಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಬಂದವರನ್ನು ಚದುರಿಸಿ ಕಳುಹಿಸಲಾಗಿದೆ.

■ **ಶಾಲೂ, ಡಿಸಿಪಿ,** ಕಲಬುರಗಿ ನಗರ

ದಲಿತ ಬಾಲಕನ ಸಾವಿಗೆ ನ್ಯಾಯ ಕೇಳಿ ಕಲಬುರಗಿಗೆ ತೆರಳುತ್ತಿದ್ದ ನಮ್ಮನ್ನು ಕೊಟನೂರು ಬಳಿ ವಶಕ್ಕೆ ಪಡೆದು, ಪ್ರತಿಭಟನಾ ಹಕ್ಕನ್ನು ಕಸಿಯಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರ ಅಣತಿಯಂತೆ ಪೊಲೀಸರು ವಿನಾಕಾರಣ ಅನುಮತಿ ನಿರಾಕರಿಸಿ, ದಬ್ಬಾಳಿಕೆ ನಡೆಸುತ್ತಿದ್ದಾರೆ

■ **ಸಿದ್ಧಲಿಂಗ ಸ್ವಾಮೀಜಿ,** ಶಿವಸೇನಾ ರಾಜ್ಯಾಧ್ಯಕ್ಷ

ಪ್ರತಿಭಟನಾಕಾರರ ತಡೆ: ಗೃಹಬಂಧನ

ಪ್ರತಿಭಟನಾಕಾರರು ನಗರದೊಳಗೆ ಪ್ರವೇಶಿಸದಂತೆ ಪೊಲೀಸರು ಹೊರವಲಯದಲ್ಲೇ ತಡೆದರು. ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಅವರನ್ನು ಮಾಲಗತ್ತಿ ಬಳಿ ತಡೆದು ಅವರದ್ದೇ ಫಾರ್ಮ್ ಹೌಸ್‌ನಲ್ಲಿ ಗೃಹಬಂಧನದಲ್ಲಿ ಇರಿಸಲಾಯಿತು. ಆಂದೋಲದ ಕರುಣೇಶ್ವರ ಮಠದ ಪೀಠಾಧಿಪತಿ ಹಾಗೂ ಶಿವಸೇನಾ ರಾಜ್ಯಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಅವರನ್ನು ಕೊಟನೂರ್ (ಡಿ) ಬಳಿಯ ಆಕಾಶವಾಣಿ ಬಳಿ ತಡೆದು ನಾಗನಹಳ್ಳಿ ಸಮೀಪದ ಅವರದ್ದೇ ಶಾಖಾ ಮಠದಲ್ಲಿ ಇರಿಸಲಾಯಿತು. ಸ್ಥಳಕ್ಕೆ ಬಂದ ಲಕ್ಷ್ಮಿಕಾಂತ್ ಸ್ವಾದಿ ಸೇರಿದಂತೆ ಹಲವು ಯುವಕರನ್ನು ವಾಪಸ್ ಕಳುಹಿಸಲಾಯಿತು.

ಜಂಟಿ ಕೃಷಿ ನಿರ್ದೇಶಕರ ಕಛೇರಿ,

ಸಾರ್ವಜನಿಕ ಕಛೇರಿಗಳ ಕಟ್ಟಡ, ಮೈಸೂರು ಜಿಲ್ಲೆ, ಮೈಸೂರು
Ph: 0821-2442239, Fax: 0821-2523700,
email: dagrmys@rediffmail.com

ಟೆಂಡರ್ ಅಧಿಸೂಚನೆ ಸಂ: ಜಂಕೃನಿ/ಮೈ/ಲೆಕ್ಕ-1/ಹೊರಗುತ್ತಿಗೆ/ಸಿಬ್ಬಂದಿ/ಇ.ಟೆಂಡರ್/2026-27 ದಿನಾಂಕ:. 12-05-2026

ಇ-ಪ್ರೊಕ್ಯೂರ್‌ಮೆಂಟ್ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2026-27ನೇ ಸಾಲಿಗೆ ಈ ಕಛೇರಿ ಹಾಗೂ ಅಧೀನ ಕಛೇರಿಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳ ಸೇವೆ ಪಡೆಯುವ ನಿಮಿತ್ತ ಅರ್ಹತೆಯುಳ್ಳ ಏಜೆನ್ಸಿ/ ಸಂಸ್ಥೆಗಳಿಂದ ವೆಬ್‌ಸೈಟ್: http:kppp.karnataka.gov.in ಮೂಲಕ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ. ರೂ.3,10,000/- (ಮೂರು ಲಕ್ಷದ ಹತ್ತು ಸಾವಿರ ಮಾತ್ರ) ನ್ನು ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ಸಲ್ಲಿಸತಕ್ಕದ್ದು. ಟೆಂಡರ್ ಬಿಡ್ ಗಳನ್ನು ಇ-ಪೋರ್ಟಲ್ ನಲ್ಲಿ ಸಲ್ಲಿಸುವ ಕೊನೆಯ ದಿ: 15.06.2026 ಸಂಜೆ 5 ಗಂಟೆಯ ವರೆಗೆ. ಟೆಂಡರ್‌ಗಳನ್ನು 17.06.2026 ರ ಬೆಳಗ್ಗೆ 11 ಗಂಟೆಗೆ ತೆರೆಯಲಾಗುವುದು. ಟೆಂಡರ್ ಪ್ರಕಟಣೆಯು ಹೊರಡಿರುವ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರವನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

ಸಹಿ/- ಜಂಟಿ ಕೃಷಿ ನಿರ್ದೇಶಕರು, ಮೈಸೂರು ಜಿಲ್ಲೆ, ಮೈಸೂರು

DIPR/DDMYS/196/KSMCA/144/2026-27

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 454/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 455/2026
ಅರ್ಜಿದಾರರು: ಶ್ರೀ ಮಲ್ಲೇಶ ತಂದೆ ಕೊಟ್ರಪ್ಪ, ವಯಸ್ಸು 50 ವರ್ಷ, ವಾಸ॥ ಹಿರೇಹಡಗಲಿ ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ತನ್ನ ಕುಟುಂಬದ ಹಿರಿಯರ ಮರಣದಿನಾಂಕದ ವಿವರ.

ಕ್ರ.ಸಂ.	ಹೆಸರು	ಸಂಬಂಧ	ಮರಣ ದಿನಾಂಕ	ಸ್ಥಳ:
1	ಬಳಿಗಾರ ಜಂಭಪ್ಪ ತಂದೆ ಬಸಪ್ಪ	ಮುತ್ತಜ್ಜ	10-12-1945	ಹಿರೇಹಡಗಲಿ
2	ಬಳಿಗಾರ ಕೊಟ್ರುಬಸಪ್ಪ ತಂದೆ ಜಂಭಪ್ಪ	ಅಜ್ಜ	20-10-1970	ಹಿರೇಹಡಗಲಿ

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 17-06-2026 ರಂದು ಸಮಯ ಬೆಳಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 05-05-26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/- ಶಿರಸ್ತೆದಾರರು, ಸಿ.ಜೆ.& ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೂವಿನಹಡಗಲಿ
ಸಹಿ/- ಶ್ರೀ.ಎಲ್.ಲಕ್ಷ್ಮಣನಾಯ್ಕ, ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

CR. MISC. No. 65/2026
IN THE COURT OF THE TI nd CIVIL JUDGE & J.M.F.C. COURT AT: HUBBALLI
PETITIONER : Smt. Meenakshi W/o. Basavaraj Katti,
V/S
RESPONDENT : The Asst. Commissioner Registrar of Birth and Deaths H.D.M.C. Hubballi.

CITATION

Where as, the petitioner above named has filed this petition for mutation of death of her Elder Brother viz: Prakash S/o. Mudakappa Ghattad, was expired on 07/06/2020 Veerapur Oni, Hubballi. In the register of the respondent and whereas the persons interested in the matter are hereby called upon to putforth their say and submit their claim objection if any for the same on 25/06/2026 at 11-00 hours sharp.

Take notice, if you failed to appear and putforth your say on the day and time afore mentioned the case will be heard and decided ex-party finally.

Given under my hand seal of the court on this 18th day of May 2026 at Hubballi.

By order of the court,
Sd/- SHERISTEDAR
CIVIL JUDGE & J.M.F.C. COURT HUBBALLI.
Sd/- J.M.Choudari, advocate,
Hubballi. Sanna Oni, Nagashettikoppa, Hubballi.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆ (ಕೆಂಪು)	1510	6059
ಕಡಲೆ (ಬಿಳಿ)	5776	5996
ಉದ್ದಿನಕಾಳು	1210	7302
ಹೆಸರುಕಾಳು	1430	7602
ಹುರುಳಿ ಕಾಳು	4021	4021
ಜೋಳ	1510	4146
ಮಡಿಕೆ (ಮಟಕಿ)	1901	14531
ಮೆಕ್ಕೆಜೋಳ	1411	1981
ಸಾಸಿವೆ	5121	5455
ನವಣೆ	1510	1510
ಕುಸುಬೆ	5151	5406
ಸೋಯಾಬಿನ್	4610	7800
ತೊಗರೆ	2450	4469
ಗೋಧಿ	1707	3800
ಮೆಣಸಿನಕಾಯಿ	4459	8413
ಶೇಂಗಾ	3099	37500

ಕೊಲೆಗೆ ಯತ್ನ: ಪ್ರಕರಣ ದಾಖಲು

◆**ಹುಬ್ಬಳ್ಳಿ:** ಇಲ್ಲಿಯ ಉಣಕಲ್ ಕೆರೆಗೆ ಮೀನು ಹಿಡಿಯಲು ಹೋದ ಯುವಕರ ಮಧ್ಯೆ ಜಗಳ ನಡೆದು ಓರ್ವನಿಗೆ ಚಾಕುವಿನಿಂದ ಕುತ್ತಿಗೆ ಇರಿದು ಕೊಲೆ ಮಾಡಲು ಯತ್ನಿಸಿದ ಪ್ರಕರಣ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಇಸ್ಮಾಯಿಲ್ ಹಜರೇಸಾಬ್ ನದಾಫ್(22) ಗಾಯಗೊಂಡಿದ್ದಾನೆ. ಅಲ್ತಾಫ್ ಮತ್ತು ಆತನ ಸ್ನೇಹಿತರ ವಿರುದ್ಧ ಪ್ರಕರಣ ದಾಖಲಾಗಿದೆ. ಮೇ 17ರಂದು ಮಧ್ಯಾಹ್ನ ತನ್ನ ಸ್ನೇಹಿತರೊಂದಿಗೆ ಮೀನು ಹಿಡಿಯಲು ಹೋದಾಗ ಮೀನಿನ ಗಾಳದ ದಾರವನ್ನು ದಾಟುವ ಸಂಬಂಧವಾಗಿ ಅಲ್ತಾಫ್ ಜಗಳ ಮಾಡಿದ್ದು, ಸಣ್ಣ ಚಾಕುವಿನಿಂದ ಕುತ್ತಿಗೆ ಹತ್ತಿರ ಹೊಡೆದಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್

ನಿಯಮ 8(1)ರ ಅಡಿಯಲ್ಲಿ ಸ್ವಾಧೀನ ನೋಟಿಸ್

ನೋಂದಾಯಿತ ಕಚೇರಿ: ಟ್ರೈಮ್ ಸ್ಕ್ವೇರ್, ಯುನಿಟ್ ನಂ. 3ಬಿ, 2ನೇ ಮಹಡಿ, ಮಿತ್ತಲ್ ಇಂಡಸ್ಟ್ರಿಯಲ್ ಎಸ್ಟೇಟ್ ಎದುರು, ಅಂಧೇರಿ- ಕುರ್ಲಾ ರಸ್ತೆ, ಮರೋಲ್ ನಾಕಾ, ಅಂಧೇರಿ ಪೂರ್ವ, ಮುಂಬೈ- 400059. ಶಾಖಾ ಕಚೇರಿ: 2/4, ಶಿರೂರು ಪಾರ್ಕ್, ಹೋಂಡ ಹಾಸ್ಟೆಲ್ ಪಕ್ಕ, ವಿದ್ಯಾನಗರ, ಹುಬ್ಬಳ್ಳಿ- 580031

ಈ ಕೆಳಗೆ ಸಹಿ ಮಾಡಿರುವ ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ & ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002- ಇನ್ನು ಮುಂದೆ ಕಾಯ್ದೆ ಎಂದು ಕರೆಯಲಾಗುವುದು- ಮತ್ತು ಸೆಕ್ಷನ್ 13(12)ರ ಅಡಿಯಲ್ಲಿ ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್ಸ್-2002ರ ನಿಯಮಾವಳಿ 3ರ ಅನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಂ (ಬಿ) ನಲ್ಲಿ ಹೆಸರಿಸಿರುವ ಸಾಲಗಾರರು ಮತ್ತ ಈ ಕೆಳಗೆ ಕಲಂ (ಸಿ) ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಗಳಂದು ಮತ್ತು ಕಲಂ (ಡಿ) ಅಡಿಯಲ್ಲಿ ಸೂಚಿಸಿರುವ ಬಾಕಿ ಮೊತ್ತವನ್ನು ಈ ನೋಟಿಸ್/ಗಳನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಪಾವತಿಸುವಂತೆ ಡಿಮ್ಯಾಂಡ್ ನೋಟಿಸ್ ನೀಡಿ ಗಮನ ಸೆಳೆಯಲಾಗಿತ್ತು.

ಸಾಲಗಾರರು ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಸಾಮಾನ್ಯವಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕಲಂ (ಇ) ಡಿಯಲ್ಲಿ ಈ ಕೆಳಗೆ ಹೆಸರಿಸಿದ ಆಯಾ ದಿನಾಂಕದಂದು ಅಂದರೆ ಕಲಂ (ಎಫ್)ನಲ್ಲಿ ಹೆಸರಿಸಿದ ದಿನಾಂಕದಂದು ಕಂಪನಿಗೆ ಅಡಮಾನ ಮಾಡಲಾದ ಸ್ಥಿರಾಸ್ತಿಗಳನ್ನು ಕೆಳಗೆ ಸಹಿ ಮಾಡಿದವರು ಮೇಲೆ ಹೇಳಿದ ಕಾಯ್ದೆಯ ಸೆಕ್ಷನ್ 13(4) ಮತ್ತು ಅದರಡಿ ರೂಪಿಸಲಾದ ನಿಯಮಾವಳಿಯ ನಿಯಮ 3 ರ ಅನ್ವಯ ವಶಕ್ಕೆ ಪಡೆದಿರುತ್ತಾರೆ.

ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಜನಸಾಮಾನ್ಯರಿಗೆ ಸಾಮಾನ್ಯವಾಗಿ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಈ ಕೆಳಗೆ ಕಲಂ (ಇ) ನಲ್ಲಿ ಹೆಸರಿಸಿರುವ ಈ ಆಸ್ತಿಯ ಸಂಬಂಧ ಯಾವುದೇ ವಹಿವಾಟು ನಡೆಸಬಾರದು ಹಾಗೂ ಈ ಆಸ್ತಿಗೆ ಸಂಬಂಧಿಸಿದ ಯಾವುದೇ ವ್ಯವಹಾರವು ಕಲಂ (ಡಿ) ನಲ್ಲಿ ಹೆಸರಿಸಿರುವ ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್‌ನ ಮೊತ್ತ, ಬಡ್ಡಿ ಹಾಗೂ ಇತರ ಶುಲ್ಕಗಳಿಗೆ ಅನುಸಾರವಾಗಿರುತ್ತದೆ. ಕಾಯ್ದೆಯ ಸೆಕ್ಷನ್ 13(8) ಅನ್ವಯ ವೆಚ್ಚಗಳು, ಶುಲ್ಕಗಳು ಮತ್ತು ಖರ್ಚುಗಳ ಸಹಿತ ಮಾರಾಟ ಅಧಿಸೂಚನೆಗಿಂತ ಮುನ್ನ ಸಂಪೂರ್ಣ ಮೊತ್ತವನ್ನು ಪಾವತಿಸಿ ಭದ್ರತಾ ಆಸ್ತಿಗಳನ್ನು ಮರು ಸ್ವಾಧೀನಪಡಿಸಿಕೊಳ್ಳಬಹುದಾಗಿದೆ.

ಕ್ರ. ಸಂ.	ಸಾಲಗಾರರ ಹೆಸರು ಮತ್ತು ವಿಳಾಸ & ಸಾಲ ಖಾತೆ ಸಂಖ್ಯೆ	ಡಿಮ್ಯಾಂಡ್ ನೋಟೀಸ್ ದಿನಾಂಕ	ಬಾಕಿ ಮೊತ್ತ	ಸ್ಥಿರಾಸ್ತಿಯ ವಿವರಣೆ	ಸ್ವಾಧೀನ ದಿನಾಂಕ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)
1.	ಸಾಲ ಖಾತೆ ಸಂಖ್ಯೆಗಳು **VT0003276** 1. ಧನಲಕ್ಷ್ಮಿ ಸಾವಜಿ ಖಾನಾವಳಿ (ಸಾಲಗಾರರು) 2. ಪೃಥ್ವಿರಾಜ್ ಪಿ.ಮೆಹರವಾಡೆ & ಶಿಲ್ಪಾ ಮೆಹರವಾಡೆ (ಸಹ ಸಾಲಗಾರರು) ವಿಳಾಸ: # 395, ಮಯೂರ್‌ನಗರ, ಆನಂದ ನಗರ ರಸ್ತೆ, ಹುಬ್ಬಳ್ಳಿ-ಧಾರವಾಡ, ಕರ್ನಾಟಕ- 580024. ಮನೆಯ ವಿಳಾಸ: #902, ಕೊನೆಯ ನೀರಿನ ಟ್ಯಾಂಕ್ ಬಳಿ, ಆನಂದನಗರ, ಹುಬ್ಬಳ್ಳಿ, ಧಾರವಾಡ, ಕರ್ನಾಟಕ- 580024 11.03.2026	11.03.2026	11/03/2026ಕ್ಕೆ ಇದ್ದಂತೆ ರೂ. 38,68,880.72/-	ಆರ್‌ಸಿಸಿ ಮನೆ, ವಾಣಿಜ್ಯ ಮಳಿಗೆ ಮತ್ತು ಉಳಿಕೆ ಖಾಲಿ ಭೂಮಿಯನ್ನು ಒಳಗೊಂಡಂತೆ ನಿರ್ಮಾಣವಾದ ಕಟ್ಟಡಗಳ ಸಹಿತ ವಸತಿ ಆಸ್ತಿಯಲ್ಲಿರುವ ಎಲ್ಲ ಪುಂಡು ಮತ್ತು ತುಣುಕುಗಳು. ಎಚ್‌ಡಿಎಂಸಿ ಮುನ್ಸಿಪಲ್ ಖಾತೆ ನಂ. 394, ಹುಬ್ಬಳ್ಳಿ-ಧಾರವಾಡ ಮುನ್ಸಿಪಲ್ ಕಾರ್ಪೊರೇಷನ್, ಹುಬ್ಬಳ್ಳಿ ಇ-ಖಾತೆ ಸಂಖ್ಯೆ 36-5-21-0209, ಪಿಐಡಿ ನಂ. 201874 (ಹಳೆ ಪಿಐಡಿ ನಂ. 36ಎ/1878), ವಿಸ್ತೀರ್ಣ: 25 * 30 ಅಡಿ, ಒಟ್ಟು ವಿಸ್ತೀರ್ಣ: 750 ಚದರ ಅಡಿ. ಇದರಲ್ಲಿ 24.38 ಚದರ ಮೀಟರ್ ವಿಸ್ತೀರ್ಣದ ಆರ್‌ಸಿಸಿ ಮನೆ, 12.27 ಚದರ ಮೀಟರ್ ವಿಸ್ತೀರ್ಣದ ಅಂಗಡಿ ಮಳಿಗೆ ಇದೆ. ಉಳಿದಂತೆ ಖಾಲಿ ಭೂಮಿ. ಇದನ್ನು ಕೃಷ್ಣಾಪುರ ಗ್ರಾಮ, ಮಯೂರನಗರ, ಆನಂದ ನಗರ, ಹಳೇಹುಬ್ಬಳ್ಳಿ, ತಾಲೂಕು: ಹುಬ್ಬಳ್ಳಿ, ಜಿಲ್ಲೆ-ಧಾರವಾಡ ವಿಳಾಸದಲ್ಲಿ ನಿರ್ಮಿಸಲಾಗಿದೆ. ಇದು ಹುಬ್ಬಳ್ಳಿ-ಧಾರವಾಡ ಮುನ್ಸಿಪಲ್ ಕಾರ್ಪೊರೇಷನ್ ವ್ಯಾಪ್ತಿಯಲ್ಲಿದೆ. ವಿಳಾಸ: (ನಿವೇಶನದ ಲೊಕೇಶನ್) ಪ್ಲಾಟ್ ನಂ. 394, ಎಸ್‌ಆರ್ ನಂ. 92, ಪಿಐಡಿ ನಂ. 36ಎ/1878, ವಿಳಾಸ: ಶಕ್ತಿ ದೇವಸ್ಥಾನದ ಬಳಿ, ಮಯೂರ ನಗರ, ಆನಂದ ನಗರ, ಕೃಷ್ಣಾಪುರ ಗ್ರಾಮ, ಹುಬ್ಬಳ್ಳಿ ತಾಲೂಕು, ಧಾರವಾಡ ಜಿಲ್ಲೆ- 580030. ಗಡಿಗಳು (ದಾಖಲೆಗಳ ಪ್ರಕಾರ/ ನಿವೇಶನದ ಅನ್ವಯ) ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 391, ದಕ್ಷಿಣಕ್ಕೆ: ಪ್ಲಾಟ್ ನಂ. 393, ಉತ್ತರಕ್ಕೆ: ಪ್ಲಾಟ್ ನಂ. 395.	18ನೇ ಮೇ 2026

ದಿನಾಂಕ: 19/05/2026 ಸ್ಥಳ: ಧಾರವಾಡ
ಅಧಿಕೃತ ಅಧಿಕಾರಿ : ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್

ಕಳೆದಿದೆ

ನಾನು ಮಹ್ಮದಸಲೀಂ ತಂದೆ ಮೌಲಾಸಾಬ ಕ್ಯಾಲಕೊಂಡ ಸಾ॥ ಕುಂದಗೋಳ ತಾ॥ ಕುಂದಗೋಳ ಜಿ॥ ಧಾರವಾಡ ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ನನ್ನ ತಂದೆಯ ಅಕ್ಕನವರಾದ ಶ್ರೀಮತಿ ಮಹಬೂಬಿ ತಂದೆ ಅಲ್ಲಾವುದ್ದೀನಸಾಬ ಕ್ಯಾಲಕೊಂಡ ಇವರು ಬರೆದುಕೊಟ್ಟ ಮೃತ್ಯು ಪತ್ರ, ಉಪನೊಂದಣಾಧಿಕಾರಿಗಳ ಕಛೇರಿ ಕುಂದಗೋಳ ಇವರಲ್ಲಿ ನೋಂದ ಆದ 3ನೇ ದಸ್ತಾವೇಜು ನಂ. 4472/2000-01 ದಿ: 02-11-2000 ಅನ್ನು ಮನೆ ಸ್ಥಳಾಂತರಿಸುವಾಗ ನಜರಚೂಕಿನಿಂದ ಕಳೆದುಕೊಂಡಿದ್ದು, ಈ ದಸ್ತಾವೇಜನ್ನು ಎಷ್ಟು ಹುಡುಕಿದರೂ ಸಿಕ್ಕಿರುವುದಿಲ್ಲ. ಈ ಸಂಬಂಧ ಕುಂದಗೋಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಸಂಖ್ಯೆ: **PO1540260600070 Dated: 15-05-2026** ಇರುತ್ತದೆ. ಯಾರಿಗಾದರೂ ಈ ಪ್ರಮಾಣಪತ್ರ ಸಿಕ್ಕಲ್ಲಿ ಮೇಲಿನ ವಿಳಾಸಕ್ಕೆ ಮರಳಿಸಬೇಕೆಂದು ವಿನಂತಿ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ

ಕೇಂದ್ರ ಕಚೇರಿ, ಗೋಕುಲ ರಸ್ತೆ, ಹುಬ್ಬಳ್ಳಿ-580 0030 ದೂರವಾಣಿ: 0836-2333058 ವೆಬ್‌ಸೈಟ್: nwkrtc.karnataka.gov.in

ಸಂ/ವಾಕರಸಾ/ಕೇಕ/ಹು/ಯಾಂತ್ರಿಕ/T-42/819/2026-27 ದಿನಾಂಕ:18/05/2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:05/ME/2026-27 ದಿನಾಂಕ: 18-05-2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆಯ ಮೂಲಕ

ಆಸಕ್ತ ಬಿಡ್‌ದಾರರಿಂದ (ಎರಡು ಹಂತದ ಟೆಂಡರ್ ಪದ್ಧತಿ ಮೂಲಕ) ಪೂರ್ವಾರ್ಹತಾ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸುವ ಕುರಿತು ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ಸಂ.	ಟೆಂಡರ್ ವಿವರಣೆ ಹಾಗೂ ಅಂದಾಜು ಮೌಲ್ಯ
1	T-42 NWKRTC/2026-27/IND0211 Dated:14.05.2026	ವಾಕರಸಾ ಸಂಸ್ಥೆಗೆ ಅಗತ್ಯವಿರುವ 5334 ಮಿಮೀ ರಿಂದ 5340 ಮಿಮೀ ವ್ಹೀಲ್ ಬೇಸ್ ಚಾಸಿಸಗಳ ಮೇಲೆ ಪೂರ್ಣ ಕವಚ ನಿರ್ಮಿತ 80 ನೂತನ BS-VI ಟೈಪ್-II NDX ಡಬಲ್ ಡೋರ್ ಬಸ್ಸುಗಳ ಸರಬರಾಜಿಗಾಗಿ. (ಅಂದಾಜು ಮೌಲ್ಯ ರೂ. 32.00 ಕೋಟಿ)

ಇ-ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 03-06-2026, 17.30 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: http://kppp.karnataka.gov.in ಮೊಬೈಲ್ ಸಂ. 7760993225/7022009931 ಸಂಪರ್ಕಿಸಬಹುದಾಗಿದೆ.

ಸಹಿ/- ಮುಖ್ಯ ಯಾಂತ್ರಿಕ ಅಭಿಯಂತರರು,
(ಟೆಂಡರ್ ಕರೆಯುವ ಪ್ರಾಧಿಕಾರ)

ಡಿಐಪಿಆರ್/ಧಾರವಾಡ/192/ಮಣಿಪಾಲ್/2026-27

CHANGE OF NAME

I, **SAIRA BANU (Old Name)** R/o 19th Ward, Near Kumar Ladj Ron, Gadag have changed my name to **SAIRA BANU SHAIKH KARIM INAMDAR (New Name)** Vide Affidavit Sworn Before Notary M.M. Hiremath on 18-05-2026

CHANGE OF NAME

I, **SHAGUFTA MUHAMMADASHRAF DESHPAIK** (Old Name) resident of 186, Gandhinagar Khanapur - 591302, Dist: Belagavi have changed my name as **SHAGUFTA DESHPAIK** (New Name) for all purpose, vide Affidavit sworn to before **Shri. R.R. Parishwad** Advocate and Notary Khanapur, Dated: 16-05-2026

CHANGE OF NAME

I, **MUHAMMADASHRAF DESHPAIK** (Old Name) resident of 186, Gandhinagar Khanapur - 591302, Dist: Belagavi have changed my name as **MAHAMADASHRAF DESHPAIK** (New Name) for all purpose, vide Affidavit sworn to before **Shri. R.R. Parishwad** Advocate and Notary Khanapur, Dated: 16-05-2026

CHANGE OF NAME

I, **SHRADDA SUHAS HAVERISHETTAR** (Old Name) have changed my name to **SHRADDHA HAVERISHETTAR** (New Name) vide affidavit before - M B Sunkad- Notary Public- Hubli dated 18.05.2026

CHANGE OF NAME

I, **MUSKAN BANU SAVANUR** (Old Name) have changed my name to **MUSKAN BANU KUSANUR** (New Name) vide affidavit before - M B Sunkad- Notary Public- Hubli dated 18.05.2026

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಟೆಂ:KW-2&4:2026-27:504 ದಿನಾಂಕ:15-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಲೆಕ್ಕ ಶೀರ್ಷಿಕೆ : 2025-26ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮೈಕ್ರೋ ಮೂಲಭೂತ ಸೌಕರ್ಯ-ಎಸ್‌ಸಿಪಿ, 2022-23ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮ್ಯಾಕ್ರೋ ಸಾಮಾಜಿಕೇತರ-ಎಸ್‌ಡಿಪಿ, 2025-26ನೇ ಸಾಲಿನ 4059-80-051-0-60-132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು ಯೋಜನೆ (ಸಿಎಂಐಡಿಪಿ), 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ /2025-26, 2024-25ನೇ ಸಾಲಿನ ಲೆಕ್ಕ ಶೀರ್ಷಿಕೆ : ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಬ್ಯಾಂಕ ಖಾತೆಯಲ್ಲಿ ಅರ್ಜಿಸಿದ ಬಡ್ಡಿ ಮೊತ್ತದ ಯೋಜನೆ ಮತ್ತು - ಸಾಮಾನ್ಯ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಆಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್‌ಡಾಕೂಮೆಂಟ್ KW-2&4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 07 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ:30601, 33710/Call-2, 35633, 35697, 35788, 35887 & 21972) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **01-06-2026** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02-06-2026** ಸಮಯ 16.30 ಗಂಟೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **06-06-2026** ಸಮಯ 16.00 ಗಂಟೆ ಕನಿಷ್ಠ ಅಂದಾಜು ಮೊತ್ತ ರೂ. **50.00** ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. **995.00** ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು, ಸದರಿ ವೆಬ್‌ಸೈಟ್‌ನಲ್ಲಿಯು ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/91/ಕೆಎಸ್‌ಎಂಸಿಎ/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ, ಕಾರ್ಯಾಲಯ, ಅಥಣಿ - 591304, ತಾ॥ ಅಥಣಿ ಜಿ॥ ಬೆಳಗಾವಿ.

ಸಂಖ್ಯೆ : ಕ.ನೀ.ನಿ.ನಿ./ಪು.ಪು.ವಿ./ಟೆಂಡರ್/ಅಥಣಿ/ಬಿ.ಎಲ್.ಆಯ್.ಎಸ್/ಎಫ್.ಆಯ್.ಸಿ/2026-27/216 ದಿನಾಂಕ : 14-05-2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕ.ನೀ.ನಿ.ನಿ. ಆರ್&ಆರ್ ವಿಭಾಗ, ಅಥಣಿ, ಇವರು ಕೆ.ಪಿ.ಪಿ ಪೋರ್ಟಲ್ ಮುಖಾಂತರ ನೊಂದಾಯಿತ ಎರಡನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರು ಇವರಿಂದ 1) KPP I. NO - 4425, 2) KPP I. NO - 4426, 3) KPP I. NO - 4427, 4) KPP I. NO - 4428, 5) KPP I. NO - 4429, 6) KPP I.NO - 546 Call-2, ಕಾಮಗಾರಿಗಳಿಗೆ ಕೆ.ಡಬ್ಲ್ಯೂ-4 ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ.

ಗುತ್ತಿಗೆದಾರರು 02 - ಕವರ್ ಬಿಡ್ ಸಲ್ಲಿಕೆ ವಿಧಾನವನ್ನು ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ : https://kppp.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸುವುದು.

ಟೆಂಡರಿಗಿಟ್ಟ ಮೊತ್ತ (ಜಿ.ಎಸ್.ಟಿ. ರಹಿತ) 1) ರೂ. 415.93 ಲಕ್ಷಗಳು, 2) ರೂ. 328.87 ಲಕ್ಷಗಳು, 3) ರೂ. 391.98 ಲಕ್ಷಗಳು, 4) ರೂ. 211.55 ಲಕ್ಷಗಳು, 5) ರೂ. 279.85 ಲಕ್ಷಗಳು, 6) ರೂ. 403.09 ಲಕ್ಷಗಳು ಇರುತ್ತವೆ. ಟೆಂಡರ್ ಅವಧಿ ಮಳೆಗಾಲ ಸಹಿತ ಕ್ರ.ಸಂ. 01 ರಿಂದ 06 (06) ತಿಂಗಳು.

1) ಇ-ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 18-05-2026 10.30 ರಿಂದ ದಿನಾಂಕ : 25-05-2026 ರ ಸಂಜೆ 4.00 ರವರೆಗೆ, 2) ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ : 22-05-2026 ರ ಸಂಜೆ 4.00 ಘಂಟೆಯವರೆಗೆ, 3) ಬಿಡ್ ಪೂರ್ವ ಸಭೆಯು ಕಾ.ಇಂ. ಕ.ನೀ.ನಿ.ನಿ. ಪುವ & ಪುನಿ ವಿಭಾಗ, ಅಥಣಿ ಕಛೇರಿಯಲ್ಲಿ ಜರುಗಲಿದೆ. ದಿನಾಂಕ : 20-05-2026 ರ ಬೆಳಗ್ಗೆ 11.00 ಘಂಟೆಗೆ, 4) ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 18-05-2026 10.30 ರಿಂದ ದಿನಾಂಕ : 25-05-2026 ರ ಸಂಜೆ 4.00 ರವರೆಗೆ, 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 26-05-2026 ರ ಸಂಜೆ 4.30 ಘಂಟೆಗೆ, 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 29-05-2026 ರ ಬೆಳಗ್ಗೆ 11.00 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಚೇರಿ ದೂರವಾಣಿ ಸಂಖ್ಯೆ : 08289-285031 ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪುವ ಮತ್ತು ಪುನಿ ವಿಭಾಗ, ಅಥಣಿ.

ಡಿಐಪಿಆರ್/ಬೆಳಗಾವಿ/267/ಮಣಿಪಾಲ್/2026-27

CHANGE OF NAME

I, **MUBARAK NABISHYA DARAVESHI** (Old Name) Resident of Chokavi, Hirur, Bijapur, Kamataka, Pin Code: 586214, have changed my name as **MUBARAQ MAKANDAR** (New Name) henceforth I will be called and recognized by new name for all future purposes, dated: 17/05/2026.

CHANGE OF NAME

I, **NAGARAJAN G** (Old Name) Resident of H No 43, Sai Layout Bengeri, Hubballi Pin Code: 580023, have changed my name as **NAGARAJAN** (New Name) henceforth I will be called and recognized by new name for all future purposes, dated: 17/05/2026.

CHANGE OF NAME

I, **SHAMIMBANU KALAS** (Old Name) Resident of #147/A, Mehaboob Nagar, Banatikatti, Old Hubli, Hubli, Dharwad, Karnataka Pin Code: 580024, have changed my name as **SHAMEEM BANU** (New Name) henceforth I will be called and recognized by new name for all future purposes, dated: 17/05/2026.

CHANGE OF NAME

I, **NIDHI BOHARA** (Old Name) Resident of 18th Ward, Near Syndicate Bank, Sadashiva Nagara, Siruguppa, Dist: Ballari - 583121, Karnataka, India, have changed my name as **NIDHI RISHAB JAIN** (New Name) henceforth I will be called and recognized by new name for all future purposes, dated: 18/05/2026.

CHANGE OF NAME

I, **RISHAB JAIN** (Old Name) Resident of Ward Number 18, Near Syndicate Bank, Sadashiva Nagar, Siruguppa, Dist: Ballari - 583121, Karnataka, India, have changed my name as **RISHAB SURENDRAKUMAR JAIN** (New Name) henceforth I will be called and recognized by new name for all future purposes, dated: 18/05/2026.

CHANGE OF NAME

I,**SOFIYA KHANUM SOUDAGAR** (Old Name) I have changed my name to **SOFIYAKHANAM KHANJADE** (New Name) R/o Mehaboob Nagar, Near Urdu School, Shiggaon, Dist: Haveri-581205 Vide affidavit before Notary S.F. Huilgol, Hubali dated 15-05-2026.


ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 450/2026
ಅರ್ಜಿದಾರರು: ಶ್ರೀ ಮಲ್ಲೇಶ ತಂದೆ ಕೊಟ್ರಪ್ಪ, ವಯಸ್ಸು 50 ವರ್ಷ, ವಾಸ॥ ಹಿರೇಹಡಗಲಿ ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ.
ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ತನ್ನ ಕುಟುಂಬದ ಹಿರಿಯರ ಮರಣದಿನಾಂಕದ ವಿವರ.

ಕ್ರ.ಸಂ.	ಹೆಸರು	ಸಂಬಂಧ	ಮರಣ ದಿನಾಂಕ	ಸ್ಥಳ:
1	ಬಳಿಗಾರ ಗಂಗವ್ವ ಗಂಡ ಜಂಭಪ್ಪ	ಮುತ್ತಜ್ಜಿ	04-04-1980	ಹಿರೇಹಡಗಲಿ

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 10-06-2026 ರಂದು ಸಮಯ ಬೆಳಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 15-05-26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/- ಶಿರಸ್ತೆದಾರರು, ಸಿ.ಜೆ.& ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೂವಿನಹಡಗಲಿ
ಸಹಿ/- ಶ್ರೀ.ಎಲ್.ಲಕ್ಷ್ಮಣನಾಯ್ಕ, ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್	13	8	5	0	16	+0.400
ಹೈದರಾಬಾದ್	12	7	5	0	14	+0.331
ಪಂಜಾಬ್	13	6	6	1	13	+0.227
ಚೆನ್ನೈ	12	6	6	0	12	+0.027
ರಾಜಸ್ಥಾನ	12	6	6	0	12	+0.027
ದಿಲ್ಲಿ	13	6	7	0	12	-0.871
ಕೆಕೆಆರ್	12	5	6	1	11	-0.038
ಮುಂಬೈ	12	4	8	0	8	-0.504
ಲಖನೌ	12	4	8	0	8	-0.701

ಕಿರುಸುದ್ದಿ

ಧೋನಿ ಶೂಟಿಂಗ್ ತಾಲೀಮು



ಚೆನ್ನೈ: ನಗರದಲ್ಲಿರುವ ರಾಷ್ಟ್ರೀಯ ಭದ್ರತಾ ಸಿಬ್ಬಂದಿ (ಎನ್‌ಎಸ್‌ಜಿ) ಪ್ರಾದೇಶಿಕ ಕೇಂದ್ರಕ್ಕೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಭಾನುವಾರ ಭೇಟಿ ನೀಡಿದ್ದು, ಎನ್‌ಎಸ್‌ಜಿ ಕಮಾಂಡೋಗಳೊಂದಿಗೆ ಶೂಟಿಂಗ್ ಡ್ರಿಲ್‌ನಲ್ಲಿ ಪಾಲ್ಗೊಂಡ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಮಾಡಿವೆ. ಈ ವೇಳೆ ಕಪ್ಪು ಟಿ-ಶರ್ಟ್ ಮತ್ತು ಡೆನಿಮ್ ಉಡುಗೆಯಲ್ಲಿ ಕಾಣಿಸಿಕೊಂಡ ಧೋನಿ ಕಮಾಂಡೋಗಳೊಂದಿಗೆ ಸಮಯ ಕಳೆದಿದ್ದಾರೆ. ಕಮಾಂಡೋಗಳ ಜತೆ ತಾಲೀಮು ಬಳಿಕ ಉಪಹಾರದ ವೇಳೆ, ಫಿಟ್ ಲಗ್ ರಹಾ ಹೂ ನಾ? (ನಾನು ಫಿಟ್ ಆಗಿ ಕಾಣಿಸುತ್ತಿದ್ದೀನಲ್ವಾ?) ಎಂದು ಕೇಳಿ ಧೋನಿ ಸಿಬ್ಬಂದಿ ಮುಖದಲ್ಲಿ ನಗು ತರಿಸಿದ್ದಾರೆ. ಆದರೆ ಸನ್‌ರೈಸರ್ಸ್ ವಿರುದ್ಧ ಧೋನಿ ಆಡಿಲ್ಲ, ಧೋನಿ ಫಿಟ್ ಇಲ್ಲವೆಂದು ನಾಯಕ ಋತುರಾಜ್ ಗಾಯಕ್ವಾಡ್ ಕಾರಣ ನೀಡಿದ್ದಾರೆ.

ಗುಮ್ಮಟ ನಗರಿಯಲ್ಲಿ ರಾಜ್ಯ ಮಟ್ಟದ ಬ್ಯಾಡ್ಮಿಂಟನ್

ವಿಜಯಪುರ: ಗುಮ್ಮಟ ನಗರಿಯಲ್ಲಿ ಮೊದಲ ಬಾರಿಗೆ ಬೃಹತ್ ಮಟ್ಟದಲ್ಲಿ ಹಮ್ಮಿಕೊಂಡ ಅಂಡರ್ 15 ಹಾಗೂ ಅಂಡರ್ 17 ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗಳು ಆಕರ್ಷಕವಾಗಿ ನಡೆಯುತ್ತಿವೆ. ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಯೋನೆಕ್ಸ್ ಆಶ್ರಯದಲ್ಲಿ ನಡೆಯುತ್ತಿರುವ ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ಆಟಗಾರರ ರ‍್ಯಾಕೆಟ್ ಮೂಲಕ ಷಟಲ್‌ಗಳ ನಡುವಿನ ಸೆಣಸಾಟ ಕ್ರೀಡಾಸಕ್ತರನ್ನು ರೋಮಾಂಚನಗೊಳಿಸುತ್ತಿದೆ. 15 ವರ್ಷದೊಳಗಿನ ಸಿಂಗಲ್ಸ್ ವಿಭಾಗದಲ್ಲಿ ವೈಭವ ಸಾಯಿ ಗೌಡ ಅವರು ಸಿದ್ಧಾಂತ್ ಬಾಲಕುಮಾರನ್ ವಿರುದ್ಧ 23-21, 21-13 ಅಂಕಗಳಿಂದ ಜಯ ಗಳಿಸಿದರೆ, ಚಯನ್ ಎನ್.ಕುಮಾರ್ ಅವರು ಡಿ.ತ್ರಯಾಕ್ಷ ಗೌಡ ವಿರುದ್ಧ 21-3, 21-3 ಅಂಕಗಳಿಂದ ಜಯ ಗಳಿಸಿದರು. ಬಾಲಕರ ಸಿಂಗಲ್ಸ್ 17 ವರ್ಷದೊಳಗಿನವರ ವಿಭಾಗದ ಪಂದ್ಯಾವಳಿಯಲ್ಲಿ ತೇಜ್‌ರಾಜ್ ಕಿತ್ತೂರು ಅವರು ವಿಜಯ ಪ್ರದೀಪ್ ಅವ್ವಾರು ವಿರುದ್ಧ 21-8, 21-11 ಅಂಕಗಳಿಂದ ಜಯಿಸಿದರೆ, ಸಾಯಿ ಸಮರ್ಥ್ ಪಿ. ಅವರು ದಿರಾಜ್ ಪಾಟೀಲ್ ವಿರುದ್ಧ 21-16, 21-13 ಅಂಕಗಳಿಂದ ಗೆದ್ದರು. 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಆನ್ವಿತಾ ಸಾಹು ಅವರು ನಿಹಾರಿಕಾ ಪೈ ಡಿ ವಿರುದ್ಧ 21-15, 21-12 ಅಂತರದಿಂದ ಗೆದ್ದರೆ, ಸಾನಿಹಾ ಚೇತನ್ ವಿರುದ್ಧ ಯುಕ್ತಾ ಹರೀಶ್ 22-20, 21-19 ಅಂಕಗಳಿಂದ ಜಯಿಸಿದರು.

ಫ್ರೆಂಚ್ ಓಪನ್ ಅರ್ಹತಾ ಸುತ್ತಿಗೆ ಕರ್ಮನ್ ಪ್ರವೇಶ

ಹೊಸದಿಲ್ಲಿ: ಭಾರತೀಯ ಟೆನಿಸ್ ಆಟಗಾರ್ತಿ ಕರ್ಮನ್ ಕೌರ್ ಥಂಡಿ ಫ್ರೆಂಚ್ ಓಪನ್ ಅರ್ಹತಾ ಸುತ್ತನ್ನು ಪ್ರವೇಶಿಸಿದ್ದಾರೆ. 238ನೇ ಶ್ರೇಯಾಂಕಿತೆ ಕರ್ಮನ್ ಫ್ರೆಂಚ್ ಓಪನ್ 2026ರ ಅರ್ಹತಾ ಸುತ್ತಿಗೆ 119ನೇ ಆಟಗಾರ್ತಿಯಾಗಿ ಅರ್ಹತೆ ಸಂಪಾದಿಸಿದ್ದಾರೆ. ಮಂಗಳವಾರ ನಡೆಯಲಿರುವ ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ ಹಾರ್ಮನಿ ಟ್ಯಾನ್ ಅವರನ್ನು ಎದುರಿಸಲಿದ್ದಾರೆ. ಭಾರತದ ಮಾಜಿ ನಂ.1 ಆಟಗಾರ್ತಿ ಗಾಯದ ಬಳಿಕ ವೃತ್ತಿಪರ ಟೆನಿಸ್‌ನಲ್ಲಿ ಕಂಬ್ಯಾಕ್ ಮಾಡಿದ್ದು, ಇತ್ತೀಚೆಗೆ ಗ್ರ್ಯಾಂಡ್ ಸ್ಲಾಮ್ ಸಿಂಗಲ್ಸ್ ವಿಭಾಗದಲ್ಲಿ ಭಾರತ ಭಾಗವಹಿಸಿಲ್ಲ ಎಂಬ ಶಾಪವನ್ನು ಕೌರ್ ಕೊನೆಗೊಳಿಸಿದ್ದಾರೆ.


ಬ್ರೇವಿಸ್ ಸ್ಫೋಟಕ 44 ರನ್ | ಸಿಎಸ್‌ಕೆ ಸಾಧಾರಣ ಮೊತ್ತ

ಕಮಿನ್ಸ್ ದಾಳಿಗೆ ಕುಸಿದ ಚೆನ್ನೈ ಕಿಂಗ್ಸ್

ಚೆನ್ನೈ: ಡೆವಾಲ್ಡ್ ಬ್ರೇವಿಸ್ ಪರಾಕ್ರಮದ ನೆರವಿನಿಂದ ಸನ್‌ರೈಸರ್ಸ್ ವಿರುದ್ಧ ತವರಿನ ಕೊನೆಯ ಪಂದ್ಯವನ್ನಾಡಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ 180 ರನ್ ಕಲೆಹಾಕಿತು.

ಹೈದರಾಬಾದ್ ನಾಯಕ ಪ್ಯಾಟ್ ಕಮಿನ್ಸ್ ಮಾರಕ ಬೌಲಿಂಗ್ ದಾಳಿ ನಡೆಸಿದ್ದು, ಮೂರು ವಿಕೆಟ್‌ಗಳನ್ನು ಕಬಳಿಸಿದ್ದರು. ಕಮಿನ್ಸ್ ಮಾರಕ ಬೌಲಿಂಗ್ ದಾಳಿಯ ಮುಂದೆ ಬ್ರೇವಿಸ್ ಇನ್ನಿಂಗ್ಸ್ ದೊಡ್ಡ ಪರಿಣಾಮ ಬೀರದಿದ್ದರೂ 181 ರನ್ ಸವಾಲೊಡ್ಡುವಲ್ಲಿ ನೆರವಾದರು. 27 ಎಸೆತಗಳಿಂದ 44 ರನ್ ಬಾರಿಸುವ ಮೂಲಕ ಬ್ರೇವಿಸ್ ಸ್ಫೋಟಕ ಆಟವನ್ನಾಡಿದರು. ಟಾಸ್ ಗೆದ್ದ ಸಿಎಸ್‌ಕೆ ನಾಯಕ ಋತುರಾಜ್ ಗಾಯಕ್ವಾಡ್ ಮೊದಲು ಬ್ಯಾಟಿಂಗ್ ಮಾಡುವುದಾಗಿ ಹೇಳಿದರು. ಆರಂಭಿಕ ಸಂಜು ಸ್ಯಾಮ್ಸನ್ (13 ಎಸೆತಗಳಿಂದ 27 ರನ್) ಬಿರುಸಿನ ಆರಂಭ ನೀಡಿದ್ದರಿಂದ ಸಿಎಸ್‌ಕೆ ಪವರ್‌ಪ್ಲೇ ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 57 ರನ್ ಪೇರಿಸಿತ್ತು. ಆದರೆ ಸ್ಯಾಮ್ಸನ್, ಕಾರ್ತಿಕ್ ಶರ್ಮಾ (19 ಎಸೆತಗಳಿಂದ 32 ರನ್) ಮತ್ತು ಗಾಯಕ್ವಾಡ್ ವಿಕೆಟ್ ಕಬಳಿಸುವ ಮೂಲಕ ಕಮಿನ್ಸ್ ಸಿಎಸ್‌ಕೆ ಅಗ್ರ ಕ್ರಮಾಂಕವನ್ನು ಪೆವಿಲಿಯನ್‌ಗೆ ಕಳುಹಿಸಿದರು. ದಕ್ಷಿಣ ಆಫ್ರಿಕಾದ ಸ್ಫೋಟಕ ಬ್ಯಾಟರ್ ಬ್ರೇವಿಸ್ ಮಿಡಲ್ ಓವರ್‌ಗಳಲ್ಲಿ ಬೇಕಾಗಿದ್ದ ರನ್ ವೇಗವನ್ನು ಹೆಚ್ಚಿಸಿದರು. ಅವರ ಇನ್ನಿಂಗ್ಸ್ 2 ಬೌಂಡರಿ ಮತ್ತು 4 ಸಿಕ್ಸರ್‌ಗಳನ್ನು ಒಳಗೊಂಡಿದ್ದವು. ಇಶಾನ್ ಮಾಲಿಂಗ ಅವರಿಗೆ ಬ್ರೇವಿಸ್ ವಿಕೆಟ್ ಒಪ್ಪಿಸುವ ಮುನ್ನ ಚೆನ್ನೈ 150ರ ಗಡಿ ದಾಟಿತ್ತು. ಅಂದರೆ ಚೆನ್ನೈ ಗೌರವಯುತ ಮೊತ್ತ ದಾಖಲಿಸುವಲ್ಲಿ ಬ್ರೇವಿಸ್ ಪ್ರಮುಖ ಪಾತ್ರ ವಹಿಸಿದ್ದರು. ಶಿವಂ ದುಬೆ (26) 3 ಬೌಂಡರಿ ಮತ್ತು 1 ಸಿಕ್ಸರ್ ಬಾರಿಸಿದರೆ, ಕೊನೆಯಲ್ಲಿ ಪ್ರಶಾಂತ್ ವೀರ್ (11) ಎರಡು ಬೌಂಡರಿಗಳನ್ನು ಬಾರಿಸಿದ್ದರು.

ಪ್ಲೇಆಫ್ ಪ್ರವೇಶಿಸಲು ಸನ್‌ರೈಸರ್ಸ್ ಈ ಪಂದ್ಯ ಗೆಲ್ಲಬೇಕಿದ್ದು, ಇನ್ನೊಂದೆಡೆ ಚೆನ್ನೈಗೆ ಇದು ಗೆಲ್ಲಲೇಬೇಕಾದ ಪಂದ್ಯವಾಗಿರುವ ಕಾರಣ ಪಂದ್ಯ ಕುತೂಹಲಕರ ಪಂದ್ಯವಾಗಿ ಗಮನಸೆಳೆದಿದೆ.



ಸಂಕ್ಷಿಪ್ತ ಸ್ಕೋರ್

ಚೆನ್ನೈ 180/7 (20): ಬ್ರೇವಿಸ್ 44(27), ಕಾರ್ತಿಕ್ 32(19), ಸಂಜು 27(13)
ಕಮಿನ್ಸ್ 28ಕ್ಕೆ 3, ಸಾಕಿಬ್ 34ಕ್ಕೆ 2, ಪ್ರಫುಲ್ 37ಕ್ಕೆ 1

ಫಿಟ್ ಇಲ್ಲಂತೆ ಧೋನಿ

ಸಿಎಸ್‌ಕೆ ತನ್ನ ತವರಿನ ಕೊನೆಯ ಪಂದ್ಯದಲ್ಲಿ ಎಂಎಸ್ ಧೋನಿ ಇಂಪ್ಯಾಕ್ಟ್ ಆಟಗಾರನಾಗಿ ಕ್ರೀಸ್‌ಗಿಳಿಯುತ್ತಾರೆ ಎಂಬ ವದಂತಿಯೊಂದಿತ್ತು. ಆದರೆ ಟಾಸ್ ವೇಳೆ ಧೋನಿ ಆಡುತ್ತಾರೆಯೇ? ಎಂದು ವೀಕ್ಷಕ ವಿವರಣೆಕಾರ ರವಿಶಾಸ್ತ್ರಿ ಅವರು ನಾಯಕ ಋತುರಾಜ್‌ಗೆ ಪ್ರಶ್ನಿಸಿದ್ದರು. ಈ ಸಂದರ್ಭ ಉತ್ತರಿಸಿದ ಋತು, ಧೋನಿ ಇನ್ನೂ ಫಿಟ್ ಆಗಿಲ್ಲ, ಹಾಗಾಗಿ ಅವರು ಈ ಪಂದ್ಯದಲ್ಲೂ ಆಡುತ್ತಿಲ್ಲ ಎಂದು ಇಂಪ್ಯಾಕ್ಟ್ ಪ್ಲೇಯರ್ ವದಂತಿಗಳಿಗೆ ಫುಲ್‌ಸ್ಟಾಪ್ ಹಾಕಿದ್ದಾರೆ. ಭಾನುವಾರ ರಾತ್ರಿ ನೆಟ್ಸ್‌ನಲ್ಲಿ ತಂಡದೊಂದಿಗೆ ಧೋನಿ ಬ್ಯಾಟಿಂಗ್ ಅಭ್ಯಾಸ ನಡೆಸಿದ್ದರು. ಮೇ 21ರಂದು ಗುರುವಾರ ಅಹಮದಾಬಾದ್‌ನಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಚೆನ್ನೈ ತನ್ನ ಕೊನೆಯ ಪಂದ್ಯವನ್ನು ಆಡಲಿದ್ದು, ಬಹುಶಃ ಅಭಿಮಾನಿಗಳಿಗೆ ಧೋನಿ ದರ್ಶನಭಾಗ್ಯ ಸಿಗುವ ಸಾಧ್ಯತೆಯಿದೆ.

ತವರಿನಲ್ಲಿ ಸತತ ಮೂರು ಸೋಲುಂಡ ರಾಯಲ್ಸ್

ರಾಜರ ಪ್ಲೇಆಫ್ ಹಾದಿಗೆ ಅಡ್ಡಗಾಲಿಡ್ತಾರಾ ಜೈಂಟ್ಸ್?

ಜೈಪುರ: ಐಪಿಎಲ್ ಚರಿತ್ರೆಯಲ್ಲೇ ಮೇ ತಿಂಗಳಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ಆಡಿದ ಒಟ್ಟು 19 ಪಂದ್ಯಗಳಲ್ಲಿ 14 ಸೋಲುಂಡಿದ್ದು, ಕೇವಲ 4 ಪಂದ್ಯಗಳನ್ನಷ್ಟೇ ಇದುವರೆಗೆ ಗೆದ್ದಿದೆ. ಹೀಗಾಗಿ ಐಪಿಎಲ್ ದ್ವಿತೀಯಾರ್ಧದಲ್ಲಿ ರಾಯಲ್ಸ್ ಕಳಪೆ ಪ್ರದರ್ಶನ ನೀಡುತ್ತಿರುವುದು ಇದೇನು ಹೊಸತಲ್ಲ. ಆದರೂ ತವರಿನ ಮೈದಾನ ಜೈಪುರದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಗೆಲುವು ಸಾಧಿಸಿ ಈ ಆವೃತ್ತಿಯ ಪ್ಲೇಆಫ್ ಆಸೆಯನ್ನು ಜೀವಂತವಿಡುವ ಧಾವಂತದಲ್ಲಿದೆ.

ರಾಯಲ್ಸ್ 6 ಗೆಲುವು ಮತ್ತು ಅಷ್ಟೇ ಸೋಲುಗಳೊಂದಿಗೆ 12 ಅಂಕಗಳನ್ನು ಪಡೆದು ಅಂಕಪಟ್ಟಿಯಲ್ಲಿ 6ನೇ ಸ್ಥಾನದಲ್ಲಿದೆ. ಉಳಿದಿರುವ ಲಖನೌ ಜೈಂಟ್ಸ್ ಹಾಗೂ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯಗಳನ್ನು ಗೆಲ್ಲಬೇಕಿದೆ. ಆರ್‌ಆರ್ ತನ್ನ ಉಳಿದ ಎರಡೂ ಪಂದ್ಯಗಳನ್ನು ಗೆದ್ದರೆ ಒಟ್ಟು 16 ಅಂಕಗಳನ್ನು ಸಂಪಾದಿಸಲಿದೆ. ಇಂಥ ಸಂದರ್ಭದಲ್ಲಿ ಸನ್‌ರೈಸರ್ಸ್ ಅಥವಾ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳಲ್ಲಿ ಒಂದೇ ತಂಡ 16 ಅಂಕಗಳ ಗಡಿ ದಾಟಿದರೆ, ರಾಜಸ್ಥಾನ್ ನೇರ ಪ್ಲೇಆಫ್ ಸ್ಥಾನ ಗಿಟ್ಟಿಸಿಕೊಳ್ಳಲಿದೆ.

ಆದರೆ ಸಿಎಸ್‌ಕೆ ಎರಡೂ ಪಂದ್ಯಗಳನ್ನು ಗೆದ್ದು, ಸನ್‌ರೈಸರ್ಸ್ ತಂಡ ಆರ್‌ಸಿಬಿ ವಿರುದ್ಧ ಗೆಲುವು ಸಾಧಿಸಿದರೆ, ನೆಟ್ ರನ್‌ರೇಟ್ ಪ್ರಮುಖ ಪಾತ್ರ ವಹಿಸಲಿದೆ. ಹಲವು ಇತರೆ ಫಲಿತಾಂಶಗಳು ಅನುಕೂಲಕರವಾಗಿ ಬಂದರೆ 14 ಅಂಕಗಳೊಂದಿಗೆ ಕೂಡ ರಾಜಸ್ಥಾನ ಪ್ಲೇಆಫ್‌ಗೆ ನುಗ್ಗುವ ಅವಕಾಶ ಹೊಂದಿದೆ. ಆದರೆ ಸದ್ಯ ಆರ್‌ಆರ್ ಸತತ ಮೂರು ಸೋಲುಗಳಿಂದಾಗಿ ಒತ್ತಡದಲ್ಲಿ ಸಿಲುಕಿದೆ. ಅದರಲ್ಲಿ ಎರಡು ಸೋಲುಗಳು ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧವೇ ಬಂದಿವೆ. ತವರಿನ ಮೈದಾನದಲ್ಲಿ ಕೊನೆಯ ಮೂರು ಪಂದ್ಯಗಳಲ್ಲಿ ಸೋತ ರಾಯಲ್ಸ್ ತಂಡದ ಮೇಲೆ ಒತ್ತಡ ಹೆಚ್ಚಾಗಿದೆ.

ಇನ್ನೊಂದೆಡೆ, ಪ್ಲೇಆಫ್ ಸ್ಪರ್ಧೆಯಿಂದ ಹೊರಬಿದ್ದಿದ್ದರೂ ಲಖನೌ ಸೂಪರ್ ಜೈಂಟ್ಸ್ ಇತ್ತೀಚಿನ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ತೋರಿಸಿದೆ. ಸಿಎಸ್‌ಕೆ ವಿರುದ್ಧ ಉತ್ತಮ ಪ್ರದರ್ಶನ ನೀಡಿದ್ದು, ಲಖನೌ ಅಗ್ರ ಕ್ರಮಾಂಕದ ಬ್ಯಾಟರ್ಸ್ ಬಲವಾದ ಪ್ರದರ್ಶನ ನೀಡುತ್ತಿದ್ದಾರೆ. ಬೌಲರ್‌ಗಳೂ ಪರಿಣಾಮಕಾರಿ ಆಟವಾಡಿದ್ದು, ಕೊನೆಯ ಮೂರು ಪಂದ್ಯಗಳಲ್ಲಿ 2 ಗೆಲುವು ಸಾಧಿಸಿದೆ. ಆದರೆ ಲಖನೌ ತಡವಾಗಿ ಚೇತರಿಸಿಕೊಂಡಿದ್ದು, ರಾಯಲ್ಸ್ ಎದುರು ಗೆಲ್ಲುವ ಗುರಿ ಹೊಂದಿರಲಿದೆ.



ರಾಜಸ್ಥಾನ-ಲಖನೌ
ಇಂದು ರಾತ್ರಿ 7.30ರಿಂದ,
ಸ್ಥಳ: ಜೈಪುರ, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್



ದಿಲ್ಲಿ ಪ್ಲೇಆಫ್ ಆಸೆ ಜೀವಂತ!

ದಿಲ್ಲಿ: ರಾಜಸ್ಥಾನ ರಾಯಲ್ಸ್ ನೀಡಿದ 194 ರನ್ ಸವಾಲನ್ನು ಯಶಸ್ವಿಯಾಗಿ ಬೆನ್ನತ್ತಿದ ದಿಲ್ಲಿ ಕ್ಯಾಪಿಟಲ್ಸ್ ತನ್ನ ಪ್ಲೇಆಫ್ ಆಸೆಯನ್ನು ಜೀವಂತವಾಗಿರಿಸಿದೆ.

ಅಕ್ಷರ್ ಪಟೇಲ್, ಅಷುತೋಶ್ ಶರ್ಮಾ ಬ್ಯಾಟಿಂಗ್ ಮತ್ತು ಮಿಚೆಲ್ ಸ್ಟಾರ್ಕ್ ಬೌಲಿಂಗ್ ಪ್ರದರ್ಶನದ ನೆರವಿನಿಂದಾಗಿ ದಿಲ್ಲಿ ತವರಿನ ಪಂದ್ಯ ಗೆದ್ದಿದೆ. ಒಂದು ಹಂತದಲ್ಲಿ ರಾಯಲ್ಸ್ 220 ರನ್ ಕಲೆಹಾಕುವುದೂ ಸಾಧ್ಯವಿತ್ತು. ಆದರೆ 15ನೇ ಓವರ್‌ನಲ್ಲಿ ಸ್ಟಾರ್ಕ್ 3 ವಿಕೆಟ್ ಕಬಳಿಸುವ ಮೂಲಕ ರಾಯಲ್ಸ್ ರನ್ ವೇಗಕ್ಕೆ ದೊಡ್ಡ ಕಡಿವಾಣ ಹಾಕಿದ್ದರು.

194 ರನ್ ಸವಾಲನ್ನು ಬೆನ್ನತ್ತಿದ ಕ್ಯಾಪಿಟಲ್ಸ್ ಪರ ಅಭಿಷೇಕ್ ಪೊರೆಲ್ ಮತ್ತು ಕೆಎಲ್ ರಾಹುಲ್ ಅರ್ಧ ಶತಕ ದಾಖಲಿಸಿದ್ದರು. ಅವರಿಬ್ಬರ ನಂತರ ಮಿಡಲ್ ಓವರ್‌ಗಳಲ್ಲಿ ಅಕ್ಷರ್ ಪಟೇಲ್ ಮತ್ತು ಅಷುತೋಶ್ ಶರ್ಮಾ ಬಿರುಸಿನ ಆಟದೊಂದಿಗೆ ತಂಡವನ್ನು ಗೆಲುವಿನ ದಡ ಸೇರಿಸಿದ್ದರು. ಇನ್ನೂ 4 ಎಸೆತಗಳು ಉಳಿದಿರುವಂತೆ ಕ್ಯಾಪಿಟಲ್ಸ್ ಪಂದ್ಯ ಗೆದ್ದಿತು.

- ಕ್ಯಾಪಿಟಲ್ಸ್ ಪರ ರಾಹುಲ್, ಪೊರೆಲ್ ಅರ್ಧ ಶತಕ
- 4 ವಿಕೆಟ್ ಕಬಳಿಸಿದ ಸ್ಟಾರ್ಕ್
- ದಿಲ್ಲಿಗೆ 5 ವಿಕೆಟ್ ಜಯ



ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ 193/8 (20): ಜ್ಯುರೆಲ್ 53, ಪರಾಗ್ 51, ಸೂರ್ಯವಂಶಿ 46 (ಸ್ಟಾರ್ಕ್ 40ಕ್ಕೆ 4).
ದಿಲ್ಲಿ 197/5 (20): ರಾಹುಲ್ 56, ಪೊರೆಲ್ 51 (ಆರ್ಚರ್ 35ಕ್ಕೆ 2).
ಪಂದ್ಯಶ್ರೇಷ್ಠ: ಮಿಚೆಲ್ ಸ್ಟಾರ್ಕ್

2026ರಲ್ಲಿ ದಿಲ್ಲಿ ಶ್ರೇಷ್ಠ ಪವರ್‌ಪ್ಲೇ ಆಟ

ಈ ಆವೃತ್ತಿಯಲ್ಲಿ ದಿಲ್ಲಿ ತನ್ನ ಅತ್ಯುತ್ತಮ ಪವರ್‌ಪ್ಲೇ ಆಟವನ್ನು ಪ್ರದರ್ಶಿಸಿತು. ಕನ್ನಡಿಗ ಕೆಎಲ್ ರಾಹುಲ್ ಖಾತೆ ತೆರೆಯುವ ಮುನ್ನ ಆರ್ಚರ್ ಬೌಲಿಂಗ್‌ನಲ್ಲಿ ಇನ್ನೋರ್ವ ಕನ್ನಡಿಗ ಯಶ್ ರಾಜ್ ಪೂಂಜಾರಿಂದ ಜೀವದಾನ ಪಡೆದಿದ್ದರು. ಪವರ್‌ಪ್ಲೇಯ 6 ಓವರ್‌ಗಳಲ್ಲಿ ದಿಲ್ಲಿ ವಿಕೆಟ್ ನಷ್ಟವಿಲ್ಲದೆ 72 ರನ್ ಕಲೆಹಾಕಿತ್ತು. ಇದು 2026ರಲ್ಲಿ ದಿಲ್ಲಿ ತಂಡದ ಅತ್ಯುತ್ತಮ ಪವರ್‌ಪ್ಲೇ ಸ್ಕೋರ್ ಆಗಿದೆ. ರಾಹುಲ್ ಕ್ಯಾಚ್ ಕೈಚೆಲ್ಲಿದ್ದ ಪೂಂಜಾ ಬೌಲಿಂಗ್‌ಗೆ ಬಂದಾಗ ಕಂಬ್ಯಾಕ್ ಮಾಡಿದ್ದಾರೆ. 7 ಓವರ್‌ಗಳಲ್ಲಿ ದಿಲ್ಲಿ ವಿಕೆಟ್‌ನಷ್ಟವಿಲ್ಲದೆ 85 ರನ್ ಎಂಬ ಸ್ಥಿತಿಯಲ್ಲಿತ್ತು. ಆದರೆ ಪೂಂಜಾ ತಮ್ಮ ಓವರ್‌ನಲ್ಲಿ ನಾಲ್ಕೇ ರನ್ ಬಿಟ್ಟುಕೊಟ್ಟು ದಿಲ್ಲಿ ರನ್ ರೇಟ್‌ಗೆ ಕಡಿವಾಣ ಹಾಕಿದ್ದರು. ಪೂಂಜಾ ಓವರ್ ಕ್ಯಾಪಿಟಲ್ಸ್ ಇನ್ನಿಂಗ್ಸ್‌ನ ಬೌಂಡರಿಲೆಸ್ ಮೊದಲ ಓವರ್ ಆಗಿತ್ತು. ಇದಾದ ಬಳಿಕ 29 ಎಸೆತಗಳಲ್ಲಿ ಅರ್ಧ ಶತಕ ದಾಖಲಿಸಿದ್ದ ಪೊರೆಲ್ ಔಟಾಗಿದ್ದರು. ರಾಹುಲ್ 34 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ್ದರು.

ಅಕ್ಷರ್, ಶರ್ಮಾ ಪರಾಕ್ರಮ: 17ನೇ ಓವರ್‌ನಲ್ಲಿ ಕೇವಲ 8 ರನ್ ಬಿಟ್ಟುಕೊಟ್ಟು ಸ್ಟಬ್ಸ್ ವಿಕೆಟ್ ಕಬಳಿಸಿದ ಆರ್ಚರ್ ದಿಲ್ಲಿ ಗೆಲುವು ಕಸಿಯುವ ಪ್ರಯತ್ನ ಮಾಡಿದ್ದರು. ಇನ್ನು 3 ಓವರ್‌ಗಳಲ್ಲಿ 35 ರನ್ ಅಗತ್ಯವಿದ್ದಾಗ ಅಕ್ಷರ್ ಮತ್ತು ಮಿಲ್ಲರ್ ಕ್ರೀಸ್‌ನಲ್ಲಿದ್ದರು. ಪರಾಗ್ ಆಫ್‌ಸ್ಪಿನ್ನರ್ ಫೆರೇರಾ ಮತ್ತು ಮಧ್ಯಮ ವೇಗದ ಶನಕಾ ಅವರಿಗೆ ಬೌಲಿಂಗ್ ನೀಡಿದ್ದರು. ಆದರೆ ಎಡಗೈ ಬ್ಯಾಟರ್‌ಗಳು ಯಾವುದೇ ಸಮಸ್ಯೆಯಿಲ್ಲದೆ ಬ್ಯಾಟ್ ಬೀಸಿ ಸಿಕ್ಸರ್ ಎತ್ತಿದ್ದರು. ಕೊನೆಯ ಓವರ್‌ನಲ್ಲಿ 7 ರನ್ ಬೇಕಿದ್ದಾಗ ಅಷುತೋಶ್ ಶರ್ಮಾ ಒಂದು ಬೌಂಡರಿ ಮತ್ತು ಸಿಕ್ಸರ್ ಹೊಡೆದಿದ್ದರು.

ಎಸ್‌ಎಂ ಕೃಷ್ಣ ಮೆಮೋರಿಯಲ್ ಓಪನ್ | ಎಟಿಪಿ ಚಾಲೆಂಜರ್ ಟೂರ್ ಪಂದ್ಯಾವಳಿ

ಎಸ್‌ಎಂ ಕೃಷ್ಣ ಟೂರ್ನಿ 2ನೇ ಆವೃತ್ತಿಗೆ ಚಾಲನೆ

ಬೆಂಗಳೂರು: ಮಾಜಿಮುಖ್ಯಮಂತ್ರಿ ಎಸ್‌ಎಂ ಕೃಷ್ಣ ಅವರ ಸ್ಮರಣಾರ್ಥ ಆಯೋಜಿಸಲಾಗುವ ಎಸ್‌ಎಂ ಕೃಷ್ಣ ಮೆಮೋರಿಯಲ್ ಓಪನ್ ಟೂರ್ನಿಯ ಎರಡನೇ ಆವೃತ್ತಿಯ ಉದ್ಘಾಟನಾ ಸಮಾರಂಭವು ಭಾವಪೂರ್ಣ ಗೌರವ ನಮನ ಹಾಗೂ ಸಂಪ್ರದಾಯಬದ್ಧ ಕಾರ್ಯಕ್ರಮಗಳೊಂದಿಗೆ ಬೆಂಗಳೂರಿನ ಎಸ್‌ಎಂ ಕೃಷ್ಣ ಟೆನಿಸ್ ಸ್ಟೇಡಿಯಂನಲ್ಲಿ ಭಾನುವಾರ ನೆರವೇರಿತು.

ಈ ಸಮಾರಂಭದಲ್ಲಿ ಗಣ್ಯರು, ಆಟಗಾರರು, ಅಧಿಕಾರಿಗಳು ಹಾಗೂ ಟೆನಿಸ್ ಅಭಿಮಾನಿಗಳು ಭಾಗವಹಿಸಿ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್‌ಎಂ ಕೃಷ್ಣ ಅವರ ಸಾರ್ವಜನಿಕ ಜೀವನ ಮತ್ತು ಕ್ರೀಡಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿದರು. ಕೇಸರಿ, ಬಿಳಿ ಮತ್ತು ಹಸಿರು ಬಣ್ಣದ ಬಲೂನ್‌ಗಳನ್ನು ಹಾರಿಸುವ ಮೂಲಕ ಟೂರ್ನಿಗೆ ಅಧಿಕೃತ ಚಾಲನೆ ನೀಡಲಾಯಿತು. ಮುಖ್ಯ ಅತಿಥಿಯಾಗಿ ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಫಿಬಾ ಏಷ್ಯಾ ಅಧ್ಯಕ್ಷರಾದ ಕೆ. ಗೋವಿಂದರಾಜ್ ಭಾಗವಹಿಸಿದ್ದರು. ಇದೇ ವೇಳೆ ಎಸ್‌ಎಂ ಕೃಷ್ಣ ಅವರ ಇಬ್ಬರು ಹೆಣ್ಣುಮಕ್ಕಳಾದ ಮಾಳವಿಕಾ ಹೆಗ್ಡೆ ಮತ್ತು ಶಾಂಭವಿ ಉಮೇಶ್, ಮೊಮ್ಮಗ ಇಶಾನ್ ಹೆಗ್ಡೆ ಉಪಸ್ಥಿತರಿದ್ದರು. ಇದರ ಜೊತೆಗೆ ಎಐಟಿಎ ಗೌರವ ಜಂಟಿ ಕಾರ್ಯದರ್ಶಿ ಹಾಗೂ ಟೂರ್ನಿ ನಿರ್ದೇಶಕ ಸುನಿಲ್ ಯಜಮಾನ್, ಟೂರ್ನಿ ಮೇಲುಸ್ತುವಾರ ಅಲಿ ಕಟೇಬಿ, ಕೆಎಸ್‌ಎಲ್‌ಟಿಎ ಇಸಿ ಸದಸ್ಯ ಹಾಗೂ ಸಹಾಯಕ ಟೂರ್ನಿ ನಿರ್ದೇಶಕ ಪೀಟರ್ ವಿಜಯ್ ಕುಮಾರ್, ಕೆಎಸ್‌ಎಲ್‌ಟಿಎ ಇಸಿ ಸದಸ್ಯೆ ಗಾಯತ್ರಿ ರಾವ್ ಮತ್ತು ರಾಜಶೇಖರ್ ಸಹ ಉಪಸ್ಥಿತರಿದ್ದರು.

2025ರಲ್ಲಿ ಐಟಿಎಫ್ ಎಂ25 ಯಶಸ್ವಿ ಟೂರ್ನಿಯಾಗಿ ಆರಂಭಗೊಂಡಿದ್ದ ಎಸ್‌ಎಂ ಕೃಷ್ಣ ಮೆಮೋರಿಯಲ್ ಓಪನ್, ಈ ವರ್ಷ ಮಹತ್ವದ ಹಂತ ತಲುಪಿದೆ. ಇದೀಗ 63,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತದೊಂದಿಗೆ ಎಟಿಪಿ ಚಾಲೆಂಜರ್ ಟೂರ್ ಕ್ಯಾಲೆಂಡರ್‌ಗೆ ಪ್ರವೇಶಿಸಿದೆ.

ಟೂರ್ನಿಯ ಈ ಮೇಲ್ದರ್ಜೆಗೇರಿದ್ದು, ಭಾರತೀಯ ಟೆನಿಸ್ ಆಟಗಾರರಿಗೆ ತವರಿನಲ್ಲೇ ಉನ್ನತ ಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸುವುದರ ಜೊತೆಗೆ, ಕರ್ನಾಟಕವನ್ನು ಅಂತಾರಾಷ್ಟ್ರೀಯ ಮಟ್ಟದ ಟೆನಿಸ್ ಟೂರ್ನಿಗಳ ಪ್ರಮುಖ ಕೇಂದ್ರವನ್ನಾಗಿ ಇನ್ನಷ್ಟು ಬಲಪಡಿಸುವ ನಿರೀಕ್ಷೆಯಿದೆ.




ಗಣ್ಯರು, ಕುಟುಂಬಸ್ಥರಿಂದ ಗೌರವ ನಮನ

ಮುಖ್ಯ ಡ್ರಾಗೆ ಬೆಂಗಳೂರಿನ ಆರಾಧ್ಯ ಕ್ಷಿತಿಜ್

ಕರ್ನಾಟಕದ ಭರವಸೆಯ ಜೂನಿಯರ್ ಆಟಗಾರರಲ್ಲಿ ಒಬ್ಬರಾಗಿರುವ ಆರಾಧ್ಯ, ಅಂಡರ್-16 ವಿಭಾಗದಲ್ಲಿ ಭಾರತದ ನಂ.1 ಸ್ಥಾನಕ್ಕೇರಿದ್ದವರು. ಈ ವರ್ಷ ಐಟಿಎಫ್ ಜೂನಿಯರ್ ಸರ್ಕ್ಯೂಟ್‌ನಲ್ಲಿ ಜೆ200 ಪ್ರಶಸ್ತಿ ಗೆದ್ದಿರುವ ಅವರು, ಅರ್ಹತಾ ಸುತ್ತಿನಲ್ಲಿ ಮೊದಲ ಶ್ರೇಯಾಂಕಿತ ಆಟಗಾರನ ವಿರುದ್ಧ 7-6 (2), 6-4 ನೇರ ಸೆಟ್‌ಗಳ ಅಚ್ಚರಿ ಜಯ ದಾಖಲಿಸಿದ್ದನ್ನು ಮತ್ತೊಮ್ಮೆ ದೃಢಪಡಿಸಿದರು. ಅನುಭವಿ ನಿತಿನ್ ಕುಮಾರ್ ಸಿನ್ಹಾ ವಿರುದ್ಧ ಆರಾಧ್ಯ ಅತ್ಯಂತ ಸಮಾಧಾನದಿಂದ ಆಟವಾಡಿದರು. ಮೊದಲ ಸೆಟ್ ಟೈಬ್ರೇಕ್ ಜಯಿಸಿದ ಬಳಿಕ ಎರಡನೇ ಸೆಟ್‌ನಲ್ಲೂ ಹಿಡಿತ ಕಳೆದುಕೊಳ್ಳದೇ ನೇರ ಸೆಟ್‌ಗಳಲ್ಲಿ ಪಂದ್ಯ ಮುಗಿಸಿದರು. ತಮ್ಮ ವೃತ್ತಿಜೀವನದ ಮಹತ್ವದ ಮೈಲಿಗಲ್ಲಾದ ಈ ಜಯದೊಂದಿಗೆ, ಆರಾಧ್ಯ ತಮ್ಮ ತವರೂರಿನ ಎಟಿಪಿ ಚಾಲೆಂಜರ್ ಟೂರ್ನಿಯ ಮುಖ್ಯ ಡ್ರಾದಲ್ಲಿ ಸ್ಥಾನ ಪಡೆದಿದ್ದಾರೆ. ಭಾರತೀಯ ಆಟಗಾರರ ಹಲವು ಪಂದ್ಯಗಳು ಇನ್ನೂ ಪೂರ್ಣಗೊಳ್ಳಬೇಕಿದ್ದು, ಮಂಗಳವಾರದ ವೇಳಾಪಟ್ಟಿ ಭರ್ತಿಯಾಗಿರುವ ಸಾಧ್ಯತೆಯಿದೆ.



ಮಳೆಯಿಂದ ಪಂದ್ಯಗಳಿಗೆ ಅಡ್ಡಿ




ನಿರಂತರ ಮಳೆಯ ಕಾರಣದಿಂದ ಎಸ್‌ಎಂ ಕೃಷ್ಣ ಸ್ಮಾರಕ ಓಪನ್ ಎಟಿಪಿ ಚಾಲೆಂಜರ್ ಟೂರ್ನಿಯ ಮುಖ್ಯ ಡ್ರಾದ ಆರಂಭಿಕ ದಿನದ ಹಲವು ಪಂದ್ಯಗಳು ಸ್ಥಗಿತಗೊಂಡವು. ಮೊದಲ ಸುತ್ತಿನ ಐದು ಸಿಂಗಲ್ಸ್ ಹಾಗೂ ಒಂದು ಡಬಲ್ಸ್ ಪಂದ್ಯ ಮಳೆ ಅಡ್ಡಿಯಿಂದ ಪೂರ್ಣಗೊಳ್ಳಲಿಲ್ಲ. ಸಂಜೆ ಸುಮಾರು 6:30ರ ವೇಳೆಗೆ ಕೋರ್ಟ್‌ಗಳನ್ನು ಒಣಗಿಸಿ ಆಟ ಮರುಪ್ರಾರಂಭಿಸಲು ಸಿದ್ಧತೆ ನಡೆದರೂ, ಮತ್ತೆ ಸುರಿದ ಮಳೆಯಿಂದ ಪಂದ್ಯಗಳನ್ನು ರದ್ದುಪಡಿಸಲಾಯಿತು. ಅಪೂರ್ಣ ಪಂದ್ಯಗಳು ಮಂಗಳವಾರಕ್ಕೆ ಮುಂದೂಡಲ್ಪಟ್ಟಿವೆ. ಇದಕ್ಕೂ ಮೊದಲು ದಿನದ ಗಮನ ಸೆಳೆದವರು 17 ವರ್ಷದ ವೈಲ್ಡ್‌ಕಾರ್ಡ್ ಆಟಗಾರ ಆರಾಧ್ಯ ಕ್ಷಿತಿಜ್ ಮುಖ್ಯ ಡ್ರಾಗೆ ಪ್ರವೇಶಿಸಿದರು.

ಸಿನ್ನರ್ ಗೋಲ್ಡನ್ ಮಾಸ್ಟರ್ ವಿನ್ನರ್

ರೋಮ್: ವಿಶ್ವ ನಂ.1 ಟೆನಿಸಿಗ ಯಾನಿಕ್ ಸಿನ್ನರ್ ಇಟಾಲಿಯನ್ ಓಪನ್ ಗೆದ್ದು, ಕ್ಯಾಲೆಂಡರ್ ವರ್ಷವೊಂದರಲ್ಲಿ ಎಲ್ಲಾ ಎಟಿಪಿ ಅಗ್ರ-ಕ್ರಮಾಂಕದ ಪ್ರಶಸ್ತಿಗಳನ್ನು ಗೆದ್ದು ಗೋಲ್ಡನ್ ಮಾಸ್ಟರ್ ಎಂಬ ದಾಖಲೆ ಬರೆದಿದ್ದಾರೆ. ಈ ಮೂಲಕ ಹಿಂದಿನ ಗೋಲ್ಡನ್ ಮಾಸ್ಟರ್ಸ್ ದಾಖಲೆ ಬರೆದಿದ್ದ ಸರ್ಬಿಯಾ ದಂತಕತೆ ನೊವಾಕ್ ಜೊಕೊವಿಚ್ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ.


ಇದಲ್ಲದೆ, ಕಳೆದ 50 ವರ್ಷಗಳಲ್ಲಿ ಇಟಾಲಿಯನ್ ಓಪನ್ ಪ್ರಶಸ್ತಿ ಗೆದ್ದ ಮೊದಲ ಇಟಲಿ ಟೆನಿಸಿಗನೆಂಬ ದಾಖಲೆ ಬರೆದಿದ್ದಾರೆ. ಈ ಹಿಂದೆ ಆಡ್ರಿಯಾನೋ ಪನಟ್ಟಾ 1976ರ ಇಟಾಲಿಯನ್ ಓಪನ್ ಚಾಂಪಿಯನ್ ಆಗಿದ್ದರು. ಫೈನಲ್ ಗೆದ್ದನಂತರ ಪ್ರಶಸ್ತಿ ಸಮಾರಂಭದಲ್ಲಿ 75 ವರ್ಷದ ಪನಟ್ಟಾ ಭಾಗವಹಿಸಿದ್ದು, ಆಡ್ರಿಯಾನೋ 50 ವರ್ಷಗಳ ಬಳಿಕ ನಾವು ಬಹಳ ಪ್ರಾಮುಖ್ಯ ಟ್ರೋಫಿ ಗೆದ್ದಿದ್ದೇವೆ ಎಂದು ಸಿನ್ನರ್ ಹೇಳಿದ್ದಾರೆ. ಸಿನ್ನರ್ ಈವರೆಗೆ ಫ್ರೆಂಚ್ ಓಪನ್ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಯೊಂದನ್ನಷ್ಟೇ ಗೆದ್ದಿಲ್ಲ. ಉಳಿದಂತೆ ಎರಡು ಬಾರಿ ಆಸ್ಟ್ರೇಲಿಯನ್ ಓಪನ್, ತಲಾ ಒಂದು ಬಾರಿ ವಿಂಬಲ್ಡನ್ ಹಾಗೂ ಯುಎಸ್ ಓಪನ್ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ ಗಳನ್ನು ಗೆದ್ದಿದ್ದಾರೆ. ಭಾನುವಾರ ನಡೆದ ಫೈನಲ್‌ನಲ್ಲಿ ಕ್ಯಾಸ್ಪರ್ ರೂಡ್ ಅವರನ್ನು 6-4, 6-4 ನೇರ ಸೆಟ್‌ಗಳಿಂದ ಮಣಿಸಿ ಸಿನ್ನರ್ ಚಾಂಪಿಯನ್ ಆಗಿದ್ದಾರೆ. ನಾರ್ವೆ ಆಟಗಾರನ ವಿರುದ್ಧ ಇದು ಸಿನ್ನರ್‌ಗೆ 5ನೇ ಗೆಲುವು. ಅಚ್ಚರಿಯ ಗೆಲುವಿನ ಲಯದಲ್ಲಿರುವ ಸಿನ್ನರ್ ಕಳೆದ 29 ಪಂದ್ಯಗಳನ್ನು ಗೆದ್ದಿದ್ದಾರೆ.



ಸಿನ್ನರ್‌ಗೆ ಜೊಕೊ ಅಭಿನಂದನೆ

ತಮ್ಮ ಗೋಲ್ಡನ್ ಮಾಸ್ಟರ್ ದಾಖಲೆಯನ್ನು ಸರಿಗಟ್ಟಿದ ಸಿನ್ನರ್‌ಗೆ ಜೊಕೊವಿಚ್ ಇನ್‌ಸ್ಟಾಗ್ರಾಮ್‌ನಲ್ಲಿ, ಎಕ್ಸ್‌ಕ್ಲೂಸಿವ್ ಕ್ಲಬ್‌ಗೆ ನಿಮಗೆ ಸ್ವಾಗತ ಎಂಬ ಸಂದೇಶದಿಂದ ಅಭಿನಂದಿಸಿದ್ದಾರೆ.

- ಸತತ 29ನೇ ಗೆಲುವು
- ಸತತ 6ನೇ ಎಟಿಪಿ ಮಾಸ್ಟರ್ಸ್ ಪ್ರಶಸ್ತಿ




ಸ್ವಿಟೊಲಿನಾ ಮಹಿಳಾ ಚಾಂಪಿಯನ್

ವಿಶ್ವ ನಂ.4 ಅಮೆರಿಕ ಆಟಗಾರ್ತಿ ಕೊಕೊ ಗಾಫ್‌ರನ್ನು ಮಣಿಸಿದ ಉಕ್ರೇನ್‌ನ ಎಲಿನಾ ಸ್ವಿಟೊಲಿನಾ ಇಟಾಲಿಯನ್ ಓಪನ್ ಪ್ರಶಸ್ತಿ ಮುಡಿಗೇರಿಸಿದ್ದಾರೆ. ಫೈನಲ್ ಪಂದ್ಯದಲ್ಲಿ 6-4, 6-7(3), 6-2 ಸೆಟ್ ಅಂತರದಿಂದ ಸ್ವಿಟೊಲಿನಾ ಜಯಿಸಿದ್ದಾರೆ. ಟೆನಿಸ್ ಋತುವಿನ ಮೊದಲ ಆವೆಮಣ್ಣಿನ ಪ್ರಶಸ್ತಿ ಗೆದ್ದ ಸ್ವಿಟೊಲಿನಾ ಫ್ರೆಂಚ್ ಓಪನ್ ಗ್ರ್ಯಾಂಡ್ ಸ್ಲಾಮ್ ಗೆಲ್ಲುವ ಫೇವರಿಟ್ ಆಗಿದ್ದಾರೆ. 8 ವರ್ಷಗಳ ಬಳಿಕ ಸ್ವಿಟೊಲಿನಾ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದು ಸಂಭ್ರಮಿಸಿದ್ದಾರೆ. ಇದೇ ವೇಳೆ ಉಕ್ರೇನಿಯನ್ನರ ಪ್ರೀತಿ ಮತ್ತು ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ಪದಬಂಧ

- ರಾಜಾ ಸಂಗಮೇಶ ಹಿರೇಮಠ



5988

5987 ಉತ್ತರ

ಎಡದಿಂದ ಬಲಕ್ಕೆ:
1.ನಾಗರಿಕ 3.ವೀಣಾಪಾಣಿ
5.ಬವರ 6.ಡವರಿಸು
8.ತನುಜಾತೆ 10.ದತ್ತೂರಿ
11.ತಟಾಕ 13.ಕೊಳಗ
15.ರದ್ದುಮಾಡು
16.ಯುವರಾಜ
ಮೇಲಿನಿಂದ ಕೆಳಕ್ಕೆ
: 1.ನಾಡಗೌಡ
2.ಕಬಳಿಸು 3.ವೀರಗೀತೆ
4.ತರಂಗಿಣಿ 7.ರಿಪೇರಿ
9.ಜಾಗೃತ 10.ದರಕಾರ
12.ಕಪಿಧ್ವಜ 13.ಕೊರಡು
14.ಗತಾಯು

ಎಡದಿಂದ ಬಲಕ್ಕೆ
2.ಕಾಯವಿಲ್ಲದವನು-ಮನ್ಮಥ (3)
5.ಹಿಮಾಲಯವನ್ನು ಹೀಗೂ ಕರೆಯಬಹುದು (4)
6.ಸೈನ್ಯದ ಮುಖ್ಯಸ್ಥ-ನಾಯಕನೀತ (4)
7.ಯಾವಾಗಲೂ-ನಿರಂತರವಾಗಿ ಎಂಬರ್ಥದ ಶಬ್ದ (3)
9.ಅನುಭವದ ಆಧಾರದ ಮೇಲಿನ ಜನಪ್ರಿಯ ಮಾತು (3)
10.ತಪ್ಪನ್ನು ಹೊರಿಸು (4)
12.ಕುತಂತ್ರವನ್ನು ಹೀಗೂ ಹೇಳುತ್ತೇವೆ (4)
14.ಸ್ವರ್ಗದಲ್ಲಿ ಜನಿಸಿದವನು-ದೇವತೆ (3)
15.ನೂರು ವರ್ಷಗಳ ಕಾಲಾವಧಿಯಿದು (4)
16.ಅಪಹಾಸ್ಯಕ್ಕೆ ಗುರಿಯಾದವನು (4)
ಮೇಲಿನಿಂದ ಕೆಳಕ್ಕೆ
1.ಈ ಸಮಾಜಕ್ಕೆ ಮಂಜ ಮಾಡಿದ್ದು ಹೀಗೆ ಸೂಕ್ತವಾಗಿದೆ (4)
2.ತಿಳಿವಳಿಕೆ-ಜ್ಞಾನವಿದು (3)
3.ಜಬರಿಸು-ಸಿಟ್ಟಿನಿಂದ ಕೂಗು (3)
4.ಮಾತೃಭಾಷೆಯನ್ನು ಸರಳವಾಗಿ ಹೀಗೆನ್ನುತ್ತೇವೆ (4)
8.ಬುನಾದಿಯ ಸಮಾನಪದ (4)
9.ಅತಿವೇಗವಾಗಿ ಓಡುವಿಕೆ (4)
10.ಅಸಮಾಧಾನದ ಉಗ್ರ ಪ್ರದರ್ಶನ-ರೋಷ (3)
11.ಸುದ್ದಿ ನನಗೆ ತಿಳಿದದ್ದು ಈ ಶುಭದಿನದಂದು (3)
12.ಕೂಡಿದ ಜನಕ್ಕೆ ಕೇಳಿಸಿದ ಇಂಪಾದ ಧ್ವನಿ (3)
13.ಮೂರು ಬಾಹುಗಳುಳ್ಳ ಆಕೃತಿ (3)

ಸೈಬರ್ ಸುಳಿಯಲ್ಲಿ ಕಲಬುರಗಿ | 126 ಪ್ರಕರಣ ದಾಖಲು

4 ವರ್ಷಗಳಲ್ಲಿ ₹22.55 ಕೋಟಿಗೂ ಅಧಿಕ ವಂಚನೆ

▸ ರಾಚಪ್ಪಾ ಜಂಬಗಿ

ಕಲಬುರಗಿ: ಜಿಲ್ಲೆಯಲ್ಲಿ ಸೈಬರ್ ಅಪರಾಧ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ಸಾರ್ವಜನಿಕರ ಆರ್ಥಿಕ ಭದ್ರತೆ ಮೇಲೆ ಭಾರೀ ಹೊಡೆತ ಬಿದ್ದಿದೆ. 2023ರಿಂದ 2026ರ ಈವರೆಗೆ ದಾಖಲಾಗಿರುವ 126 ಪ್ರಕರಣಗಳಲ್ಲಿ ಒಟ್ಟು 22.55 ಕೋಟಿಗೂ ಅಧಿಕ ಹಣ ವಂಚಕರ ಪಾಲಾಗಿರುವುದು ಆತಂಕ ಮೂಡಿಸಿದೆ.

ನಗರದ ಖಾಕಿ ಪಡೆ ಹಾಗೂ ಸೈಬರ್ ವಿಭಾಗದತ್ವರಿತಕ್ರಮದಿಂದ4.20ಕೋಟಿ ಹಣವನ್ನು ಫ್ರೀಜ್ ಮಾಡಲಾಗಿದ್ದು, 3.72 ಕೋಟಿ ಹಣ ದೂರುದಾರರಿಗೆ ಮರುಪಾವತಿ ಮಾಡಲಾಗಿದೆ. 2023ರಲ್ಲಿ ದಾಖಲಾಗಿದ್ದ 31 ಸೈಬರ್ ಪ್ರಕರಣಗಳಲ್ಲಿ 1.10 ಕೋಟಿ ಹಣ ಕಳೆದು ಹೋಗಿದ್ದರೆ, 2024ರಲ್ಲಿ ಪ್ರಕರಣಗಳ ಸಂಖ್ಯೆ 33ಕ್ಕೆ ಏರಿಕೆಯಾಗಿ 4.89 ಕೋಟಿ ವಂಚನೆ ನಡೆದಿರುವುದು ದಾಖಲಾಗಿದೆ.

ಆನ್‌ಲೈನ್ ಬ್ಯಾಂಕಿಂಗ್, ಒಟಿಪಿ, ಕೆವೈಸಿ ಅಪ್‌ಡೇಟ್ ಹಾಗೂ ಯುಪಿಐ ಮೋಸಗಳು ಹೆಚ್ಚು ವರದಿಯಾಗಿದ್ದು, ಸಾರ್ವಜನಿಕರು ಕ್ಷಣಾರ್ಧದಲ್ಲಿ ಲಕ್ಷಾಂತರ ರೂಪಾಯಿ ಕಳೆದುಕೊಳ್ಳುತ್ತಿರುವುದು ಕಂಡುಬಂದಿದೆ.

ತಂತ್ರಜ್ಞಾನ ಅಭಿವೃದ್ಧಿಯೊಂದಿಗೆ ಸೈಬರ್ ಅಪರಾಧಿಗಳ ಹೊಸ ಹೊಸ ಮೋಸದ ತಂತ್ರಗಳು ಜನರನ್ನು ಸಂಕಷ್ಟಕ್ಕೆ ತಳ್ಳುತ್ತಿವೆ. 2025ರಲ್ಲಿ ಸೈಬರ್ ಅಪರಾಧಗಳ ಪ್ರಮಾಣ ಮತ್ತಷ್ಟು ಭೀಕರ ಸ್ವರೂಪ ಪಡೆದುಕೊಂಡಿದೆ. ಒಂದೇ ವರ್ಷದಲ್ಲಿ 49 ಪ್ರಕರಣಗಳು ದಾಖಲಾಗಿದ್ದು, 12.92 ಕೋಟಿಗೂ ಅಧಿಕ ಹಣ ವಂಚನೆಗೊಳಗಾಗಿದೆ.

ಹೂಡಿಕೆ ಹೆಸರಿನಲ್ಲಿ ಆನ್‌ಲೈನ್ ವಂಚನೆ, ನಕಲಿ ಟ್ರೇಡಿಂಗ್ ಆ್ಯಪ್‌ಗಳು, ಉದ್ಯೋಗ ಆಮಿಷ ಹಾಗೂ ಸಾಮಾಜಿಕ ಜಾಲತಾಣ ಖಾತೆ ಹ್ಯಾಕಿಂಗ್ ಪ್ರಕರಣಗಳು ಹೆಚ್ಚಾಗಿ ಕಂಡುಬಂದಿವೆ. ಇದೇ ವರ್ಷದಲ್ಲಿ 2.18 ಕೋಟಿ ಹಣ ಫ್ರೀಜ್ ಮಾಡಿದ್ದು, 2.46 ಕೋಟಿ ಹಣ ಮರುಪಾವತಿ ಮಾಡಿರುವುದು ಸೈಬರ್ ಪೊಲೀಸ್ ತಂಡದ ಕಾರ್ಯಕ್ಷಮತೆ ಎತ್ತಿ ತೋರಿಸಿದೆ.

ಕಳೆದ ನಾಲ್ಕು ವರ್ಷಗಳ ಅಂಕಿ ಅಂಶ ಸೈಬರ್ ಅಪರಾಧಗಳು ಸಮಾಜಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿರುವುದು ಸ್ಪಷ್ಟಪಡಿಸುತ್ತವೆ. ಪ್ರಕರಣಗಳ ಸಂಖ್ಯೆ ಮಾತ್ರವಲ್ಲ, ವಂಚನೆಗೊಳ್ಳುತ್ತಿರುವ ಹಣದ ಪ್ರಮಾಣವೂ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವುದು ಗಂಭೀರ ಎಚ್ಚರಿಕೆಯಾಗಿದೆ. ಸಾರ್ವಜನಿಕ ಜಾಗೃತಿ ಮತ್ತು ತ್ವರಿತ ಪೊಲೀಸ್ ಕ್ರಮಗಳೇ ಸೈಬರ್ ಅಪರಾಧ ನಿಯಂತ್ರಿಸುವ ಪ್ರಮುಖ ಅಸ್ತ್ರಗಳಾಗಿವೆ.

ದಿಗಂತ ವಿಶೇಷ

ಕೋಟಿ ಕೋಟಿ ಕಳೆದುಕೊಂಡ ಜನ



2026 ಆರಂಭದಲ್ಲೇ ಆತಂಕ

2026ರ ಆರಂಭಿಕ ತಿಂಗಳಲ್ಲೇ 19 ಪ್ರಕರಣ ದಾಖಲಾಗಿ ಆತಂಕ ಇನ್ನಷ್ಟು ಹೆಚ್ಚಿಸಿದೆ. ಸುಮಾರು 3.62 ಕೋಟಿ ಹಣ ಕಳೆದು ಹೋಗಿರುವುದಾಗಿ ನಗರ ಪೊಲೀಸ್ ಇಲಾಖೆಯ ಅಂಕಿ ಅಂಶಗಳಿಂದ ತಿಳಿದುಬಂದಿದೆ. ಸೈಬರ್ ತಜ್ಞರ ಪ್ರಕಾರ,ಅಪರಿಚಿತ ಲಿಂಕ್ ಕ್ಲಿಕ್ ಮಾಡುವುದು, ಬ್ಯಾಂಕ್ ಮಾಹಿತಿ ಹಂಚಿಕೆ ಹಾಗೂ ನಕಲಿ ಕರೆಗಳಿಗೆ ಸ್ಪಂದಿಸುವುದೇ ಹೆಚ್ಚಿನ ವಂಚನೆಗೆ ಕಾರಣವಾಗುತ್ತಿದೆ. ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು ಹಾಗೂ ಯಾವುದೇ ಅನುಮಾನಾಸ್ಪದ ಘಟನೆ ಕಂಡುಬಂದ ಕೂಡಲೇ 1930 ಸೈಬರ್ ಸಹಾಯವಾಣಿಗೆ ಮಾಹಿತಿ ನೀಡಬೇಕು ಎಂದು ಪೊಲೀಸ್ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಸೈಬರ್ ವಂಚಕರು ಜನರ ಭಾವನೆಗಳೊಂದಿಗೆ ಆಟವಾಡುವ ಮೂಲಕ ವಂಚನೆ ನಡೆಸುತ್ತಿದ್ದಾರೆ. ಸಾರ್ವಜನಿಕರು ಅತ್ಯಂತ ಜಾಗೃತಿಯಿಂದ ಇರುವ ಅಗತ್ಯವಿದೆ. ಅನುಮಾನಾಸ್ಪದ ಲಿಂಕ್‌ಗಳು, ಕಡಿಮೆ ಅವಧಿಯಲ್ಲಿ ಅಧಿಕ ಲಾಭದ ಆಮಿಷಗಳು ಹಾಗೂ ಡಿಜಿಟಲ್ ಅರೆಸ್ಟ್ ಎಂಬ ಹೆಸರಿನಲ್ಲಿ ಬರುವ ಕರೆ ಅಥವಾ ಸಂದೇಶಗಳನ್ನು ಯಾವುದೇ ಕಾರಣಕ್ಕೂ ನಂಬಬಾರದು. ಪೊಲೀಸ್ ಹಾಗೂ ಕಸ್ಟಮ್ ಇಲಾಖೆಗಳು ಡಿಜಿಟಲ್ ಅರೆಸ್ಟ್ ಮಾಡುವುದಿಲ್ಲ. ಯಾರಾದರೂ ಸೈಬರ್ ವಂಚನೆಗೆ ಒಳಗಾದರೆ ತಕ್ಷಣವೇ 1930ಗೆ ಕರೆ ಮಾಡಬೇಕು. ಇದರಿಂದ ಸೈಬರ್ ವಂಚಕರ ಚಟುವಟಿಕೆಗಳಿಗೆ ಶೀಘ್ರ ಕಡಿವಾಣ ಹಾಕಲು ಸಾಧ್ಯ. ಇಲಾಖೆಯಿಂದ ನಿರಂತರ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಸಾರ್ವಜನಿಕರೂ ಸಹ ಹೆಚ್ಚಿನ ಎಚ್ಚರಿಕೆ ವಹಿಸುತ್ತಿದ್ದಾರೆ.

■ ಡಾ.ಶರಣಪ್ಪ ಎಸ್.ಡಿ., ನಗರ ಪೊಲೀಸ್ ಆಯುಕ್ತರು, ಕಲಬುರಗಿ

ವರ್ಷ	ಪ್ರಕರಣ	ಕಳೆದು ಹೋದ ಮೊತ್ತ	ಫ್ರೀಜ್ ಮೊತ್ತ	ದೂರುದಾರರಿಗೆ ಹಿಂತಿರುಗಿಸಿದ ಮೊತ್ತ
2023	31	1,10,14,086	26,65,402	20,86,385
2024	33	4,89,88,835	1,46,90,363	89,38,101
2025	49	12,92,83,828	1,46,90,363	2,46,42,373
2026	19	36,2,72,856	27,92,365	15,54,000
ಒಟ್ಟು	126	22,55,59,605	4,20,32,339	3,72,20,859



ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2026-27ನೇ ಸಾಲಿನ ಮಹತ್ವದ ಮಂಡಳಿಯ ಸಭೆಯೂ ಮಂಡಳಿಯ ಸಭಾಂಗಣದಲ್ಲಿ ನಡೆಯಿತು.ಈ ಸಂದರ್ಭದಲ್ಲಿ ಸಚಿವರಾದ ಈಶ್ವರ ಖಂಡ್ರೆ, ಪ್ರಿಯಾಂಕ್ ಖರ್ಗೆ, ಶರಣಬಸಪ್ಪ ದರ್ಶನಾಪುರ್, ಡಾ. ಶರಣಪ್ರಕಾಶ ಪಾಟೀಲ್, ಶಿವರಾಜ್ ತಂಗಡಗಿ, ಎನ್.ಎಸ್.ಬೋಸರಾಜು, ರಹೀಮ್ ಖಾನ್, ಬಸವರಾಜ್ ರಾಯರೆಡ್ಡಿ, ಬಿ.ಆರ್.ಪಾಟೀಲ್, ಹಂಪನಗೌಡ ಬಾದರ್ಲಿ , ರಾಘವೇಂದ್ರ ಹಿಟ್ನಾಳ, ಭೀಮರಾವ್ ಬಸವರಾಜ ಪಾಟೀಲ್ ಸೇರಿದಂತೆ ಆಹ್ವಾನಿತ ಶಾಸಕರು ಉಪಸ್ಥಿತರಿದ್ದರು.

ಇಂದಿನಿಂದ ಕರ ನಿರಾಕರಣೆ ಚಳವಳಿ: ಬಿ.ಡಿ.ಹಿರೇಮಠ

ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಧಾರವಾಡವನ್ನು ವಿಭಜಿಸಿ ಪ್ರತ್ಯೇಕ ಪಾಲಿಕೆ ರಚನೆಗೆ ಆಗ್ರಹಿಸಿ ಮೇ 19ರಿಂದ ಕರ ನಿರಾಕರಣೆ ಚಳುವಳಿ ಹಮ್ಮಿಕೊಂಡಿದೆ ಎಂದು ಹೋರಾಟಗಾರ ಬಿ.ಡಿ.ಹಿರೇಮಠ ಮಾಹಿತಿ ನೀಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಸ್ವಾಭಿಮಾನಿ ಹೋರಾಟ ಸಮಿತಿಯ ಈ ನಿರ್ಧಾರ ತಿಳಿಸಿದ ಬಿ.ಡಿ ಹಿರೇಮಠ, ಹೋರಾಟದ ಮುಂದಿನ ರೂಪರೇಷೆಗಳು ಹಾಗೂ ರಾಜಕೀಯ ನಾಯಕರ ಕುರಿತು ಹಲವು ಪ್ರಶ್ನೆಗಳನ್ನು ಎತ್ತಿದರು.

ಸಚಿವರಾದ ಪ್ರಹ್ಲಾದ ಜೋಶಿ, ಸಂತೋಷ ಲಾಡ್ ಹಾಗೂ ಅರವಿಂದ ಬೆಲ್ಲದ ಅವರು ಪ್ರತ್ಯೇಕ ಪಾಲಿಕೆ ರಚನೆ ಚರ್ಚೆಗೆ ರಾಜ್ಯಪಾಲರ ಭೇಟಿಗಾಗಿ ಅನುಮತಿ ನೀಡಿದ ಪತ್ರ ಹೋರಾಟ ಸಮಿತಿಗೆ ಬಂದಿದ್ದು ಸ್ವಾಗತಿಸಿ, ಈ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ಪ್ರತ್ಯೇಕ ಪಾಲಿಕೆ ರಚನೆ ಧಾರವಾಡ ಜನರ ಸ್ವಾಭಿಮಾನದ ಪ್ರಶ್ನೆ. ಆದ್ದರಿಂದ ಈ ವಿಷಯದಲ್ಲಿ ಯಾರು ರಾಜಕೀಯ ಮಾಡಬಾರದು. ಆಡಳಿತ ಪಕ್ಷ, ವಿಪಕ್ಷಗಳ ಜತೆ ಸರ್ಕಾರವೂ ರಾಜ್ಯಪಾಲರ ಬಳಿಗೆ ನಿಯೋಗ ಹೋಗಿ ಅಂಕಿತ ಹಾಕಿಸಲು ಒತ್ತಾಯಿಸಿದರು.



ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ಸರ್ಕಾರದ ವಿರುದ್ಧ ಅಸಹಕಾರ ಸತ್ಯಪ್ರತಿಪಾದನೆಯ ಸತ್ಯಾಗ್ರಹದ ಭಾಗವಾಗಿ ಮೇ 19ರಿಂದ ಸಾರ್ವಜನಿಕರು ಮಹಾನಗರ ಪಾಲಿಕೆಗೆ ತೆರಿಗೆ ಪಾವತಿಸದಂತೆ ತೆರಿಗೆ ನಿರಾಕರಣೆ ಚಳವಳಿಗೂ ಕರೆ ನೀಡಿರುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಹಾದೇವ ಹೊರಟ್ಟಿ, ಮನೋಜ ಪಾಟೀಲ, ವೆಂಕಟೇಶ ಮಾಚಕನೂರ, ಅರವಿಂದ ಏಗನಗೌಡರ, ರಾಜು ಕಮತಿ, ವಸಂತ ಅರ್ಕಾಚಾರ, ಕವಿತಾ ಕಬ್ಬೇರ, ಎಸ್.ಸಿ.ನೀರಾವರಿ, ಗುರುರಾಜ ಹುಣಸಿಮರದ ಸೇರಿ ಅನೇಕರು ಇದ್ದರು.

ಕಿರುಸುದ್ದಿ

ಎಇಇಗಳ ವರ್ಗಾವಣೆ ಕೌನ್ಸೆಲಿಂಗ್ ನಡೆಸಿ: ನೀರಲಕೇರಿ

ಧಾರವಾಡ: ರಾಜ್ಯದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳ (ಎಇಇ) ವರ್ಗಾವಣೆಯಲ್ಲಿ ಭ್ರಷ್ಟಾಚಾರ ತಲೆದೂರಿದೆ. ಹೀಗಾಗಿ ಕೌನ್ಸೆಲಿಂಗ್ ಮೂಲಕವೇ ಎಇಇಗಳ ವರ್ಗಾವಣೆ ನಡೆಸಲು ಬಿಜೆಪಿ ಮುಖಂಡ ಪಿ.ಎಚ್.ನೀರಲಕೇರಿ ಆಗ್ರಹ ಮಾಡಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಇತ್ತೀಚಿನ ದಿನಗಳಲ್ಲಿ ಪಿಡಿಓ ಸೇರಿದಂತೆ ಹಲವು ಇಲಾಖೆಗಳ ವರ್ಗಾವಣೆ ಕೌನ್ಸೆಲಿಂಗ್ ಮೂಲಕ ಮಾಡಲಾಗುತ್ತಿದೆ. ಐದು ವರ್ಷಕ್ಕೊಮ್ಮೆ ರಾಜಕೀಯ ಶಿಫಾರಸು ಇಲ್ಲದೇ ವರ್ಗಾವಣೆ ಮಾಡುವ ಕಾರ್ಯ ಪ್ರಶಂಸಿದ್ದಾರೆ. ಹಾಗೆಯೇ ಆರ್‌ಟಿಒ, ಅಬಕಾರಿ ಇಲಾಖೆಯ ಇನ್ಸ್‌ಪೆಕ್ಟರ್ ಹಾಗೂ ಹಿರಿಯ ಅಧಿಕಾರಿಗಳ ವರ್ಗಾವಣೆಗಳೂ ಕೌನ್ಸೆಲಿಂಗ್ ಮೂಲಕವೇ ನಡೆಯುತ್ತಿವೆ. ಆದರೂ ಅಲ್ಲಿ ಅನೇಕರು ಭ್ರಷ್ಟಾಚಾರದಲ್ಲಿ ತೊಡಗಿದ ಬಗ್ಗೆ ಸಾರ್ವಜನಿಕರಿಗೆ ಅಸಮಾಧಾನವಿದೆ ಎಂದಿದ್ದಾರೆ.

ಆದರೆ, ಎಇಇಗಳು ಪ್ರತಿಬಾರಿಯೂ ವರ್ಗಾವಣೆಗೆ ಶಾಸಕರ ಶಿಫಾರಸಿಗಾಗಿ ರೂ. 25 ಲಕ್ಷ ಹಣ ನೀಡುವ ದುಸ್ಥಿತಿ ಇದೆ. ಇದರ ಪರಿಣಾಮ ಎಂಜಿನಿಯರ್‌ಗಳು ಭ್ರಷ್ಟರಾಗಿದ್ದಾರೆ ಎಂಬ ತಪ್ಪು ಭಾವನೆ ಸಮಾಜದಲ್ಲಿ ಉಂಟಾಗುತ್ತಿದೆ ಎಂದು ಹೇಳಿದ್ದಾರೆ.

ಪ್ರತಿ ವರ್ಷವೂ ಶಾಸಕರನ್ನು ಸಂಪರ್ಕಿಸುವುದು ಕಷ್ಟಕರ, ಅವಮಾನಕರವೂ ಹೌದು. ಆದ್ದರಿಂದ, ಎಇಇಗಳ ವರ್ಗಾವಣೆ ಇತರ ಇಲಾಖೆಗಳಂತೆ ಕೌನ್ಸೆಲಿಂಗ್ ಮೂಲಕ ನಡೆಸುವುದು ನ್ಯಾಯಸಮ್ಮತ ಬೇಡಿಕೆಯಾಗಿದೆ ಎಂದು ನೀರಲಕೇರಿ ತಿಳಿಸಿದ್ದಾರೆ.

ಅರಣ್ಯ ಭೂಮಿ ಒತ್ತುವರಿ ತೆರವಿಗೆ ಕ್ರಮ: ಈಶ್ವರ್ ಖಂಡ್ರೆ

ಕಲಬುರಗಿ: ರಾಜ್ಯದ ಅರಣ್ಯ ಭೂಮಿ ತೆರವಿಗೆ ಕ್ರಮವಹಿಸಲಾಗಿದ್ದು ರಾಜ್ಯದಲ್ಲಿ ಈಗಾಗಲೇ 10,000 ಕೋಟಿ ರೂ. ಮೌಲ್ಯದ ಬೆಂಗಳೂರು ಒಂದರಲ್ಲೇ 250 ಎಕರೆ ಅರಣ್ಯ ಭೂಮಿ ತೆರವು ಮಾಡಲಾಗಿದೆ. ಸುಮಾರು 1 ಕೋಟಿ ಎಕರೆ ಅರಣ್ಯ, ಕಂದಾಯ ಒತ್ತುವರಿ ಜಮೀನು ತೆರವು ಹಂತ ಹಂತವಾಗಿ ನಡೆಯಲಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.



ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವಿಚಾರದಲ್ಲಿ ಎಸ್‌ಐಟಿ ರಚಿಸುವಂತೆ ಸುಪ್ರೀಂಕೋರ್ಟ್ ಸೂಚನೆ ನೀಡಿದ್ದು, ಅದರಂತೆ ಕ್ರಮ ವಹಿಸಲಾಗುತ್ತದೆ ಎಂದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಸಿರು ಹೊದಿಕೆ ಕೊರತೆ ಇದೆ. ಕಲಬುರಗಿ, ಬೀದರ ಯಾದಗಿರಿ, ರಾಯಚೂರು ಹೀಗೆ ಜಿಲ್ಲೆಗಳಲ್ಲಿ ಶೇ.5ಕ್ಕಿಂತ ಕಡಿಮೆ ಅರಣ್ಯ ಪ್ರದೇಶ ಹೊಂದಿದೆ. ಹೀಗಾಗಿ, ಹವಾಮಾನದಲ್ಲಿ ವೈಪರಿತ್ಯಗಳಾಗುತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಳೆದ ಮೂರು ವರ್ಷದಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ 11 ಲಕ್ಷ ಸಸಿ ನೆಡಲಾಗಿದೆ. ಅವುಗಳನ್ನು ಸುಮಾರು ಶೇ.80 ನೆಟ್ಟ ಸಸಿಗಳು ಬದುಕುಳಿದಿವೆ. ಈ ತರಹದ ಸಸಿಗಳಿಗೆ ಅಗತ್ಯ ಪ್ರಮಾಣ ನೀರು ಒದಗಿಸಿ ಐದು ವರ್ಷಗಳ ಕಾಲ ಸಂರಕ್ಷಣೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಅರಣ್ಯ ಇಲಾಖೆಯಲ್ಲಿ ಪಶುವೈದ್ಯಕೀಯ ಸಿಬ್ಬಂದಿ ಹೆಚ್ಚಿಸಲು ಸಿಎಂ ಅವರು ಅರಣ್ಯ ಇಲಾಖೆಗೆ ಅನುಮತಿ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಅರಣ್ಯ ಇಲಾಖೆಗೆ ಅಗತ್ಯವಿರುವ ಸಿಬ್ಬಂದಿ ನೇಮಕಾತಿಗೆ ಅಗತ್ಯ ಕ್ರಮವಹಿಸಲಾಗುವುದು ಎಂದು ಹೇಳಿದರು.

ಇನ್ನೂ ನೀಟ್ ಪರೀಕ್ಷೆ ಪೇಪರ್ ಲೀಕ್ ಆದರೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡುತ್ತಿಲ್ಲ. ದೇಶದ ಯುವಕರ ಭವಿಷ್ಯದ ಜೊತೆ ಕೇಂದ್ರ ಸರ್ಕಾರ ಚೆಲ್ಲಾಟವಾಡುತ್ತಿದೆ. ಮೊದಲು ನೀಟ್ ಅಕ್ರಮದ ಬಗ್ಗೆ ಬಿಜೆಪಿಯವರು ಸ್ಪಷ್ಟವಾಗಿ ಮಾತನಾಡಬೇಕು. ಕಳೆದ ಬಾರಿ ನಡೆದ ಅಕ್ರಮದ ವರದಿ ಎಲ್ಲಿದೆ? ಅದರ ಬಗ್ಗೆ ಯಾವುದೇ ಮಾಹಿತಿ ಯಾಕೆ ಬಹಿರಂಗಪಡಿಸಿಲ್ಲ ಎಂದು ಪ್ರಶ್ನಿಸಿದ ಅವರು, ಪುಲ್ವಾಮ ದಾಳಿ ಬಗ್ಗೆ ತನಿಖಾ ಸಮಿತಿ ಏನು ವರದಿ ನೀಡಿದೆ ಎಂಬುದನ್ನೂ ಜನರ ಮುಂದೆ ಇಟ್ಟಿಲ್ಲ. ಸರ್ಕಾರ ಹಲವು ವಿಷಯಗಳನ್ನು ಬಹಿರಂಗಪಡಿಸಲು ಮುಂದಾಗುತ್ತಿಲ್ಲ ಎಂದು ಖಂಡ್ರೆ ಟೀಕಿಸಿದರು.

ಹುಲಿಗಳ ಸಮೀಕ್ಷೆಗೆ ಅಳವಡಿಸಿದ್ದ 2 ಕ್ಯಾಮೆರಾ ಕಳ್ಳತನ

ಅಂಕೋಲಾ: ದೇಶದಲ್ಲಿ ನಡೆಯುತ್ತಿರುವ ಹುಲಿಗಳ ಸಮೀಕ್ಷೆ ಆಲ್ ಇಂಡಿಯಾ ಟೈಗರ್ ಎಸ್ಟಿಮೇಟ್ ಕಾರ್ಯಕ್ರಮದ ಭಾಗವಾಗಿ ಅರಣ್ಯ ಪ್ರದೇಶದಲ್ಲಿ ಅಳವಡಿಸಿದ ಎರಡು ಕ್ಯಾಮೆರಾಗಳನ್ನು ಯಾರೋ ಕಳ್ಳರು ಕಳ್ಳತನ ಮಾಡಿರುವ ಘಟನೆ ತಾಲೂಕಿನ ಹೊಸಕಂಬಿ ವಲಯ ಅರಣ್ಯ ವ್ಯಾಪ್ತಿಯ ಮಾಣಿಕಾರ, ತಿಂಗಳೇಬೈಲ್ ಅರಣ್ಯದಲ್ಲಿ ನಡೆದಿದ್ದು, ಅರಣ್ಯ ಇಲಾಖೆಯಿಂದ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಕರ್ನಾಟಕ ಸರ್ಕಾರದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರ ಲಿಖಿತ ಆದೇಶ ಮೇರೆಗೆ ಮೇ 1ರಿಂದ ಮೇ 25ರ ವರೆಗೆ ನಡೆಯುತ್ತಿರುವ ಹುಲಿ ಸಮೀಕ್ಷಾ ಕಾರ್ಯದ ಅನುಷ್ಠಾನದ ಉದ್ದೇಶದಿಂದ ಮಾಣಿಕಾರ ತಿಂಗಳೇಬೈಲ್ ಅರಣ್ಯ ಪ್ರದೇಶದಲ್ಲಿ

ಕೆಡಿಬ್ಯಾಕ್ ಕಂಪನಿಯ ಎರಡು ಅಪ್‌ಲೈನ್ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಪ್ರತಿ ಐದು ದಿನಗಳಿಗೊಮ್ಮೆ ಕ್ಯಾಮೆರಾದ ಮೆಮೊರಿ ಕಾರ್ಡ್ ಬದಲಾಯಿಸಿ ಅದರಲ್ಲಿರುವ ಚಿತ್ರೀಕರಣದ ಡೇಟಾ ವಲಯ ಅರಣ್ಯ ಅಧಿಕಾರಗಳ ಕಾರ್ಯಾಲಯದ ಕಂಪ್ಯೂಟರ್‌ಗಳಲ್ಲಿ ಸಂಗ್ರಹಿಸುವ ಕೆಲಸ ನಡೆಯುತಿತ್ತು.

ಮೇ 11ರಂದು ಮೆಮರಿ ಕಾರ್ಡ್ ಬದಲಾಯಿಸಿ ಡೇಟಾ ಸಂಗ್ರಹಿಸಲಾಗಿದ್ದು ಮೇ 12ರಂದು ಇಲಾಖೆಯ ದಿನಗೂಲಿ ನೌಕರರು ಕ್ಯಾಮರಾ ಸ್ಥಳದಲ್ಲಿ ಇರುವುದನ್ನು ಪರಿಶೀಲಿಸಿದ್ದಾರೆ.

ಮೇ 13ರಂದು ನೋಡಿದಾಗ ಕ್ಯಾಮೆರಾಗಳು ನಾಪತ್ತೆಯಾಗಿದ್ದು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹುಡುಕಾಟ ನಡೆಸಿದರೂ ಸಿಗದೇ ಇರುವ ಕಾರಣ ಸುಮಾರು 25 ಸಾವಿರ ರೂಪಾಯಿ ಮೌಲ್ಯದ ಎರಡು ಕ್ಯಾಮೆರಾಗಳ ಕಳ್ಳತನ ನಡೆದಿರುವ ಕುರಿತಂತೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿ ಪೊಲೀಸ್ ದೂರು ದಾಖಲಿಸಲಾಗಿದೆ. ಅರಣ್ಯಾಧಿಕಾರಿ ರಾಘವೇಂದ್ರ ಜಿರಾಗಲೆ ದೂರು ದಾಖಲಿಸಿದ್ದು, ಅಂಕೋಲಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ವಿದ್ಯುತ್ ತಂತಿ ತಗುಲಿ ಬಾಲಕ ಸಾವು

ಸಿಂಧನೂರು: ತಾಲೂಕಿನ ಬೋಗಾಪುರ ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ವಿದ್ಯುತ್ ತಂತಿ ತಗುಲಿ ಐದು ವರ್ಷದ ದೇವರಾಜ ಶರಣಪ್ಪ ಬುನ್ನಟ್ಟಿ ಮೃತಪಟ್ಟಿದ್ದಾನೆ.



ಭಾನುವಾರ ದಿನ ಅತಿಯಾದ ಗಾಳಿ, ಮಳೆಯಿಂದ ವಿದ್ಯುತ್ ಗೃಹ ಬಳಕೆಗೆ ತೆಗೆದುಕೊಂಡು ವಯರ್ ನೆಲಕ್ಕೆ ಬಿದ್ದು ಬಾಲಕ ಬಹಿರ್ದೆಸೆಗೆ ಹೋದಾಗ ತಂತಿ ತಗುಲಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಮಗನನ್ನು ಕಳೆದುಕೊಂಡ ತಂದೆ ತಾಯಿ ಹಾಗೂ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಅಲ್ಲದೆ ಸ್ಥಳದಲ್ಲಿದ್ದ ಪ್ರತಿಯೊಬ್ಬ ಸಾರ್ವಜನಿಕರ ಕಣ್ಣಂಚಿನಲ್ಲಿ ಕಣ್ಣೀರು ಭರಿಸಿತು. ಸ್ಥಳಕ್ಕೆ ಜೆಸ್ಕಾಂ, ಪೊಲೀಸ್ ಇಲಾಖೆಯವರು ಭೇಟಿ ನೀಡಿ,ಮರಣೋತ್ತರ ಪರೀಕ್ಷೆಗೆ ಸಿಂಧನೂರು ತಾಲೂಕು ಆಸ್ಪತ್ರೆಗೆ ರವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯ ಮರುಮೌಲ್ಯಮಾಪನ ದಿವ್ಯಾ ದೇಸಾಯಿ ರಾಜ್ಯಕ್ಕೆ ಪ್ರಥಮ

ಖಾನಾಪುರ: ತಾಲೂಕಿನ ಬೀಡಿ ಗ್ರಾಮದ ಹೋಲಿ ಕ್ರಾಸ್ ಇಂಗ್ಲಿಷ್ ಮೀಡಿಯಂ ಪ್ರೌಢಶಾಲೆಯ ವಿದ್ಯಾರ್ಥಿನಿ ದಿವ್ಯಾ ಪ್ರದೀಪ ದೇಸಾಯಿ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಮರುಮೌಲ್ಯಮಾಪನದಲ್ಲಿ 625ಕ್ಕೆ 625 ಅಂಕಗಳನ್ನು ಪಡೆದು ರಾಜ್ಯಕ್ಕೆ ಮೊದಲನೇ ಸ್ಥಾನ ಗಳಿಸಿದ್ದಾಳೆ.



ಪರೀಕ್ಷೆಯ ಫಲಿತಾಂಶ ಬಂದಾಗ ದಿವ್ಯಾಳಿಗೆ 624 ಅಂಕಗಳು ಲಭಿಸಿದ್ದವು. ಇಂಗ್ಲಿಷ್ ವಿಷಯದಲ್ಲಿ ಈಕೆಗೆ 124 ಅಂಕಗಳನ್ನು ನೀಡಲಾಗಿತ್ತು. ಒಂದು ಅಂಕ ಕಡಿಮೆ ಬಂದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದ ದಿವ್ಯಾ ಈ ವಿಷಯವನ್ನು ಶಾಸಕ ವಿಠ್ಠಲ ಹಲಗೇಕರ, ಬಿಇಒ ರಾಮಪ್ಪ ಹಾಗೂ ಶಾಲೆಯ ಮುಖ್ಯ ಶಿಕ್ಷಕಿ ಸಂಗೀತಾ ಆಲ್ಮೇಡಾ ಅವರ ಗಮನಕ್ಕೆ ತಂದಿದ್ದಳು.

ಬಳಿಕ ಶಾಸಕ ಹಲಗೇಕರ ಶಿಕ್ಷಣ ಸಚಿವರು ಮತ್ತು ಅಧಿಕಾರಿಗಳಿಗೆ ಈ ಸಂಗತಿ ಮುಟ್ಟಿಸಿದ್ದರು. ಇದೇ ಸಂದರ್ಭದಲ್ಲಿ ದಿವ್ಯಾ ಶಾಸಕರು ಮತ್ತು ಬಿಇಒ ಅವರ ಸಲಹೆಯಂತೆ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದಳು. ಮರುಮೌಲ್ಯಮಾಪನದಲ್ಲಿ ದಿವ್ಯಾಳಿಗೆ ನ್ಯಾಯ ಸಿಕ್ಕಿದೆ ಎಂದು ಶಾಸಕ ಹಲಗೇಕರ ತಿಳಿಸಿದ್ದಾರೆ.

ಮರು ಮೌಲ್ಯಮಾಪನ: ವಿನಯ ರಾಜ್ಯಕ್ಕೆ 5ನೇ ರ‍್ಯಾಂಕ್

ಕಲಬುರಗಿ: ಇಲ್ಲಿಯ ಶರಣಬಸವೇಶ್ವರ ರೆಸಿಡೆನ್ಸಿಯಲ್ ಪ್ರೌಢ ಶಾಲೆಯ ವಿದ್ಯಾರ್ಥಿ ವಿನಯ ರವೀಂದ್ರ ಸಿಗಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಮರು ಮೌಲ್ಯಮಾಪನದ ನಂತರದಲ್ಲಿ 625ರಲ್ಲಿ 621ಅಂಕ ಪಡೆದು ರಾಜ್ಯಕ್ಕೆ ಐದನೆಯ ರ‍್ಯಾಂಕ್ ಬಂದಿದ್ದಾನೆ.



ಪರೀಕ್ಷೆಯ ಫಲಿತಾಂಶ ಬಂದಾಗ ಈತನಿಗೆ 625ರಲ್ಲಿ 618 ಅಂಕ ಬಂದಿದ್ದು ರಾಜ್ಯಕ್ಕೆ ಎಂಟನೆಯ ರ‍್ಯಾಂಕ್ ಲಭಿಸಿತ್ತು. ನಂತರ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದಾಗ ಫಲಿತಾಂಶ ಬದಲಾಗಿದೆ. ಮರುಮೌಲ್ಯಮಾಪನದ ನಂತರ ವಿನಯ ಶಾಲೆಗೆ ದ್ವಿತೀಯ ರ‍್ಯಾಂಕ್, ಕಲಬುರಗಿ ಜಿಲ್ಲೆಗೆ ಮೂರನೆಯ ರ‍್ಯಾಂಕ್ ದಾಖಲಿಸಿದ್ದಾನೆ.

ಬಿಜೆಪಿ ವಿರುದ್ಧ ಸಚಿವ ಖರ್ಗೆ ವಾಗ್ದಾಳಿ

ಕಲಬುರಗಿ: ಬಿಜೆಪಿ ನಾಯಕರು ಮೆಟ್ರೋದಲ್ಲಿ ಪ್ರಯಾಣ ಮಾಡುವ ವಿಚಾರವನ್ನು ಉಲ್ಲೇಖಿಸಿ ಸಚಿವ ಪ್ರಿಯಾಂಕ್ ಖರ್ಗೆ ಕೇಂದ್ರ ಸರ್ಕಾರ ಹಾಗೂ ಬಿಜೆಪಿಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ದೇಶವನ್ನು ಈ ಸ್ಥಿತಿಗೆ ತಂದವರು ಯಾರು ಎಂಬುದನ್ನು ಮೊದಲು ಬಿಜೆಪಿ ನಾಯಕರು ಹೇಳಬೇಕು ಎಂದರು.

ಜಿಲ್ಲೆಯ ಚಿತ್ತಾಪುರ ತಾಲೂಕಿನ ಮಾಡಬೂಳ ಬಳಿಯ ನೂತನ ಕಲಬುರಗಿ ಮೃಗಾಲಯ ಉದ್ಘಾಟಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ನಾಯಕರ ನಾಲ್ಕು ಜನ ಎಸ್ಕಾರ್ಟ್ ಬಿಟ್ಟು ಮೆಟ್ರೋದಲ್ಲಿ ಪ್ರಯಾಣ ಮಾಡಿದರೆ ದೇಶದ ಸಮಸ್ಯೆ ಪರಿಹಾರವಾಗುತ್ತದೆಯೇ? ಎಂದು ಪ್ರಶ್ನಿಸಿದ ಅವರು,

ಇಷ್ಟು ದಿನ ದೇಶದ ಎಲ್ಲ ಪರಿಸ್ಥಿತಿಯೂ ಸರಿಯಾಗಿದೆ ಎಂದು ಪ್ರಧಾನಿ ಮೋದಿ ಹೇಳುತ್ತಿದ್ದರು.



ಆದರೆ, ಈಗ ಏಕಾಏಕಿ ದೇಶದ ಆರ್ಥಿಕ ಸ್ಥಿತಿ ಆಪತ್ತಿನಲ್ಲಿದೆ ಎನ್ನುವ ಪರಿಸ್ಥಿತಿ ಏಕೆ ಬಂದಿದೆ? ಎಂದು ಖರ್ಗೆ ಟೀಕಿಸಿದರು.

ನಾವು ಮೋದಿ ಹೇಳುವ ಮೊದಲೇ ಪ್ರತಿವಾರ ಒಂದು ದಿನ ಮೆಟ್ರೋದಲ್ಲಿ ಪ್ರಯಾಣ ಮಾಡುತ್ತಿದ್ದೆವು. ಜಾಗತಿಕ ಮಟ್ಟದಲ್ಲಿ ದೇಶ ಆರ್ಥಿಕ ಸಂಕಷ್ಟದಲ್ಲಿದೆ ಎಂಬುದನ್ನು ಪ್ರಧಾನಿ ಸಂಸತ್ತಿನಲ್ಲೇ ಸ್ಪಷ್ಟವಾಗಿ ಹೇಳಬೇಕಿತ್ತು. ದೇಶದ ಆರ್ಥಿಕ ಸಂಕಷ್ಟದ ಬಗ್ಗೆ ರಾಹುಲ್ ಗಾಂಧಿ ಮೊದಲೇ ಎಚ್ಚರಿಕೆ ನೀಡಿದ್ದರು. ಆದರೆ, ಆಗ ಯಾರೂ ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ, ಈಗ ಪೆಟ್ರೋಲ್ ಕಡಿಮೆ ಬಳಸಿ ಎಂದು ಹೇಳುತ್ತಿದ್ದಾರೆ ಎಂದು ಆರೋಪಿಸಿದರು.

ಏನಾದರೂ ಒಳ್ಳೆಯ ಸುದ್ದಿ ಇದ್ದರೆ ಪ್ರಧಾನಿ ರಾತ್ರಿ 8 ಗಂಟೆಗೆ ಟಿವಿ ಮುಂದೆ ಬಂದು ದೇಶದ ಜನರಿಗೆ ತಿಳಿಸುತ್ತಾರೆ. ಹಾಗಿದ್ದರೆ ಇಂತಹ ಸಂಕಷ್ಟದ ವಿಚಾರ ಮೊದಲು ಜನರ ಮುಂದೆ ಏಕೆ ಹೇಳಲಿಲ್ಲ ಎಂದರು.

₹1.15 ಕೋಟಿ ಮೌಲ್ಯದ ಬಂಗಾರ-ಬೆಳ್ಳಿ ಆಭರಣ ವಶ

ಹುಬ್ಬಳ್ಳಿ: ಹುಬ್ಬಳ್ಳಿ ಗ್ರಾಮೀಣ ಹಾಗೂ ಹಾನಗಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳುವು ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಅಂತರ್ ರಾಜ್ಯ ಕಳ್ಳರನ್ನು ತಾಲೂಕಿನ ಪಾಳೆ ಗ್ರಾಮದ ಬಳಿ ಬಂಧಿಸಿದ ಪೊಲೀಸರು ಅವರಿಂದ 1.15 ಕೋಟಿ ಮೌಲ್ಯದ ಬಂಗಾರ-ಬೆಳ್ಳಿ ಆಭರಣಗಳು ಹಾಗೂ ಕೃತ್ಯಕ್ಕೆ ಬಳಸಿದ ವಾಹನ ವಶಕ್ಕೆ ಪಡೆದಿದ್ದಾರೆ.

ಲಕ್ಷ್ಮೇಶ್ವರ ಬಾಳೆಹೊಸೂರನ ಶಿವರಾಜ ಮೋಡಕೇರ, ಸಿಂಧನೂರ ಅಂಬಾಮಠದ ರಮೇಶ ಕೊಂಚಿ ಕೊರವರ ಬಂಧಿತ ಆರೋಪಿಗಳು.

ಕಳೆದ ಎಪ್ರೀಲ್ ತಿಂಗಳಲ್ಲಿ ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಕಿರೇಸೂರ ಗ್ರಾಮದ ಮನೆಯೊಂದರ ಕಳವು ಹಾಗೂ ಕಳೆದೆರಡು ದಿನ ಹಿಂದೆ ಹಾವೇರಿ ಜಿಲ್ಲೆಯ ಹಾನಗಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆಭರಣ ಅಂಗಡಿ



ಕಳುವು ಪ್ರಕರಣ ದಾಖಲಾಗಿತ್ತು. ಪ್ರಕರಣ ಕುರಿತು ತನಿಖೆ ಕೈಗೊಂಡ ಹುಬ್ಬಳ್ಳಿ ಗ್ರಾಮೀಣ ಹಾಗೂ ಹಾನಗಲ್ ಪೊಲೀಸರು ಜಂಟಿ ಕಾರ್ಯಚರಣೆ ಮಾಡುವ ಮೂಲಕ ಆರೋಪಿಗಳ ಬಲೆ ಬೀಸಿದ್ದರು.

ಆರು ಜನರ ಕಳ್ಳರಲ್ಲಿ ಇಬ್ಬರನ್ನು ಮಾತ್ರ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಅವರಿಂದ 310 ಗ್ರಾಂ ಬಂಗಾರ, 26 ಕೆ.ಜಿ. ಬೆಳ್ಳಿ ಆಭರಣ ಹಾಗೂ ತೆಲಂಗಾಣ ರಾಜ್ಯದ ಒಂದು ಬುಲೆರೋ ವಾಹನ ಕಳವು ಮಾಡಿರುವುದು ವಿಚಾರಣೆ ವೇಳೆ ಬಾಯಿ ಬಿಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ಬಂಧಿಸಿದ ಪೊಲೀಸ್ ಅಧಿಕಾರಿ ಮುರಗೇಶ ಚನ್ನಣ್ಣನವರ ಹಾಗೂ ಸಿಬ್ಬಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯಾ ಹಾಗೂ ಡಿವೈಎಸ್‌ಪಿ ವಿನೋದ ಮುಕ್ತೆದಾರ ಅಭಿನಂದನೆ ಸಲ್ಲಿಸಿ ಬಹುಮಾನ ಘೋಷಿಸಿದ್ದಾರೆ.

16 ವರ್ಷಗಳಿಂದ ತಲೆ ಮರಿಸಿಕೊಂಡಿದ್ದ ಆರೋಪಿ ಬಂಧನ

ಹುಬ್ಬಳ್ಳಿ: ಕಂಪನಿಯೊಂದಕ್ಕೆ ಮೋಸ ಮಾಡಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರಿಗೆ ಕೈಗೆ ಸಿಗದೆ 16 ವರ್ಷ ತಲೆಮರಿಸಿಕೊಂಡಿದ್ದ ಆರೋಪಿಯನ್ನು ಗ್ರಾಮೀಣ ಪೊಲೀಸರು ಕೊನೆಗೂ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಧಾರವಾಡ ಕಮಲಾಪೂರ ಲೋಕೇಶ ಭೀಮಕ್ಕನವರ ತಲೆ ಮರಿಸಿಕೊಂಡ ಆರೋಪಿ. ಇತ 2010ರಲ್ಲಿ ಶ್ರೀರಾಮ ಫೈನಾನ್ಸ್‌ನಲ್ಲಿ ಸೀಜ್ ಮಾಡಿ ನಿಲ್ಲಿಸಿದ ಲಾರಿಗೆ ನಕಲಿ ನಂಬರ್ ಪ್ಲೇಟ್ ಹಾಕಿಕೊಂಡು ಕಾರ್ಗೋ ಕ್ಯಾರಿಯರ್ ಟ್ರಾನ್ಸಪೋರ್ಟ್ ಕಂಪನಿ ಮ್ಯಾನೇಜರ್‌ಗೆ ನಂಬಿಸಿದ್ದಾನೆ.

ಬಳಿಕ ಕಂಪನಿಯಿಂದ 14,87,289 ರೂ. ಮೌಲ್ಯದ ಸೋಪು, ಪೌಡರ್ ಹಾಗೂ ಇನ್ನಿತರ ವಸ್ತುಗಳ ತೆಗೆದುಕೊಂಡು ಹೋಗಿ ಬೇರೆಯಡೆ ಮಾರಾಟ ಮಾಡಿ ವಂಚಿಸಿದ್ದ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಆರೋಪಿಯನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದರು. ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ತಲೆಮರಿಸಿಕೊಂಡಿದ್ದ. ಅತನನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಿರುಸುದ್ದಿ

ದಿವ್ಯಾನಂದನಗೆ ಪಿಎಚ್‌ಡಿ ಪ್ರದಾನ



ನರಗುಂದ: ಪಟ್ಟಣದ ಶ್ರೀಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿನ ಸಮಾಜಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ದಿವ್ಯಾನಂದನ್ ಜಿ.ಆರ್ ಮಂಡಿಸಿದ ನಗರೀಕರಣ ಮತ್ತು ಬದಲಾವಣೆ: ಮೈಸೂರು ನಗರದಂಚಿನ ಗ್ರಾಮಗಳ ಒಂದು ಸಮಾಜ ಶಾಸ್ತ್ರೀಯ ಅಧ್ಯಯನ ಎಂಬ ಮಹಾ ಪ್ರಬಂಧಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗಿದೆ. ಮೂಲತ ಮಂಡ್ಯ ಜಿಲ್ಲೆ ಮಂಡ್ಯ ತಾಲೂಕು ಬಿ.ಗೌಡಗೆರೆ ಗ್ರಾಮದವರಾದ ಇವರು ಡಾ.ಎಂ.ಎಚ್.ಕೃಷ್ಣಪ್ಪ ಇವರ ಮಾರ್ಗದರ್ಶನದಲ್ಲಿ ಸಂಶೋಧನ ಪ್ರಬಂಧ ಮಂಡಿಸಿದ್ದರು.

ಮೊರಾರ್ಜಿ ಶಾಲೆಗೆ ಯಶವಂತ ವಾಲ್ಮೀಕಿ ಆಯ್ಕೆ



ಲಕ್ಷ್ಮೇಶ್ವರ: ತಾಲೂಕಿನ ಕೊಂಡಿಕೊಪ್ಪ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿ ಯಶವಂತ.ನಾ.ವಾಲ್ಮೀಕಿ ವಡೆಯರ ಮಲ್ಲಾಪುರ ಗ್ರಾಮದ ಮೊರಾರ್ಜಿ ಶಾಲೆಗೆ ಪ್ರಥಮ ಪಟ್ಟಿಯಲ್ಲಿ ಆಯ್ಕೆಯಾಗಿದ್ದು, ಶಾಲೆಯ ಮುಖ್ಯ ಶಿಕ್ಷಕ, ಶಿಕ್ಷಕರು ಎಸ್ ಡಿಎಂಸಿ ಗ್ರಾಮದವರು ಹರ್ಷ ವ್ಯಕ್ತಪಡಿಸಿದ್ದಾರೆ.

ಅರ್ಜಿ ಆಹ್ವಾನ

ಗದಗ: ಜಿಲ್ಲೆಯ ಅರ್ಹ ಫಲಾನುಭವಿಗಳಿಂದ ದ್ವಿದಳಧಾನ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ರೈತರು, ರೈತ ಉತ್ಪಾದಕ ಸಂಸ್ಥೆಗಳು, ಪ್ರಾಥಮಿಕ ಕೃಷಿ ಪರಪತ್ ಸಂಘಗಳು, ನೋಂದಾಯಿತ ಸಂಸ್ಥೆಗಳು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಕೇಂದ್ರ ಮತ್ತು ರಾಜ್ಯದ ಪಾಲಿನ ಶೇ.60:40 ಅನುಪಾತದಲ್ಲಿ, ಯೋಜನಾ ವೆಚ್ಚದ ಶೇ.33 (ಗರಿಷ್ಠ ರೂ. 25 ಲಕ್ಷ) ರಷ್ಟು ಸಹಾಯಧನ ನೀಡಲು ಅವಕಾವಿರುತ್ತದೆ. ಯೋಜನೆಯಡಿ ಬ್ಯಾಂಕ್ ಸಾಲ ಪಡಯುವದು ಕಡ್ಡಾಯವಾಗಿದ್ದು, ಆಸಕ್ತ ಫಲಾನುಭವಿಗಳು ಜೂ.15ರೊಳಗಾಗಿ ಸಂಬಂಧಿಸಿದ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ರೈತ ಸಂಪರ್ಕ ಕೇಂದ್ರ, ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಮಂಗಲಾ ಗದ್ದಿ ನಿಧನ



ನರೆಗಲ್ಲ: ಪಟ್ಟಣದ ತಗ್ಗಿನಕೇರಿ ಓಣಿಯ ನಿವಾಸಿ ಸುಮಂಗಲ ರಾಮಣ್ಣ ಗದ್ದಿ (54) ನಿಧನರಾದರು. ಮೃತರಿಗೆ ಪತಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವಿದೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	1669-6189
ಉದ್ದಿನಕಾಳು	3277-5277
ಧನಿಯಾ	10819-10819
ಅಲಸಂದೆ	3265-6129
ಹೆಸರುಕಾಳು	1509-7669
ಶೇಂಗಾ	4800-8369
ಹುರಳಿಕಾಳು	1509-7669
ಶೇಂಗಾ	4800-8369
ಹುರಳಿಕಾಳು	4228-4303
ಜೋಳ	1477-4621
ಮೆಕ್ಕೆಜೋಳ	1770-1770
ಮಡಿಕೆ	3112-11111
ಸಾಸುವೆ	4629-5470
ಕುಸುಬೆ	4159-5470
ಎಳ್ಳು	5209-5209
ಸೂರ್ಯಕಾಂತಿ	6519-6842
ತೊಗರಿ	2779-4424
ಗೋಧಿ	1309-5109



ಗದಗ: ಜೆಡಿಎಸ್ ಪಕ್ಷದ ರಾಜ್ಯ ವಕ್ತಾರ ವೆಂಕನಗೌಡ ಗೋವಿಂದಗೌಡ್ರ, ಹಾಗೂ ಪ್ರದೀಪ ಕುಮಾರ ಅವರು ಬೆಂಗಳೂರಿನ ಪದ್ಮನಾಭನಗರದ ಮಾಜಿ ಪ್ರಧಾನಿ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರ ನಿವಾಸಕ್ಕೆ ತೆರಳಿ ಅವರ 94ನೇ ಹುಟ್ಟು ಹಬ್ಬಕ್ಕೆ ಶುಭಾಶಯಗಳು ಕೋರಿ ಆಶೀರ್ವಾದವನ್ನು ಪಡೆದರು.

ಸಂವಿಧಾನದ ಆಶಯ ತಿಳಿದುಕೊಳ್ಳಿ: ನಾಯಕ

ನರೆಗಲ್ಲ: ಅಂಬೇಡ್ಕರ್ ಅವರ ಬರೆದ ಸಂವಿಧಾನ ಜೀವನ ಬದಲಿಸುವ ಗ್ರಂಥವಾಗಿದೆ. ಅದಕ್ಕೆ ಮುಖ್ಯವಾಗಿ ನಾನು ಕಠಿಣ ಪರಿಶ್ರಮ ಹಾಗೂ ಸ್ವಾಭಿಮಾನದ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಸಿಪಿಐ ವಿಜಯಕುಮಾರ ನಾಯಕ ತಿಳಿಸಿದರು. ನೆರೆಗಲ್ಲ ಮಜರೇ ಗ್ರಾಮ ತೋಟಗಂಟಿಯಲ್ಲ ಗದಗ ಜಿಲ್ಲಾ ಪೊಲೀಸ್ ಇಲಾಖೆ ರೋಣ ಪೊಲೀಸ್ ವೃತ್ತ ನಿರೀಕ್ಷಕರ ವಲಯ ಹಾಗೂ ನೆರಗಲ್ಲ ಪೊಲೀಸ್ ಠಾಣೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಕುಂದು-ಕೊರತೆಗಳ ಸಭೆಯಲ್ಲಿ ಮಾತನಾಡಿ, ಹಿಂದುಳಿದ ಎಲ್ಲ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಸಂವಿಧಾನದ ಎಲ್ಲಾ ಕರ್ತವ್ಯ ಮತ್ತು ಕಾರ್ಯ ಓದಿ ನಿಮ್ಮ ಜೀವನವನ್ನು ರೂಪಿಸಿಕೊಳ್ಳಿ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬರೆದ ಸಂವಿಧಾನವನ್ನು ಓದಿ ಎಲ್ಲಾ ಮಕ್ಕಳು ತಮ್ಮ ಜೀವನವನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದರು. ನೆರಗಲ್ಲ ಪೊಲೀಸ್ ಠಾಣೆ ಪಿಎಸ್ಐ ಐಶ್ವರ್ಯ ನಾಗರಾಳ ಮಾತನಾಡಿ, ಸಮಾಜದಲ್ಲಿ ಯಾರೂ ಮೇಲಲ್ಲ ಯಾರು ಕೀಳಲ್ಲ ಎಲ್ಲರೂ ಒಂದೇ. ಎಲ್ಲ ಮಕ್ಕಳನ್ನು ಶಿಕ್ಷಣ ಕಲಿಸುವುದರ ಜೊತೆಗೆ ಸಂಸ್ಕಾರವನ್ನು ಕಲಿಸಬೇಕು. ಅಂದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದರು. ಈ ವೇಳೆ ಪೊಲೀಸ್ ಸಿಬ್ಬಂದಿಗಳಾದ ಎಸ್.ಬಿ.ವಡ್ಡಟ್ಟಿ, ಷರೀಫ್ ಮುಲ್ಲಾ, ಬಿ.ಎಸ್.ಮಾಯಣ್ಣವರ್, ಹಿರಿಯರಾದ ಲಕ್ಷ್ಮಪ್ಪ ಹಳ್ಳದಮನಿ, ದೇವಪ್ಪ ನುಲ್ಕಿ, ಎಲ್ಲಪ್ಪ ಹಳ್ಳದಮನಿ, ಫಕೀರಪ್ಪ ಪೂಜಾರ, ಶರಣಪ್ಪ ಹಳ್ಳದಮನಿ, ಶೇಖಪ್ಪ ಡಂಬಳ, ಕಳಕಪ್ಪ ಡಂಬಳ ಉಪಸ್ಥಿತರಿದ್ದರು. ಉಪನ್ಯಾಸಕ ಶಿವಾನಂದ ಗೋಗೇರಿ ನಿರೂಪಿಸಿ ವಂದಿಸಿದರು.



ನರೆಗಲ್ಲ: ನೆರೆಗಲ್ಲ ಮಜರೇ ಗ್ರಾಮ ತೋಟಗಂಟಿಯಲ್ಲ ಗದಗ ಜಿಲ್ಲಾ ಪೊಲೀಸ್ ಇಲಾಖೆ ರೋಣ ಪೊಲೀಸ್ ವೃತ್ತ ನಿರೀಕ್ಷಕರ ವಲಯ ಹಾಗೂ ನೆರಗಲ್ಲ ಪೊಲೀಸ್ ಠಾಣೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಕುಂದು-ಕೊರತೆಗಳ ಸಭೆಯಲ್ಲಿ ಸಿಪಿಐ ವಿಜಯಕುಮಾರ ನಾಯಕ ಮಾತನಾಡಿದರು.

ಜಿಲ್ಲೆಯ ವಿವಿಧೆಡೆ ಮಳೆ | ವಿದ್ಯುತ್ ಕಂಬಗಳು ಉರುಳಿ ಹಾನಿ
ಮರದ ರೆಂಬೆ-ಕೊಂಬೆಗಳು ಧರೆಗೆ

ಗದಗ: ಗದಗ-ಬೆಟಗೇರಿ ಅವಳಿ ನಗರ ಸೇರಿ ಜಿಲ್ಲೆಯ ವಿವಿಧೆಡೆ ಗುಡುಗು, ಬಿರುಗಾಳಿ ಸಹಿತ ಗಂಟೆಗೂ ಅಧಿಕ ಕಾಲ ಧಾರಾಕಾರ ಮಳೆ ಸುರಿದಿದ್ದು, ಜನಜೀವನ ಅಸ್ತವ್ಯಸ್ಥಗೊಂಡಿತು. ಕೆಲವೆಡೆ ಗಿಡ-ಮರಗಳು ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿದದ್ದು, ದ್ವಿಚಕ್ರ ವಾಹನ ಸೇರಿ ಮನೆಯ ಗೋಡೆಗಳು ಜಖಂಗೊಂಡಿವೆ.

ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಿರುಬಿಸಿಲಿನಿಂದ ಕೂಡಿದ್ದ ವಾತಾವರಣ ಮಧ್ಯಾಹ್ನದ ನಂತರ ಏಕಾಏಕಿ ಮೋಡ ಕವಿದ ವಾತಾವರಣ ಉಂಟಾಗಿ ಮಳೆ ಸುರಿಯಿತು. ಅವಳಿ ನಗರದ ತಿಲಕ್ ಪಾರ್ಕ್, ಗ್ರೇನ್ ಮಾರ್ಕೆಟ್, ಮಹಾತ್ಮ ಗಾಂಧಿ ವೃತ್ತ, ತೋಂಟದಾರ್ಯ ರಥಬೀದಿ, ಬಸವೇಶ್ವರ ವೃತ್ತ, ರೋಟರಿ ಸರ್ಕಲ್, ಬಳ್ಳಾರಿ ಬ್ರಿಡ್ಜ್, ಹಳೆ ಜಿಲ್ಲಾಧಿಕಾರಿ ಕಚೇರಿ ವೃತ್ತ, ಹಾತಲಗೇರಿ ನಾಕಾ, ಜೆಟಿ ಕಾಲೇಜ್ ಸೇರಿ ಹಲವೆಡೆ ರಸ್ತೆ ಮೇಲೆ ನೀರು ಹರಿದಿದ್ದರಿಂದ ಪಾದಚಾರಿಗಳು, ವಾಹನ ಸವಾರರು ಪರದಾಡಿದರು. ಬೀದಿ ಬದಿಯ ಹೂವು-ಹಣ್ಣಿನ ವ್ಯಾಪಾರಸ್ಥರು, ಸಾರ್ವಜನಿಕರು ತೊಂದರೆ ಅನುಭವಿಸಿದರು.

ಕಳೆದ ಕೆಲ ದಿನಗಳಿಂದ ಬಿಸಿಲಿನ ಬೇಗೆಗೆ ಜಿಲ್ಲೆಯ ವಿವಿಧೆಡೆ ಅಲ್ಲಲ್ಲಿ ಮಳೆ ಸುರಿಯುತ್ತಿದ್ದು, ಭಾನುವಾರವೂ ಜಿಲ್ಲೆಯ ವಿವಿಧೆಡೆ ಮಳೆ ಸುರಿಯಿತು. ಅವಳಿ ನಗರದಲ್ಲಿ ಸುರಿದ ಮಳೆಯಿಂದ ಬಿಸಿಲಿನಿಂದ ಬಸವಳಿದಿದ್ದ ನಗರದ ಜನರಿಗೆ ತುಸು ಆಹ್ಲಾದಕರ ಅನುಭವ ನೀಡಿತು.

ಕಳೆದ ಮೂರ್ನಾಲ್ಕು ದಿನಗಳಿಂದ ತಾಲೂಕಿನ ಹಲವು ಭಾಗಗಳಲ್ಲಿ ಮಳೆ ಚುರುಕುಗೊಂಡಿದ್ದು ಜಿಲ್ಲೆಯ ನರಗುಂದ, ಶಿರಹಟ್ಟಿ, ಲಕ್ಷ್ಮೇಶ್ವರ, ಗಜೇಂದ್ರಗಡ, ರೋಣ ಭಾಗದಲ್ಲೂ ಗುಡುಗು, ಬಿರುಗಾಳಿ ಸಹಿತ ಮಳೆ ಸುರಿಯಿತು. ಅವಳಿ ನಗರದ ಕೆಲವು ಭಾಗದಲ್ಲಿ ಗಟಾರು ನೀರಿನೊಂದಿಗೆ ಮಳೆ ನೀರು ಸೇರಿಕೊಂಡು ರಸ್ತೆ ಮೇಲೆ ರಭಸವಾಗಿ ಹರಿಯಿತು. ಇದರಿಂದ ರಸ್ತೆಯೆಲ್ಲಾ ಕೆಸರು ಮಯವಾಗಿತ್ತು. ಬೈಕ್ ಸವಾರರು, ಪಾದಚಾರಿಗಳು ರಸ್ತೆ ದಾಟಲು ಹರ ಸಾಹಸ ಪಡುವಂತಾಯಿತು.



10ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗೆ

ಜಿಲ್ಲೆಯ ವಿವಿಧ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ನಗರ ಹೊರವಲಯಗಳಲ್ಲಿ 10ಕ್ಕೂ ಹೆಚ್ಚು ವಿದ್ಯುತ್ ಕಂಬ ನೆಲಕ್ಕುರುಳಿವೆ. ಪರಿಣಾಮ ಅನೇಕ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದ್ದು, ರಾತ್ರಿ ವೇಳೆಗೆ ಕತ್ತಲೆ ಆವರಿಸಿತು. ಹೆಸ್ಕಾಂ ಸಿಬ್ಬಂದಿ ತುರ್ತು ದುರಸ್ತಿ ಕಾರ್ಯಕ್ಕೆ ಮುಂದಾಗಿದ್ದು, ವಿದ್ಯುತ್ ಮರುಸ್ಥಾಪನೆಗೆ ಪ್ರಯತ್ನಿಸುತ್ತಿದ್ದಾರೆ.

ರಸ್ತೆಯಲ್ಲಿ ನೀರು: ಮಳೆ ನೀರಿನೊಂದಿಗೆ ಚರಂಡಿ ರಸ್ತೆ ಮೇಲೆ ಹರಿದ ಪರಿಣಾಮ ವಾಹನ ಸವಾರರು ಪರದಾಡಿದರು. ಸ್ಥಳೀಯರು ತೊಂದರೆಗೀಡಾದರು. ಹಳೆ ಬಸ್ ನಿಲ್ದಾಣ, ಮಹಾತ್ಮ ಗಾಂಧಿ ವೃತ್ತ, ಹಳೇ ಡಿಸಿ ಕಚೇರಿ ವೃತ್ತ, ಝಂಡಾ ಸರ್ಕಲ್ ಸೇರಿದಂತೆ ವಿವಿಧ ಭಾಗದಲ್ಲಿ ಹೆಚ್ಚಿನ ನೀರು ಹರಿವು ಇದ್ದಿದ್ದರಿಂದ ವಾಹನ ಸವಾರರು ಪರದಾಡುವಂತಾಯಿತು.

ಕೆಲವೆಡೆ ವಿದ್ಯುತ್ ತಂತಿಗಳು ರಸ್ತೆಗೆ ಬಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕರು ಎಚ್ಚರಿಕೆಯಿಂದ ಸಂಚರಿಸಲು ಅಧಿಕಾರಿಗಳು ಸೂಚನೆ ನೀಡಿದ್ದಾರೆ. ರಸ್ತೆಗೆ ಬಿದ್ದ ಮರದ ರೆಂಬೆಗಳು ಭಾರೀ ಗಾಳಿಗೆ ಅನೇಕ ಮರಗಳ ದೊಡ್ಡ ರೆಂಬೆಗಳು ಮುರಿದು ರಸ್ತೆಗಳ ಮೇಲೆ ಬಿದ್ದಿವೆ. ನಗರದಲ್ಲಿನ ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರ ಕೆಲಕಾಲ ಅಸ್ತವ್ಯಸ್ತಗೊಂಡಿತು. ಅಗ್ನಿಶಾಮಕ ದಳ ಹಾಗೂ ನಗರಸಭೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ರೆಂಬೆಗಳನ್ನು ತೆರವುಗೊಳಿಸಿದರು.

ಶೀಘ್ರದಲ್ಲಿ ನಿರಾಶ್ರಿತರಿಗೆ ನಿವೇಶನ ಹಂಚಿಕೆ ಮಾಡಿ

ಮುಂಡರಗಿ: ಸ್ಥಳೀಯ ಪುರಸಭೆ ಆಶ್ರಯ ನಿರ್ಗತಿಕರಿಗೆ ನಿವೇಶ ನೀಡಲು ಶಿರೋಳ ಗ್ರಾಮದ ಹತ್ತಿರ ಸುಮಾರು 25 ಎಕರೆ ಜಮೀನು ಖರೀದಿ ಮಾಡಿದ್ದು, ಆದರೆ ಇಲ್ಲಿಯವರೆಗೂ ಮನೆ ಹಂಚಿಕೆ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ಕೂಡಲೇ ನಿರಾಶಿತರಿಗೆ ನಿವೇಶನ ಹಂಚಿಕೆ ಮಾಡಬೇಕೆಂದು ಆಗ್ರಹಿಸಿ ಕಿಸಾನ ಜಾಗೃತಿ ವಿಕಾಸ ಸಂಘವು ಪುರಸಭೆ ಮುಂದೆ ಧರಣಿ ಸತ್ಯಾಗ್ರಹ ಹಮ್ಮಿಕೊಂಡಿತ್ತು.

ಕಿಸಾನ ಜಾಗೃತಿ ವಿಕಾಸ ಸಂಘ ಜಿಲ್ಲಾ ಕಮೀಟಿ ಹಾಗೂ ತಾಲೂಕು ಕಮೀಟಿ ವತಿಯಿಂದ ಈಗಾಗಲೆ ಸತ್ಯಾಗ್ರಹ ಮಾಡಿದ್ದು, ತಾವುಗಳು ಶೀಘ್ರದಲ್ಲಿ ಮನೆ ಹಂಚು ಕೆಲಸ ಪ್ರಾರಂಭ ಮಾಡಿತ್ತೇವೆ ಅಂತಾ ಹೇಳಿದ್ದಕ್ಕೆ ಅಂದು ನಡೆದ ಸತ್ಯಾಗ್ರಹ ಕೈಬಿಡಲಾಗಿತ್ತು. ಆದರೆ ಅಧಿಕಾರಿಗಳು ಹೇಳಿದ ಮಾತಿಗೆ ತಪ್ಪಿದ್ದೀರಿ ಎಂದು ಸಂಘದ ಅಧ್ಯಕ್ಷ ವೀರಣ್ಣ ಘಟ್ಟಿ ತಿಳಿಸಿದ್ದಾರೆ.

ಈಗಾಗಲೇ ಪುರಸಭೆ ಕಾರ್ಯಾಲಯದಿಂದ 127 ಜನನ್ನು ಆಯ್ಕೆಮಾಡಿರುವ ಪ್ರಕ್ರಿಯೆ ನಮ್ಮ ಸಂಘಟನೆಗೆ ತಿಳಿದು ಬಂದಿರುತ್ತದೆ. ತಾವುಗಳು ಆಯ್ಕೆ ಪಟ್ಟಿ ಫಲಾನುಭವಿಗಳ ರಾಜೀವ ಗಾಂಧಿ ವಸತಿ ನಿಗಮ ಬೆಂಗಳೂರು ಇವರಿಗೆ ಕಳಿಸಿದ್ದೇವೆ ಎಂದು ಹಾರಿಕೆ ಉತ್ತರ ನೀಡುತ್ತೀದ್ದೀರಿ. ಅರ್ಹಫಲಾನುಭವಿಗಳಿಗೆ ಮನೆ ಹಂಚುವ ತನಕ ಹಾಗೂ ಹಕ್ಕು ಪತ್ರ ನೀಡುವ ತನಕ ನಿಮ್ಮ ಕಾರ್ಯಾಲಯದ ಮುಂದೆ ನಿರಂತರ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುತ್ತೇವೆ ಎಂದು ಕಿಸಾನ ಜಾಗೃತಿ ವಿಕಾಸ ಸಂಘದ ಗದಗ ಜಿಲ್ಲಾ ಅಧ್ಯಕ್ಷ ನಿಂಗಪ್ಪ ಭಂಡಾರಿ ಆಕ್ರೋಶ ವ್ಯಕ್ತಪಡಿಸಿದರು.

ಪುರಸಭೆಮುಖ್ಯಾಧಿಕಾರಿಸಿದ್ಧರಾಮಕಟ್ಟಿಮನಿ ಪ್ರತಿಭಟನೆ ಸ್ಥಳಕ್ಕೆ ಆಗಮಿಸಿ, ಹೋರಾಟಗಾರರ ಮನವಲಿಸುವುದಕ್ಕೆ ಪ್ರಯತ್ನಿಸಿದರು ಸಹ ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸುವ ವರೆಗೆ ಹೋರಾಟ ಮುಂದುವರಿಯುತ್ತಿದೆ ಎಂದು ಹೋರಾಟಗಾರರು ಹೇಳಿದರು.

ಪ್ರತಿಭಟನೆಯಲ್ಲಿ ಲಕ್ಷ್ಮವ್ವ ಕೊರವರ, ವಿಜಯಲಕ್ಷ್ಮೀ ಬಡಿಗೇರ, ಚಿನ್ನವ್ವ ಕಳಸಾಪೂರ, ರೇಣುಕಾ ಕೋಳ್ಳಿ, ದೇವಕ್ಕ ಹುಚ್ಚಣ್ಣನವರ, ಲಕ್ಷ್ಮೀ ಕರಡಗಟ್ಟಿ, ರೇಣುಕಾ ಕೊರವರ, ಮಧುಮತಿ ಹುಲ್ಲೂರು, ಗಂಗಮ್ಮ ಕೊರವರ, ಮಹಾದೇವಿ ಕೊರವರ, ಯಲ್ಲವ್ವ ಕೊರವರ ಮುಂತಾದವರು ಭಾಗವಹಿಸಿದ್ದರು.



ಭಾರೀ ಮಳೆಗೆ ರಸ್ತೆ ಮೇಲೆ ಹರಿದ ಚರಂಡಿ ನೀರು, ಮರಗಳು ಧರೆಗೆ

ಲಕ್ಷ್ಮೇಶ್ವರ: ತಾಲೂಕಿನಾದ್ಯಂತ ಭಾನುವಾರ ಸಂಜೆ ಬಿರುಗಾಳಿಯೊಂದಿಗೆ ಸುರಿದ ರಭಸದ ಮಳೆ ಅನೇಕ ಅವಾಂತರಗಳನ್ನು ಸೃಷ್ಟಿಸಿದೆ. ಹಳ್ಳ, ಚರಂಡಿಗಳ ಅಪಾರ ಪ್ರಮಾಣದ ನೀರು ರಸ್ತೆಗಳ ಮೇಲೆ ಹರಿದು, ಅಲ್ಲಲ್ಲಿ ವಿದ್ಯುತ್ ಕಂಬ, ಮರಗಳು ಬಿದ್ದು ಸಂಚಾರಕ್ಕೆ ಅಡಚಣೆಯಾಗಿದೆ.

ಪಟ್ಟಣದ ಕೆಂಚಲಾಪುರ ಓಣಿಯ ಲಂಡಿನಾಲಾ, ಹಳ್ಳದ ಸೇತುವೆ ಮೇಲೆ ಮತ್ತು ಗಡ್ಡದ್ದೇವರಮಠ ರಸ್ತೆಯಲ್ಲಿ ನೀರು ಹರಿದು ಕೆರೆಯಂತಾದ ರಸ್ತೆಗಳಲ್ಲಿ ಕೆಲ ಹೊತ್ತು ಸಂಚಾರ ಸ್ಥಗಿತಗೊಂಡು ಜನರು ಪರದಾಡಿದರು. ಹಾವಳಿ ಆಂಜನೇಯ ದೇವಸ್ಥಾನ ಹತ್ತಿರ ರಸ್ತೆಗಳು ಕೆರೆ ಯಂತಾಗಿದ್ದವು, ಮುಕ್ತಿಮಂದಿರ ರಸ್ತೆ, ಕೆಇಬಿ ಹತ್ತಿರ, ಎಪಿಎಂಸಿ ಶಾಲೆಯಲ್ಲಿ ಮರ ಬಿದ್ದು ಸಂಚಾರಕ್ಕೆ ಅಡ್ಡಿಯಾಗಿತ್ತು. ಪಟ್ಟಣದ ಇಟ್ಟಿಗೇರಿ ಕೆರೆಯಂಚಿನ ಪ್ರದೇಶದ ತಗ್ಗು ಪ್ರದೇಶಗಳಲ್ಲಿನ ಸಾಯಿಬಾಬಾ ದೇವಸ್ಥಾನ, ಕಟ್ಟಿಗೆ ಅಡ್ಡೆ, ಕೆಲ ಮನೆಗಳಿಗೆ ನೀರು ನುಗ್ಗಿದ್ದರಿಂದ ಉಂಟಾಗಿರುವ ಸಮಸ್ಯೆ ಸರಿಪಡಿಸಲು ಪುರಸಭೆಯುವರು ಪರದಾಡಿದರು.

ಅಂಬೇಡ್ಕರ್ ನಗರ, ಮುಕ್ತಿನಗರ ರಂಗಾಚಾರಿ ಪ್ಲಾಟ್ ಸೇರಿ ಕೆಲ ತಗ್ಗು ಪ್ರದೇಶಗಳಲ್ಲಿನ ಮನೆಗಳಿಗೆ ನೀರು ನುಗ್ಗಿ ಜನತೆ ನೀರು ಹೊರ ಹಾಕುವ ಮೂಲಕ ಆತಂಕಕ್ಕೀಡಾದರು.

ಮೊದಲೇ ತಗ್ಗು ಗುಂಡಿಗಳಿಂದ ಕೂಡಿರುವ ಗ್ರಾಮೀಣ ಪ್ರದೇಶಗಳ ಸಂಪರ್ಕದ ರಸ್ತೆಗಳಲ್ಲಿ ಅಪಾರಪ್ರಮಾಣನೀರುನಿಂತುಜನರು ಊರು ಸೇರಲು ಪರದಾಡಿದರು. ಗಾಳಿಯೊಂದಿಗೆ ಮಳೆ ಪ್ರಾಂಭವಾಗುತ್ತಿದ್ದಂತೆಯೇ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಜನಜೀವನ ಅಸ್ತವ್ಯಸ್ಥಗೊಂಡಿತು. ರೈತ ಸಮುದಾಯ ದವರು, ಕುರಿಗಾರರು ತಮ್ಮ ಜಾನುವಾರು, ಪ್ರಾಣಿಗಳ ರಕ್ಷಣೆ, ಹೊಟ್ಟು-ಮೇವಿನ ಸಂರ ಕ್ಷಣೆಗೆ ಪರದಾಡಿದರು. ಪೌರ ಕಾರ್ಮಿಕರು ಇಡೀ ಪಟ್ಟಣ ಸುತ್ತಿ ಅಲ್ಲಲ್ಲಿ ಉಂಟಾಗಿದ್ದ ತೊಂದರೆ ಸರಿಪಡಿಸಿದರು. ಹೆಸ್ಕಾಂ ಸಿಬ್ಬಂದಿ ಗಳು ಬಿದ್ದ ಕಂಬ ತಂತಿಗಳನ್ನು ಸರಿಪಡಿಸಿದರು. ಒಟ್ಟಾರೆ ಮಳೆ ಅವಾಂತರ ಸೃಷ್ಟಿಸಿದೆ.



ಒಳಮೀಸಲಾತಿ ಮರಣ ಶಾಸನವಿದ್ದಂತೆ: ಅರುಣಕುಮಾರ

ಗದಗ: ಮಾದಿಗ ಸಮಾಜ 35 ವರ್ಷಗಳಿಂದ ಒಳಮೀಸಲಾತಿಗಾಗಿ ಹೋರಾಟ ಮಾಡಿಕೊಂಡು ಬಂದಿದೆ. ಉದ್ದೇಶ ಪೂರ್ವಕವಾಗಿ ಮಾದಿಗ ಸಮುದಾಯಕ್ಕೆ ಎಚ್.ಸಿ. ಮಾದೇವಪ್ಪ, ಜಿ.ಪರಮೇಶ್ವರ, ಪ್ರಿಯಾಂಕ್ ಖರ್ಗೆ ಒಳಮೀಸಲಾತಿ ವಿರೋಧ ಮಾಡಿಕೊಂಡು ಬಂದಿದ್ದು, ಸದ್ಯ ಜಾರಿಗೊಳಿಸಿರುವ ಒಳಮೀಸಲಾತಿ ಮಾದಿಗರಿಗೆ ಮರಣ ಶಾಸನವಿದ್ದಂತೆ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ಸಂಘದ ರಾಜ್ಯಾಧ್ಯಕ್ಷ ಎಸ್.ಅರುಣಕುಮಾರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2024ರಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಆದರೆ, ರಾಜ್ಯದಲ್ಲಿ ದತ್ತಾಂಶ ಇದ್ದರೂ, ಎಚ್.ಸಿ.ಮಾದೇವಪ್ಪ ತನ್ನ ಕುತಂತ್ರದಿಂದ ನಾಗಮೋಹನ್ ದಾಸ್ ವರದಿ ಜಾರಿಗೊಳಿಸಲು ಪ್ರಯತ್ನಿಸಿದರು.



ಮೇ 8ರಂದು ರಾಜ್ಯ ಸರ್ಕಾರ ಜಾರಿಗೊಳಿಸಿರುವ ಒಳಮೀಸಲಾತಿ ಮಾದಿಗ ಸಮುದಾಯಕ್ಕೆ ಮರಣ ಶಾಸನ ಇದ್ದಂತೆ ಆಗಿದೆ. ಮಾದಿಗ ಸಮಾಜ ಅತ್ಯಂತ ನೋವು ಅನು ಭವಿಸಿದ ಸಮಾಜವಾಗಿದೆ. ಭೋವಿ, ಹೊಲೆಯ ಸಮುದಾಯ ಗಳು ಮಾದಿಗರಿಗಿಂತ ಬಲಿಷ್ಠವಾಗಿವೆ. ಮಾದೇವಪ್ಪನವರ ಕುತಂತ್ರದಿಂದ ಈ ಅವಾಂತರ ಆಗಿದೆ ಎಂದು ಸಚಿವರ ವಿರುದ್ಧ ಹರಿಹಾಯ್ದರು.

ಕಾಂಗ್ರೆಸ್ ಸರ್ಕಾರ ಒಳಮೀಸಲಾತಿ ಜಾರಿಗೊಳಿಸುವಲ್ಲಿ ಶೇ.1% ಕೆಲಸ ಮಾಡಿಲ್ಲ. ಕ್ಯಾಬಿನೆಟ್ ನಲ್ಲಿ 56,432 ಹುದ್ದೆಗಳಿಗೆ ಒಳಮೀಸಲಾತಿ ಇಲ್ಲ ಅಂತ ತೀರ್ಮಾನ ಮಾಡಲಾಗಿದೆ. ಇದರ ವಿರುದ್ಧ ರಾಜ್ಯಾದ್ಯಂತ ಹೋರಾಟ ಆರಂಭವಾಗುತ್ತಿದ್ದಂತೆ ರಾಜ್ಯ ಸರ್ಕಾರ ಮರು ಪರಿಶೀಲನೆ ಮಾಡಲಾಗುವುದು ಅಂತ ಹೇಳಿತು. ನಂತರ ಶೇ. 5.25 %ರಷ್ಟು ಒಳಮೀಸಲಾತಿ ಘೋಷಿಸಿತು. ಮಾದಿಗರ ಹೋರಾಟದ ಫಲವಾಗಿ ಒಳಮೀಸಲಾತಿ ಜಾರಿಯಾಗಿದೆ ಹೊರತು ಸರ್ಕಾರ ಮಾಡಿದ್ದಲ್ಲ ಎಂದು ಸ್ಪಷ್ಟಪಡಿಸಿದರು.

ಈ ವೇಳೆ ಮಾಳಪ್ಪ ಕುರ್ಕಿ, ವೈ.ಜಯರಾಜ, ಸುರೇಂದ್ರ, ರಾಮಚಂದ್ರ ಭಂಡಾರಿ, ಪ್ರೇಮಾ ದೇವರಾಜ, ಪ್ರೇಮಾ ಕಲಕೇರಿ, ಬಸವರಾಜ ಹೊಸಮನಿ ಇದ್ದರು.

ಸಿಂಧೂರ ಲಕ್ಷ್ಮಣ ಜಯಂತಿ

ನರಗುಂದ: ಪಟ್ಟಣದ ವೀರ ಸಿಂಧೂರ ಲಕ್ಷ್ಮಣ ವೃತ್ತದಲ್ಲಿ ಮಹರ್ಷಿ ವಾಲ್ಮೀಕಿ ಟ್ರಸ್ಟ್ ಕಮಿಟಿ, ಸಮಾಜ ಬಾಂಧವರು ಸ್ವಾತಂತ್ರ್ಯ ಹೋರಾಟಗಾರ ವೀರ ಸಿಂಧೂರ ಲಕ್ಷ್ಮಣ ಅವರ ಭಾವಚಿತ್ರಕ್ಕೆ ಹೂಮಾಲೆ ಸಮರ್ಪಿಸಿ ಜಯಂತಿ ಆಚರಿಸಿದರು. ನಾಗಪ್ಪ ದೊಡಮನಿ, ಮಲ್ಲೇಶ ಅಬ್ಬಿಗೇರಿ, ಹನುಮಂತ ರಾಮಣ್ಣವರ, ರವಿ ತಳವಾರ, ಶ್ರೀಕಾಂತ ಮಣ್ಣೂರ, ಪ್ರಕಾಶ ಮೀಶಿ, ಈರಪ್ಪ ತಳವಾರ, ಯೋಗೇಶ ತಿಗಡಿ, ಸೋಮೇಶ ತಿಗಡಿ, ಮಂಜು ತಿಗಡಿ, ಮಹೇಶ ತಳವಾರ, ಶೇಖಪ್ಪ ಗೊಂದಿ, ಪರಶುರಾಮ ಬೆಳವಣಿಕಿ, ಮಂಜು ತಳವಾರ, ಎಚ್ ಬಿ ತಳವಾರ, ಕೆ.ವೈ.ರಾಮಕೃಷ್ಣ, ಎಚ್.ಕೆ.ತೊಂಡಿಹಾಳ, ಎಂ.ಎಂ. ಗೊಂದಿ, ಮಲ್ಲಪ್ಪ ಶಿಗ್ಗಾವ, ಎಚ್.ಎ.ಕಣವಿ, ಜಿ.ಬಿ.ತಳವಾರ, ಐ.ಬಿ.ಅರಹುಣಸಿ, ಮುತ್ತಪ್ಪ ತಳವಾರ, ಐ.ವಾಯ್.ಮಣ್ಣೂರ, ವೈ.ಬಿ.ನಾಯ್ಕರ ಹಾಗೂ ಸಮಾಜದ ಬಾಂಧವರಿದ್ದರು.



ಅವಘಡ ಸಂಭವಿಸುವ ಮೊದಲು ಎಚ್ಚೆತ್ತುಕೊಳ್ಳಿ

ಮೆಹಬೂಬ ಎಚ್ ಮೋತೆಖಾನ್

ರೋಣ: ಈಗಾಗಲೇ ಮುಂಗಾರು ಪೂರ್ವ ಮಳೆ ತಾಲೂಕಿನಲ್ಲಿ ಭಾರಿ ಪ್ರಮಾಣದಲ್ಲಿ ಸುರಿಯುತ್ತಿದ್ದು, ಅದೇ ಪ್ರಮಾಣದಲ್ಲಿ ಗಾಳಿಯೂ ಬಿಸತೊಡಗಿದೆ. ಹೀಗಾಗಿ ಹೆಸ್ಕಾಂ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚರಿಕೆಯಿಂದ ಇರುವುದು ಸೂಕ್ತ ಎಂಬ ಮಾತುಗಳು ಸಾರ್ವಜನಿಕ ವಲಯದಿಂದ ಕೇಳಿ ಬರುತ್ತಿವೆ.

ಮಾರ್ಚ್ ಕೊನೆಯ ವಾರದಲ್ಲಿ ಸುರಿದ ಭಾರಿ ಮಳೆಯಿಂದ ನೂರಾರು ಮರಗಳು ಸೇರಿದಂತೆ ಹತ್ತಾರು ವಿದ್ಯುತ್ ಕಂಬಗಳು ಧರೆಗೆರುಳಿದ್ದನ್ನು ಮರೆಯುವ ಮುನ್ನವೇ ಭಾನುವಾರ ಸಂಜೆ ಅಧಿಕ ಮಳೆ ಸುರಿದಿದ್ದು, ಗಿಡಮರಗಳು ಸೇರಿ ಹತ್ತಾರು ವಿದ್ಯುತ್ ಕಂಬಗಳು ಬಿದ್ದಿರುವ ಘಟನೆ ಕೂಡ ನಡೆದಿದೆ. ತಾಲೂಕಾಡಳಿತ ಅನಾಹುತ ಸಂಭವಿಸುವ ಮೊದಲು ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ.

ಇನ್ನು ರೋಣ ಪಟ್ಟಣದಿಂದ ಜಕ್ಕಲಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವಮುಖ್ಯ ರಸ್ತೆಗೆಹೊಂದಿಕೊಂಡಂತೆ ಬಹು ವರ್ಷಗಳ ಅಂದರೆ ಅವದಿ ಮಿರಿದ ಬೃಹತ್ ಗಾತ್ರದ ನೀಲಗೀರಿ ಮರಗಳು ಬೆಳೆದು ನಿಂತಿವೆ. ಆಗಾಗ ಬಿಸುವ ಗಾಳಿಗೆ ಮರದ ಟೊಂಗೆಗಳು ಮುಖ್ಯ ರಸ್ತೆಗೆ ವಾಲಿಕೊಂಡು ಬೀಳುವುದು ಸಾಮಾನ್ಯ ಎನ್ನುವಂತೆ ಆಗಿದ್ದು, ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚತ್ತುಕೊಂಡು ಮರಗಳನ್ನು ಬೇರೆಕಡೆಗೆ ಸಾಗಿಸುವ ಪ್ರಯತ್ನ ಮಾಡಬೇಕು ಎನ್ನವುದು ವಾಹನ ಸವಾರರ ಇಚ್ಚೆಯಾಗಿದೆ.



ದಿಗಂತ ವಿಶೇಷ

ಜಕ್ಕಲಿ ಮಾರನಬಸರಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಹತ್ತಾರು ವಿದ್ಯುತ್ ಕಂಬಗಳು ರಸ್ತೆಗೆ ಭಾಗಿಕೊಂಡು ನಿಂತಿವೆ. ರೋಣ ಮತ್ತು ಯಲಬುರ್ಗಾ ತಾಲೂಕಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಕೂಡ ಆಗಿದ್ದು, ಭಾಗಿದ ವಿದ್ಯುತ್ ಕಂಬಗಳು ಉರುಳಿ ಬೀಳುವ ಮೊದಲು ಹೆಸ್ಕಾಂ ಇಲಾಖೆ ಜಾಗೃತಿಗೊಳ್ಳಬೇಕಿದೆ.

ಶಾಲೆಗಳು ಆರಂಭಗೊಳ್ಳಲು ಕೆಲ ದಿನಗಳು ಮಾತ್ರ ಬಾಕಿಯಿದ್ದು.ಮುಂಗಾರು ಪೂರ್ವ ಮಳೆ ಕೂಡ ಆರಂಭಗೊಂಡಿದೆ.ಅಲ್ಲದೆ ವಿಪರಿತ ಎನ್ನುವಂತೆ ಗಾಳಿಯೂ ಬಿಸುತ್ತಿದೆ ಹಿಗಾಗಿ ಅವದಿ ಮಿರಿದ ಮರಗಿಡಗಳನ್ನು ಬೆರೆ ಕಡೆಗೆ ಸ್ಥಳಾಂತಿರಿಸುವುದು ಅತ್ಯಂತ ಅವಶ್ಯಕ. ಬಾಗಿದ ವಿದ್ಯುತ್ ಕಂಬಗಳನ್ನು ಧರೆಗೆ ಉರುಳದಂತೆ ಸರಿಪಡಿಸಿ ಆಗುವ ಅನಾಹುತಗಳನ್ನು ತಪ್ಪಿಸಲು ಈಗಲೇ ಪ್ರಮಾಣಿಕ ಪ್ರಯತ್ನ ಸಂಭಂಧಪಟ್ಟ ಇಲಾಖೆಯವರು ಮಾಡಬೇಕು.

ಮೌನೇಶ ಹಾದಿಮನಿ, ಹೋರಾಟಗಾರ ರೋಣ



ಗೃಹ ರಕ್ಷಕ ದಳ ಸಿಬ್ಬಂದಿ ಕಾರ್ಯ ಶ್ಲಾಘನೀಯ: ಕಟಗಿ

ಲಕ್ಷ್ಮೇಶ್ವರ: ಪೊಲೀಸ್ ಇಲಾಖೆಯೊಂದಿಗೆ ಸದಾ ಸಹಕಾರ ನೀಡುತ್ತಾ ಅನೇಕ ಕಾನೂನಿನ ಕಾರ್ಯಗಳಲ್ಲಿ ಕೈಜೋಡಿಸುತ್ತಿರುವ ಗೃಹರಕ್ಷಕ ದಳದ ಸಿಬ್ಬಂದಿಗಳ ಕಾರ್ಯ ನಿಜಕ್ಕೂ ಶ್ಲಾಘನೀಯ. ಇದೀಗಮುಖ್ಯಮಂತ್ರಿಗಳ ಚಿನ್ನದ ಪದಕ ದೊರೆತಿರುವದು ಜಿಲ್ಲೆಯ ಎಲ್ಲ ಗೃಹರಕ್ಷಕ ದಳದ ಸಿಬ್ಬಂದಿಯ ಸಹಕಾರ ಕಾರಣವಾಗಿದೆ ಎಂದು ಮುಖ್ಯಮಂತ್ರಿಗಳ ಚಿನ್ನದ ಪದಕ ಪುರಸ್ಕೃತ ಗೃಹರಕ್ಷಕ ದಳದ ಜಿಲ್ಲಾ ಬೋಧಕ ಕಿರಣಕುಮಾರ ಕಟಗಿ ಅಭಿಪ್ರಾಯಪಟ್ಟರು.

ಅವರು ಸೋಮವಾರ ಪಟ್ಟಣದ ಗೃಹರಕ್ಷಕ ದಳದ ಸಿಬ್ಬಂದಿಗಳು ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮವನ್ನು ಸ್ವೀಕರಿಸಿ ಮಾತನಾಡಿ, ಯಾವುದೇ ಕಾರ್ಯ ಮಾಡುತ್ತಿದ್ದರೂ ಅದಕ್ಕೆ ನಿಷ್ಠೆ, ಪ್ರಾಮಾಣಿಕತೆ ತೋರಬೇಕು. ಯಾವ ಹುದ್ದೆಯನ್ನು ಚಿಕ್ಕದೆಂದು ಪರಿಗಣಿಸದಿರಿ, ಮಾಡುತ್ತಿರುವ ಕೆಲಸದ ಬಗ್ಗೆ ಅಸಡ್ಡೆ ಬೇಡ. ಈ ಎಲ್ಲ ಸಿಬ್ಬಂದಿಗಳು ನೀಡುತ್ತಿರುವ ಸಹಕಾರವೇ ಇಂದಿನ ಮುಖ್ಯಮಂತ್ರಿಗಳ ಪದಕ ಪ್ರಾಪ್ತಿಗೆ ಕಾರಣವಾಗಿದ್ದು, ಈ ಪದಕ ಎಲ್ಲ ಸಿಬ್ಬಂದಿಗಳಿಗೆ ಅರ್ಪಿಸುತ್ತೇನೆ. ಸನ್ಮಾನಗಳು ಜವಾಬ್ದಾರಿಯನ್ನು ಹೆಚ್ಚಿಸುತ್ತವೆ. ಇಂದು ನೀಡಿದ ಗೌರವ ನನಗೆ ಇನ್ನೂ ಹೆಚ್ಚಿನ ಕಾರ್ಯ ಮಾಡಲು ಪ್ರೋತ್ಸಾಹ ನೀಡಿದಂತಾಗಿದೆ ಎಂದರು.



ಪಿಎಸ್ಐ ನಾಗರಾಜ ಗಡದ ಮಾತನಾಡಿ ಕಿರಣಕುಮಾರ ಓರ್ವ ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿಯಾಗಿ ಗೃಹರಕ್ಷಕ ದಳದಲ್ಲಿ ಸೇವೆ ನೀಡುತ್ತಿದ್ದು, ಹುದ್ದೆಗೆ ಸೇರಿದ ಕೆಲವೆ ವರ್ಷಗಳಲ್ಲಿ ಮುಖ್ಯಮಂತ್ರಿಗಳ ಪದಕಕ್ಕೆ ಬಾಜಿನರಾಗುತ್ತಿರುವದು ನಮ್ಮ ಭಾಗಕ್ಕೆ ಹೆಮ್ಮೆಯ ವಿಷಯವಾಗಿದೆ, ಎಲ್ಲಿ ಪ್ರಾಮಾಣಿಕತೆ, ದಕ್ಷತೆ, ನಿಷ್ಠೆ ಇರುತ್ತದೆ ಅಲ್ಲಿ ಪ್ರಶಸ್ತಿಗಳು ಅರಸಿಕೊಂಡು ಬರುತ್ತವೆ ಎನ್ನುವದಕ್ಕೆ ಈ ಪ್ರಶಸ್ತಿ ಸಾಕ್ಷಿಯಾಗಿದ್ದು, ಗೃಹರಕ್ಷಕ ದಳದ ಸಿಬ್ಬಂದಿಗಳು ನಮ್ಮ ಭಾಗದಲ್ಲಿ ಅಷ್ಟೆ ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸುತ್ತಿದ್ದು, ಪೊಲೀಸ್ ಇಲಾಖೆಗೆ ಹೆಚ್ಚು ಅನುಕೂಲವಾಗಿದ್ದು, ಅವರಿಗೆ ಇಲಾಖೆಯಿಂದ ದೊರೆಯಬೇಕಾದ ಸೌಲಭ್ಯ ದೊರೆಯುವಂತಾಗಲಿ ಎಂದರು.

ಗೃಹರಕ್ಷಕ ದಳದ ಜಿಲ್ಲಾ ಸಮದೇಷ್ಟ ಸಿ.ಬಿ.ಗೂಳರಡ್ಡಿ ಮಾತನಾಡಿ, ಎಲ್ಲ ಸಿಬ್ಬಂದಿಗಳ ಹಾಗೂ ಇಲಾಖೆಯ ಸಹಕಾರ ಸದಾ ಇರಲಿ ಎಂದರು. ಈ ವೇಳೆ ನಿವೃತ್ತ ಗೃಹರಕ್ಷಕ ದಳದ ಸಿಬ್ಬಂದಿ ಸಿ.ಜಿ.ಹೂವಿನ, ಬಿ.ಎನ್. ಛಬ್ಬಿ, ಸೋಮಶೇಖರಯ್ಯ ಕಲ್ಮಠ, ಬಿ.ಎಚ್ .ಬೆಂತೂರ, ಸಿ.ಎನ್.ಅಗಡಿ, ಎಂ.ಎಸ್. ಬೂದಿಹಾಳ ಸೇರಿದಂತೆ ಪಟ್ಟಣದ ಗೃಹರಕ್ಷಕ ದಳದ ಸಿಬ್ಬಂದಿಗಳು ಹಾಜರಿದ್ದರು.

ಬಿರುಗಾಳಿ ಸಹಿತ ಭಾರೀ ಮಳೆ



ಬೈಲಹೊಂಗಲ: ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸೋಮವಾರ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಯಿಂದ ಸಾರ್ವಜನಿಕ ಜೀವನ ಅಸ್ತವ್ಯಸ್ತಗೊಂಡ ಘಟನೆ ನಡೆದಿದೆ.

ಹಲವು ಕಡೆ ಬೃಹತ್ ಮರಗಳು ಹಾಗೂ ವಿದ್ಯುತ್ ಕಂಬಗಳು ಉರುಳಿ ಬಿದ್ದ ಪರಿಣಾಮ ರಸ್ತೆ ಸಂಚಾರಕ್ಕೆ ಅಡಚಣೆ ಉಂಟಾಗಿ ವಾಹನ ಸವಾರರು ಪರದಾಡುವಂತಾಯಿತು. ಕಳೆದ ಕೆಲವು ದಿನಗಳಿಂದ ತೀವ್ರ ಬಿಸಿಲಿನ ತಾಪದಿಂದ ಬಸವಳಿದಿದ್ದ ಜನತೆಗೆ ಮಳೆ ತಂಪಿನ ಅನುಭವ ನೀಡಿದರೂ, ಗಾಳಿ ಮತ್ತು ಮಳೆಯ ಅಬ್ಬರದಿಂದ ಹಲವು ಸಮಸ್ಯೆಗಳು ಎದುರಾದವು.

ಮಳೆ ಆರಂಭವಾಗುತ್ತಿದ್ದಂತೆಯೇ ಬಿರುಗಾಳಿ ಬೀಸಿದ ಪರಿಣಾಮ ನಗರದ ಕೆಲ ಪ್ರದೇಶಗಳಲ್ಲಿ ಮರದ ಕೊಂಬೆಗಳು ಮುರಿದು ಬಿದ್ದಿದ್ದು, ವಿದ್ಯುತ್ ವ್ಯತ್ಯಯವೂ ಉಂಟಾಗಿದೆ ಎಂದು ತಿಳಿದುಬಂದಿದೆ.

ನಗರದ ಮುರಕಿಭಾವಿ ರಸ್ತೆಯಲ್ಲಿ ಬೃಹತ್ ಮರ ಹಾಗೂ ವಿದ್ಯುತ್ ಕಂಬ ರಸ್ತೆ ಮೇಲೆ ಉರುಳಿ ಬಿದ್ದ ಪರಿಣಾಮ ಕೆಲಕಾಲ ರಸ್ತೆ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತು. ರಸ್ತೆ ಮಧ್ಯೆ ಮರ ಬಿದ್ದಿದ್ದರಿಂದ ವಾಹನಗಳು ಸಾಲುಗಟ್ಟಿ ನಿಂತು, ವಾಹನ ಸವಾರರು ಸಾಕಷ್ಟು ತೊಂದರೆ ಅನುಭವಿಸಿದರು.

ಇನ್ನೊಂದೆಡೆ ವಕ್ಕುಂದ ಗ್ರಾಮದಲ್ಲಿಯೂ ಬೃಹತ್ ಮರ ರಸ್ತೆ ಮೇಲೆ ಉರುಳಿ ಬಿದ್ದ ಪರಿಣಾಮ ಗ್ರಾಮೀಣ ಸಂಪರ್ಕಕ್ಕೆ ತಾತ್ಕಾಲಿಕ ಅಡಚಣೆ ಉಂಟಾಯಿತು. ವಿಷಯ ತಿಳಿದ ತಕ್ಷಣ ಸ್ಥಳೀಯರು ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಸ್ತೆ ತೆರವು ಕಾರ್ಯ ಕೈಗೊಂಡರು.

ಮಳೆಯ ಪರಿಣಾಮ ಹಳ್ಳ-ಕೊಳ್ಳಗಳು ತುಂಬಿ ಹರಿದಿದ್ದು, ತಗ್ಗು ಪ್ರದೇಶಗಳಲ್ಲಿ ಮಳೆ ನೀರು ರಸ್ತೆಗಳ ಮೇಲೆ ನಿಂತ ಪರಿಣಾಮ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ನೀರಿನ ನಡುವೆ ವಾಹನ ಸಂಚಾರ ನಡೆಸಲು ಕೆಲ ಸವಾರರು ಹರಸಾಹಸಪಟ್ಟ ದೃಶ್ಯಗಳು ಕಂಡುಬಂದವು.

ಧರೆಗುರುಳಿದ 70ಕ್ಕೂ ಹೆಚ್ಚು ಮರಗಳು | 10ಕ್ಕೂ ಹೆಚ್ಚು ಪ್ರದೇಶದಲ್ಲಿ ಮನೆಗಳಿಗೆ ನುಗ್ಗಿದ ನೀರು

ಹುಬ್ಬಳ್ಳಿಯಲ್ಲಿ ಭಾರೀ ಮಳೆ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸೋಮವಾರ ಮಧ್ಯಾಹ್ನ ಬಿರುಗಾಳಿ, ಸಿಡಿಲು, ಮಿಂಚು ಸಮೇತ ಸುರಿದ ಮಳೆಯಿಂದ ಜನ ಜೀವನ ಅಸ್ತವ್ಯಸ್ತವಾಗಿತು. ಹುಬ್ಬಳ್ಳಿಯಲ್ಲಿ ಅರ್ಧ ಗಂಟೆ ಸುರಿದ ಮಳೆ 2.1 ಸೆ.ಮೀ. ಆಗಿದೆ. 110 ಕಿ.ಮೀ. ವೇಗದಲ್ಲಿ ಗಾಳಿ ಬಿಸಿದೆ ಎಂದು ವರದಿಯಾಗಿದೆ.

ಹುಬ್ಬಳ್ಳಿ ಧಾರವಾಡ ಅವಳಿನಗರದಲ್ಲಿ 70 ಕ್ಕೂ ಹೆಚ್ಚು ಮರಗಳು ಧರೆಗುರುಳಿದ್ದು, ಕಾರು ಹಾಗೂ ಬೈಕ್ ಸಮೇತ 25 ಕ್ಕೂ ಹೆಚ್ಚು ವಾಹನಗಳು ಜಖಂಗೊಂಡಿವೆ. ಕೆಲವು ಕಡೆ ಮರಗಳು ಮನೆ ಹಾಗೂ ಕಪೌಂಡ್‌ಗಳ ಮೇಲೆ ಬಿದ್ದಿವೆ. ಇದರಿಂದ ಕಪೌಂಡ್ ಧರೆಗುರುಳಿವೆ. 10ಕ್ಕೂ ಹೆಚ್ಚು ಪ್ರದೇಶದಲ್ಲಿ ಮಳೆಯ ನೀರು ಮನೆಗಳಿಗೆ ನುಗ್ಗಿ ಸಾರ್ವಜನಿಕರು ಪರದಾಡುವಂತಾಗಿದೆ.

ದೇಶಪಾಂಡೆ ನಗರ, ವಿದ್ಯಾನಗರ, ಹೊಸೂರು, ವಿಕಾಸ ನಗರ, ಶಿರೂರು ಪಾರ್ಕ್, ಮಂಜುನಾಥ ನಗರ, ಬಸವೇಶ್ವರ ನಗರ, ಗೋಕುಲ ರಸ್ತೆ, ಕೇಶ್ವಾಪುರ ರಸ್ತೆ, ರಮೇಶ ಭವನ, ಗಾಂಧಿನಗರ, ಸತ್ತೂರ, ನವಲೂರ, ಶೆಟ್ಟರ ಕಾಲೋನಿ, ಕಲ್ಯಾಣ ನಗರದ ಸೇರಿದಂತೆ ವಿವಿಧೆಡೆ ಮರಗಳು ಧರೆಗುರುಳಿದ್ದಾವೆ. ಕೆಲವು ಕಡೆ ಮುಖ್ಯ ರಸ್ತೆಯಲ್ಲಿ ಮರ ಬಿದಿದ್ದರಿಂದ ರಸ್ತೆ ಸಂಚಾರ ಕೆಲ ಸಮಯ ಸ್ಥಗಿತವಾಗಿತ್ತು. ಇದರಿಂದ ವಾಹನ ಸವಾರರು ಹಾಗೂ ಪಾದಚಾರಿಗಳು ಪರದಾಡಿದರು.

ಪಾಲಿಕೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಮರಗಳ ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿದ್ದರು. ಹು-ಧಾ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಾಕಷ್ಟು ಮರಗಳು ಧರೆಗುರುಳಿದ್ದು, ಕಂಟ್ರೋಲ್ ರೂಂಗೆ 130 ಕ್ಕೂ ಹೆಚ್ಚು ದೂರು ದಾಖಲಾಗಿವೆ. ಯಾವುದೇ ಪ್ರಾಣ ಹಾನಿಯಾಗಿಲ್ಲ ಎಂದು ಪಾಲಿಕೆ ಆಯುಕ್ತ ಡಾ.ರುದ್ರೇಶ ಘಾಳಿ ತಿಳಿಸಿದರು.



ಇನ್ನೂ ಮಳೆಯಿಂದ ರಸ್ತೆಗಳು ಹಾಗೂ ಗಟಾರುಗಳು ಜಲಾವೃತವಾದವು. ವಾಹನ ಸವಾರರು ತೆಗ್ಗು-ಗುಂಡಿ ಬಿದಿದ್ದ ರಸ್ತೆಯಲ್ಲಿ ಸಂಚಾರ ಮಾಡುವುದು ಕಂಡು ಬಂತು. ತಾಲೂಕಿನ ಅಮರಗೋಳ, ಉಣಕಲ್, ನಾಗಶೆಟ್ಟಿಕೊಪ್ಪ, ಬೆಂಗೇರಿ ಪ್ರದೇಶದಲ್ಲಿ ಜೋರಾಗಿ ಗಾಳಿ ಬಿಸಿ ಮಳೆಯಾಗಿದ್ದರಿಂದ 12 ಪ್ರದೇಶದಲ್ಲಿ ಗಿಡ ಮರಗಳು ಧರೆಗುರುಳಿವೆ. ಘಟನೆ ನಡೆದ ಸ್ಥಳಕ್ಕೆ ಶಹರ ತಹಶೀಲ್ದಾರ ಮಹೇಶ ಗಸ್ತೆ ಭೇಟಿ ನೀಡಿ ಪರಿಶೀಲಿಸಿದರು. 12ಕ್ಕೂ ಹೆಚ್ಚು ಮರಗಳು ಧರೆಗುರುಳಿವೆ. ಎರಡು ಮನೆ ಹಾಗೂ ಮೂರು ವಾಹನಗಳ ಮೇಲೆ ಮರಗಳು ಬಿದಿದ್ದು, ಯಾವುದೇ ಪ್ರಾಣ ಹಾನಿಯಾಗಿಲ್ಲ ಎಂದು ಶಹರ ತಹಶೀಲ್ದಾರ್ ಮಹೇಶ ಗಸ್ತೆ ತಿಳಿಸಿದರು.

ರಸ್ತೆ ಸಂಪರ್ಕ ಸಂಪೂರ್ಣ ಬಂದ್

ಯರಗಟ್ಟಿ: ಸಮೀಪದ ಹೊಸೂರ ಗ್ರಾಮದಲ್ಲಿ ಹಾದು ಹೊಗುವ ಬೈಲಹೊಂಗಲ ಮುನವಳ್ಳಿ ಸಂಪರ್ಕಿಸುವ ರಾಜ್ಯ ಹೆದ್ದಾರಿ ಸೋಮವಾರ ಸುರಿದ ಭಾರೀ ಮಳೆಯಿಂದ ರಸ್ತೆ ಸಂಪರ್ಕ ಸಂಪೂರ್ಣ ಬಂದ್ ಆಗಿದೆ.

ಈ ಸೇತುವಿಗೆ ಮುತವಾಡ, ಇಂಚಲ, ಮುರಗೋಡ ಹಾಗೂ ನೇಸರಗಿಯಿಂದ ಹಲಕಿ ಕ್ರಾಸ್ ವರೆಗಿನ ರಾಜ್ಯ ಹೆದ್ದಾರಿಯ ಬಲ ಭಾಗದ ಎಲ್ಲ ಮಳೆ ನೀರು ಈ ಸೇತುವೆ ಮೂಲಕ ಹಾದು ಮಲಪ್ರಭಾ ನದಿ ಸೇರುತ್ತದೆ. ಸೋಮವಾರ ಸುರಿದ ಭಾರೀ ಮಳೆಯಿಂದ ನಿರ್ಮಾಣ ಹಂತದ ಸೇತುವೆ ಕೊಚ್ಚಿಕೊಂಡು ಹೋಗಿದೆ.

ಹೊಸೂರ ಗ್ರಾಮದ ಹತ್ತಿರವಿರುವ ಯಕ್ಕುಂಡಿ ಸೇತುವೆ ಎಂದು ಕರೆಯುವ ಈ ಕಿರು ಸೇತುವೆ ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿ ಹೊಗಿದೆ.

ಕಳೆದ ಹಲವು ತಿಂಗಳಲ್ಲಿ ಕೇವಲ ಸೇತುವೆ ಅಗೆಯುವ ಕೆಲಸದಲ್ಲೆ ನಿರತರಾದ ಗುತ್ತಿಗೆದಾರ ಆಮೆ ಗತಿಯಲ್ಲಿ ಕಾಮಗಾರಿ ಪ್ರಾರಂಭಿಸಿದ್ದರಿಂದ ಸೇತುವೆ ಸಂಪೂರ್ಣ ಕೊಚ್ಚಿಕೊಂಡು ಹೋಗಿದೆ. ತಾತ್ಕಾಲಿಕ ಸೇತುವೆ ಮರು ನಿರ್ಮಾಣದ ವರೆಗೆ ಈ ರಸ್ತೆಯ ಪ್ರಯಾಣ ಕಷ್ಟಸಾಧ್ಯವಾಗಿದೆ.



ಸಿಡಿಲು ಬಡಿದು ಮಹಿಳೆ ಸಾವು

ಧಾರವಾಡ: ಸಿಡಿಲು ಬಡಿದು ಮಹಿಳೆಯೊಬ್ಬಳು ಮೃತಪಟ್ಟ ಘಟನೆ ತಾಲೂಕಿನ ಕವಲಗೇರಿ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ಜಯಶ್ರೀ ಶಿರಸಂಗಿ (27) ಮೃತಪಟ್ಟ ಮಹಿಳೆ. ಪತಿ ಹನುಮಂತಪ್ಪ ಜೊತೆಗೆ ಜಯಶ್ರೀ ಹೊಲಕ್ಕೆ ಮೆಂತೆ ಕೀಳಲು ಹೋದಾಗ ಈ ದುರ್ಘಟನೆ ನಡೆದಿದೆ. ಹನುಮಂತಪ್ಪನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮೇತ ಜಯಶ್ರೀ ಮೃತದೇಹ ಮರಣೋತ್ತರ ಪರೀಕ್ಷೆಗೆ ಜಿಲ್ಲಾ ಆಸ್ಪತ್ರೆಗೆ ರವಾನಿಸಿದೆ. ಈ ಕುರಿತು ಧಾರವಾಡ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಡಿಲಿಗೆ ಕುರಿಗಾಹಿ ಸಾವು

ಸುರಪುರ: ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ದೇವಾಪೂರ ಹತ್ತಿರದ ಅರಳಹಳ್ಳಿ ಗ್ರಾಮದಲ್ಲಿ ಭಾನುವಾರ ಸಾಯಂಕಾಲ ಸುರಿದ ಭಾರೀ ಮಳೆ, ಗಾಳಿ ಹಾಗೂ ಗುಡುಗು-ಮಿಂಚಿನ ಅರ್ಭಟಕ್ಕೆ ಸಿಲುಕಿ ಕುರಿಗಾಯಿ ಮೃತಪಟ್ಟ ದುರ್ಘಟನೆ ನಡೆದಿದೆ.



ಮೃತ ವ್ಯಕ್ತಿ ಮಾನಪ್ಪ ತಿಮ್ಮಯ್ಯ (47) ವರ್ಷ ಎಂದು ತಿಳಿದು ಬಂದಿದ್ದು, ಅರಳಹಳ್ಳಿ ಸಮೀಪದ ಹೊಲದಲ್ಲಿ ಕುರಿ ಕಾಯಲು ಹೋಗಿ ಅಲ್ಲೆ ದೊಡ್ಡಿ ಹಾಕಿಕೊಂಡಿದ್ದರು. ಈ ವೇಳೆ ಸಾಯಂಕಾಲ ಭಾರೀ ಗಾಳಿ, ಮಳೆ ಮತ್ತು ಗುಡುಗು-ಮಿಂಚು ಆರಂಭವಾಗಿದ್ದು, ಭಯಗೊಂಡ ಮಾನಪ್ಪ ಸಮೀಪದಲ್ಲಿ ಇದ್ದ ಮರದ ಬುಡದಲ್ಲಿ ಆಶ್ರಯ ಪಡೆದಿದ್ದರು. ಅದೇ ಸಮಯದಲ್ಲಿ ಬಿದ್ದ ಭಾರೀ ಸಿಡಿಲು ಗಿಡಕ್ಕೆ ಬಡಿದ ಪರಿಣಾಮ ಮಾನಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಈ ಘಟನೆಯಿಂದ ಗ್ರಾಮದಲ್ಲಿ ದುಃಖದ ವಾತಾವರಣ ನಿರ್ಮಾಣವಾಗಿದ್ದು, ಮೃತರ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

2 ದಿನಗಳಿಂದ ಸತತ ಮಳೆ: ಪ್ರವಾಸಿಗರು ಕಂಗಾಲು



ಗೋಕರ್ಣ: ಕಳೆದ ಎರಡು ದಿನಗಳಿಂದ ಈ ಭಾಗದಲ್ಲಿ ರಾತ್ರಿ ವೇಳೆ ಸುರಿಯುತ್ತಿದ್ದ ಮಳೆ, ಸೋಮವಾರ ಮಧ್ಯಾಹ್ನ ಸಮಯದಲ್ಲಿ ಅಬ್ಬರಿಸಿದ್ದು, ಬೇಸಿಗೆಯ ರಜೆಗೆ ಬಂದ ಪ್ರವಾಸಿಗರಿಗೆ ಮಳೆಗಾಲದ ಅನುಭವಾಗಿದೆ.

ಬೇಸಿಗೆ ರಜೆಯ ಪ್ರಯುಕ್ತ ಪ್ರವಾಸಿಗರು ಅಽಕ ಸಂಖ್ಯೆಯಲ್ಲಿ ಆಗಮಿಸಿದ್ದಾರೆ. ಮಧ್ಯಾಹ್ನ ಮೋಡಕವಿದ ವಾತಾವರಣದೊಂದಿಗೆ ಅಲ್ಪ ಕಾಲ ಮಳೆ ಸುರಿದಿದೆ. ಏಕಾಏಕಿ ಮಳೆಯ ಅಬ್ಬರಕ್ಕೆ ಪ್ರವಾಸಿಗರು ಕಂಗಾಲಾಗಿದ್ದು, ಛತ್ರಿ, ರೇನ್‌ಕೋಟ್ ಅಂಗಡಿ ಹುಡುಕುತ್ತಾ ಖರೀದಿಯಲ್ಲಿ ತೊಡಗಿದ್ದು ಕಂಡುಬಂತು. ಸಂಜೆ ಸಹ ಮಳೆಯ ಸಿಂಚನ ಮುಂದುವರಿದಿತ್ತು.

ಎಲ್ಲೆಡೆ ವಾಹನಗಳ ದಟ್ಟಣೆ ಉಂಟಾಗಿದ್ದು, ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ಪೊಲೀಸರು ಅದೆಷ್ಟೇ ಸಂಚಾರ ನಿಯಮ ಕಾವಲು ಮಾಡಿದರೂ ಇವರ ಮಾತನ್ನೆ ಽಕ್ಕರಿಸಿ ತೆರಳುವುದು, ಎಲ್ಲೆಂದರಲ್ಲಿ ವಾಹನ ನಿಲ್ಲಿಸುವ ಪದ್ಧತಿ ಮುಂದುವರಿದಿದೆ. ಮಳೆ ನೀರಿನೊಂದಿಗೆ ಚರಂಡಿ ಹೊಲಸು ನೀರು ವಿಶ್ರಣವಾಗಿ ರಸ್ತೆಗೆ ಹರಿದಿದ್ದು, ರಾಡಿ ನೀರಿನಲ್ಲೇ ಪಾದಾಚಾರಿಗಳು ದೇವರ ದರ್ಶನಕ್ಕೆ ತೆರಳುತ್ತಿದ್ದಾರೆ. ಅಽಕ ಪ್ರವಾಸಿಗರು ಬಂದಾಗ ಉಂಟಾಗುವ ವಸತಿ, ಕುಡಿಯುವ ನೀರು, ಶೌಚಾಲಯ ಮತ್ತಿರ ಅನೇಕ ಮೂಲಭೂತ ಸೌಲಭ್ಯಗಳ ಕೊರತೆಯೂ ಮುಂದುವರಿದಿದೆ.

ವಿದ್ಯುತ್ ಕಂಬ ಬಿದ್ದು ಯುವಕ ಸಾವು

ಲಕ್ಷ್ಮೇಶ್ವರ: ಪಟ್ಟಣದಲ್ಲಿ ಭಾನುವಾರ ಸಂಜೆ ಸುರಿದ ಭಾರೀ ಮಳೆ, ಗಾಳಿಗೆ ಶಿಗ್ಲಿ ರಸ್ತೆಯ ಖಾಸಗಿ ಭಡಾವಣೆಯಲ್ಲಿ ಹಾಕಲಾಗಿದ್ದ ವಿದ್ಯುತ್ ಕಂಬವೊಂದು ಕುರಿಗಾಹಿಯ ಮೇಲೆ ಬಿದ್ದು, ತಲೆಗೆ, ಕಾಲಿಗೆ ತೀವ್ರ ಪೆಟ್ಟು ಬಿದ್ದು ಮೃತಪಟ್ಟ ಘಟನೆ ನಡೆದಿದೆ.



ಭಾನುವಾರ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೋಮವಾರ ಮುಂಜಾನೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಮೃತ ಯುವಕ ಪಟ್ಟಣದ ಮಂಜುನಾಥ ನಿಂಗಪ್ಪ ಶರಸೂರಿ(27) ಎಂದು ತಿಳಿದು ಬಂದಿದೆ. ಮೃತ ಯುವಕನಿಗೆ ತಂದೆ, ತಾಯಿ ಇಬ್ಬರು ಸಹೋದರರು, ಓರ್ವ ಸಹೋದರಿ ಇದ್ದಾರೆ.

ಮೃತ ಯುವಕ ಕುಟುಂಬಕ್ಕೆ ಆಧಾರವಾಗಿದ್ದು, ಮಳೆಯ ರಭಸಕ್ಕೆ ಸಿಲುಕಿ ದುರ್ಮರಣಕ್ಕಿಡಾಗಿದ್ದು, ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕು ಎಂದು ಪುರಸಭೆ ಮಾಜಿ ಸದಸ್ಯ ನೀಲಪ್ಪ ಶರಸೂರಿ ಆಗ್ರಹಿಸಿದ್ದಾರೆ.

ಧರೆಗುರುಳಿದ ಬಾಳೆ ಬೆಳೆ

ರಬಕವಿ-ಬನಹಟ್ಟಿ: ತಾಲೂಕಿನ ನಾವಲಗಿ ಗ್ರಾಮ ಸುತ್ತ ಸೋಮವಾರ ಭಾರಿ ಗಾಳಿ, ಮಳೆಗೆ ಬಾಳೆ ಬೆಳೆ ನೆಲಕಚ್ಚಿದೆ. ಮರಗಳು ನೆಲಕ್ಕುರುಳಿವೆ. ಗಾಳಿಯ ಅರ್ಭಟ ಹೆಚ್ಚಾದ್ದರಿಂದ ಬಾಳೆ ಬೆಳೆಗಳು ಮುರಿದು ಬಿದ್ದಿವೆ. ಅಮೀನುಗಳಲ್ಲಿ ಮರಗಳು ಬುಡ ಸಮೇತ ಬಿದ್ದಿವೆ. ರೈತರ ಬಾಳೆ ಫಸಲು ನಷ್ಟವಾಗಿದೆ. ಶ್ರೀಶೈಲ ಕಾಂತಿ, ಗುರುಲಿಂಗಪ್ಪ ಶೇಗುಣಸಿ, ಗೋವಿಂದ ಪಾಟೀಲ ಹೀಗೆ ಹಲವಾರು ರೈತರ ಬಾಳೆ ಫಸಲು ಕಟಾವು ಹಂತಕ್ಕೆ ಬಂದಿರುವುದು ನೆಲಕ್ಕೆ ಉರುಳಿವೆ. ಲಕ್ಷಾಂತರ ರೂ.ಗಳಷ್ಟು ಬಾಳೆ ಹಾನಿಯಾಗಿದ್ದು, ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ನಷ್ಟ ಉಂಟಾಗಿರುವ ಬೆಳೆಗಳಿಗೆ ಪರಿಹಾರ ಒದಗಿಸಿಕೊಡಲು ಮುಂದಾಗಬೇಕೆಂದು ಶ್ರೀಶೈಲ ಕಾಂತಿ ಅಧಿಕಾರಿಗಳನ್ನು ಒತ್ತಾಯಿಸಿದರು. ಕಳೆದ ವಾರವೂ ಇದೇ ರೀತಿ ಗಾಳಿ, ಮಳೆಗೆ ಜಗದಾಳ ಗ್ರಾಮದ ಸುತ್ತ ಬೆಳೆದ ಬಾಳೆ ಹಾನಿಯಾಗಿತ್ತು. ಇದೀಗ ಮತ್ತೆ ಗಾಳಿಗೆ ನಷ್ಟವಾಗಿರುವುದು ರೈತರನ್ನು ಮತ್ತಷ್ಟು ಕಂಗಾಲು ಮಾಡಿದೆ.

ಹಳೆ ದಾಂಡೇಲಿಯಲ್ಲಿ ರಸ್ತೆಗುರುಳಿದ ಮರ

ದಾಂಡೇಲಿ: ಭೀಕರವಾದ ಗಾಳಿ ಮಳೆಗೆ ಹಳೆ ದಾಂಡೇಲಿಯಲ್ಲಿ ಬೃಹತ್ ಗಾತ್ರದ ಮರವೊಂದು ರಸ್ತೆಗುರಳಿದ ಪರಿಣಾಮವಾಗಿ ವಿದ್ಯುತ್ ಕಂಬವು ಮುರಿದು ಬಿದ್ದು, ಕೆಲ ಹೊತ್ತು ಸಂಚಾರ ಅಸ್ತವ್ಯಸ್ತಗೊಂಡ ಘಟನೆ ಸೋಮವಾರ ಬೆಳಗ್ಗೆ ನಡೆದಿದೆ.

ರಸ್ತೆಗೆ ಅಡ್ಡಲಾಗಿ ಮರ ಬಿದ್ದಿರುವುದರ ಜೊತೆಗೆ ವಿದ್ಯುತ್ ಕಂಬ ಮುರಿದು ಬಿದ್ದಿರುವುದರಿಂದ ಬಹಳ ಮುಖ್ಯವಾಗಿ ಸಾರಿಗೆ ಘಟಕದಿಂದ ಬಸ್ ನಿಲ್ದಾಣಕ್ಕೆ ಸಾರಿಗೆ ಬಸ್ಸುಗಳಿಗೆ ನಿಗದಿತ ಸಮಯಕ್ಕೆ ಹೋಗಲು ಕಷ್ಟ ಸಾಧ್ಯವಾಯಿತು. ಕೂಡಲೇ ಅರಣ್ಯ ಇಲಾಖೆ ಮತ್ತು ಹೆಸ್ಕಾಂ ಇಲಾಖೆಯವರು ಹಾಗೂ ನಗರ ಸಭೆಯವರು ಸ್ಥಳಕ್ಕೆ ದೌಡಾಯಿಸಿ, ಬಿದ್ದ ಮರವನ್ನು ಸ್ಥಳೀಯರ ಸಹಕಾರದಲ್ಲಿ ತೆರವುಗೊಳಿಸುವ ಕಾರ್ಯಕ್ಕೆ ಮುಂದಾಗಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.



ತುಂಬಿ ಹರಿದ ಕುಂಬಾರಕೊಪ್ಪ ಹಳ್ಳ

ಆಳ್ನಾವರ: ಪಟ್ಟಣವೂ ಸೇರಿದಂತೆ ತಾಲೂಕಿನಾದ್ಯಂತ ಸೋಮವಾರ ಮಧ್ಯಾಹ್ನ ಸುರಿದ ಭಾರೀ ಮಳೆಗೆ ಜನರು ತತ್ತರಿಸಿ ಹೋಗಿದ್ದು, ಹಳ್ಳಗಳು ತುಂಬಿ ಹರಿದರೆ ಮರ ಗಿಡಗಳು,ವಿದ್ಯುತ್ ಕಂಬಗಳು ಉರುಳಿ ಬಿದ್ದಿರುವ ವರದಿಯಾಗಿದೆ.

ಅಳ್ನಾವರ ತಾಲೂಕಿನ ಕುಂಬಾರಕೊಪ್ಪ ಸುತ್ತ ಮೂತ್ತಲು ಸುರಿದ ಮಳೆಗೆ ಗ್ರಾಮದ ಸಮೀಪದ ಹಳ್ಳ ಭರಪೂರ ತುಂಬಿ ಹರಿಯುತ್ತಿದ್ದ ದೃಶ್ಯ ಕಂಡು ಬಂದಿತು. ಅಳ್ನಾವರ-ಬೆಣಚಿ ಮೂಲಕ ಅಳ್ನಾವರ ಸೇರುವ ರಸ್ತೆಯ ಮೇಲೆ ಗಿಡಗಳು ಹಾಗೂ ವಿದ್ಯುತ್ ಕಂಬಗಳು ಬಿದ್ದು ಸಂಚಾರಕ್ಕೆ ಅಡ್ಡಿಯಾಗಿತ್ತು.



ಅರವಟಗಿ ಗ್ರಾಮ ಪಂಚಾಯತ ವ್ಯಾಪ್ತಿಯ ಸಿದ್ದಾಪೂರ ಗ್ರಾಮವನ್ನು ಸಂಪರ್ಕಿಸುವ ರಸ್ತೆಯ ಉದ್ದಕ್ಕೂ ಮರಗಳು ಬಿದ್ದಿರುವ ದೃಶ್ಯ ಕಂಡು ಬಂದಿತು ಹಾಗೂ ಗ್ರಾಮದ ಶಾಲಾ ಆವರಣ ಗೋಡೆಯ ಮೇಲೆ ಬೃಹತ್ ಮರವೊಂದು ಉರುಳಿ ಬಿದ್ದಿರುವ ಪರಿಣಾಮ ಆವರಣ ಗೋಡೆ ಹಾನಿಗೊಳಗಾಗಿದೆ.

ಕುಂಬಾರಕೊಪ್ಪ ಗ್ರಾಮದಲ್ಲಿ ಇಪ್ಪತ್ತಕ್ಕೂ ಅಧಿಕ ಮನೆಗಳ ಮೇಲ್ಛಾವಣೆಯ ಹಂಚು ಹಾರಿ ಹೋಗಿ ಸಾಕಷ್ಟು ಹಾನಿ ಸಂಭವಿಸಿದೆ. ಯಾವುದೇ ಪ್ರಾಣಹಾನಿಯಾದ ಬಗ್ಗೆ ವರದಿಯಾಗಿಲ್ಲ, ಮೇಲ್ಛಾವಣಿ ಹಾರಿದ ಪರಿಣಾಮ ಕೆಲವರಿಗೆ ಅಲ್ಪ ಸ್ವಲ್ಪ ಗಾಯಗಳಾಗಿವೆ.

ಗಾಳಿ,ಗುಡುಗು ಮಿಂಚಿನಿಂದ ಕೂಡಿದ ಮಳೆ ಎಲ್ಲೆಡೆ ಸುರಿದು ಕಬ್ಬಿನ ಬೆಳೆಗೆ ಬಹಳಷ್ಟು ಅನುಕೂಲವಾಗಿದೆ ಎಂದು ರೈತರು ಸಂತೋಷ ವ್ಯಕ್ತಪಡಿಸಿದ್ದಾರೆ. ಗಾಳಿಯ ರಭಸಕ್ಕೆ ಮಾವು ಉದುರಿ ಬಹಳಷ್ಟು ಹಾನಿ ಸಂಭವಿಸಿದೆ ಎಂದು ಮಾವು ಬೆಳೆಗಾರರು ಅಳಲು ತೋಡಿಕೊಂಡಿದ್ದಾರೆ.

ಭಾರೀ ಗಾಳಿಯೊಂದಿಗೆ ತಂಪೆರೆದ ಮಳೆ

ಬಾಗಲಕೋಟೆ: ಬೇಸಿಗೆಯಿಂದ ಕಂಗೆಟ್ಟಿದ್ದ ಜಿಲ್ಲೆಯ ಜನರಿಗೆ ಸೋಮವಾರ ಸುಮಾರು ಭಾರೀ ಗಾಳಿಯೊಂದಿಗೆ ಸುರಿದ ಮಳೆಯಿಂದ ಜಿಲ್ಲೆಯಲ್ಲಿ ತಂಪೆರೆದ ವಾತಾವರಣ ಮೂಡಿತು. ಸೋಮವಾರ ಸಂಜೆ ಭಾರೀ ಬಿರುಗಾಳಿ ಉಂಟಾಗುತ್ತಿದ್ದಂತೆ ಗ್ರಾಮೀಣ ಪ್ರದೇಶದಲ್ಲಿ ಮನೆಗಳ ಮೇಲೆ ಇಟ್ಟಿದ್ದ ಬಟ್ಟೆ, ತಗಡುಗಳು ಗಾಳಿಗೆ ಹಾರಿ ಹೋಗಿದ್ದು ಕಂಡುಬಂದಿತು. ನವನಗರದ ಗಾರ್ಡ್‌ನ್ ಬಳಿ ರಸ್ತೆಗೆ ಬೇವಿನ ಮರವೊಂದು ಗಾಳಿಗೆ ಉರುಳಿದೆ. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ರಸ್ತೆ ಸಂಚಾರಕ್ಕೆ ಅಡೆತಡೆ ಉಂಟಾಯಿತು. ಮಳೆಯೊಂದಿಗೆ ಗುಡುಗು ಸಿಡಿಲು, ಮಿಂಚಿನೊಂದಿಗೆ ಭಾರೀ ಗಾಳಿಯೊಂದಿಗೆ ಮಳೆ ಸುರಿಯಿತು.



ಬಿರುಗಾಳಿ ಸಹಿತ ಭಾರೀ ಮಳೆ

ಶಿರಹಟ್ಟಿ: ಕಳೆದ ನಾಲ್ಕೈದು ದಿನಗಳಿಂದ ಸಂಜೆ ಹೊತ್ತಿಗೆ ಪಟ್ಟಣ ಸೇರಿ ತಾಲೂಕಿನಾದ್ಯಂತ ಗುಡುಗು-ಸಿಡಿಲಿನ ಅರ್ಭಟದೊಂದಿಗೆ ಭಾರೀ ಬಿರುಗಾಳಿ ಸಹಿತ ಮಳೆಯಾಗುತ್ತಿದ್ದು, ಅಲ್ಲಲ್ಲಿ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಪ್ರತಿದಿನ ಸಾಯಂಕಾಲ 4 ಗಂಟೆ ಸುಮಾರಿಗೆ ಮೋಡಕವಿದ ವಾತಾವರಣ ಸೃಷ್ಟಿಯಾಗಿ ಅರ್ಧ ಗಂಟೆಯಲ್ಲೇ ಭಾರೀ ಬಿರುಗಾಳಿ ಸಹಿತ ಮಳೆ ಆಗುತ್ತಿದೆ. ಭಾನುವಾರ ಸುರಿದ ಧಾರಾಕಾರ ಮಳೆಗೆ ಸೋಮವಾರ ದಿನವಿಡಿ ವಿದ್ಯುತ್ ವ್ಯತ್ಯಯ ಸೃಷ್ಟಿಯಾಗಿದೆ. ತಾಲೂಕಿನ ಮಾಗಡಿ ಬಸ್ ನಿಲ್ದಾಣದಲ್ಲಿ ಬಿರುಗಾಳಿಗೆ ಮರದ ಅರ್ಧ ಟೊಂಗಿ ನಿಂತ ಆಟೋದ ಮೇಲೆ ಬಿದ್ದಿದೆ. ಪಟ್ಟಣದಲ್ಲಿ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಮರದ ಟೊಂಗೆಯೊಂದು ಬೈಕ್ ಮೇಲೆ ಬಿದ್ದ ಪರಿಣಾಮ ಬೈಕ್ ಜಖಂಗೊಂಡಿದೆ. ಕುಂಬಾರ ಓಣಿಯಲ್ಲಿ ವಿದ್ಯುತ್ ತಂತಿಯ ಮೇಲೆ ಗಿಡ ಬಿದ್ದಿದ್ದು, 3 ಕಂಬಗಳ ಬಾಗಿ ಅರ್ಧಗಂಟೆಗೂ ಹೆಚ್ಚು ಕಾಲ ಸಂಚಾರ ಅಸ್ತವ್ಯಸ್ತಗೊಂಡಿತು. ವಿದ್ಯಾನಗರದಲ್ಲಿ ಗಿಡ ಬಿದ್ದು, 2 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ.

ಮಾಗಡಿ ರಸ್ತೆಯಲ್ಲಿನ ಅರಳಿ ಮರ ಬಿದ್ದಿದ್ದು, ಮಾಗಡಿಕೆರೆಯ ಹತ್ತಿರ ವಿದ್ಯುತ್ ಕಂಬದ ತಂತಿಗಳು ಹರಿದು ಬಿದ್ದಿವೆ. ಹೀಗೆ ಸುಮಾರು ಗಂಟೆ ಗುಡುಗು ಮಿಂಚಿನೊಂದಿಗೆ ಸುರಿದ ಬಿರುಗಾಳಿ ಸಹಿತ ಮಳೆಗೆ ಜನ ಜಾನುವಾರು ಅಸ್ತವ್ಯಸ್ತಗೊಂಡಿತು. ಭಾನುವಾರ ಸಂತೆಯ ತರಕಾರಿಗಳು ಮಳೆ ನೀರಿಗೆ ಹರಿದು ಹಳ್ಳ ಸೇರಿತ್ತಿದ್ದಂತೆ ವ್ಯಾಪಾರಸ್ಥರು ಅದನ್ನು ತಡೆಯಲು ಹರಸಾಹಸಪಟ್ಟರು.



ಮಳೆಯ ನೀರು ತುಂಬಿ ಹೊಲಗಳಲ್ಲಿ ಸಹ ಕೆರೆಗಳು ನಿರ್ಮಾಣವಾಗಿದೆ. ಊರು ಹಾಗೂ ಹೊಲಗಳಲ್ಲಿನ ಬಹುತೇಕ ಗಿಡಗಳು ಬಿರುಗಾಳಿಗೆ ನೆಲಕಚ್ಚಿವೆ. ತೋಟಗಾರಿಕೆಯ ಹಾಗೂ ನೀರಾವರಿಯ ಬೆಳೆಗಳು ಸಂಪೂರ್ಣ ಹಾನಿಯಾಗಿವೆ.

ಕಲ್ಯಾಣ ಕರ್ನಾಟಕದ ಜಿಡಿಪಿ ಹೆಚ್ಚಳಕ್ಕೆ ಒತ್ತು: ಡಾ.ಅಜಯ್ ಸಿಂಗ್

ಕಲಬುರಗಿ: ರಾಜ್ಯದ ಸರಾಸರಿ ಹೋಲಿಸಿದಾಗ ಕಲ್ಯಾಣ ಭಾಗದಲ್ಲಿ ಜಿಡಿಪಿ, ತಲಾ ಆದಾಯ ತುಂಬಾ ಕಡಿಮೆ ಇದೆ. ಇದನ್ನು ವೃದ್ಧಿಸಲು ಕೃಷಿ, ಕೈಗಾರಿಕೆ, ಪ್ರವಾಸೋದ್ಯಮ, ಜವಳಿ ಕ್ಷೇತ್ರದಲ್ಲಿ ಪ್ರದೇಶಕ್ಕೆ ಪ್ರತ್ಯೇಕ ನೀತಿ ಅತ್ಯಗತ್ಯವಾಗಿದ್ದು,ಈ ನಿಟ್ಟಿನಲ್ಲಿ ಪ್ರತ್ಯೇಕ ನೀತಿ ರೂಪಿಸಿ ಜಾರಿಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಹೇಳಿದರು.

ನಗರದ ಐವಾನ್-ಎ-ಶಾಹಿ ಅತಿಥಿಗೃಹದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಬೆಂಗಳೂರುದಾಚೆ ಎರಡನೇಮತ್ತುಮೂರನೇಹಂತದನಗರಗಳ ಬೆಳವಣಿಗೆ ಹೊಂದಲ್ಲಿ ಮಾತ್ರ ಪ್ರಾದೇಶಿಕ ಅಸಮಾನತೆ ನೀಗಲಿದೆ. ಹೀಗಾಗಿ ಕಲ್ಯಾಣ ಕರ್ನಾಟಕ ಎಕೋನಾಮಿ ಮಿಷನ್ ಅಡಿಯಲ್ಲಿ ಹೂಡಿಕೆಗೆ ಪ್ರಯತ್ನಿಸಲಾಗುವುದು. ಕೈಗಾರಿಕೋದ್ಯಮಿಗಳಿಗೆ ಸತ್ಕಾರ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ರಾಜ್ಯದ ಜಿಡಿಪಿಗೆ ಕಲ್ಯಾಣ ಕರ್ನಾಟಕ ಕೊಡುಗೆ ಹೆಚ್ಚಿಸುವ ಗುರಿಯೊಂದಿಗೆ ವಿವಿಧ ವಲಯಗಳಲ್ಲಿ ಯೋಜನೆಗಳನ್ನು ಅನುಷ್ಠಾಕ್ಕೆ ತರುವ ಉದ್ದೇಶದಿಂದ ಮಂಡಳಿಯಲ್ಲಿ ಯೋಜನೆ, ನೀತಿ ಮತ್ತು ದತ್ತಾಂಶ ವಿಶ್ಲೇಷಣಾ ವಿಭಾಗ ತೆರೆದು ಮುಂದಿನ ಐದು ವರ್ಷಕ್ಕೆ (2026-2031) ರೂಪಿಸಲಾಗುವುದು ಎಂದರು.



5,000 ಕೋಟಿ ರೂ. ಸಂಪೂರ್ಣ ಖರ್ಚು

ಕಳೆದ 2023-24 ರಿಂದ 2025-26ನೇ ಸಾಲಿನ ಅಂತ್ಯದ ವರೆಗೆ ಸುಮಾರು 9,500 ಕೋಟಿ ರೂ. ಅನುದಾನ ಖರ್ಚು ಮಾಡಲಾಗಿದೆ. ಪ್ರಸಕ್ತ 2026-27ನೇ ಸಾಲಿಗೆ ರಾಜ್ಯ ಸರ್ಕಾರದಿಂದ ಹಂಚಿಕೆಯಾದ 5,000 ಕೋಟಿ ರೂ. ಅನುದಾನ ಇದೇ ವರ್ಷದಲ್ಲಿ ಖರ್ಚು ಮಾಡಿ ಅಭಿವೃದ್ಧಿಯಲ್ಲಿ ಹೊಸ ಕ್ರಾಂತಿ ಮಾಡುವ ಗುರಿ ಹೊಂದಲಾಗಿದೆ ಎಂದು ಡಾ.ಅಜಯ್ ಸಿಂಗ್ ತಿಳಿಸಿದರು.

ಮುಂದಿನ 5 ವರ್ಷದಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ತಲಾ 12,000 ಕೋಟಿ ರೂ., ನೀರಾವರಿಗೆ 10,000 ಕೋಟಿ ರೂ., ಕೃಷಿಗೆ 2,000 ಕೋಟಿ ರೂ. ಸೇರಿದಂತೆ ಒಟ್ಟಾರೆ ವಿವಿಧ ವಲಯಗಳಲ್ಲಿ ಒಟ್ಟು 43,914 ಕೋಟಿ ರೂ.ಹಣ ಪ್ರದೇಶಕ್ಕೆ ವಿನಿಯೋಗಿಸಲು ವರದಿ ನೀಡಿದೆ. ಆದರಂತೆ ಕಳೆದ ವರ್ಷ ನೀರಾವರಿ ಕ್ಷೇತ್ರಕ್ಕೆ 200 ಕೋಟಿ ರೂ. ಖರ್ಚು ಮಾಡಿ ಅಂತರ್ಜಲ ಹೆಚ್ಚಿಸುವ ಕೆಲಸ ಮಾಡಲಾಗಿದೆ.

■ ಡಾ.ಅಜಯ್ ಸಿಂಗ್, ಕೆಕೆಆರಡಿಬಿ ಅಧ್ಯಕ್ಷ

ಆರೋಗ್ಯ-ಶಿಕ್ಷಣ ಅವಿಷ್ಕಾರ, ಕಲ್ಯಾಣ ಪಥ, ವಸತಿ ನಿಲಯ ಯೋಜನೆಗಳಿಗೆ ಈ ವರ್ಷವು ಸಹ ಅನುದಾನ ನೀಡಲಾಗುವುದು ಎಂದ ಅವರು, ಉದ್ಯೋಗ ಮತ್ತು ಉದ್ಯೋಗಾಧರಿತ ಕೌಶಲ್ಯ ಹೆಚ್ಚಿಸಲು ಸೇಡಂ, ಜೇವರ್ಗಿ, ಸಿಂಧನೂರು, ರಾಯಚೂರಿನಲ್ಲಿ ತಲಾ 73ಕೋಟಿ ರೂ.ವೆಚ್ಚದಲ್ಲಿ ಜಿಟಿಟಿಸಿ ಸ್ಥಾಪನೆ ಮಾಡಲಾಗುವುದು ಎಂದರು.

ಈ ವರ್ಷ ರಾಯಚೂರು-ಕೊಪ್ಪಳದಲ್ಲಿ ಕೈಗಾರಿಕೆ ಹಬ್ ಸ್ಥಾಪನೆಗೆ ಒತ್ತು ನೀಡಲಾಗುತ್ತಿದೆ. ಸರ್ಕಾರ ರಾಜ್ಯದ ಇತರೆ ನಿಗಮಕ್ಕೆ ಬಸ್ ನೀಡುತ್ತದೆ. ಸರ್ಕಾರ ಇತರೆ ನಿಗಮಕ್ಕೆ ನೀಡಿದಂತೆ ಕೆಕೆಆರ್‌ಟಿಸಿ ಸಂಸ್ಥೆಗೆ ಬಸ್ ನೀಡಿದಲ್ಲಿ ಮಾತ್ರ ಹೆಚ್ಚುವರಿ ಬಸ್ ಒದಗಿಸಲು ಮಂಡಳಿ ಸಿದ್ಧವಿದೆ. ಒಂದು ವೇಳೆ ಸರ್ಕಾರ ಕೆಕೆಆರ್‌ಟಿಸಿಗೆ ಬಸ್ ನೀಡದಿದ್ದಲ್ಲಿ ಮಂಡಳಿಯಿಂದಲೂ ಅನುದಾನ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಡಳಿ ಕಾರ್ಯದರ್ಶಿ ನಳಿನ್ ಅತುಲ್ ಸಹ ಇದ್ದರು.

ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಡಿಸಿ ಕಚೇರಿಗೆ ಬಂದ ಜಿಗಜಿಣಗಿ

ವಿಜಯಪುರ: ಪ್ರಧಾನಿ ನರೇಂದ್ರ ಮೋದಿ ಅವರ ಮಿತವ್ಯಯ ಸೂತ್ರ ಪಾಲನೆ ಹಿನ್ನೆಲೆಯಲ್ಲಿ ಸಂಸದ ರಮೇಶ ಜಿಗಜಿಣಗಿ ಹೆಲ್ಮೆಟ್ ಧರಿಸಿ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಕೆಲಸದ ನಿಮಿತ್ತ ನಗರದ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿ ಅಚ್ಚರಿ ಮೂಡಿಸಿದರು.

ಬಿಜೆಪಿ ಮುಖಂಡ ಪಾಪುಸಿಂಗ್ ರಜಪೂತ ಅವರ ಜೊತೆ ಹೆಲ್ಮೆಟ್ ಧರಿಸಿ ಸಂಸದ ರಮೇಶ ಜಿಗಜಿಣಗಿ ಅವರು ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿದರು.

ಈ ಸಂದರ್ಭ ಸಂಸದ ರಮೇಶ ಜಿಗಜಿಣಗಿ ಮಾತನಾಡಿ, ಪ್ರಧಾನ ನರೇಂದ್ರ ಮೋದಿ ಅವರು ದೇಶದ ಜನರಿಗೆ ಸಂದೇಶವನ್ನು ಕೊಟ್ಟಿದ್ದಾರೆ. ಪೆಟ್ರೋಲ್, ಡೀಸೆಲ್ ವೆಚ್ಚವನ್ನು ಕಡಿಮೆ ಮಾಡಿ ಬಂಗಾರವನ್ನು ಖರೀದಿ ಮಾಡಬೇಡಿ ಅಂತ ಹೇಳಿದ್ದಾರೆ. ಅದರ ಪ್ರಯುಕ್ತ ಜನರಿಗೆ ಜಾಗೃತಿಯನ್ನು ಮೂಡಿಸುವಂತಹ ಉದ್ದೇಶದಿಂದ ಎಲೆಕ್ಟ್ರಿಕಲ್ ಸ್ಕೂಟರ್‌ನಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗೆ ಬಂದಿದ್ದೇನೆ ಎಂದರು.

ಪ್ರಧಾನಿ ಮೋದಿ ಅವರೇ ಹೇಳಿಕೆಗೆ ಕಾಂಗ್ರೆಸ್‌ನ ವಿರೋಧ ವಿಚಾರಕ್ಕೆ, ಕಾಂಗ್ರೆಸ್‌ನವರು ಹೊಟ್ಟೆಕಿಚ್ಚಿನಿಂದ ಹೊಟ್ಟೆ ಉರಿದು ಹೀಗೆ ಹೇಳುತ್ತಿದ್ದಾರೆ. ಮುಂದಿನ ದಿನಮಾನದಲ್ಲಿ ಕಾಂಗ್ರೆಸ್‌ನ ಅಸ್ತಿತ್ವ ಈ ದೇಶದಲ್ಲಿ ಉಳಿಯಲ್ಲ ಎಂಬುವಂಥದ್ದು ನನ್ನ ಅಭಿಪ್ರಾಯ. ಗಾಂಧಿ ನೆಹರು ಕಾಲದ ಕಾಂಗ್ರೆಸ್ ಇಂದು ಮುಳುಗಿ ಹೋಗಿದೆ. ಒಬ್ಬ ವಿರೋಧ ಪಕ್ಷದ ನಾಯಕ ಟಿ-ಶರ್ಟ್ ಹಾಕಿಕೊಂಡು ಪಾರ್ಲಿಮೆಂಟಿಗೆ ಬರುತ್ತಾನೆ. ಅವರ ಅಜ್ಜ ಹೀಗೆ ಇದರಾ, ಅವರ ಅಮ್ಮ ಹೀಗೆ ಇದರಾ?, ನಾಚಿಕೆ ಬರುವಂಥ ಕೆಲಸ ಇವರು ಮಾಡುತ್ತಿದ್ದಾರೆ. ಮುಂದಿನ ದಿನಮಾನದಲ್ಲಿ ಕಾಂಗ್ರೆಸ್ ಈ ದೇಶದಲ್ಲಿ ಸಂಪೂರ್ಣವಾಗಿ ನಾಶವಾಗುತ್ತದೆ ಎಂದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಕುಮಟಾ: ಉಪವಿಭಾಗದ ನಗರ ಶಾಖೆಯ 11ಕೆ.ವಿ ಇಂಡಸ್ಟ್ರಿಯಲ್ ಮಾರ್ಗದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ 11ಕೆ.ವಿ ಇಂಡಸ್ಟ್ರಿಯಲ್ ಫೀಡರ, 11ಕೆ.ವಿ ಮೂರೂರ ಹಾಗೂ 11ಕೆ.ವಿ ವಾಲಗಳ್ಳಿ ಫೀಡರಿನ ಎಲ್ಲಾ ಭಾಗದಲ್ಲಿ ಮೇ 20ರಂದು ಬೆಳಗ್ಗೆ 9.30 ರಿಂದ ಸಂಜೆ 3.30ಗಂಟೆ ವರೆಗೆ ಹಾಗೂ 33ಕೆ.ವಿ ಗೋಕರ್ಣ ಮತ್ತು 33ಕೆ.ವಿ ಮರಾಕಲ್ ಮಾರ್ಗದಲ್ಲಿ ಜಂಗಲ್ ಕಟ್ಟಿಂಗ್ ಕಾರ್ಯವಿರುವುದರಿಂದ ಗೋಕರ್ಣ ಶಾಖೆಯ ಮತ್ತು ಮರಾಕಲ್ ಶಾಖೆಯ ಎಲ್ಲಾ ಭಾಗಗಳಲ್ಲಿ ಮೇ 20ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 1.30 ಗಂಟೆ ವರೆಗೆ ಹಾಗೂ 11ಕೆ.ವಿ ಬಾಡಾ ಮತ್ತು 11 ಕೆ.ವಿ ಮಾಸೂರ ಮಾರ್ಗದಲ್ಲಿ 11ಕೆ.ವಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಈ ಭಾಗದ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಪ್ರಕಟಣೆ ತಿಳಿಸಿದ್ದಾರೆ.

ಡಾ. ರಾಜ್ ಗಾನಲಹರಿ ಸಂಗೀತದ ರಸದೌತಣ

ಶಿರಸಿ: ವರನಟ, ಕರ್ನಾಟಕ ರತ್ನ, ನಟಸಾರ್ವಭೌಮ, ಕನ್ನಡ ಕಂಠೀರವ ಡಾ. ರಾಜಕುಮಾರ್ ಅವರ ಅಮರ ಸವಿನೆನಪಿನಲ್ಲಿ ಆಯೋಜಿಸಿದ್ದ ಡಾ. ರಾಜ್ ಗಾನಲಹರಿ ಸಂಗೀತ ಕಾರ್ಯಕ್ರಮ ನಗರದ ರಂಗಧಾಮದಲ್ಲಿ ಸಂಗೀತಾಸಕ್ತರಿಗೆ ಅಪೂರ್ವ ರಸದೌತಣ ನೀಡಿತು. ನಯನ ಫೌಂಡೇಶನ್, ಎಂ.ಎಂ. ಜೋಶಿ ಗಣೇಶ ನೇತ್ರಾಲಯ ಶಿರಸಿ ಹಾಗೂ ಡಾ.ಎನ್.ಎಸ್. ಮುರುಳೀಧರ್ ಅವರ ಜಂಟಿ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, ಕನ್ನಡ ನಾಡಿಗೆ ರಾಜಣ್ಣ ಎಂದೇ ಆರಾಧಿಸಲ್ಪಟ್ಟ ಡಾ. ರಾಜಕುಮಾರ್ ಕೇವಲ ನಟರಲ್ಲ, ಅವರು ಕನ್ನಡಿಗರ ಸಂಸ್ಕೃತಿ, ಸರಳತೆ ಮತ್ತು ಮೌಲ್ಯಗಳ ಪ್ರತೀಕವಾಗಿದ್ದರು. ಇಂತಹ ಕಾರ್ಯಕ್ರಮಗಳ ಮೂಲಕ ಹೊಸ ಪೀಳಿಗೆಗೆ ರಾಜ್ ಅವರ ವ್ಯಕ್ತಿತ್ವ ಹಾಗೂ ಗೀತೆಗಳ ಮಹತ್ವ ಪರಿಚಯವಾಗುತ್ತಿರುವುದು ಸಂತಸದ ಸಂಗತಿ ಎಂದರು.

ಖ್ಯಾತ ಚಿತ್ರನಟ ನೀರ್ನಳ್ಳಿ ರಾಮಕೃಷ್ಣ ಮಾತನಾಡಿದರು. ಕಾರ್ಯಕ್ರಮದ ವಿಶೇಷತೆ ಎಂದರೆ ಪ್ರಸಿದ್ಧ ಗಾಯಕರ ಜೊತೆಗೆ ಸ್ಥಳೀಯ ಪ್ರತಿಭೆಗಳ ಗಾಯನವೂ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಡಾ. ಮುರುಳೀಧರ್, ಸಮನ್ವಿತಾ ಶರ್ಮಾ, ರೋಹಿಣಿ ಪ್ರಭುನಂದನ್, ಚಂದ್ರಮೌಳಿ, ಗಣೇಶ ಭಟ್ ಕೂರ್ಸೆ, ಡಾ. ಮಹೇಶ ಭಟ್, ಡಾ. ಸುಮನ್ ಹೆಗಡೆ, ರೇಖಾ ಭಟ್, ಪ್ರವೀಣ ಕಾಮತ್, ಎಂ.ಆರ್. ಹೆಗಡೆ, ರಾಘವೇಂದ್ರ ಸಕಲಾತಿ ಸೇರಿದಂತೆ ಹಲವರು ರಾಜ್ ಗೀತೆಗಳಿಗೆ ಧ್ವನಿಯಾದರು. ಎಂ.ಎಂ. ಜೋಶಿ ಆಸ್ಪತ್ರೆಯ ಡಾ. ಗುರುಪ್ರಸಾದ್, ರೋಟರಿ ಅಧ್ಯಕ್ಷ ಶ್ರೀನಿವಾಸ ನಾಯ್ಕ, ಲಯನ್ಸ ಅಧ್ಯಕ್ಷ ಗುರುರಾಜ ಹೊನ್ನಾವರ, ಹಾಡುವ ಗೂಡಿನ ಗಣೇಶ ಕೂರ್ಸೆ, ಸಂಧ್ಯಾ ನಾಯ್ಕ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಡಾ. ಶಿವರಾಮ ಕೆ.ವಿ. ಪ್ರಾಸ್ತಾವಿಕ ಮಾತನಾಡಿದರು. ಅನಂತ ಪದ್ಮನಾಭನ್ ಹಾಗೂ ಮಾಧುರಿ ಶಿವರಾಮ ಕಾರ್ಯಕ್ರಮ ನಿರ್ವಹಿಸಿದರು. ಗಾಯಕ ಮುರುಳೀಧರ, ಡಾ. ಶಿವರಾಮ ದಂಪತಿಗಳನ್ನು ಗೌರವಿಸಲಾಯಿತು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60889	67699
ಬಿಳಿಗೋಟು	26219	37699
ಕೆಂಪುಗೋಟು	15099	36299
ಬೆಟ್ಟೆ	34565	52909
ರಾಶಿ	51399	53199
ಚಾಲಿ	44199	47981
ಬಿ.ಕಾಳುಮೆಣಸು	83000	83000
ಯಲ್ಲಾಪುರ	**ಕನಿಷ್ಠ**	**ಗರಿಷ್ಠ**
ಅಪಿ	56129	56199
ರಾಶಿ	49910	55709
ಬೆಟ್ಟೆ	38506	49699
ಕೆಂಪುಗೋಟು	16899	37800
ಬಿಳಿಗೋಟು	17780	37316
ಚಾಲಿ	38066	47509
ಕೋಕಾ	16909	34899
ಕಾಳುಮೆಣಸು	58009	68200



ಶಿರಸಿ: ಔಷಧ ವ್ಯಾಪಾರಸ್ಥರು ಎದುರಿಸುತ್ತಿರುವ ವಿವಿಧ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಮೇ 20ರಂದು ಜಿಲ್ಲಾದ್ಯಂತ ಔಷಧ ಮಳಿಗೆಗಳ ಬಂದ್ ಆಚರಿಸಲು ನಿರ್ಧರಿಸಲಾಗಿದ್ದು, ಈ ಕುರಿತು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.ಸಭೆಯಲ್ಲಿ ತಾಲೂಕಿನ ಪ್ರಮುಖ ಔಷಧ ವ್ಯಾಪಾರಸ್ಥರು ಉಪಸ್ಥಿತರಿದ್ದರು.

ನಾಳೆ ಔಷಧ ಮಳಿಗೆಗಳು ಬಂದ್

ಶಿರಸಿ: ಔಷಧ ವ್ಯಾಪಾರಸ್ಥರು ಎದುರಿಸುತ್ತಿರುವ ವಿವಿಧ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಮೇ 20ರಂದು ಜಿಲ್ಲಾದ್ಯಂತ ಔಷಧ ಮಳಿಗೆಗಳ ಬಂದ್ ಆಚರಿಸಲು ನಿರ್ಧರಿಸಲಾಗಿದ್ದು, ಈ ಕುರಿತು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಶನಿವಾರ ಮನವಿ ಸಲ್ಲಿಸಲಾಯಿತು.ಶಿರಸಿಯ ಸಂಸದರ ಕಾರ್ಯಾಲಯದಲ್ಲಿ ಔಷಧ ವ್ಯಾಪಾರಸ್ಥರ ಸಂಘದ ಪದಾಧಿಕಾರಿಗಳು ಸಂಸದರನ್ನು ಭೇಟಿ ಮಾಡಿ, ಪ್ರಸ್ತುತ ಉದ್ಯಮ ಎದುರಿಸುತ್ತಿರುವ ಸವಾಲುಗಳ ಕುರಿತು ಸುದೀರ್ಘವಾಗಿ ಚರ್ಚಿಸಿದರು. ಮನವಿ ಸ್ವೀಕರಿಸಿದ ಸಂಸದ ಕಾಗೇರಿ ಅವರು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವಾಲಯ ಹಾಗೂ ಉನ್ನತ ಮಟ್ಟದಲ್ಲಿ ಚರ್ಚಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಭರವಸೆ ನೀಡಿದರು.ಬಳಿಕ ನಡೆದ ಔಷಧ ವ್ಯಾಪಾರಸ್ಥರ ಸಂಘದ ಸಭೆಯಲ್ಲಿ ಮಾತನಾಡಿದ ಶಿರಸಿ ಘಟಕದ ಅಧ್ಯಕ್ಷ ಗಣೇಶ ಹೆಗಡೆ, ನಮ್ಮ ಬೇಡಿಕೆಗಳ ಈಡೇರಿಕೆಗಾಗಿ ಮೇ 20ರಂದು ಹಮ್ಮಿಕೊಳ್ಳಲಾಗಿರುವ ಬಂದ್ ಅನ್ನು ಯಶಸ್ವಿಗೊಳಿಸುವುದು ಅತ್ಯಗತ್ಯ. ಜಿಲ್ಲೆಯ ಎಲ್ಲಾ ಔಷಧ ವ್ಯಾಪಾರಸ್ಥರು ಅಂದು ಕಡ್ಡಾಯವಾಗಿ ವ್ಯಾಪಾರ ವಹಿವಾಟು ಸ್ಥಗಿತಗೊಳಿಸಿ, ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಹೇಳಿದರು.ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ ಹೆಗಡೆ ಅವರು ಹೋರಾಟಕ್ಕೆ ಪೂರ್ಣ ಪ್ರಮಾಣದ ಸಹಕಾರ ನೀಡಿದ್ದು, ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲಾ ವ್ಯಾಪಾರಸ್ಥರು ಒಗ್ಗಟ್ಟಿನಿಂದ ಬಂದ್ ಆಚರಿಸಲು ನಿರ್ಣಯಿಸಿದರು. ಸಭೆಯಲ್ಲಿ ತಾಲೂಕಿನ ಪ್ರಮುಖ ಔಷಧ ವ್ಯಾಪಾರಸ್ಥರು ಉಪಸ್ಥಿತರಿದ್ದರು.



ಗೋಕರ್ಣ: ಇಲ್ಲಿನ ಪ್ರಮುಖ ಮಾರ್ಗಗಳ ಚರಂಡಿ ಹೂಳೆತ್ತುವ ಕಾರ್ಯ ಸೋಮವಾರದಿಂದ ಗ್ರಾಪಂ ಪ್ರಾರಂಭಿಸಿದೆ. ಮಳೆಗಾಲ ಸಮೀಪಿಸುತ್ತಿದ್ದರು, ಚರಂಡಿ ಸ್ವಚ್ಛಗೊಳಿಸುವ ಕಾರ್ಯ ಮೇಲಿನಕೇರಿ ಮುಖ್ಯರಸ್ತೆಯ ಚರಂಡಿಯಲ್ಲಿ ತುಂಬಿ ತ್ಯಾಜ್ಯಗಳನ್ನ ತೆಗೆಯಲಾಗುತ್ತಿದೆ.

ನೀರು, ನೈರ್ಮಲ್ಯ ಮಿಷನ್ ಸಮಿತಿ ಸಭೆ | ಡಾ.ದಿಲೀಷ್ ಶಶಿ ಸೂಚನೆ

ಕುಡಿಯುವ ನೀರಿನ ಮೂಲ ಶುದ್ಧಗೊಳಿಸಿ

ಕಾರವಾರ: ಮಳೆಗಾಲ ಪ್ರಾರಂಭವಾಗುವ ಮುನ್ನ ಕುಡಿಯುವ ನೀರಿನ ಮೂಲಗಳು ಮತ್ತು ನೀರಿನ ಮಾದರಿಗಳನ್ನು ಪರೀಕ್ಷಿಸಿ, ನೀರು ಕಲುಷಿತಗೊಳ್ಳದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಸೂಚನೆ ನೀಡಿದರು.

ಅವರು ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇಲಾಖೆಗಳ ನಡುವೆ ಸಮನ್ವಯತೆ ಮುಖ್ಯವಾಗಿದ್ದು, ಸಮನ್ವಯತೆಯ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಹಾಗೂ ಪ್ರಗತಿಯಲ್ಲಿ ಕುಂಠಿತವಾಗುತ್ತಿದೆ. ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜೆಜೆಎಂ ಕಾಮಗಾರಿಗಳು ಪೂರ್ಣಗೊಂಡಿರುವ ಕಡೆ ಹೆಸ್ಕಾಂ ವತಿಯಿಂದ ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಕುಡಿಯುವ ನೀರಿನ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗದಂತೆ ಹಾಗೂ ಟಾಸ್ಕ್ ಪೋರ್ಸ್ ಸಮಿತಿಗೆ ಕಾಮಗಾರಿಗಳ ಕುರಿತು ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ ಸರಿಯಾದ ಮಾಹಿತಿ ಒಳಗೊಂಡ ಸಮಗ್ರ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದ ಅವರು, ಕಾಮಗಾರಿಗಳ ಅಂದಾಜು ಪಟ್ಟಿ ಸಿದ್ಧಪಡಿಸುವ ಸಂದರ್ಭದಲ್ಲಿ ಇಲಾಖೆಗಳ ಮಧ್ಯ ಸಮನ್ವಯತೆ ಇರಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಅಲ್ಲಾ ಭಕ್ಷ್, ಮುಖ್ಯ ಲೆಕ್ಕಾಧಿಕಾರಿ ಆನಂದಸಾ ಹಬೀಬ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಇಂಜನೀಯರ್ ಎಚ್ ಸತ್ಯಪ್ಪ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತಿತರರು ಇದ್ದರು.



ಅಧಿಕಾರಿಗಳಿಗೆ ಸೂಚನೆ

ಶೀಘ್ರದಲ್ಲಿ ಶಾಲಾ ಕಾಲೇಜು ಹಾಗೂ ಅಂಗನವಾಡಿಗಳು ಪ್ರಾರಂಭವಾಗುತ್ತಿದ್ದು, ಇಲ್ಲಿರುವ ಕುಡಿಯುವ ನೀರಿನ ಮೂಲಗಳನ್ನು ಪರೀಕ್ಷಿಸಿ, ಕುಡಿಯಲು ನೀರು ಯೋಗ್ಯವಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳುವಂತೆ ಮತ್ತು ಜಿಲ್ಲೆಯ ಎಲ್ಲಾ ಶಾಲೆ, ಅಂಗನವಾಡಿ ಮತ್ತು ವಸತಿ ನಿಲಯಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವಲ್ಲಿ ವ್ಯತ್ಯಯವಾಗದಂತೆ ಎಚ್ಚರ ವಹಿಸುವಂತೆ ಸೂಚಿಸಿದರು.

ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ: ಸಂಸದ ಕಾಗೇರಿ

ಅಂಕೋಲಾ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಭಿವೃದ್ಧಿ ಶೂನ್ಯ ಆಡಳಿತ ನಡೆಸುತ್ತಿದ್ದು ಖುರ್ಚಿ ಕಾಳಗದಲ್ಲೇ ಕಾಲ ಕಳೆಯುವಂತಾಗಿದೆ, ಅರಾಜಕತೆ, ಓಲೈಕೆ ರಾಜಕಾರಣ, ಭ್ರಷ್ಟಾಚಾರ, ಹಿಂದೂ ವಿರೋಧಿ ನೀತಿ ಮಿತಿ ಮೀರಿ ಹೆಚ್ಚತೊಡಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ತಾಲೂಕಿನ ಅವರ್ಸಾದ ಕಾತ್ಯಾಯಿನಿ ಸಭಾಭವನದಲ್ಲಿ ಪಂಡಿತ್ ದೀನ್ ದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ಪ್ರಯುಕ್ತ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ದುರಾಡಳಿತವನ್ನು ಜನರ ಎದುರು ಇಡುವ ಕೆಲಸವನ್ನು ವಿರೋಧ ಪಕ್ಷವಾಗಿ ಭಾರತೀಯ ಜನತಾ ಪಕ್ಷ ಸಮರ್ಥವಾಗಿ ನಿಭಾಯಿಸಿದ್ದು, ಜನರ ಧ್ವನಿಯಾಗಿ ಕೆಲಸ ಮಾಡುತ್ತಿದ್ದೇವೆ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಆಡಳಿತ ಎನ್ನುವ ದೃಢ ನಂಬಿಕೆಯಿಂದ ಎಲ್ಲರೂ ಒಂದಾಗಿ ಕೆಲಸ ಮಾಡಬೇಕು ಎಂದರು.

ರಾಷ್ಟ್ರಭಕ್ತಿ ಮತ್ತು ಪಕ್ಷನಿಷ್ಠೆ ಬಿಜೆಪಿಯನ್ನು ಉಳಿದ ರಾಜಕೀಯ ಪಕ್ಷಗಳಿಗಿಂತ ವಿಭಿನ್ನವಾಗಿಸಿದೆ ಎಂದ ಅವರು ವಿಶ್ವವನ್ನು ಆಳಲು ಶಸ್ತ್ರಾಸ್ತ್ರಯುದ್ಧ ಬೇಕಿಲ್ಲ, ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ಜ್ಞಾನ ಬೇಕು, ಜ್ಞಾನಾಧಾರಿತ ಅಧಿಕಾರದ ಪರಿಣಾಮದಿಂದ ಭಾರತೀಯ ಜನತಾ ಪಕ್ಷ ದೇಶದಲ್ಲಿ ಸತತ ಮೂರನೆಯ ಅವಧಿಗೆ ಅಧಿಕಾರ ನಡೆಸುತ್ತಿದೆ ಪಕ್ಷನಿಷ್ಠೆ, ರಾಷ್ಟ್ರಭಕ್ತಿಯ ಜ್ಞಾನ ಪ್ರಶಿಕ್ಷಣ ವರ್ಗದಿಂದ ಪಡೆಯಬಹುದಾಗಿದ್ದು, ಅಭ್ಯಾಸ ವರ್ಗದ ಕಲಿಕೆಯನ್ನು ಅಳವಡಿಸಿಕೊಂಡು ಪಕ್ಷದ ಬಲವರ್ಧನೆಗೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಮಾತನಾಡಿ. ಅಭ್ಯಾಸ ವರ್ಗ ಪಕ್ಷ ಸಂಘಟನೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ ಎಂದರು.

ಕುಮಟಾ ಶಾಸಕ ದಿನಕರ ಶೆಟ್ಟಿ, ಶಿವಮೊಗ್ಗ ಶಾಸಕ ಚನ್ನಬಸಪ್ಪ, ಪ್ರಮುಖರುಗಳಾದ ಶಿವಾನಂದ ನಾಯ್ಕ, ವಿಕಾಸ ಪೂತ್ತೂರು, ವೆಂಕಟೇಶ ನಾಯಕ, ಹರಿಪ್ರಕಾಶ ಕೋಣೆಮನೆ, ಪ್ರಶಿಕ್ಷಣ ವರ್ಗದ ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.

ಬಿಜೆಪಿಯ ಜಿಲ್ಲಾಧ್ಯಕ್ಷ ಎನ್.ಎಸ್. ಹೆಗಡೆ ಸ್ವಾಗತಿಸಿದರು. ಗುರುಪ್ರಸಾದ ಹೆಗಡೆ ನಿರ್ವಹಿಸಿದರು, ಪ್ರಶಾಂತ ನಾಯ್ಕ ವಂದಿಸಿದರು.





ಶಿರಸಿ: ವರನಟ, ಕರ್ನಾಟಕ ರತ್ನ, ನಟಸಾರ್ವಭೌಮ, ಕನ್ನಡ ಕಂಠೀರವ ಡಾ. ರಾಜಕುಮಾರ್ ಅವರ ಅಮರ ಸವಿನೆನಪಿನಲ್ಲಿ ಆಯೋಜಿಸಿದ್ದ ಡಾ. ರಾಜ್ ಗಾನಲಹರಿ ಸಂಗೀತ ಕಾರ್ಯಕ್ರಮ ನಗರದ ರಂಗಧಾಮದಲ್ಲಿ ಸಂಗೀತಾಸಕ್ತರಿಗೆ ಅಪೂರ್ವ ರಸದೌತಣ ನೀಡಿತು. ನಯನ ಫೌಂಡೇಶನ್, ಎಂ.ಎಂ. ಜೋಶಿ ಗಣೇಶ ನೇತ್ರಾಲಯ ಶಿರಸಿ ಹಾಗೂ ಡಾ.ಎನ್.ಎಸ್. ಮುರುಳೀಧರ್ ಅವರ ಜಂಟಿ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಭೀಮಣ್ಣ ನಾಯ್ಕ ನೀಡಿದರು.

ಹಾನಿ ಪ್ರದೇಶಕ್ಕೆ ಅಧಿಕಾರಿಗಳ ಭೇಟಿ

ಮುಂಡಗೋಡ: ತಾಲೂಕಿನಾದ್ಯಂತ ಭಾನುವಾರ ಸಂಜೆ ಸುರಿದ ಮಳೆಗಾಳಿಗೆ ಲಕ್ಷಾಂತರ ರೂ.ನಷ್ಟವಾಗಿದ್ದು ಹಾನಿಯಾದ ಪ್ರದೇಶಕ್ಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ತಾಲೂಕಿನಾದ್ಯಂತ ಭಾರೀ ಮಳೆ, ಗಾಳಿಗೆ ಮನೆಯ ಮೇಲ್ಛಾವಣಿಗಳು, ಹಲವು ಕಡೆ ವಿದ್ಯುತ್ ಕಂಬ ಮತ್ತು ಮರಗಳು ಬಿದ್ದು ಜನಜೀವನ ಅಸ್ತವ್ಯಸ್ತಗೊಂಡು ಅವಾಂತರ ಸೃಷ್ಟಿಯಾಗಿತ್ತು. ಬಡ್ಡಿಗ್ರಾಮದ ಮನೆಯೊಂದರ ಸಂಪೂರ್ಣವಾಗಿ ಮನೆಯ ಮೇಲ್ಛಾವಣಿ ಹಾರಿಹೋಗಿ ಮನೆ ಒಳಗೆ ನೀರು ತುಂಬಿಕೊಂಡು ದವಸ ಧಾನ್ಯಗಳು ನೀರಿನಲ್ಲಿ ತೇಲುತ್ತಿದ್ದವು.

ಹಾನಿಯಾದ ವಿವರ: ಬಡ್ಡಿಗೇರಿ ಗ್ರಾಮದ ನಕಲುಬಾಯಿ ಮಿಸಳ ಎಂಬುವರ ಮನೆಯ ಸಂಪೂರ್ಣ ಮೇಲ್ಛಾವಣಿ ಹಾರಿಹೋಗಿದೆ. ಅಂದಲಗಿ ಗ್ರಾಮದ ಪ್ರಕಾಶ ಕಳಸೂರ, ಕಲಕೇರಿ ಗ್ರಾಮದ ನೇತ್ರಾ ಬನವಾಸಿ, ಸುಶೀಲಾ ಕಟ್ಟಿಮನಿ ಎಂಬುವರು ಮನೆಗಳ ಮೇಲ್ಛಾವಣಿ ಹಾರಿ ಹೋದರೆ. ಮಾರುತಿ ಬನವಾಸಿ ಎಂಬುವರ ಟ್ರ್ಯಾಕ್ಟರ್ ಶೆಡ್ ಮೇಲ್ಛಾವಣಿ ಹಾರಿಹೋಗಿದೆ.

ಸೋಮವಾರ ಹಾನಿಯಾದ ಪ್ರದೇಶಕ್ಕೆ ಕಂದಾಯ ಇಲಾಖೆ ಹಾಗೂ ನೋಡಲ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದಾರೆ.

ವಿದ್ಯುತ್ ವ್ಯತ್ಯಯ: ಗುಡುಗು ಸಹಿತ ಭಾರೀ ಗಾಳಿಗೆ ಚವಡಳ್ಳಿ ಗ್ರಾಮದಲ್ಲಿ ಒಂದು ಪರಿವರ್ತಕ ಕೇಂದ್ರಕ್ಕೆ ಹಾನಿಯಾಗಿ ಚವಡಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿ ಭಾನುವಾರ ರಾತ್ರಿ ಪರದಾಡಿದರು. ಇದೀಗ ತ್ವರಿತ ವಾಗಿ ಹೆಸ್ಕಾಂ ಸಿಬ್ಬಂದಿ ಕೆಲಸ ಮಾಡಿ ವಿದ್ಯುತ್ ಪೂರೈಕೆ ಮಾಡಿದ್ದಾರೆ. ನಾಗನೂರ ಗ್ರಾಪಂ ವ್ಯಾಪ್ತಿಯಲ್ಲಿ ಹೊನ್ನಿಕೊಪ್ಪ ಸುಳ್ಳಳ್ಳಿ ವ್ಯಾಪ್ತಿಯಲ್ಲಿ 6 ವಿದ್ಯುತ್ ಕಂಬಗಳು ಬಿದ್ದು ವಿದ್ಯುತ್ ಇಲ್ಲದೆ ಸಮಸ್ಯೆಯಾಗಿದೆ.

ಕಲಕೇರಿ ,ಅಂದಲಗಿ, ಹೊನ್ನಿಕೊಪ್ಪ, ಸುಳ್ಳಳ್ಳಿ ವ್ಯಾಪ್ತಿಯಲ್ಲಿ ಹತ್ತು ವಿದ್ಯುತ್ ಕಂಬ ಮುರಿದು ಬಿದ್ದಿವೆ. ಚವಡಳ್ಳಿಯಲ್ಲಿ ಪರಿವರ್ತಕ ಕೇಂದ್ರಕ್ಕೆ ಹಾನಿಯಾಗಿದೆ. ಗಾಳಿ, ಮಳೆಯಿಂದಾಗಿ ಸುಮಾರ ಮೂರು ಲಕ್ಷಕ್ಕೂ ಹೆಚ್ಚು ನಷ್ಟವಾಗಿದೆ ಎಂದು ಹೆಸ್ಕಾಂ ಅಧಿಕಾರಿ ತಿಳಿಸಿದ್ದಾರೆ.



ರಸ್ತೆ, ಸೇತುವೆ ಸೌಕರ್ಯಕ್ಕೆ ಹೆಚ್ಚಿನ ಅನುದಾನ: ಶಾಸಕ ಸೈಲ್

ಅಂಕೋಲಾ: ಚುನಾವಣೆ ನಂತರ ರಾಜಕೀಯ ಬದಿಗಿಟ್ಟು ಭಿನ್ನಾಭಿಪ್ರಾಯ ಮರೆತು ಅಭಿವೃದ್ಧಿ ಕೆಲಸಗಳಿಗೆ ಎಲ್ಲರೂ ಒಗ್ಗಟ್ಟಿನಿಂದ ಕೈ ಜೋಡಿಸಿದಾಗ ತ್ವರಿತವಾಗಿ ಪ್ರಗತಿ ಸಾಧಿಸಲು ಸಾಧ್ಯ ಎಂದು ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್ ಹೇಳಿದರು.

ತಾಲೂಕಿನ ಡೋಂಗ್ರಿ ಗ್ರಾಪಂ ವ್ಯಾಪ್ತಿಯ ಸಾತನಬೈಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 1 ಕೋಟಿ ರೂಪಾಯಿ ಅನುದಾನದಲ್ಲಿ ನಿರ್ಮಿಸಿದ ಸಿದ್ಧಿ ವಾಲ್ಮೀಕಿ ಭವನ ಉದ್ಘಾಟಿಸಿ ಮಾತನಾಡಿದ ಅವರು, ಹಿಂದುಳಿದ ಪ್ರದೇಶಗಳಲ್ಲಿ ಇರುವ ಮೂಲಭೂತ ಸೌಕರ್ಯಗಳ ಕೊರತೆ ಅಲ್ಲಿನ ಅಗತ್ಯತೆ ಕುರಿತಂತೆ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದಾಗ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಚಿಂತನೆ ನಡೆಸಲು ಅನುಕೂಲವಾಗುತ್ತದೆ ಬುಡಕಟ್ಟು ಸಿದ್ಧಿ ಸಮುದಾಯದ ಜನರು ಇರುವ ಡೋಂಗ್ರಿ ಗ್ರಾಪಂ ವ್ಯಾಪ್ತಿಯಲ್ಲಿ ಕೋಟ್ಯಂತರ ರೂಪಾಯಿಯ ಅಭಿವೃದ್ಧಿ ಕೆಲಸಗಳನ್ನು ಈಗಾಗಲೇ ಮಾಡಲಾಗಿದ್ದು, ಮುಂದಿನ ದಿನಗಳಲ್ಲೂ ರಸ್ತೆ ಮತ್ತು ಸೇತುವೆಗಳ ಸೌಕರ್ಯಕ್ಕೆ ಹೆಚ್ಚಿನ ಅನುದಾನ ಒದಗಿಸುವುದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ತಿನ ಸದಸ್ಯ ಶಾಂತಾರಾಮ ಸಿದ್ದಿ ಮಾತನಾಡಿ, ಒಂದು ಉತ್ತಮ ಸಭಾಭವನದ ನಿರ್ಮಾಣ ಮಾಡಲಾಗಿದ್ದು ಸಿದ್ಧಿ ಸಮುದಾಯದವರು ಒಗ್ಗಟ್ಟಿನಿಂದ ಸಮಿತಿಯನ್ನು ರಚಿಸಿಕೊಂಡು ನಿರ್ವಹಣೆ ನಡೆಸುವ ಮೂಲಕ ಸಭಾಭವನದ ಸದುಪಯೋಗವಾಗಲಿ ಎಂದರು.

ಸ್ಥಳೀಯ ಪ್ರಮುಖ ಕೃಷ್ಣಾ ಸಿದ್ಧಿ ಮಾತನಾಡಿದರು.ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜೇಶ್ವರ ನಾಯಕ, ಅರ್ಚಕ ಸಾಣು ಸಿದ್ಧಿ, ಗ್ರಾಪಂ ಆಡಳಿತಾಧಿಕಾರಿ ಸುರೇಶ ನಾಯ್ಕ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಾದೇವ ಗೌಡ, ಪ್ರಮುಖರುಗಳಾದ ಭಾಸ್ಕರ ಸಿದ್ಧಿ, ಕುಮಾರ ಸಿದ್ಧಿ ಸೇರಿದಂತೆ ಸಾತನಬೈಲಿನ ಸಿದ್ಧಿ ಸಮುದಾಯದ ಪ್ರಮುಖರು ಇದ್ದರು.



ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

ಯಲ್ಲಾಪುರ: ಸುಮಾರು 9 ಕೋಟಿ 90 ಲಕ್ಷ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಈ ರಸ್ತೆ ಕಾಮಗಾರಿಯಿಂದ ಗ್ರಾಮೀಣ ಪ್ರದೇಶಗಳ ಸಂಪರ್ಕ ವ್ಯವಸ್ಥೆಗೆ ಹೊಸ ಚೈತನ್ಯ ದೊರೆಯಲಿದ್ದು, ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಸಂಚಾರಕ್ಕೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ ಎಂದು ಶಾಸಕ ಹೆಬ್ಬಾರ್ ಹೇಳಿದರು.

ಅವರು ಸೋಮವಾರ ನಂದೊಳ್ಳಿಗ್ರಾಮದ ಅಣಲಗಾರ ಗೋಪಾಲಕೃಷ್ಣ ದೇವಾಲಯದ ಸಮೀಪ ಹಿತ್ಲಕಾರ ಗದ್ದೆ-ಮಾಗೋಡ ಜಿಲ್ಲಾ ಮುಖ್ಯ ರಸ್ತೆ ಹಾಗೂ ನಂದೊಳ್ಳಿ-ಅಣಲಗಾರ ಗೋಪಾಲಕೃಷ್ಣ ದೇವಸ್ಥಾನ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಅಭಿವೃದ್ಧಿಯ ದಾರಿಯಲ್ಲಿ ಗ್ರಾಮೀಣ ಭಾಗಗಳನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಮೂಲಸೌಕರ್ಯ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ಕ್ಷೇತ್ರದ ಪ್ರತಿಯೊಂದು ಹಳ್ಳಿಗೂ ಉತ್ತಮ ರಸ್ತೆ, ಕುಡಿಯುವ ನೀರು ಹಾಗೂ ಮೂಲಭೂತಸೌಲಭ್ಯ ತಲುಪಿಸುವಕಾರ್ಯನಿರಂತರವಾಗಿನಡೆಯಲಿದೆಎಂದರು. ಸ್ಥಳಿಯರಾದ ರಾಮಕೃಷ್ಣ ಭಟ್ಟ ಬಿದ್ರೆಪಾಲ್, ತಿಮ್ಮಣ್ಣ ಭಾಗ್ವತ್ ಸೀಮಾಧ್ಯಕ್ಷ ನಾಗೇಶ ಹೆಗಡೆ ಪಣತಗೇರಿ, ವಿಕಾಸ ಬ್ಯಾಂಕ್ ಅಧ್ಯಕ್ಷಮುರಳಿ ಹೆಗಡೆ, ಗ್ರಾಪಂ ನೋಡೆಲ್ ಅಧಿಕಾರಿ ಅರವಿಂದ ಪಾಟೀಲ್, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಆರ್‌ಎಸ್ ಭಟ್ಟ ದೇಸಾಯಿ ಮನೆ, ಎಲ್‌ಎಸ್‌ಎಂಪಿ ಸೊಸೈಟಿ ಅಧ್ಯಕ್ಷ ನಾಗರಾಜ ಕವಡಿಕೆರೆ, ಡಾ.ಶಂಕರಭಟ್ಟ ಬಾಲಿಗದ್ದೆ, ಗ್ರಾಪಂ ಮಾಜಿ ಉಪಾಧ್ಯಕ್ಷ ಟಿಆರ್‌ಹೆಗಡೆ ತೊಂಡೆಕೆರೆ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಎಸ್.ಭಟ್ಟ ಉಪಳೇಶ್ವರ, ಗುತ್ತಿಗೆದಾರ ಪರಿಕ್ಷಿತ ನಾಯಕ, ಉದ್ಯಮಿ ವಿಶ್ವನಾಥ ಭಟ್ಟ, ಶಿವರಾಮ ಮಡಿವಾಳ ಉಪಸ್ಥಿತರಿದ್ದರು. ಸಾಮಾಜಿಕ ಕಾರ್ಯಕರ್ತ ಟಿವಿ ಭಾಗ್ವತ ಸ್ವಾಗತಿಸಿದರು. ದೇವಸ್ಥಾನ ಅಧ್ಯಕ್ಷ ಎನ್.ಆರ್.ಭಟ್ಟ ಬಿದ್ರೆಪಾಲ ಪ್ರಸ್ತಾಪಿಸಿದರು. ಲೋಕೋಪಯೋಗಿ ಇಲಾಖೆಯ ಎಇಇ ಸಂಜೀವ ಪಾತ್ರೋಟ ರಸ್ತೆ ಕಾಮಗಾರಿ ಕುರಿತು ವಿವರಿಸಿದರು. ಶ್ರೀಧರ ಅಣಲಗಾರ ನಿರೂಪಿಸಿದರು. ಗಣೇಶಹೆಗಡೆ ನಂದೊಳ್ಳಿ ವಂದಿಸಿದರು.



ಪ್ಲಾಸ್ಟಿಕ್ ಮುಕ್ತ ಕಡಲಿಗೆ ಸಹಕಾರ ಅಗತ್ಯ: ನಾಯ್ಕ



ಅಂಕೋಲಾ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಾರವಾರ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಅಂಕೋಲಾ ಅವರ ಮಾರ್ಗದರ್ಶನದಲ್ಲಿ ಅರಣ್ಯ ಇಲಾಖೆಯ ಕೋಸ್ಟಲ್ ಮತ್ತು ಮರೈನ್ ಇಕೋ ಸಿಸ್ಟಮ್ ಘಟಕದ ವತಿಯಿಂದ ಗೋಖಲೆ ಸೆಂಟಿನರಿ ಕಾಲೇಜಿನ ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ತಾಲೂಕಿನ ನದಿಭಾಗ ಕಡಲ ತೀರದಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಸಲಾಯಿತು.

ಕಡಲ ತೀರವನ್ನು ಸ್ವಚ್ಛಗೊಳಿಸಿ ಪ್ಲಾಸ್ಟಿಕ್ ತ್ಯಾಜ್ಯ, ಗಾಜಿನ ಬಾಟಲಿಗಳು ಮತ್ತಿತರ ತ್ಯಾಜ್ಯ ವಸ್ತುಗಳು ಸೇರಿದಂತೆ 40 ಬ್ಯಾಗುಗಳಷ್ಟು ತ್ಯಾಜ್ಯ ಕಸ ಸಂಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಸಹಾಯಕ ವಲಯ ಅರಣ್ಯಾಧಿಕಾರಿ ರಾಜೇಶ ನಾಯ್ಕ ಮಾತನಾಡಿ, ಕಡಲ ತೀರದಲ್ಲಿ ಎಸೆಯುವ ಪ್ಲಾಸ್ಟಿಕ್ ತ್ಯಾಜ್ಯಗಳು ಸಮುದ್ರ ಸೇರಿ ಕಡಲ ಜೀವ ವೈವಿಧ್ಯಗಳಿಗೆ ಮಾರಕವಾಗುತ್ತಿದ್ದು, ಪ್ಲಾಸ್ಟಿಕ್ ಮುಕ್ತ ಕಡಲಿಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದರು. ಕಡಲಾಮೆಗಳ ಜೀವನ ಚಕ್ರ ವ್ಯವಸ್ಥೆಯ ಕುರಿತಂತೆ ಮಾಹಿತಿ ನೀಡಿದ ಅವರು ಪ್ರಾತ್ಯಕ್ಷಿಕೆ ಮೂಲಕ ವಿವರಣೆ ನೀಡಿದರು. ಕೋಸ್ಟಲ್ ಮರೈನ್ ಘಟಕದ ವಲಯ ಅರಣ್ಯಾಧಿಕಾರಿ ಕಿರಣ್ ಮನವಾಚಾರಿ, ಉಪ ವಲಯ ಅರಣ್ಯಾಧಿಕಾರಿ ಮಲ್ಲಿಕಾರ್ಜುನ ಭಂಡಾರಿ, ಗಸ್ತು ಪಾಲಕ ಸುನೀಲ್, ಸುದರ್ಶನ್, ಗೋಖಲೆ ಕಾಲೇಜಿನ ಪ್ರಾಚಾರ್ಯರು, ಎನ್‌ಎಸ್‌ಎಸ್ ಅಧಿಕಾರಿಗಳು, ಉಪನ್ಯಾಸಕರು, ಕರಾವಳಿ ಕಾವಲು ಪಡೆಯ ಸಿಬ್ಬಂದಿ, ಬೊಬ್ರವಾಡ ಗ್ರಾಪಂಯ ಸಿಬ್ಬಂದಿ ಉಪಸ್ಥಿತರಿದ್ದರು.

ಸಿದ್ಧಿನಾಸ ದೇವರ ಜಾತ್ರಾ ಮಹೋತ್ಸವ

ಅಂಕೋಲಾ: ತಾಲೂಕಿನ ಡೋಂಗ್ರಿ ಗ್ರಾಪಂ ವ್ಯಾಪ್ತಿಯ ಸಾತನಬೈಲಿನಲ್ಲಿ ಸಿದ್ಧಿ ಸಮುದಾಯದ ಆರಾಧ್ಯ ದೈವ ಸಿದ್ಧಿನಾಸ ದೇವರ ಜಾತ್ರಾ ಮಹೋತ್ಸವ ಸಂಭ್ರಮದಿಂದ ನಡೆಯಿತು.

ಉತ್ತರ ಕನ್ನಡ ಜಿಲ್ಲೆಯ ಸಿದ್ಧಿ ಸಮುದಾಯದ ಜನರು ಸಿದ್ಧಿನಾಸನ ಸನ್ನಿಧಿಗೆ ಬಂದು ಪೂಜೆ ಅರ್ಪಿಸಿ ಪ್ರಸಾದ ಸ್ವೀಕರಿಸಿದರು. ದಟ್ಟ ಅರಣ್ಯದ ನಡುವೆ ಇರುವ ಹಿಂದುಳಿದ ದುರ್ಗಮ ಪ್ರದೇಶವಾಗಿರುವ ಸಾತನಬೈಲಿನಲ್ಲಿ ಸಿದ್ಧಿನಾಸನ ಜಾತ್ರೆಯನ್ನು ಇತ್ತೀಚಿನ ವರ್ಷಗಳಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ಸಿದ್ಧಿನಾಸನನ್ನು ಆರಾಧಿಸುತ್ತ ಬಂದಿರುವ ಆಫ್ರಿಕಾ ಮೂಲದ ಬುಡಕಟ್ಟು ಸಿದ್ಧಿ ಜನಾಂಗದ ಜನರು ಎಲ್ಲರೂ ಒಂದಾಗಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸ್ಥಳದಲ್ಲೇ ದೇವರ ಪ್ರಸಾದ ರೂಪದಲ್ಲಿ ಭೋಜನ ತಯಾರಿಸಿ ಪ್ರಸಾದ ರೂಪದಲ್ಲಿ ಊಟ ಮಾಡುತ್ತಾರೆ. ಕಾರವಾರ ಅಂಕೋಲಾ ಕ್ಷೇತ್ರದ ಶಾಸಕ ಸತೀಶ ಸೈಲ್ ಅವರು ಸಿದ್ಧಿನಾಸನ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಿ ದೇವರ ಪ್ರಸಾದ ಸ್ವೀಕರಿಸಿದರು.ಸಿದ್ಧಿನಾಸನ ಪೂಜಾ ಸ್ಥಳದಲ್ಲಿ ನೆಲ ನಿರ್ಮಾಣ ಮತ್ತು ಪಾತ್ರೆಗಳನ್ನು ಒದಗಿಸುವಂತೆ ಸಿದ್ಧಿ ಸಮುದಾಯದ ವತಿಯಿಂದ ಶಾಸಕರಿಗೆ ಮನವಿ ಸಲ್ಲಿಸಲಾಯಿತು.ವಿಧಾನ ಪರಿಷತ್ತಿನ ಸದಸ್ಯ ಶಾಂತಾರಾಮ ಸಿದ್ಧಿ ಅವರು ಸಹ ಆಗಮಿಸಿ ಸಿದ್ಧಿನಾಸನ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಿದರು.ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ಡಮಾಮಿ ನೃತ್ಯ ಪ್ರದರ್ಶನಗೊಂಡಿತು.



ಹೊಸ ಆವಿಷ್ಕಾರ ಉತ್ತೇಜಿಸಲು ತರಬೇತಿ ಅಗತ್ಯ

ಹಳಿಯಾಳ: ನಾವಿನ್ಯತೆ ಹಾಗೂ ವಿನ್ಯಾಸ (ಇನ್ನೊವೆಷನ್ ಅಂಡ್ ಡಿಸೈನ್ ಥಿಂಕಿಂಗ್) ಕುರಿತಾಗಿ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ತರಬೇತಿ ಸೋಮವಾರ ಸಮಾರೋಪಗೊಂಡಿತು.

ಹುಬ್ಬಳ್ಳಿಯ ಕಾಮೆಡ್ ಕೇರ್ ಸಂಸ್ಥೆಯು ವಿದ್ಯಾರ್ಥಿಗಳಲ್ಲಿ ವಿನ್ಯಾಸ ಚಿಂತನೆಯನ್ನು ಉನ್ನತೀಕರಿಸಿ ಹೊಸ ಆವಿಷ್ಕಾರಗಳನ್ನು ಮಾಡಲು ಉತ್ತೇಜಿಸುವ ತರಬೇತಿಯನ್ನು ವಿಡಿಐಟಿ ವಿದ್ಯಾರ್ಥಿಗಳಿಗೆ ನೀಡಿತ್ತು. ಇದರ ಸಮಾರೋಪ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಕಾಮೆಡ್ ಕೇರ್ ಸಂಸ್ಥೆಯ ಕಾರ್ಯನಿರ್ವಹಣಾ ನಿರ್ದೇಶಕ ಡಾ. ರಮೇಶ್ ಪಿ ವಿನ್ಯಾಸ ಚಿಂತನೆಯಿಂದಲೇ ನೂತನ ಆವಿಷ್ಕಾರಗಳು ಸಾಧ್ಯ ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮಲ್ಲಿರುವ ತಾಂತ್ರಿಕ ಚಿಂತನೆಯನ್ನು ಉತ್ಪನ್ನವಾಗಿ ಮಾರ್ಪಡಿಸಬೇಕೆಂದು ಹೇಳಿದರು.

ಕಾಮೆಡ್ ಕೇರ್ ಪದಾಧಿಕಾರಿಗಳಾದ ಕಲ್ಮೇಶ ಗೌರವ ಅತಿಥಿಗಳಾಗಿ ಮಾತನಾಡಿ, ನಾವಿನ್ಯತೆ ಹಾಗೂ ವಿನ್ಯಾಸ ಚಿಂತನೆಯ ತರಬೇತಿ ಮಹತ್ವವನ್ನು ತಿಳಿಸಿದರು. ಸುಮೇಶ್ ಮಠದ್ ಹಾಗೂ ವಿಶ್ವನಾಥ ಹಿರೇಮಠ್ ಉಪಸ್ಥಿತರಿದ್ದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರಾ. ಡಾ. ವಿಎ ಕುಲಕರ್ಣಿ ಕಾಮೆಡ್ ಕೇರ್ ಸಂಸ್ಥೆಯ ಐಡಿಟಿ ತರಬೇತಿಯು ವಿದ್ಯಾರ್ಥಿಗಳಲ್ಲಿ ವಿನ್ಯಾಸ ಚಿಂತನೆಯ ಉನ್ನತೀಕರಣಕ್ಕೆ ಸಹಕಾರಿ ಎಂದು ಹೇಳಿದರು. ಡೀನ್ ಅಕಾಡೆಮಿಕ್ ಡಾ. ಗುರುರಾಜ ಹತ್ತಿ ವಿಐಡಿಟಿ ತರಬೇತಿ ಕಾರ್ಯಕ್ರಮದ ಸಂಪೂರ್ಣ ವಿವರಣೆಯನ್ನು ನೀಡಿದರು.

ಹುಬ್ಬಳ್ಳಿಯ ಕಾಮೆಡ್ ಕೇರ್ ಕೇಂದ್ರದಲ್ಲಿ 15 ದಿನಗಳ ತರಬೇತಿ ಪ್ರತಿ ಬ್ಯಾಚ್ ಪಡೆದಿದ್ದು, ಒಟ್ಟೂ ಎರಡು ತಿಂಗಳುಗಳ ಕಾಲ ಎಲ್ಲ ವಿದ್ಯಾರ್ಥಿಗಳು ತರಬೇತಿ ಪಡೆದಿದ್ದು, ತರಬೇತಿ ಮತ್ತು ಸಾರಿಗೆ ವೆಚ್ಚವನ್ನು ಮಹಾವಿದ್ಯಾಲಯ ಭರಿಸಿದೆ.

ವಿದ್ಯಾರ್ಥಿಗಳಲ್ಲಿ ವಿನ್ಯಾಸ ಚಿಂತನೆಯನ್ನು ಹೆಚ್ಚಿಸಿ ಹೊಸ ಆವಿಷ್ಕಾರಗಳಿಗೆ ಮುನ್ನುಡಿ ಬರೆಯಲು ಕಾಮೆಡ್ ಕೇರ್ ಸಂಸ್ಥೆಯು ವಿದ್ಯಾರ್ಥಿಗಳಿಗೆ ತರಬೇತಿ ನಂತರ ಪ್ರಾಜೆಕ್ಟ್ ಸ್ಪರ್ಧೆಯನ್ನು ಏರ್ಪಡಿಸಿತ್ತು. ಉತ್ತಮ ಪ್ರಾಜೆಕ್ಟ್ ಸಿದ್ಧಪಡಿಸಿದ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಪುರಸ್ಕರಿಸಲಾಯಿತು.

ಪ್ರಾಜೆಕ್ಟ್ ವಿವರ : ಕಂಪ್ಯೂಟರ್ ಸೈನ್ಸ್ ವಿಭಾಗದ ಅನನ್ಯ, ವಿಜಯ್, ಸೃಜನ್, ಸೃಷ್ಟಿ, ಅಬ್ದುಲ್, ಮನೋಜ್ ಸಿದ್ಧಪಡಿಸಿದ ಇಡಿಯು ಆಕ್ಸಸ್‌ಗೆ ಪ್ರಥಮ: ಸ್ಮಾರ್ಟ್ ಬ್ರೈಲ್ ಲರ್ನಿಂಗ್ ಸಿಸ್ಟಮ್ ವಿಷಯದ ಮೇಲೆ ಕಂಪ್ಯೂಟರ್ ಸೈನ್ಸ್ (ಎಐಎಂಎಲ್) ನ ಹರ್ಷಿತ, ಕಾರ್ತಿಕ್, ಶ್ರೇಯಸ್, ಚೈತ್ರ, ಗುಣವತಿ, ಬಸವರಾಜ್ ಪ್ರಥಮ: ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ತೋಷನ, ವರ್ಷ, ಅರಾಫತ್, ಆದಿತ್ಯ, ಸಚಿನ್ ಗೌಡ ನಿಲೋಫರ್ ತಯಾರಿಸಿದ ಡಿಜಿಟಲ್ ವಾಕರ್‌ಗೆ ಪ್ರಥಮ ಸ್ಥಾನ: ಸ್ಮಾರ್ಟ್ ಕನ್ವರ್ ಬೆಲ್ಟ್ ಮಷೀನ್ ಮೇಲೆ ಸುಮಯ್ಯ, ಅಮೂಲ್ಯ, ಅಮೃತ, ಮೊಹಮ್ಮದ್, ಪ್ರಜ್ವಲ್, ಆದರ್ಶ ಸಿದ್ಧಪಡಿಸಿದ ಪ್ರಾಜೆಕ್ಟಿಗೆ ಪ್ರಥಮ ಸ್ಥಾನ ದೊರಕಿದೆ.



ಕಿರುಸುದ್ದಿ

ಓದುಗರಲ್ಲಿ ಪುಸ್ತಕ ಮರಳಿಸುವ ಸೌಜನ್ಯತೆಯ ಸಂಸ್ಕಾರ ಬೆಳೆಯಲಿ



ಹಾವೇರಿ: ಓದಲು ಪಡೆದುಕೊಂಡು ಹೋದ ಪುಸ್ತಕಗಳನ್ನು ಮರಳಿ ಕೊಡುವ ಸೌಜನ್ಯತೆಯ ಸಂಸ್ಕಾರವನ್ನು ಓದುಗರಲ್ಲಿ ಬೆಳೆಸುವ ಅಗತ್ಯವಿದೆ. ಆಗ ಮಾತ್ರ ನಿಜವಾದ ಪುಸ್ತಕ ಪ್ರೀತಿ ಬೆಳೆಯಲು ಸಾಧ್ಯ. ಒಂದು ಕಾಲದಲ್ಲಿ ಬಸ್ಸಿನಲ್ಲಿ ದಿನಪತ್ರಿಕೆಗಳು ಹರಿದಾಡುತ್ತಿದ್ದವು. ಆ ದಿನಗಳು ಮತ್ತೆ ಬರಬೇಕು ಎಂದು ತಾಲ್ಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವೈ.ಬಿ. ಆಲದಕಟ್ಟಿ ನುಡಿದರು. ಇಲ್ಲಿಯ ನಂದಿ ಲೇಔಟ್‌ನಲ್ಲಿರುವ ಹಂಚಿನಮನಿ ಆರ್ಟ ಗ್ಯಾಲರಿಯಲ್ಲಿ ನಡೆದ ಮನೆಗೊಂದು ಗ್ರಂಥಾಲಯ ಅನುಷ್ಠಾನದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮೇಲಿನಂತೆ ಮಾತನಾಡಿದರು. ಅತಿಥಿಯಾಗಿದ್ದ ಕಲಾವಿದ ಕರಿಯಪ್ಪ ಹಂಚಿನಮನಿ ಅವರು ಮನೆಗೊಂದು ಗ್ರಂಥಾಲಯ ಪರಿಕಲ್ಪನೆ ಕ್ರಾಂತಿಕಾರಕ ಯೋಜನೆ. ಮನೆ ಮನೆಯಲ್ಲಿ ಪುಸ್ತಕ ಪ್ರೀತಿಯ ಜಾಗೃತಿ ಮೂಡಿಸುವುದು ಸವಾಲಿನ ಕೆಲಸ. ಇದನ್ನು ಡಾ.ಮಾನಸ ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ ಎಂದರು. ರೇಖಾ ಹಂಚಿನಮನಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಸೋಮನಾಥ ಡಿ, ನಾಗರಾಜ ನಡುವಿನಮಠ ಪಾಲ್ಗೊಂಡಿದ್ದರು.

ಬ್ಲಾಕ್ ಕಾಂಗ್ರೆಸ್ ಸಮಿತಿಗೆ ಬಸನಗೌಡ ಪಾಟೀಲ ನೇಮಕ

ಹಾನಗಲ್ಲ: ತಾಲೂಕಿನ ಮಾಸನಕಟ್ಟಿ ಗ್ರಾಮದ ಯುವ ಮುಖಂಡ ಬಸನಗೌಡ ಶೇಖರಗೌಡ ಪಾಟೀಲ ಅವರನ್ನು



ಹಾನಗಲ್ ಬ್ಲಾಕ್ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರನ್ನಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ.ಶಿವಕುಮಾರ ನೇಮಕ ಮಾಡಿದ್ದಾರೆ. ಜಿಲ್ಲಾ ಕಾಂಗ್ರೆಸ್ ಮಾರ್ಗದರ್ಶನ, ಸ್ಥಳೀಯ ನಾಯಕರ ಸಹಯೋಗದಲ್ಲಿ ಪಕ್ಷದ ಸಂಘಟನೆ ಮತ್ತು ಬಲವರ್ಧನೆಗೆ ಕಾರ್ಯೋನ್ಮುಖರಾಗುವಂತೆ ಸೂಚಿಸಿದ್ದಾರೆ. ಬಸನಗೌಡ ಪಾಟೀಲ ಅವರನ್ನು ಶಾಸಕ ಶ್ರೀನಿವಾಸ ಮಾನೆ ಅಭಿನಂದಿಸಿದ್ದಾರೆ.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ: ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟ್ ತರಬೇತಿ ಸಂಸ್ಥೆಯಲ್ಲಿ ಗ್ರಾಮೀಣ ಭಾಗದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಜೂನ್ ಮಾಹೆಯಲ್ಲಿ ಹೈನುಗಾರಿಕೆ ಮತ್ತು ಎರೆಹುಳ ಗೊಬ್ಬರ ತಯಾರಿಕೆ ಉಚಿತ ತರಬೇತಿ ಆಯೋಜಿಸಿದೆ. ತರಬೇತಿಯು ಊಟ ಮತ್ತು ವಸತಿಯೊಂದಿಗೆ ಉಚಿತವಾಗಿರುತ್ತದೆ. ಅಭ್ಯರ್ಥಿಗಳು 18 ರಿಂದ 45 ವರ್ಷದೊಳಗಿರಬೇಕು. ಗ್ರಾಮೀಣ ಭಾಗದ ನಿರುದ್ಯೋಗಿಗಳಿಗೆ ಆದ್ಯತೆ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಸಲ್ಲಿಸಬೇಕು ಅಥವಾ www.rsetihaliyal.org ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅಪರಿಚಿತ ಶವ ಪತ್ತೆ

ಹಾವೇರಿ: ಬ್ಯಾಡಗಿ– ದೇವರಗುಡ್ಡ ರೈಲ್ವೆ ನಿಲ್ದಾಣಗಳ ಮಧ್ಯೆ ಛತ್ರಕ್ಕೆ ಹೋಗುವ ರೈಲ್ವೆ ಬ್ರಿಡ್ಜ ಹತ್ತಿರ ರೈಲುಗಾಡಿಗೆ ಸಿಲುಕಿ 55ರಿಂದ 60 ವರ್ಷದ ಪುರುಷನ ಶವ ಪತ್ತೆಯಾಗಿದ್ದು, ಮೃತರ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಮೃತ ವ್ಯಕ್ತಿ 5.6 ಅಡಿ ಎತ್ತರ, ಗೋದಿ ಮೈಬಣ್ಣ ಹೊಂದಿದ್ದು, ತಿಳಿ ನೀಲಿ ಬೂದು, ಬಿಳಿ ಬಣ್ಣದ ಚೌಕಳಿ ರೆಡಿಮೇಡ ಅಂಗಿ, ಚಾಕಲೇಟ ಬಣ್ಣದ ತುಂಬುತೋಳಿನ ಶಾಂಡು ಬನಿಯನ್, ಕಪ್ಪು ಬಣ್ಣದ ಪ್ಯಾಂಟ್, ನೀಲಿ ಬಣ್ಣದ ಅಂಡವೇರ, ಕಂದು ಬಣ್ಣದ ಕೊರಳ ಟಾವೆಲ್ ಧರಿಸಿದ್ದಾನೆ. ಮೃತ ವ್ಯಕ್ತಿಯ ವಾರಸುದಾರರು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ದೂರವಾಣಿಗೆ ಸಂಪರ್ಕಿಸಬಹುದೆಂದು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಣೇಬೆನ್ನೂರ: ತಾಲೂಕಿನ ಸುಣಕಲ್ಲಬಿದರಿ ಗ್ರಾಮದ ಅರಳಿ ಶಿದ್ಲಿಂಗಪ್ಪ ಬಸಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜಾನಪದ ಜಾತ್ರೆಯನ್ನು ಪ್ರಾಚಾರ್ಯ ಪ್ರೊ. ಎಸ್.ಪಿ ಗೌಡರ ಉದ್ಘಾಟಿಸಿದರು.

ವಿದ್ಯಾರ್ಥಿಗಳಿಗೆ ಜನಪದ ಕಲೆ ಪರಿಚಯ ಅವಶ್ಯ

ರಾಣೇಬೆನ್ನೂರ: ಜಾಗತೀಕರಣದ ಪ್ರಭಾವದಿಂದ ನಮ್ಮ ಜನಪದ ಕಲೆ ಹಾಗೂ ಸಂಸ್ಕೃತಿ ಬಹುತ್ವಗಳು ನಾಶವಾಗುತ್ತಿವೆ ಎಂದು ಪ್ರಾಚಾರ್ಯ ಪ್ರೊ.ಎಸ್.ಪಿ ಗೌಡರ ಹೇಳಿದರು. ತಾಲೂಕಿನ ಸುಣಕಲ್ಲಬಿದರಿ ಗ್ರಾಮದ ಅರಳಿ ಶಿದ್ಲಿಂಗಪ್ಪ ಬಸಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜಾನಪದ ಜಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಜನಪದ ಕ್ರೀಡೆ, ಜನಪದ ಕಲೆ, ಜನಪದ ಆಚರಣೆಗಳನ್ನು ಪರಿಚಯಿಸುವುದರೊಂದಿಗೆ ಅರ್ಥ ಮಾಡಿಸಿ ಕೊಡುವುದು ತುಂಬಾ ಅಗತ್ಯವಾಗಿದೆ ಎಂದರು.

ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಜನಪದದ ಎಲ್ಲ ತತ್ವವು ನಮ್ಮಿಂದ ಮರೆಯಾಗುತ್ತಿದ್ದು, ಜಾನಪದ ಜಾತ್ರೆಯ ಮೂಲಕ ಎಲ್ಲವನ್ನು ಪುನಃ ಕಟ್ಟಿಕೊಡುವ ಪ್ರಯತ್ನ ಮಾಡುತ್ತಿದ್ದೇವೆ ಎಂದರು.

ಜನಪದ ಕಲಾವಿದ ಮಂಜುನಾಥ ಸುಂಕಾಪುರ, ಕಾರ್ಯಕ್ರಮ ಸಂಚಾಲಕ ಡಾ.ರವಿ. ಎಂ ಮಾತನಾಡಿದರು. ಅಭಿವೃದ್ಧಿ ಸಮಿತಿಯ ಸದಸ್ಯರಾದ ಮಹದೇವಪ್ಪ ನಾರಜ್ಜಿ, ಚನ್ನಬಸಪ್ಪ ನಾಡಿಗೇರ. ಹನುಮಂತಪ್ಪ ಕಾರಗಿ, ಪ್ರೊ ಬಸವರಾಜ ಹುಗ್ಗಿ, ಶೋಭಾ ನಂದಿಹಳ್ಳಿ, ಪ್ರಾಧ್ಯಾಪಕರಾದ ರೇವಣಸಿದ್ದಪ್ಪ ಕೆ. ಬಿ., ಮಂಜುನಾಥ ಬಿ.ಕೆ., ಅಂಬಿಕಾ ಹೊಸಮನಿ, ನಾಗರಾಜ ಗೋಡಿಹಾಳ, ರವಿಕುಮಾರ ಎಸ್.ಯು, ಸತೀಶ್ ಎಂ., ವಿರೇಶ ಷಡಕ್ಷರಿಮಠ., ಗಂಗವ್ವ ದಾನಪ್ಪನವರ,ಮೇಘನಾ,ಮೀನಾಕ್ಷಿ ಪೂಜಾರ, ಕುಮಾರ ಕರಿಯಜ್ಜಿ ಚಂದ್ರಾನಾಯಕ, ಶಿವಶಂಕರ ಅಂಗಡಿ ಶಿವಾನಂದ. ಕೆ ಉಪಸ್ಥಿತರಿದ್ದರು.



ಶಿಗ್ಗಾವಿ: ಪಟ್ಟಣದ ಹೊಸ ಬಸ್ ನಿಲ್ದಾಣದಲ್ಲಿ ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ್ ವಿದ್ಯಾರ್ಥಿಗಳೊಂದಿಗೆ ಬಸ್‌ಗಳ ಮಾರ್ಗಗಳ ಕುರಿತು ಸಂವಾದ ನಡೆಸಿದರು.

ಗರಿಗೆದರಿದ ಮುಂಗಾರು | ಹದಗೊಳ್ಳುತ್ತಿದೆ ಭೂಮಿ

3.28ಲಕ್ಷ ಹೆಕ್ಟೇರ್ ಬಿತ್ತನೆ ಗುರಿ

ಕಿರಣ ಮಾಸಣಗಿ

ಹಾವೇರಿ: ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ಮಳೆಯಾಗುತ್ತಿದ್ದರಿಂದ ಕೃಷಿ ಚಟುವಟಿಕೆಗಳು ಗರಿಗೆದರಿದ್ದು, ಬಿತ್ತನೆ ಬೀಜ ಮತ್ತು ರಸಗೊಬ್ಬರಕ್ಕೆ ಹೆಚ್ಚಿನ ಬೇಡಿಕೆ ಬಂದಿದೆ. ಈ ಹಿನ್ನೆಲೆ ಮುಂಗಾರು ಹಂಗಾಮಿಗೆ ಕೃಷಿ ಇಲಾಖೆ ಅಗತ್ಯ ಬಿತ್ತನೆ ಬೀಜ ಮತ್ತು ರಸಗೊಬ್ಬರ ಪೂರೈಕೆಗೆ ವ್ಯವಸ್ಥೆ ಮಾಡಿಕೊಳ್ಳುತ್ತಿದೆ.

ಪ್ರಸಕ್ತ ವರ್ಷ ಮುಂಗಾರು ಪೂರ್ವದಲ್ಲಿ ಹೇಳಿಕೊಳ್ಳುವಂತಹ ಮಳೆಯಾಗದಿದ್ದರೂ ಈ ವರ್ಷವಾದರೂ ಉತ್ತಮ ಮಳೆ, ಬೆಳೆಯಾಗಲಿ ಎಂದು ರೈತರು ದೇವರಲ್ಲಿ ಪ್ರಾರ್ಥಿಸಿ ಭೂಮಿ ಹದಗೊಳಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಜಿಲ್ಲೆಯಲ್ಲಿ ಸದ್ಯ ಕೃಷಿ ಚಟುವಟಿಕೆಗಳು ಗರಿಗೆದರಿದ್ದು, ರೈತರು ಜಮೀನುಗಳತ್ತ ಮುಖ ಮಾಡುತ್ತಿದ್ದಾರೆ.

3.28 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ: ಮುಂಗಾರು ಹಂಗಾಮಿನಲ್ಲಿ ಒಟ್ಟಾರೆ 3.28ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿದೆ. ಇತ್ತೀಚೆಗೆ ಮೆಕ್ಕೆಜೋಳದ ಕಣಜ ಎಂದು ಗುರುತಿಸಿಕೊಳ್ಳುತ್ತಿರುವ ಹಾವೇರಿ ಜಿಲ್ಲೆಯಲ್ಲಿ ಈ ಬಾರಿಯೂ ಮೆಕ್ಕೆಜೋಳವನ್ನು ಹೆಚ್ಚು ಪ್ರದೇಶದಲ್ಲಿ ಬಿತ್ತನೆಯ ಗುರಿ ಹೊಂದಲಾಗಿದೆ. 31,710 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೇಜೋಳ, 25,5113 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬಿತ್ತನೆ ಗುರಿ ಹೊಂದಲಾಗಿದೆ. 12,000 ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ, 8000 ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ, 12,500 ಹೆಕ್ಟೇರ್ ಪ್ರದೇಶದಲ್ಲಿ ಸೋಯಾಬಿನ್, 8076 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು, 400 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ, 500 ಹೆಕ್ಟೇರ್ ಪ್ರದೇಶದಲ್ಲಿ ಹೆಸರು ಬಿತ್ತುವ ಗುರಿ ಇದ್ದು, 2,87,208 ಹೆಕ್ಟೇರ್ ಏಕದಳ, 1137 ಹೆ. ದ್ವಿದಳ, 20,535 ಹೆ. ಎಣ್ಣೆಕಾಳು ಹಾಗೂ 20,076 ಹೆ. ವಾಣಿಜ್ಯ ಬೆಳೆಗಳ ಬಿತ್ತನೆಯ ಗುರಿ ಹೊಂದಲಾಗಿದೆ.

ದಿಗಂತ ವಿಶೇಷ



49 ಸಾವಿರ ಮೆ.ಟನ್ ಗೊಬ್ಬರ ದಾಸ್ತಾನು

ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾವಿನಲ್ಲಿ 3.28 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಹಾಕಿಕೊಳ್ಳಲಾಗಿದೆ. ಬರುವ ಮುಂಗಾರು ಹಂಗಾಮಿಗೆ ಜಿಲ್ಲೆಗೆ ಯೂರಿಯಾ 65ಸಾವಿರ ಟನ್, ಡಿಎಪಿ 23ಸಾವಿರ ಟನ್, ಕಾಂಪ್ಲೆಕ್ಸ್ 48ಸಾವಿರ ಟನ್ ಸೇರಿ 1.41 ಲಕ್ಷ ಟನ್ ಗೊಬ್ಬರ ಅವಶ್ಯವಿದ್ದು, ಮಾರ್ಚ್ ಅಂತ್ಯಕ್ಕೆ 17ಸಾವಿರ ಟನ್ ಯೂರಿಯಾ, 10ಸಾವಿರ ಟನ್ ಡಿಎಪಿ ಸೇರಿ 54ಸಾವಿರ ಟನ್ ಗೊಬ್ಬರ ದಾಸ್ತಾನಿತ್ತು. ಬಳಿಕ 8187 ಟನ್ ಯೂರಿಯಾ, 3095 ಟನ್ ಡಿಎಪಿ, 9535 ಟನ್ ಕಾಂಪ್ಲೇಕ್ಸ್ ಗೊಬ್ಬರ ಸರಬರಾಜು ಆಗಿದೆ. ಈಗಾಗಲೇ ರೈತರು 10160 ಟನ್ ಯೂರಿಯಾ, 5543 ಟನ್ ಡಿಎಪಿ, 9741 ಟನ್ ಕಾಂಪ್ಲೆಕ್ಸ್ ಗೊಬ್ಬರ ಖರೀದಿ ಮಾಡಿದ್ದು, ಜಿಲ್ಲೆಯಲ್ಲಿ 15874 ಟನ್ ಯೂರಿಯಾ, 7755 ಟನ್ ಡಿಎಪಿ, 23 ಸಾವಿರ ಟನ್ ಕಾಂಪ್ಲೆಕ್ಸ್ ಸೇರಿ ಇನ್ನೂ 49670 ಮೆ.ಟನ್ ಗೊಬ್ಬರ ದಾಸ್ತಾನಿದೆ.

“ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ 3.28ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿದ್ದು, ಪ್ರಮುಖವಾಗಿ ಗೋವಿನಜೋಳ, ಸೋಯಾಬಿನ್, ಶೇಂಗಾ ಮತ್ತು ಇತರೆ ಬೆಳೆಗಳ ಬೀಜ ವಿತರಣೆಗಾಗಿ ವ್ಯವಸ್ಥೆ ಕಲ್ಪಿಸಲಾಗಿದೆ. ಬಿತ್ತನೆ ಬೀಜ, ಗೊಬ್ಬರಕ್ಕೆ ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು, ಅವಧಿ ಮುಗಿದ ಕೃಷಿ ಪರಿಕರಗಳನ್ನು ಮಾರಾಟ ಹಾಗೂ ಅನಧಿಕೃತವಾಗಿ ಬೀಜ ಮತ್ತು ರಸಗೊಬ್ಬರಗಳನ್ನು ಪರಿಕರಗಳನ್ನು ದಾಸ್ತಾನು ಮಾಡುವುದು ಕಂಡುಬಂದಲ್ಲಿ ಅಂತಹ ಮಾರಾಟಗಾರರ ಪರವಾನಗಿ ರದ್ದುಗೊಳಿಸಲಾಗುವುದು.

■ ಡಾ.ಕೆ. ಮಲ್ಲಿಕಾರ್ಜುನ, ಜಂಟಿ ನಿರ್ದೇಶಕರು, ಕೃಷಿ ಇಲಾಖೆ

ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಮಾರಾಟ ಮಾಡಬೇಕು. ರಸಗೊಬ್ಬರದ ಜೊತೆಗೆ ಲಘು ಪೋಷಕಾಂಶಕಗಳನ್ನು ಲಿಂಕ್ ಮಾಡದೆ ಮಾರಾಟ ಮಾಡಲು ಸೂಚಿಸಲಾಗಿದೆ. ಅವಧಿ ಮುಗಿದ ಕೃಷಿ ಪರಿಕರಗಳನ್ನು ಮಾರಾಟ ಮಾಡುವುದು ಹಾಗೂ ಅನಧಿಕೃತವಾಗಿ ಬೀಜ ಮತ್ತು ರಸಗೊಬ್ಬರಗಳನ್ನು ಪರಿಕರಗಳನ್ನು ದಾಸ್ತಾನು ಮಾಡುವುದುಕಂಡುಬಂದಲ್ಲಿಅಂತಹಮಾರಾಟಗಾರರ ಪರವಾನಗಿಯನ್ನು ರದ್ದುಗೊಳಿಸಲಾಗುವುದು ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

8 ಹೊಸ ಬಸ್‌ಗಳಿಗೆ ಶಾಸಕ ಚಾಲನೆ

ಶಿಗ್ಗಾವಿ: ಶಕ್ತಿ ಯೋಜನೆಯ ಪರಿಣಾಮವಾಗಿ ಪ್ರಯಾಣಿಕರ ಸಂಖ್ಯೆಯಲ್ಲಿ ಭಾರಿ ಪ್ರಮಾಣದ ಏರಿಕೆಯಾಗುತ್ತಿದ್ದು ಜನರ ಬೇಡಿಕೆಯ ಅನುಸಾರವಾಗಿ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ಸಾರಿಗೆ ವ್ಯವಸ್ಥೆಯನ್ನ ಜನರಿಗೆ ಕಲ್ಪಿಸಲಾಗುತ್ತಿದೆ ಎಂದು ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ್ ಹೇಳಿದರು.

ಪಟ್ಟಣದ ಹೊಸ ಬಸ್ ನಿಲ್ದಾಣದಲ್ಲಿ ಗ್ರಾಮೀಣ ಭಾಗದ ಜನರ ಬೇಡಿಕೆಯ ಅನುಸಾರ ನೂತನ 8 ಹೊಸ ಬಸ್‌ಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈಗ ಸಾಮಾನ್ಯವಾಗಿ 8 ಬಸ್‌ಗಳಿಗೆ ಚಾಲನೆ ನೀಡಲಾಗಿದೆ, ಮುಂಬರುವ 15 ದಿನಗಳಲ್ಲಿ ಇನ್ನೂ 15 ಹೊಸ ಬಸ್‌ಗಳನ್ನು ತಾಲೂಕಿಗೆ ಬಿಡಲಾಗುವುದು. ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿಯವರ, ಎನ್‌ಡಬ್ಲು ಕೆಆರ್‌ಟಿಸಿ ಅಧ್ಯಕ್ಷರಾದ ಭರಮಗೌಡ (ರಾಜು) ಕಾಗೆ ಹಾಗೂ ಉಪಾಧ್ಯಕ್ಷರಾದ ಸುನೀಲ ಹನಮ್ಮಣ್ಣವರ ಅವರ ವಿಶೇಷ ಕಾಳಜಿಯಿಂದ ನಮಗೆ ಹೆಚ್ಚಿನ ಬಸ್‌ಗಳ ವ್ಯವಸ್ಥೆ ದೊರಕಿದೆ ಎಂದರು.

ಶಿಗ್ಗಾವಿಯಲ್ಲಿ ನೂತನ ಡಿಪೋ ಇದ್ದರೂ ಬಸ್‌ಗಳ ವ್ಯವಸ್ಥೆ ಇಲ್ಲ, ಜನರಿಗೆ ಉಪಯೋಗವಾಗುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದ್ದವು. ಅದರ ಭಾಗವಾಗಿ ಬರುವ ದಿನಗಳಲ್ಲಿ 15 ಬಸ್‌ಗಳನ್ನು ಪ್ರಥಮ ಹಂತವಾಗಿ ನೂತನ ಬಸ್‌ಗಳು ಡಿಪೋದಲ್ಲಿಯೇ ನಿಲ್ಲುತ್ತವೆ ಎಂದು ಭರವಸೆ ನೀಡಿದರು.

ತಾಲೂಕು ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಗುಡ್ಡಪ್ಪ ಜಲದಿ, ಸವಣೂರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹರಿಜನ, ಗ್ಯಾರಂಟಿ ಸಮಿತಿ ಅಧ್ಯಕ್ಷರುಗಳಾದ ಎಸ್ ಎಫ್‌ಮಣಕಟ್ಟಿ, ಸುಭಾಸ್ ಮಜ್ಜಗಿ, ವಿವಿಧ ಮುಖಂಡರಾದ ಗೌಸಖಾನ್ ಮುನಸಿ, ಭಾಬರ್ ಭೋವಾಜಿ, ಮುನ್ನಾ ಲಕ್ಷ್ಮೇಶ್ವರ, ಚಂದ್ರು ಕೊಡ್ಲಿವಾಡ, ಶಂಬುಲಿಂಗಪ್ಪ ಆಜೂರ, ಮಂಜುನಾಥ ತಿಮ್ಮಾಪೂರ, ಕು. ವಸಂತಾ ಬಾಗೂರ, ಮಲ್ಲಮ್ಮ ಸೋಮನಕಟ್ಟಿ, ಲಕ್ಷ್ಮಿ ಮಾಳಗಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಸಾರಿಗೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಇದ್ದರು.



ಗ್ರಾಮೀಣಕ್ಕೆ ಬಸ್ ನಿರಂತರವಾಗಿರಲಿ

ಸಾರ್ವಜನಿಕರಿಗೆ ಸಾರಿಗೆ ಸೇವೆ ಕೊಡುವ ಮೂಲಕ ಶಕ್ತಿ ಯೋಜನೆಗೆ ಬಲ ತುಂಬುವ ಉದ್ದೇಶ ಹೊಂದಲಾಗಿದೆ. ಆದ್ದರಿಂದ ಎರಡೇ ಜನರಿದ್ದರೂ ಪರವಾಗಿಲ್ಲ, ಗ್ರಾಮೀಣ ಭಾಗದ ಬಸ್ ವ್ಯವಸ್ಥೆಯು ನಿರಂತರವಾಗಿರಬೇಕು ಜೊತೆಗೆ ಗ್ರಾಮಗಳಿಗೆ ಬಸ್‌ಗಳನ್ನ ಬಿಡಬೇಕು ಎಂದು ಸಾರಿಗೆ ಅಧಿಕಾರಿಗಳಿಗೆ ಸೂಚಿಸಿದರು.

ಹಾನಿಯಾದ ಭತ್ತದ ಬೆಳೆಗಾರರಿಗೆ ಶೀಘ್ರ ಪರಿಹಾರ: ಜಿಲ್ಲಾಧಿಕಾರಿ

ರಾಣೇಬೆನ್ನೂರ: ಮಳೆಯಿಂದ ಹಾನಿಯಾದ ಭತ್ತ ಬೆಳೆಗಾರರಿಗೆ ಮುಂದಿನ 15 ದಿನದಲ್ಲಿ ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಭರವಸೆ ನೀಡಿದರು.

ತಾಲೂಕಿನ ಹಿರೇಬಿದರಿ ಗ್ರಾಮದಲ್ಲಿ ಆಲಿಕಲ್ಲು ಮಳೆಯಿಂದ ಹಾನಿಯಾದ ಭತ್ತ, ಅಡಿಕೆ ಬೆಳೆಗಳ ಜಮೀನುಗಳಿಗೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿದ ಅವರು ರೈತರ ಅಹವಾಲು ಆಲಿಸಿದರು.

ಮಳೆಯಿಂದ ಹಾನಿಯಾಗಿರುವ ಬೆಳೆಗಳ ಮಾಹಿತಿ ಕುರಿತು ಈಗಾಗಲೇ ನಮ್ಮ ಸಿಬ್ಬಂದಿಯಿಂದ ಸರ್ವೇ ಮಾಡಿಸಲಾಗಿದ್ದು, ಕೂಡಲೇ ಸರ್ಕಾರಕ್ಕೆ ವರದಿ ಸಲ್ಲಿಸಿ 15 ದಿನದಲ್ಲಿ ಪರಿಹಾರ ಒದಗಿಸುವ ವ್ಯವಸ್ಥೆ ಮಾಡಲಾಗುವುದು ಎಂದರು.

ನಂತರ ಮಾಧ್ಯಮದವರೊಂದಿಗೆ ಮಾತನಾಡಿ, ರಾಣೆಬೆನ್ನೂರಿನಲ್ಲಿ 54 ಮನೆಗಳು ಸೇರಿ ಜಿಲ್ಲೆಯಲ್ಲಿ ಒಟ್ಟು 127 ಮನೆಗಳಿಗೆ ಹಾನಿಯಾಗಿದೆ. ಮಳೆಯಿಂದ ಸಿಡಿಲು ಬಡಿದು ಒಬ್ಬರು ಮೃತಪಟ್ಟಿದ್ದರೆ, ಕೆರೆಯಲ್ಲಿ ಮುಳಗಿ ಇಬ್ಬರು ಬಾಲಕರು ಮೃತಪಟ್ಟಿದ್ದಾರೆ. ರಾಣೆಬೆನ್ನೂರ ಮತ್ತು ಹಿರೇಕೆರೂರಿನಲ್ಲಿ ಸಿಡಿಲು ಬಡಿದು ಒಂದು ಎತ್ತು, ಒಂದು ಆಕಳು, 6 ಕುರಿಗಳು, ಒಂದು ಮೇಕೆ ಸಾವನ್ನಪ್ಪಿವೆ. 1,182 ಹೆಕ್ಟೇರ್ ಕೃಷಿ ಬೆಳೆ ಹಾಗೂ 54.79 ಹೆಕ್ಟೇರ್ ತೋಟಗಾರಿಕೆ ಬೆಳೆ ಸೇರಿ ಒಟ್ಟು 1,235 ಹೆಕ್ಟೇರ್ ಪ್ರದೇಶದಲ್ಲಿ ಹಾನಿಯಾಗಿದೆ. ಈ ಕುರಿತು ಪ್ರಾಥಮಿಕ ವರದಿ ಆಧರಿಸಿ ಪರಿಹಾರ ನೀಡಲು ಸರ್ಕಾರಕ್ಕೆ ವರದಿ ನೀಡಲಾಗಿದೆ ಎಂದು ತಿಳಿಸಿದರು.

ಶಾಸಕ ಪ್ರಕಾಶ ಕೋಳಿವಾಡ, ತಹಶೀಲ್ದಾರ್ ಆರ್.ಎಚ್. ಭಾಗವಾನ್, ತಾಪಂ ಇಒ ಡಾ. ವೆಂಕಟೇಶ ಸಣ್ಣಬಿದರಿ, ಕಂದಾಯ ನಿರೀಕ್ಷಕ ರುದ್ರೇಶ ಎ.ಸಿ., ಕೃಷಿ ಅಧಿಕಾರಿ ವೀರೇಶ, ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕ ಮಂಜ್ಯಾ ನಾಯ್ಕ ಮತ್ತಿತರರು ಇದ್ದರು.



ರೇಷ್ಮೆ ಬೆಳೆಗೆ ಪ್ರೋತ್ಸಾಹ ಅಗತ್ಯ: ಶಾಸಕ ಶಿವಣ್ಣನವರ್

ಬ್ಯಾಡಗಿ: ರೇಷ್ಮೆ ಬೆಳೆ ಲಾಭದಾಯಕವಾಗಿದ್ದು, ಈ ಬಗ್ಗೆ ರೈತರಲ್ಲಿ ಅರಿವು ಮೂಡಿಸಿ ರೇಷ್ಮೆ ಬೆಳೆ ಪ್ರದೇಶ ಇನ್ನು ಹೆಚ್ಚು ವಿಸ್ತರಣೆಗೆ ಶ್ರಮಿಸಬೇಕು ಎಂದು ಶಾಸಕ ಬಸವರಾಜ್ ಶಿವಣ್ಣನವರ್ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದಲ್ಲಿ 2025–26 ನೇ ಸಾಲಿನ ಕೇಂದ್ರ ಪುರಸ್ಕೃತ ಸಿಲ್ಕ್ ಸಮಗ್ರ 2 ಯೋಜನೆಯಡಿ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗಳನ್ನು ವಿತರಿಸಿ ಅವರು ಮಾತನಾಡಿದರು.

ವರ್ಷದಲ್ಲಿ ನಾಲ್ಕರಿಂದ ಐದು ಬಾರಿ ರೇಷ್ಮೆ ಗೂಡು ಉತ್ಪಾದಿಸಬಹುದು. ಈಚಿನ ವರ್ಷಗಳಲ್ಲಿ ರೇಷ್ಮೆಗೂಡಿಗೆ ಉತ್ತಮ ಬೆಲೆ ಸಿಗುತ್ತಿದ್ದು, ನಷ್ಟದ ಸಾಧ್ಯತೆ ಕಡಿಮೆ. ರೇಷ್ಮೆ ಬೆಳೆ ಪ್ರೋತ್ಸಾಹಿಸಲು ಸರ್ಕಾರ ಸಾಕಷ್ಟು ಸೌಲಭ್ಯ ನೀಡುತ್ತಿದ್ದು, ರೈತರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ರೇಷ್ಮೆ ಸಹಾಯಕ ನಿರ್ದೇಶಕರು ಬಿ.ಆರ್.ಅಂಗಡಿ ಮಾತನಾಡಿ, ಈಗಾಗಲೇ ಯೋಜನೆ ಅಡಿ ಎರಡು ನೂರು ಫಲಾನುಭವಿಗಳಿಗೆ ಆಯ್ಕೆಯಾಗಿದ್ದು ಇಂದು ಪ್ರಾಯೋಗಿಕವಾಗಿ ಆರು ಸಾಮಾನ್ಯವಾಗಿ ನಾಲ್ಕು ಎಸ್‌ಸಿ ಎಸ್‌ಟಿ ವರ್ಗದವರಿಗೆ ಸಲಕರಣೆಗಳನ್ನು ವಿತರಣೆ ಮಾಡಲಾಗಿದೆ ಎಂದರು.

ರೇಷ್ಮೆ ಇಲಾಖೆಯ ತಾಲೂಕಿನ ನಿರ್ದೇಶಕಿ ಭಾರತಿ ನಾಯಕ್, ಮುಖಂಡ ಪ್ರಕಾಶ್ ಬಣಕಾರ್, ದುರ್ಗೇಶ್ ಗೋಣೆಮ್ಮನವರ್, ಜೈ ಭೀಮ್ ರಾರಾವಿ, ನಜೀರ್ ಅಹ್ಮದ್ ಶೇಕ್, ಫಲಾನುಭವಿಗಳಾದ ಶಿವರಾಜ್ ಹಿರೇಮಠ್, ಹನುಮಂತಪ್ಪ ಹಾವಿನ್, ಫಕ್ಕೀರೇಶ ಮರ ಬಸಣ್ಣನವರ್, ಅನಸೂಯ ಮಡಿವಾಳ, ಕಲ್ಲಪ್ಪ ಬೆಳಕಿನ ಕೊಂಡ, ಸಂತೋಷ್ ಲಮಾಣಿ ಹಾಗೂ ಅನೇಕ ರೇಷ್ಮೆ ಬೆಳೆಗಾರರು ಉಪಸ್ಥಿತರಿದ್ದರು.



ಹಂತ ಹಂತವಾಗಿ ಎಫ್‌ಐಡಿ ಆದೇಶ ಜಾರಿಗೊಳಿಸಿ: ಶಿಡ್ಲಾಪುರ

ಹಾವೇರಿ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರಿಗೆ ರಸಗೊಬ್ಬರ, ಬಿತ್ತನೆ ಬೀಜ ಕೊರತೆಯಾಗದಂತೆ ಎಚ್ಚರಿಕೆವಹಿಸಬೇಕು. ಎಫ್‌ಐಡಿ ಮುಖಾಂತರ ರೈತರು ಗೊಬ್ಬರ ಖರೀದಿ ಮಾಡಿ ಬೆಳೆ ಬೆಳೆಯುವುದು ಕಷ್ಟ ಆದ್ದರಿಂದ ಮುಂದಿನ ವರ್ಷದಿಂದ ಹಂತ ಹಂತವಾಗಿ ಈ ಆದೇಶವನ್ನು ಜಾರಿಗೆ ತರಬೇಕೆಂದು ರೈತ ಸಂಘ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಭುವನೇಶ್ವರ ಶಿಡ್ಲಾಪುರ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಧ್ಯ ಪ್ರಾಚ್ಯದ ಯುದ್ಧದ ಬಿಕ್ಕಟ್ಟಿನಿಂದ ಯೂರಿಯಾ ಮತ್ತು ಡಿಎಪಿ ಸೇರಿದಂತೆ ರಸಗೊಬ್ಬರ ಬೆಲೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಗೊಬ್ಬರದ ಕಚ್ಚಾ ವಸ್ತುಗಳ ಕೊರತೆಯಿಂದ ಉತ್ಪಾದನೆ ಕಡಿತವಾಗಿದೆ. ಜಿಲ್ಲಾಧಿಕಾರಿಗಳು ಹಾಗೂ ಕೃಷಿ ಜಂಟಿ ನಿರ್ದೇಶಕರು ಜಿಲ್ಲೆಗೆ ಸಮರ್ಪಕವಾಗಿ ಬೇಕಾಗುವಷ್ಟು ಗೊಬ್ಬರ ಕೊಡಿಸಲು ಪ್ರಯತ್ನ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಈ ವರ್ಷ ಮುಂಗಾರು ಚುರುಕುಗೊಂಡಿದ್ದು ರೈತರಿಗೆ ಬಿತ್ತನೆಗೆ ಗೊಬ್ಬರ ಸಿಗದಿದ್ದರೆ ಹೋರಾಟ ಅನಿವಾರ್ಯ, 2008ರ ಗೋಲಿ ಬಾರ್ ಇನ್ನೂ ಮಾಸಿಲ್ಲ, ಸರ್ಕಾರಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಬಗರ್ ಹುಕುಂ ರೈತರಿಗೆ ರಸಗೊಬ್ಬರ ಸಿಗುವಂತಾಗಲಿ. ಇಲ್ಲದೇ ಹೋದಲ್ಲಿ ಆಹಾರ ಉತ್ಪಾದನೆ ಕುಸಿತವಾಗುವ ಸಾಧ್ಯತೆ ಇದೆ.

ಪ್ರಧಾನಿ ಮೋದಿ ಸಾವಯವ ಕೃಷಿಗೆ ಕರೆ ನೀಡಿದ್ದು ಅದು ತಕ್ಷಣಕ್ಕೆ ಸಾಧ್ಯವಿಲ್ಲ ಮೊದಲು ಸಾವಯವ ಕೃಷಿಗೆ ಸರ್ಕಾರಗಳು ಪ್ರೋತ್ಸಾಹ ನೀಡಲಿ. ಇದಕ್ಕೆ ಬೇಕಾಗುವ ಹಸು ಖರೀದಿಗೆ ಮತ್ತು ಕೊಟ್ಟಿಗೆಗೆ ಇತರ ಸಾಮುಗ್ರಿಗೆ ಶೇ.50ರಷ್ಟು ಸಬ್ಸಿಡಿ ನೀಡಬೇಕೆಂದರು.

ರಾಜ್ಯಾದ್ಯಂತ ಪರವಾನಗಿ ಭೂಮಾಪಕರು ಮುಷ್ಕರ ಮಾಡುತ್ತಿದ್ದಾರೆ ಅದರಿಂದ ರೈತರಿಗೆ ಬಹಳಷ್ಟು ಅನಾನುಕೂಲವಾಗುತ್ತಿದೆ ಸರ್ವೆ ಹದ್ದುಬಂದೋಬಸ್ತ್ ಪೊಡಿ ಮುಕ್ತಾ ಅಭಿಯಾನ ನ್ಯಾಯಾಲಯದ ಪ್ರಕರಣಗಳಿಗೆ ತೊಂದರೆಯಾಗಿದೆ ರಾಜ್ಯ ಸರ್ಕಾರ ಕೂಡಲೇ ಗಮನಹರಿಸಿ ಮುಷ್ಕರ ನಿರತ ಭೂಮಾಪಕರ ಸಮಸ್ಯೆಗಳನ್ನು ಬಗೆಹರಿಸಿ ರೈತ ರಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾರೆ

ಉಚಿತ ಕಾನೂನು ನೆರವು ಕೇಂದ್ರ ಆರಂಭ



ಹಾವೇರಿ: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದನ್ವಯ ಹಾವೇರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಕಾರಾಗೃಹದ ಸಹಯೋಗದಲ್ಲಿ ಜಿಲ್ಲಾ ಕಾರಾಗೃಹದ ಹೊರಗಡೆ ಆವರಣದಲ್ಲಿ 'ಮುಲಾಕತ್ ಸೇ ನ್ಯಾಯತಕ್' ಎಂಬ ಘೋಷವಾಕ್ಯದಡಿ ಉಚಿತ ಕಾನೂನು ಅರಿವು ಹಾಗೂ ನೆರವು ಕೇಂದ್ರ ಆರಂಭಿಸಲಾಗಿದೆಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್ .ವಿ. ಅವರು ತಿಳಿಸಿದ್ದಾರೆ.

ಈ ಕೇಂದ್ರದಲ್ಲಿ ಬಂಧಿ ನಿವಾಸಿಗಳ ಸಂಬಂಧಿಕರು, ಬಂಧಿ ನಿವಾಸಿಗಳನ್ನು ಭೇಟಿಯಾಗಲು ಬಂದಂತಹ ಅವರ ಹಿತೈಷಿಗಳು, ಬಂಧಿಗಳು, ಆರೋಪಿಗಳು ಉಚಿತ ಕಾನೂನು ಮಾಹಿತಿ ಹಾಗೂ ನೆರವು ಪಡೆಯಬಹುದು. ಈ ಕೇಂದ್ರಕ್ಕೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪೆನಲ್ ವಕೀಲ ವಿ.ಎಂ. ನಾಡಗೌಡ್ರ, ಅರೆಕಾಲಿಕ ಸ್ವಯಂ ಸೇವಕರಾದ ಚಂದ್ರಶೇಖರ ಮಾಳಗಿ, ಗಂಗಾಧರ ನಾವೆ, ಜಿಲ್ಲಾ ಕಾರಾಗೃಹದ ವಾಡ್ ರ್ನ್ ವೃಷಭ ಖ್ಯಾತನವರ ಅವರನ್ನು ನೇಮಕ ಮಾಡಲಾಗಿದೆ. ಬೆಳಗ್ಗೆ 11 ರಿಂದ ಮಧ್ಯಾಹ್ನ 12.30ರವರೆಗೆ ಹಾಗೂ ಸಂಜೆ 4 ರಿಂದ 5.30ರವರೆಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರೀ ಮಳೆ: ಅಪಾರ ಪ್ರಮಾಣದ ಹಾನಿ

ಹಾವೇರಿ: ನಗರ ಸೇರಿದಂತೆ ಜಿಲ್ಲಾದ್ಯಂತ ಭಾನುವಾರ ಸಂಜೆ ವರುಣನ ನರ್ತನ ಮುಂದುವರೆದು ಗುಡುಗು, ಸಿಡಿಲು, ಮಿಂಚಿನಾರ್ಭಟದ ಧಾರಾಕಾರಮಳೆಗೆಜನಜೀವನಅಸ್ತವ್ಯಸ್ತಗೊಂಡಿದೆ.



ಜೋರು ಮಳೆ ಗಾಳಿಗೆ ಕನವಳ್ಳಿ ಗ್ರಾಮದಲ್ಲೂ ರೈತ ರೊಬ್ಬರ ರೇಷ್ಮೆ ಮನೆ ತಗಡಿನ ಶೀಟ್ ಹಾರಿ ಹೋದರೆ, ಕೂನಬೇವು ಗ್ರಾಮದಲ್ಲಿ 1 ಲಕ್ಷ ಮೌಲ್ಯದ ಎತ್ತಿಗೆ ಸಿಡಿಲು ಬಡಿದು ಜೀವ ಹಾನಿಯಾಗಿದೆ.

ಹಾವೇರಿ, ಬ್ಯಾಡಗಿ, ರಾಣೇಬೆನ್ನೂರ, ಹಿರೇಕೆರೂರ, ರಟ್ಟಿಹಳ್ಳಿ, ಹಾನಗಲ್, ಶಿಗ್ಗಾವಿ, ಸವಣೂರ ಸೇರಿದಂತೆ ಜಿಲ್ಲೆಯ ಹಲವೆಡೆ ರಭಸದಿಂದ ಬೀಸಿದ ಗಾಳಿಗೆ ನೂರಾರು ಗಿಡ ಮರಗಳು ಧರೆಗುರುಳಿವೆ. ವಿದ್ಯುತ್ ಕಂಬಗಳು ಸಹ ನೆಲಕ್ಕುರುಳಿದ್ದು, ರಾತ್ರಿಯಿಡೀ ಜಿಲ್ಲೆಯ ಅಲ್ಲಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಜನರು ಕತ್ತಲಲ್ಲಿ ಕಾಲಕಳೆದಿದ್ದು, ಬೆಳಗಿನ ಹತ್ತು ಗಂಟೆಯವರೆಗೂ ಕೆಲವೆಡೆ ವಿದ್ಯುತ್ ವ್ಯತ್ಯಯ ಮುಂದುವರೆದಿತ್ತು.

ಹಾವೇರಿ ತಾಲೂಕು ಕನವಳ್ಳಿಯ ಶಿವಯ್ಯ ಬಸಯ್ಯ ಮಠಪತಿ ಎಂಬುವವರಿಗೆ ಸೇರಿದ ರೇಷ್ಮೆ ಮನೆಗೆ ಹೊದಿಸಿದ್ದ ತಗಡಿನ ಶೀಟ್‌ಗಳು ಗಾಳಿಗೆ ಹಾರಿ ಹೋಗಿವೆ. 2–3 ದಿನಗಳಲ್ಲಿ ಗೂಡು ಕಟ್ಟುವ ಹಂತದಲ್ಲಿದ್ದ ರೇಷ್ಮೆಹುಳುಗಳು ನೀರುಪಾಲಾಗಿದ್ದು, ಲಕ್ಷಾಂತರ ರೂ.ಮೌಲ್ಯದ ಹಾನಿ ಸಂಭವಿಸಿದೆ. ಅದೇ ರೀತಿ ರಾಣೇಬೆನ್ನೂರ ತಾಲೂಕು ಕೂನಬೇವು ಗ್ರಾಮದಲ್ಲಿ ಕುಬೇರಪ್ಪ ಮಾಸಣಗಿ ಎಂಬುವವರಿಗೆ ಸೇರಿದ 1ಲಕ್ಷ ರೂ.ಮೌಲ್ಯದ ಬೆಲೆಬಾಳುವ ಎತ್ತು ಸಿಡಿಲಿನ ಆರ್ಭಟಕ್ಕೆ ಜೀವ ಕಳೆದುಕೊಂಡಿದೆ. ಸಾಕು ಮಗನಂತೆ ಬೆಳೆಸಿದ್ದ ಎತ್ತನ್ನು ಕಳೆದುಕೊಂಡ ರೈತರ ಆಕ್ರಂದನ ಮುಗಿಲು ಮುಟ್ಟಿದೆ. ಅಲ್ಲದೇ ಜೋರು ಗಾಳಿಗೆ ಗಿಡ ಮರಗಳು, ವಿದ್ಯುತ್ ಕಂಬಗಳು ದರಾಶಾಹಿಯಾದ ಬಗ್ಗೆ ವರದಿಯಾಗಿವೆ.

127 ಮನೆಗಳಿಗೆ ಹಾನಿ

2026–27 ಸಾಲಿನ ಪೂರ್ವ ಮುಂಗಾರಿನಲ್ಲಿ ಈವರೆಗೆ ಜಿಲ್ಲೆಯಲ್ಲಿ 127 ಮನೆಗಳಿಗೆ ಹಾನಿಯುಂಟಾಗಿದೆ. ಬ್ಯಾಡಗಿಯಲ್ಲಿ 28, ಹಾನಗಲ್ 14, ಸವಣೂರ 10, ರಾಣೇಬೆನ್ನೂರ 54, ಶಿಗ್ಗಾವಿ 1, ಹಿರೇಕೆರೂರ 6, ರಟ್ಟೀಹಳ್ಳಿಯಲ್ಲಿ 13 ಹಾಗೂ ಹಾವೇರಿಯಲ್ಲಿ 1 ಮನೆ ಹಾನಿಗೀಡಾಗಿವೆ. ಈ ಪೈಕಿ 13 ಮನೆಗಳು ತಿರಸ್ಕೃತಗೊಂಡಿದ್ದು, 114 ಮನೆಗಳು ಪರಿಶೀಲನೆಗೆ ಬಾಕಿ ಇವೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದ ಮಾಹಿತಿ ಪ್ರಕಾರ ಕಳೆದ ಇಪ್ಪತ್ನಾಲ್ಕು ಗಂಟೆಯಲ್ಲಿ ಜಿಲ್ಲೆಯಲ್ಲಿ 13.20 ಮಿಮೀಮಳೆಯಾಗಿದೆ.ಈಪೈಕಿರಾಣೇಬೆನ್ನೂರು ತಾಲೂಕಿನಲ್ಲಿ ಅತೀಹೆಚ್ಚು 18.8 ಮಿಮೀ.ನಷ್ಟು ಮಳೆಯಾದರೆ, ರಟ್ಟೀಹಳ್ಳಿ ತಾಲೂಕಿನಲ್ಲಿ ಅತೀಕಡಿಮೆ9.3 ಮಿಮೀಮಳೆಯಾಗಿದೆ. ಬ್ಯಾಡಗಿ 12.1 ಮಿಮೀ, ಹಾನಗಲ್ 13.9 ಮಿಮೀ., ಹಾವೇರಿ 11.3 ಮಿಮೀ., ಸವಣೂರ 13.9 ಮಿಮೀ., ಶಿಗ್ಗಾವಿ 11.7 ಮಿಮೀ ಹಾಗೂ ಹಿರೇಕೆರೂರ ತಾಲೂಕಿನಲ್ಲಿ 9.6 ಮಿಮೀ ಮಳೆ ಸುರಿದಿದೆ.

2026–27ನೇ ಸಾಲಿನ ಪೂರ್ವ ಮುಂಗಾರಿನಲ್ಲಿ ಮೇ ತಿಂಗಳು ಆರಂಭದಿಂದ ಇಲ್ಲಿಯವರೆಗೆ 1,696 ರೈತರ 1,181.0 ಹೆಕ್ಟೇರ್ ಕೃಷಿ ಬೆಳೆ, 125 ರೈತರ 54.79 ಹೆಕ್ಟೇರ್ ತೋಟಗಾರಿಕೆ ಬೆಳೆ ಸೇರಿ ಒಟ್ಟು 1,721 ರೈತರ 1,235.8 ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದ್ದರ ಬಗ್ಗೆ ವರದಿಯಾಗಿದೆ.

ಕಿರುಸುದ್ದಿ

ಕೃಷಿಭಾಗ್ಯ ಯೋಜನೆ ಸದುಪಯೋಗ ಪಡೆಯಿರಿ

ಗೋಕಾಕ: ಗೋಕಾಕ ಹಾಗೂ ಮೂಡಲಗಿ ತಾಲ್ಲೂಕುಗಳಲ್ಲಿ ರೈತರಿಗಾಗಿ ಕೃಷಿ ಭಾಗ್ಯ ಯೋಜನೆ ಆರಂಭಗೊಂಡಿದೆ. ಎರಡೂ ತಾಲೂಕಿನ ರೈತರು ಸದುಪಯೋಗ ಪಡೆಯಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಎಮ್. ಎಮ್. ನದಾಫ್ ಅವರು ರೈತರಲ್ಲಿ ಕೋರಿದ್ದಾರೆ.

ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಸನ್ 2026-27ನೇಯ ಸಾಲಿನಲ್ಲಿ ಕೃಷಿ ಇಲಾಖೆಯಿಂದ ಎಲ್ಲಾ ವರ್ಗಗಳ ರೈತರಿಗೆ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ, ಬದು ನಿರ್ಮಾಣ, ಪಾಲಿಥಿನ್ ಹೊದಿಕೆ, ಕೃಷಿ ಹೊಂಡದ ಸುತ್ತಲು ತಂತಿ ಬೇಲಿ ಹಾಗೂ ಡೀಜೆಲ್ ಇಂಜಿನ್ ಗಳನ್ನು ರಿಯಾಯಿತಿ ದರದಲ್ಲಿ ಮಾಡಿ ಕೊಳ್ಳಲು ಅವಕಾಶವಿದೆ. ಸಾಮಾನ್ಯ ರೈತರಿಗೆ ಶೇಕಡಾ 80% ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರಿಗೆ ಶೇಕಡಾ 90% ಸಹಾಯಧನ ನೀಡಲಾಗುತ್ತಿದೆ. ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ಹಾಗೂ ಇತರೆ ಘಟಕಗಳನ್ನು ಮಾಡಿಕೊಳ್ಳುವ ಆಸಕ್ತ ರೈತರು ಸಮೀಪದ ರೈತ ಸಂಪರ್ಕ ಕೇಂದ್ರ ಗೋಕಾಕ, ಅರಭಾವಿ ಮತ್ತು ಕೌಜಲಗಿ ಗಳಲ್ಲಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ಮಾಡಲು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಅರ್ಜಿ ಆಹ್ವಾನ

ಹುಕ್ಕೇರಿ: ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ 2026-27ನೇ ಸಾಲಿಗೆ ಖಾಲಿ ಇರುವ ಸ್ಥಳಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಪ್ರವೇಶ ಬಯಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ 1.Sw.kar.nic.in, 2.swdhmis.karnataka.gov.in ಪೋರ್ಟಲ್ ಮೂಲಕ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಬೇಕು.ಸಲ್ಲಿಸಿದ ಅರ್ಜಿಯ ಪ್ರಿಂಟ್ ತೆಗೆದು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಮುಖ್ಯೋಪಾಧ್ಯಾಯರಿಂದ ದೃಢೀಕರಿಸಿ ಈ ಕಚೇರಿಗೆ ಸಲ್ಲಿಸಬೇಕು.ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳನ್ನು ಸೀಟುಗಳ ಲಭ್ಯತೆಯನುಸಾರ ಪ್ರವೇಶಕ್ಕೆಆಯ್ಕೆ ಮಾಡಲಾಗುವುದುಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರು, ಸಮಾಜಕಲ್ಯಾಣ ಇಲಾಖೆ,.ದೂರವಾಣಿ: 08333-265419 ಸಂಪರ್ಕಿಸಬಹುದಾಗಿದೆಎಂದು ಸಮಾಜಕಲ್ಯಾಣ ಸಹಾಯಕ ನಿರ್ದೇಶಕ ಜಿ.ಪಿ. ಪಾವಟೆಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಹುಕ್ಕೇರಿ: ತಾಲೂಕಿನ ನೇರ್ಲಿ ಗ್ರಾಮದ ಕಾವೇರಿ ಪ್ರಾಥಮಿಕ ಶಾಲೆಯಲ್ಲಿ ಕಾವೇರಿ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ (ಕೆಎಸ್,ಎಂ,ಜಿ,ಸೊಸೈಟಿ) ಸಂಸ್ಥೆಯಿಂದ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ತಂದೆ-ತಾಯಿ ಕಳೆದುಕೊಂಡು ಬಡತನಹಾಗೂ ಏಕಪೋಷಕ ಮಕ್ಕಳಿಗೆ,ಬಡತನ ರೇಖೆಗಿಂತ ಕೆಳಗಿನ, ಶಿಕ್ಷಣದಿಂದ ವಂಚಿತರಾದ 50 ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಲಾಗುವುದು. ವಿದ್ಯಾರ್ಥಿ,ವಿದ್ಯಾರ್ಥಿನಿಯರಿಗೆ ಊಟ, ವಸತಿ ಸೌಲಭ್ಯ, ನವೋದಯ, ಮೊರಾರ್ಜಿ ವಸತಿ ಶಾಲೆ ಪ್ರವೇಶ ಪರೀಕ್ಷೆಗೆ ಉಚಿತ ತರಬೇತಿ ನೀಡಲಾಗುವುದು. ಆಸಕ್ತರು ಇದರ ಸುದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ 9535250422, 9972060979ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಹುಕ್ಕೇರಿ: ತಾಲೂಕಿನ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ 10 ಅಂಗನವಾಡಿ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಸಮಗ್ರ ಶಿಶು ಅಭಿವೃದ್ಧಿ ಯೋಜನಾ ಕಚೇರಿಯಿಂದ ಪ್ರಕಟಣೆ ಹೊರಡಿಸಿದ್ದು, 5 ಅಂಗನವಾಡಿ ಕಾರ್ಯಕರ್ತೆ ಮತ್ತು 5 ಅಂಗನವಾಡಿ ಸಹಾಯಕಿ ಹುದ್ದೆಗಳನ್ನು ಗೌರವಧನ ಆಧಾರದ ಮೇಲೆ ಭರ್ತಿಮಾಡಲಾಗುವುದು. ಈ ಹುದ್ದೆಗಳಿಗೆ ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.ಆಸಕ್ತ ಅಭ್ಯರ್ಥಿಗಳು ಮೇ 30 ರಂದು ಸಂಜೆ 5.30ರೊಳಗೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಮುಚ್ಚಿದ ಲಕೋಟೆಯಲ್ಲಿ ಅರ್ಜಿಯನ್ನು ಹುಕ್ಕೇರಿ ತಾಲೂಕಿನ ಸಮಗ್ರ ಶಿಶು ಅಭಿವೃದ್ಧಿ ಯೋಜನಾ ಕಚೇರಿಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಕಳುಹಿಸಬೇಕು. ನಿಗದಿತ ಅವಧಿ ಮೀರಿದ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹುಕ್ಕೇರಿ ತಾಲೂಕು ಕಚೇರಿಯನ್ನು 08333-265099 ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಕಾರಿ ಎಚ್. ಹೊಳೆಪ್ಪಗೋಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗೋಕಾಕ: ನಗರದ ಶ್ರೀರಾಮಲಿಂಗೇಶ್ವರ ಸಮುದಾಯ ಭವನದಲ್ಲಿ ಶ್ರೀ ರಾಮಲಿಂಗೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ ಆಶ್ರಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಭಾನುವಾರದಂದು ಸತ್ಕರಿಸಲಾಯಿತು. ಈ ಸಂದರ್ಭದಲ್ಲಿ ಟಿ.ವಿ. ಗುದಗಾಪುರ, ಪ್ರಕಾಶ್ ಲಕ್ಕೆಟ್ಟಿ, ಏಕನಾಥ್ ಕೊಣ್ಣೂರ, ಶಿವಾನಂದ ಗುಮುತಿ, ಶಂಕರ್ ಚಚಡಿ, ಪ್ರವೀಣ್ ತಿಳಿಗಂಜಿ, ಸುನಿಲ್ ಅಂಕದವರ್, ಸಂಜಯ ದೇವರಮನಿ, ಶಂಕರ್ ಮಿರ್ಜಿ, ಶಂಕರ್ ರಾಮದುರ್ಗ ಇದ್ದರು.

ಎಸ್‌ಐಆರ್ ಯಶಸ್ಸಿಗೆ ಪಾಲಿಕೆ ಸಿದ್ಧತೆ: ಡಾ. ಹುಲ್ಲೋಳಿ

ಬೆಳಗಾವಿ: ಚುನಾವಣಾ ಆಯೋಗದ ಆದೇಶದಂತೆ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯಕ್ಕೆ ಸಿಬ್ಬಂದಿ ನೇಮಿಸಿ ಕಾರ್ಯಾರಂಭ ಮಾಡಲಾಗಿದ್ದು ಯಶಸ್ವುಗೊಳಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತ ಡಾ. ಸಿದ್ದು ಹುಲ್ಲೋಳಿ ಹೇಳಿದರು.

ಈ ಕುರಿತು ಮಾಹಿತಿ ನೀಡಿದ ಅವರು, ಪಾಲಿಕೆ ವ್ಯಾಪ್ತಿಯಲ್ಲಿ ಉತ್ತರ ದಕ್ಷಿಣ ಎರಡು ವಿಭಾಗಗಳಿದ್ದು, ದಕ್ಷಿಣಕ್ಕೆ ಚುನಾವಣಾ ಅಧಿಕಾರಿಯಾಗಿ ಪಾಲಿಕೆ ಆಯುಕ್ತರಾದ ಕಾರ್ತಿಕ್ ಎಮ್ ಅವರು, ಸಹಾಯಕ ಚುನಾವಣೆ ಅಧಿಕಾರಿಯಾಗಿ ಡಾ. ಸಿದ್ದು ಹುಲ್ಲೋಳಿ ಹಾಗೂ ಉತ್ತರ ಭಾಗದ ಚುನಾವಣೆ ಅಧಿಕಾರಿಯಾಗಿ ಪಾಲಿಕೆ ಆಡಳಿತ ವಿಭಾಗದ ಉಪ ಆಯುಕ್ತ ಉದಯಕುಮಾರ ತಳವಾರ, ಸಹ ಚುನಾವಣಾ ಅಧಿಕಾರಿಯಾಗಿ ಅಭಿಯಂತರರಾದ ಲಕ್ಷ್ಮೀ ನಿಪ್ಪಾಣಿಕರ್ ಜವಾಬ್ದಾರಿ ನಿಭಾಯಿಸಲಿದ್ದಾರೆ . 40 ಮೇಲ್ವಿಚಾರಕರ ಮಾರ್ಗದರ್ಶನದಲ್ಲಿ ಉತ್ತರ ದಕ್ಷಿಣ ಸೇರಿ ಒಟ್ಟು 514 ಮತಗಟ್ಟೆ ಅಧಿಕಾರಿಗಳು ಕಾರ್ಯನಿರ್ವಹಿಸುವರು. ಈಗಾಗಲೇ ಉತ್ತರದಲ್ಲಿ ಶೇ. 68.60, ದಕ್ಷಿಣದಲ್ಲಿ ಶೇ. 77.06 ರಷ್ಟು ಮ್ಯಾಪಿಂಗ್ ಕಾರ್ಯ ಮುಗಿದಿದ್ದು, ಶೇ.90 ರಷ್ಟು ಗುರಿ ತಲುಪಲು ಸಿಬ್ಬಂದಿ ಪ್ರಯತ್ನಿಸುತ್ತಿದ್ದಾರೆ. ಸಿಬ್ಬಂದಿಗೆ ಅಗತ್ಯ ತರಬೇತಿ ನೀಡಲಾಗುತ್ತಿದ್ದು, ಎಲ್ಲ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಜೂ. 20 ರಿಂದ ಕಾರ್ಯ ಆರಂಭವಾಗಲಿದ್ದು, ನಿಗದಿತ ಅವಧಿಯಲ್ಲಿ ಎಸ್‌ಐಆರ್ ಕಾರ್ಯವನ್ನು ಪೂರ್ಣಗೊಳಿಸಲು ಆಯುಕ್ತರು ಸಿಬ್ಬಂದಿಗೆ ಸೂಚಿಸಿದ್ದಾರೆಂದು ಹೇಳಿದರು.



ಬೆಳಗಾವಿ : ನಗರದಲ್ಲಿ ವಾಸಿಸುವ ಪ್ರವೀಣ ಪಾಟೀಲ ಅವರನ್ನು 33 ವರ್ಷ ಕನ್ನಡ ನಾಡು ನುಡಿಗಾಗಿ ಹೋರಾಟದಲ್ಲಿ ಇತಿಹಾಸವಿರುವ ಕನ್ನಡ ಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷರಾದ ಕೆ ಮಂಜುನಾಥ್ ದೇವ ಅವರು ಕನ್ನಡ ಜಾಗೃತಿ ವೇದಿಕೆಯ ನೂತನ ಬೆಳಗಾವಿ ಜಿಲ್ಲಾಧ್ಯಕ್ಷರಾಗಿ ಪ್ರವೀಣ ಪಾಟೀಲ ಅವರನ್ನು ಆಯ್ಕೆ ಮಾಡಿ ಅಭಿನಂದನೆಗಳು ಸಲ್ಲಿಸಿದ್ದಾರೆ.

ನೂತನ ಬ್ರಿಡ್ಜ್ ಕಮ್ ಬ್ಯಾರೇಜ್ ಕಾಮಗಾರಿಗೆ ಭೂಮಿಪೂಜೆ

ವಿವಿಧ ಕ್ಷೇತ್ರಕ್ಕೆ ಅನುಕೂಲ: ಸಚಿವ

ಬೆಳಗಾವಿ/ಯಮಕನಮರಡಿ: ಮಲ್ಲಟ್ಟಿ-ಸುತಗಟ್ಟಿ ನಡುವೆ ಘಟಪ್ರಭಾ ನದಿಗೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣಕ್ಕೆ ಸೋಮವಾರ ಚಾಲನೆ ನೀಡಿದ್ದು ಈ ಭಾಗದ ಹದಿನೈದಕ್ಕೂ ಹೆಚ್ಚು ಗ್ರಾಮಗಳ ರೈತರ ದೀರ್ಘಕಾಲದ ಬೇಡಿಕೆ ಈಡೇರಿದೆ. ಈ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣದಿಂದ ಮಲ್ಲಟ್ಟಿ ಮತ್ತು ಸುತಗಟ್ಟಿ ಗ್ರಾಮಗಳ ನಡುವಿನ ಸಂಪರ್ಕ ಸುಲಭವಾಗಲಿದ್ದು, ಸಾರಿಗೆ ವ್ಯವಸ್ಥೆಗೆ ಎದುರಾಗುತ್ತಿದ್ದ ದೊಡ್ಡ ಸಮಸ್ಯೆಗೆ ಮುಕ್ತಿ ಸಿಗಲಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಯಮಕನಮರಡಿ ಕ್ಷೇತ್ರದ ನಾಗನೂರ ಕೆ.ಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಲ್ಲಟ್ಟಿ ಹಾಗೂ ಸುತಗಟ್ಟಿ ಗ್ರಾಮಗಳ ಜನರ ಬಹುದಿನಗಳ ಬೇಡಿಕೆಯಾಗಿದ್ದ ಘಟಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ 7 ಕೋಟಿ 96 ಲಕ್ಷ ರೂ. ವೆಚ್ಚದ ನೂತನ ಬ್ರಿಡ್ಜ್ ಕಮ್ ಬ್ಯಾರೇಜ್ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಒಟ್ಟು 7 ಕೋಟಿ 96 ಲಕ್ಷ ರೂ.ಗಳ ಭಾರಿ ವೆಚ್ಚದಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದ್ದು, ಈ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣದಿಂದ ಕೇವಲ ಸಂಚಾರ ವ್ಯವಸ್ಥೆ ಸುಧಾರಿಸುವುದಷ್ಟೇ ಅಲ್ಲದೆ, ನದಿಯಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವುದರಿಂದ ಸುತ್ತಮುತ್ತಲಿನ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಸಿಗಲಿದೆ. ಇದರಿಂದ ಅಂತರ್ಜಲ ಮಟ್ಟ ಹೆಚ್ಚಳವಾಗಿ ಸ್ಥಳೀಯ ರೈತರ ಆರ್ಥಿಕ ಪ್ರಗತಿಗೂ ಇದು ಸಹಕಾರಿಯಾಗಲಿದೆ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.



ಇನ್ನು ಈ ಬ್ರಿಡ್ಜ್ ಕಮ್ ಬ್ಯಾರೇಜ್ನಿಂದ ಸಂಗ್ರಹವಾಗುವ ನೀರನ್ನು ಸ್ಥಳೀಯ ರೈತರು ತಮ್ಮ ಜಮೀನುಗಳಿಗೆ ಪಂಪ್ಸೆಟ್ ಮೂಲಕ ಸುಲಭವಾಗಿ ಬಳಸಿಕೊಳ್ಳಬಹುದು. ನದಿಯಲ್ಲಿ ವರ್ಷಪೂರ್ತಿ ನೀರು ಶೇಖರಣೆಯಾಗುವುದರಿಂದ ರೈತರು ತಮ್ಮ ಪಂಪ್ಸೆಟ್ಗಳ ಮೂಲಕ ನೇರವಾಗಿ ಜಮೀನಿಗೆ ನೀರು ಹರಿಸಿಕೊಳ್ಳಬಹುದು. ಬ್ಯಾರೇಜ್ನಲ್ಲಿ ನೀರು ನಿಲ್ಲುವುದರಿಂದ ಸುತ್ತಮುತ್ತಲಿನ ರೈತರ ಬಾವಿ ಹಾಗೂ ಬೋರ್ವೆಲ್ಗಳಲ್ಲಿ ಅಂತರ್ಜಲ ಮಟ್ಟ ಗಣನೀಯವಾಗಿ ಹೆಚ್ಚಳವಾಗಲಿದೆ. ರೈತರ ಆರ್ಥಿಕ ಸುಧಾರಣೆಗೆ ಈ ಯೋಜನೆ ದಿಕ್ಸೂಚಿಯಾಗಲಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಾಮಗಾರಿ ನಿಗದಿತ ಅವಧಿಯೊಳಗೆ ಮತ್ತು ಗುಣಮಟ್ಟದಿಂದ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಈ ಸಂರ್ಭದಲ್ಲಿ ಬೆಳಗಾವಿಯ ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ 44ನೇ ಬೆಟಾಲಿಯನ್ನ ಮುಖ್ಯಸ್ಥ ಎಸ್. ಜುನಜಾ, ಬೆಳಗಾವಿ ಜಿಲ್ಲಾಧಿಕಾರಿ ಮೊಹಮದ್ ರೋಶನ್, ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ್ ಬೊರಸೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಹುಕ್ಕೇರಿ ತಾಪಂ ಇಒ ಪಿ.ಆರ್. ಮಲ್ಲಾಡದ ಸೇರಿದಂತೆ ನೀರಾವರಿ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಮುಖಂಡರಾದ ದಯಾನಂದ ಪಾಟೀಲ್, ರಾಜು ದರಗಶೆಟ್ಟಿ, ಕಿರಣ ರಜಪೂತ, ಮಲಗೌಡ ಪಾಟೀಲ್ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಕಾನೂನು ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ ಆಧಾರ ಸ್ತಂಭ: ಕುಲಕರ್ಣಿ

ಬೆಳಗಾವಿ: ಕೆಎಲ್‌ಎಸ್ ರಾಜಾ ಲಖಮಗೌಡ ಕಾನೂನು ಕಾಲೇಜು 86 ನೇ ''ಮಜಲಿ'' (ಇಂಗ್ಲಿಷ್) ಮತ್ತು ''ಬೆಂಬಳಗಿ'' (ಕನ್ನಡ) ಚರ್ಚಾ ಸ್ಪರ್ಧೆಯನ್ನು ಆಯೋಜಿಸಿತ್ತು. ಕರ್ನಾಟಕದ ವಿವಿಧ ಭಾಗಗಳಿಂದ 18 ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು.

ಬೆಳಗಾವಿಯ ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗದ ಅಧ್ಯಕ್ಷ ಸಂಜೀವ ಕುಲಕರ್ಣಿ ಮಾತನಾಡಿ, ಕಾನೂನು ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆಯ ಮಹತ್ವದ ಬಗ್ಗೆ ವಿವರಿಸಿ, ಚರ್ಚಾ ಸ್ಪರ್ಧೆ ಕಾನೂನು ವಿದ್ಯಾರ್ಥಿಗಳಿಗೆ ಆಧಾರಸ್ತಂಭವಾಗಿದ್ದು, ಅವರಿಗೆ ಧೈರ್ಯ ಮತ್ತು ಆತ್ಮವಿಶ್ವಾಸವನ್ನು ನೀಡುತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಮತ್ತು ನ್ಯಾಯವಾದಿ ಆರ್.ಎಸ್. ಮುತಾಲಿಕ್ ಅವರು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿದ್ದ ಕೆಎಲ್‌ಎಸ್ ಪ್ಲಾಟಿನಂ ಜುಬಿಲಿ ಆಚರಣೆಯನ್ನು ನೆನಪಿಸಿಕೊಂಡರು.

ಸಾಹಿತ್ಯ ಕ್ಲಬ್ನ ಅಧ್ಯಕ್ಷೆ ಪ್ರೊ. ಮಾಧುರಿ ಕುಲಕರ್ಣಿ ''ಮಜಲಿ'' ಇಂಗ್ಲಿಷ್ ಮತ್ತು ''ಬೆಂಬಳಗಿ'' ಕನ್ನಡ ಚರ್ಚಾ ಸ್ಪರ್ಧೆಯ ಬಗ್ಗೆ ವಿವರಿಸಿದರು. ''ಮಜಲಿ'' ಸ್ಮಾರಕ ರೋಲಿಂಗ್ ಶೀಲ್ಡ್ ಅನ್ನು ಬೆಳಗಾವಿಯ ಕೆಎಲ್‌ಇ ಸಿಬಿಎಲ್ಸಿ ಕಾಲೇಜು ಗೆದ್ದುಕೊಂಡಿತು ಮತ್ತು ''ಬೆಂಬಳಗಿ'' ಸ್ಮಾರಕ ರೋಲಿಂಗ್ ಶೀಲ್ಡ್ ಅನ್ನು ಚಿಕ್ಕೋಡಿಯ ಕೆಎಲ್‌ಇ ಕಾನೂನು ಕಾಲೇಜು ಗೆದ್ದುಕೊಂಡಿತು.

ಈ ವೇಳೆ ಪ್ರಾಂಶುಪಾಲ ಡಾ. ಎ. ಎಚ್. ಹವಾಲ್ದಾರ್, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೌಶಲ್ಯ ಅವಶ್ಯ

ಯಮಕನಮರಡಿ: ಸ್ಥಳೀಯ ಯಮಕನಮರಡಿ ವಿದ್ಯಾ ವರ್ಧಕ ಸಂಘದ ಪದವಿ ಕಲಾ ಮಹಾವಿದ್ಯಾಲಯದ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ಪಾರಿತೋಷಕ ವಿತರಣಾ ಸಮಾರಂಭವು ಇತ್ತಿಚೇಗೆ ಕಾಲೇಜು ಸಭಾಭವನದಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಸ್ಥಳೀಯ ಸಿ.ಇ.ಎಸ್ ಪದವಿ ಪೂರ್ವ ಕಾಲೇಜಿನ ಹಿರಿಯ ಉಪನ್ಯಾಸಕರಾದ ಎ. ಬಿ. ನಾಯಿಕರವರು ಆಗಮಿಸಿ ವಿದ್ಯಾರ್ಥಿ ಜೀವನ ಅಮೂಲ್ಯವಾಗಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಪದವಿ ಮುಖ್ಯವಲ್ಲ, ಆದರ ಜೊತೆಗೆ ನಿಮ್ಮಲ್ಲಿರುವ ಕೌಶಲ್ಯಗಳು, ನೈತಿಕ ಮೌಲ್ಯಗಳು ಮತ್ತು ಸಮಾಜದ ಬಗ್ಗೆ ನಿಮಗಿರುವ ಜವಾಬ್ದಾರಿಗಳು ಅತೀ ಮುಖ್ಯವಾಗುತ್ತವೆ ಎಂದು ಹೇಳಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ವಿಶೇಷ ಆಮಂತ್ರಿತರಾಗಿ ಸಂಸ್ಥೆಯ ನಿರ್ದೇಶಕರಾದ ಕುಶಾಲಸಿಂಗ್ ರಜಪೂತರವರು ಆಗಮಿಸಿ ಕಾರ್ಯಕ್ರಮದ ಯಶಸ್ವಿಗೆ ಪಾತ್ರರಾದರು.

ಯ. ವಿ. ಸಂಘದ ಕಾರ್ಯದರ್ಶಿಗಳು ಹಾಗೂ ಉಪನ್ಯಾಸಕರಾದ ಜೆ.ಎನ್. ಅವಾಡೆ ಮಾತನಾಡಿದರು. ಉಪನ್ಯಾಸಕರಾದ ಎಂ.ಬಿ. ಪೂಜೇರಿ ಹಾಗೂ ಕುಮಾರಿ. ಎಸ್ .ಪಿ. ಬಾಗೇವಾಡಿಯವರು ವಿದ್ಯಾರ್ಥಿಗಳು ಉಜ್ವಲ ಭವಿಷ್ಯತ್ತನ್ನು ರೂಪಿಸಿಕೊಂಡು ಆದರ್ಶ ವ್ಯಕ್ತಿಗಳಾಗಿ ಹೊರ ಹೊಮ್ಮಬೇಕೆಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಪ್ರಾಚಾರ್ಯ ಡಾ. ಎ. ಎಸ್. ಗುತ್ತಿಯವರು ಮಾತನಾಡುತ್ತಾ ಇಂದಿನ ಈ ಕಾರ್ಯಕ್ರಮ ನಿಮ್ಮ ಹೊಸ ಜೀವನಕ್ಕೆ ನಾಂದಿಯಾಗಿದೆ. ಸಮಾಜಕ್ಕೆ ಒಳ್ಳೆಯ ನಾಗರಿಕರಾಗಿ ನೈತಿಕ ಮೌಲ್ಯಗಳನ್ನು ಎಂದಿಗೂ ಮರೆಯಬೇಡಿ. ನಿಮ್ಮ ಮುಂಬರುವ ಉನ್ನತ ಶಿಕ್ಷಣ ಅಥವಾ ನಿಮ್ಮ ಉದ್ಯೋಗದ ಹಾದಿ ಸದಾ ಯಶಸ್ವಿಯಾಗಲಿ, ನಿಮ್ಮೆಲ್ಲರ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಕೋರಿದರು.

ಇದೇ ಕಾರ್ಯಕ್ರಮದಲ್ಲಿ 2025-26 ನೇ ಶೈಕ್ಷಣಿಕ ಸಾಲಿನ ವಿವಿಧ ಘಟಕಗಳ ಅಡಿಯಲ್ಲಿ ಹಾಗೂ ವಾರ್ಷಿಕ ಕ್ರೀಡಾಕೂಟದ ನಿಮಿತ್ಯ ಆಯೋಜಿಸಿದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪಾರಿತೋಷಕ ಗಳನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮ ವನ್ನು ಕುಮಾರಿ. ಖುತಿಕಾ ಅಲದಾಳಿ ನಿರೂಪಿಸಿದರು. ಕುಮಾರಿ. ಪೂಜಾ ದೇಸಾಯಿ ಸ್ವಾಗತಿಸಿದರು. ಕುಮಾರಿ. ಶಶಿಕಲಾ ಜಕ್ಕಪ್ಪಗೋಳ ವಂದಿಸಿದರು.



ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಬೆಂಬಲ: ಪಟ್ಟಣಶೆಟ್ಟಿ

ಸಂಕೇಶ್ವರ: ಅಖಿಲ ಭಾರತ ಕೆಮಿಸ್ಟ್ ಮತ್ತು ಡ್ರಗಿಸ್ಟ್ ಸಂಘಟನೆ ಮೇ 20ರಂದು ಕರೆ ನೀಡಿರುವ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಬೆಳಗಾವಿ ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘ ಸಂಪೂರ್ಣ ಬೆಂಬಲ ಸೂಚಿಸಿದೆ ಎಂದು ಸಂಘದ ಕಾರ್ಯದರ್ಶಿ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ ತಿಳಿಸಿದ್ದಾರೆ.

ಪಟ್ಟಣದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬುಧವಾರ ದಿ.20 ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಉಪತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ಈ ಹೋರಾಟವು ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ಉದ್ದೇಶ ಹೊಂದಿಲ್ಲ, ಬದಲಾಗಿ ದೇಶದ ಔಷಧ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ಲಕ್ಷಾಂತರ ಸಣ್ಣ ಔಷಧ ವ್ಯಾಪಾರಿಗಳ ಜೀವನೋಪಾಯವನ್ನು ರಕ್ಷಿಸುವ ಉದ್ದೇಶದಿಂದ ಮುಷ್ಕರ ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂಧರ್ಭದಲ್ಲಿ ರಾಮು ಕಿಲ್ಲೇದಾರ, ನಿಜಲಿಂಗಪ್ಪ ದಡ್ಡಿ, ಸತೀಶ ಪಾಟೀಲ, ಸಚೀನ ಹಾಲಪ್ಪನವರ, ಜಯಪ್ರಕಾಶ ಸಾವಂತ, ಮಹಾಂತೇಶ ನಾಗನೂರಿ, ಉಮೇಶ ಖಾನಾಪುರೆ ಸೇರಿದಂತೆ ಹಲವರು ಹಾಜರಿದ್ದರು.



ಸಾಹಿತ್ಯ, ಸಂಸ್ಕೃತಿ ಉಳಿಯಬೇಕಾದರೆ ಜನಪದದಿಂದ ಮಾತ್ರ ಸಾಧ್ಯ

ಬೆಳಗಾವಿ: ಕನ್ನಡ ನಾಡು ನುಡಿ ಸಾಹಿತ್ಯ-ಸಂಸ್ಕೃತಿ ಉಳಿಯಬೇಕಾದರೆ ಜನಪದದಿಂದ ಮಾತ್ರ ಸಾಧ್ಯ. ರಾಜ-ಮಹಾರಾಜರು ಸಾಹಿತ್ಯ, ಸಂಸ್ಕೃತಿ ಮತ್ತು ಜನಪದವನ್ನು ಉಳಿಸಿ-ಬೆಳಸುವ ಕಾರ್ಯವನ್ನು ಈ ನಾಡಿನಾಂತ್ಯ ಮಾಡುತ್ತಿದ್ದಾರೆ. ಸಂಸ್ಕೃತಿಯನ್ನು ಉಳಿಸಿ-ಬೆಳೆಸುವ ಜವಾಬ್ದಾರಿ ಮುಂದಿನ ಯುವ ಜನಾಂಗದ ಮೇಲಿದೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಹೇಗೆ ಭಾರತೀಯ ಅವಿಭಕ್ತ ಕುಟುಂಬಗಳು ಛಿದ್ರವಾಗುತ್ತಿವೆ. ಸಮಾಜದಲ್ಲಿ ಹೊಸ-ಹೊಸ ಆವಿಷ್ಕಾರಗಳು ಸಂಶೋಧನೆಗಳು ಹುಟ್ಟುವ ಸಂದರ್ಭದಲ್ಲಿ ಸಂಸ್ಕೃತಿಯನ್ನು ಮರೆಯದೇ ಉಳಿಸಿಕೊಳ್ಳಬೇಕು ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಮಹಾಂತೇಶ ಕವಟಗಿಮಠ ಹೇಳಿದರು.

ನಗರದ ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ (ಸ್ವಾಯತ್ತ) ಮಹಾವಿದ್ಯಾಲಯ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ''ಕನ್ನಡ ಜನಪದ ವೈಭವ'' ವಿಶೇಷ ಕಾರ್ಯಕ್ರಮದಲ್ಲಿ ಭಾಗಿಯಾಗಿ ಅದ್ದೂರಿಯಾಗಿ ಚಾಲನೆ ನೀಡಿದರು.



ಇದೇ ವೇಳೆ ಡಾ. ವ್ಹಿ.ಎಸ್. ಮಾಳಿ, ವಿಶ್ರಾಂತ ಪ್ರಾಧ್ಯಾಪಕರು ವೃಷಭೇಂದ್ರ ಮಹಾವಿದ್ಯಾಲಯ ಹಾರೂಗೇರಿ ಅವರು ಮಾತನಾಡಿ, ಕರ್ನಾಟಕವು ಅಪಾರವಾದ ಜನಪದ ಸಂಪತ್ತನ್ನು ಹೊಂದಿದೆ. ಯುವಕರು ಜನಪದ ಸಂಸ್ಕೃತಿಯ ಸಂಪತ್ತಿ ವೈಭವವನ್ನು ಹೊರಸೂಸುವ ಕಾರ್ಯ ಮಾಡಬೇಕು. ವಿವಿಧತೆಯಲ್ಲಿ ಏಕತೆಯನ್ನು, ಏಕತೆಯಲ್ಲಿ ವಿವಿಧತೆಯನ್ನ ಕಾಣಬೇಕು. ಕನ್ನಡ ಸಾಹಿತ್ಯ ಪರಿಷತ ಸ್ಥಾಪನೆಯಾಗಲು ಆರ್ಥಿಕ ಸಹಾಯವನ್ನು ಮಾಡಿ ಈ ಭಾಗದಲ್ಲಿ ಕನ್ನಡವನ್ನು ಉಳಿಸಲು ರಾಜಾ ಲಖಮಗೌಡರ ಕೊಡುಗೆ ಅಪಾರವಾಗಿದೆ ಎಂದರು.

ಈ ವೇಳೆ ಕೆಎಲ್ ಇ ಸಂಸ್ಥೆಯ ಪದವಿ ಪ್ರಾಚಾರ್ಯ ಡಾ. ಜೆ.ಎಸ್. ಕವಳೇಕರ, ವಿಜಯಕುಮಾರ ಪಾಟೀಲ, ಡಾ. ವ್ಹಿ.ಎಸ್. ಮಾಳಿ, ಆಡಳಿತ ಮಂಡಳಿ, ಕಾರ್ಯಾಧ್ಯಕ್ಷ ಲಿಂಗೌಡ ದೇಸಾಯಿ ವಿಧ್ಯಾರ್ಥಿಗಳು ಸೇರಿದಂತೆ ಇತರರು ಇದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಚಾಲನೆ

ಬೆಳಗಾವಿ: ಇಲ್ಲಿನ ಸದಾಶಿವನಗರದ ಮುಖ್ಯ ರಸ್ತೆಯನ್ನು ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಸುಮಾರು 1.3 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಉತ್ತರ ಶಾಸಕ ಆಸೀಫ್ ಸೇಠ್ ಚಾಲನೆ ನೀಡಿದರು.

ಕಾಮಗಾರಿಗಳಿಗೆ ಚಾಲನೆ ನೀಡಿದ ಬಳಿಕ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಅಭಿವೃದ್ಧಿ ಕಾಮಗಾರಿಗಳ ಬಳಿಕ ಬೆಳಗಾವಿಯ ಸದಾಶಿವನಗರದ ಮುಖ್ಯ ರಸ್ತೆಯೂ ಹದಗೆಟ್ಟಿತ್ತು. ಸಾರ್ವಜನಿಕರ ಬೇಡಿಕೆಯಂತೆ ಮುಖ್ಯಮಂತ್ರಿಗಳ ವಿಶೇಷ 1.3 ಕೋಟಿ ರೂಪಾಯಿ ಅನುದಾನದಲ್ಲಿ ಲಕ್ಷ್ಮೀ ಕಾಂಪ್ಲೆಕ್ಸ್'ನಿಂದ ಮುಂದಿನ ವೃತ್ತದ ವರೆಗೆ ಸಿಸಿ ರಸ್ತೆ, ಪೇವರ್ಸ್ ಮತ್ತು ಒಳಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಶೀಘ್ರದಲ್ಲೇ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. ಹಂತ ಹಂತವಾಗಿ ಒಳ ರಸ್ತೆಗಳನ್ನು ಕೂಡ ಅಭಿವೃದ್ಧಿಪಡಿಸಲಾಗುವುದು. ಅದರಂತೆ ಜನರು ಮತ್ತು ನಗರಸೇವಕ ಬೇಡಿಕೆಯಂತೆ ಕೆಲಸವನ್ನು ಮಾಡಲಾಗುವುದು ಎಂದು ಹೇಳಿದರು. ಈ ವೇಳೆ ಮಾಜಿ ಮಹಾಪೌರ, ಹಾಲಿ ನಗರ ಸೇವಕಿ ಸವಿತಾ ಕಾಂಬಳೆ, ಅಮಾನ್ ಸೇಠ್, ಗುತ್ತಿಗೆದಾರರು, ಅಧಿಕಾರಿಗಳು ಸೇರಿದಂತೆ ಸ್ಥಳೀಯ ಸಾರ್ವಜನಿಕರು ಸೇರಿದಂತೆ ಇತರರು ಇದ್ದರು.



ಇತಿಹಾಸ ಕೇಳುವುದಕ್ಕಿಂತ ನೋಡಿ ತಿಳಿಯುವುದು ಪರಿಣಾಮಕಾರಿ

ಚನ್ನಮ್ಮನ ಕಿತ್ತೂರು: ವಸ್ತು ಸಂಗ್ರಹಾಲಯಗಳು ಕೇವಲ ಹಳೆಯ ವಸ್ತುಗಳನ್ನು ಇಡುವ ಸ್ಥಳಗಳಲ್ಲ ಇವು ಇತಿಹಾಸ, ವಿಜ್ಞಾನ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ತಿಳಿಸುವ ಪ್ರಮುಖ ಜ್ಞಾನ ಕೇಂದ್ರಗಳಾಗಿವೆ ಎಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

ಚನ್ನಮ್ಮಾಜಿಯ ಕೋಟೆಯೊಳಗಡೆ ಇರುವ ವಸ್ತು ಸಂಗ್ರಹಾಲಯದ ಆವರಣದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ರಾಣಿ ಚನ್ನಮ್ಮ ಸ್ಮಾರಕ ಸರ್ಕಾರಿ ವಸ್ತು ಸಂಗ್ರಹಾಲಯ, ಕಸಾಪ ಇವುಗಳ ಸಂಯುಕ್ತಾಶ್ರಯದಲ್ಲಿ ಸೋಮವಾರ ನಡೆದ ಅಂತರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇತಿಹಾಸವನ್ನು ಕೇಳುವುದಕ್ಕಿಂತ ನೋಡಿ ತಿಳಿಯುವುದು ಪರಿಣಾಮಕಾರಿ ಹಾಗೂ ಶಾಶ್ವತವೆಂದು ತಿಳಿಸಿದರು.

ಬೆಳಗಾವಿಯ ಸಂಗೊಳ್ಳಿ ರಾಯಣ್ಣ ಪದವಿ ಕಾಲೇಜು ಪ್ರಧ್ಯಾಪಕ ಡಾ. ಸದಾಶಿವ ಮುಗಳಿ ವಿಭಜಿತ ಜಗತ್ತನ್ನು ಒಂದು ಗೂಡಿಸುವ ವಸ್ತು ಸಂಗ್ರಹಾಲಯಗಳ ಎಂಬ ವಿಷಯದ ಕುರಿತು ಮಾತನಾಡಿ ವಸ್ತು ಸಂಗ್ರಹಾಲಯಗಳ ಹಿನ್ನಲೆ ಮತ್ತು ಅಧ್ಯಯನದ ಮಹತ್ವದ ಜೊತೆಗೆ ವಿದ್ಯಾರ್ಥಿಗಳಿಗೆ ವಸ್ತು ಸಂಗ್ರಹಾಲಯದ ಅಧ್ಯಯನದ ಅಗತ್ಯತೆವಿದೆ ಎಂದು ತಿಳಿಸಿದರು.



ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳರಾಜಯೋಗಿಂದ್ರ ಸ್ವಾಮೀಜಿ, ಕಸಾಪ ಅಧ್ಯಕ್ಷ ಡಾ. ಎಸ್.ಬಿ. ದಳವಾಯಿ, ತಹಶೀಲ್ದಾರ ಕಲಗೌಡ ಪಾಟೀಲ, ಸಿಪಿಐಯ್ ಶಿವಾನಂದ ಗುಡಗನಟ್ಟಿ, ಕ್ಯೂರೇಟರ್ ರಾಘವೇಂದ್ರ ಮುಂತಾದವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್‌ನಿಂದ ಪ್ರಸಕ್ತ ಸಾಲಿನ ಕಿತ್ತೂರು ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 125 ಕ್ಕೆ 125 ಅಂಕಗಳನ್ನು ಪಡೆದ 40 ವಿದ್ಯಾರ್ಥಿಗಳನ್ನು ಹಾಗೂ ದ್ವಿತೀಯ ಭಾಷೆ ಕನ್ನಡದಲ್ಲಿ 100 ಕ್ಕೆ 100 ಅಂಕಗಳನ್ನು ಪಡೆದ 15 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ,ಪುಸ್ತಕ ಕಾಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಗಾಯತ್ರಿ ಅಜ್ಜನವರ, ತಾಪಂ ಇಓ ನಿಂಗಪ್ಪ ಮಸಳಿ, ಸರಕಾರಿ ಪ್ರಥಮ ದರ್ಜೆಕಾಲೇಜಿನ ಪ್ರಾಚಾರ್ಯ ಡಾ ಬಸವರಾಜ ಹೊಸಮನಿ, ಬಿ.ಸಿ.ಬಿದರಿ, ಮಹೇಶ ಹೊಂಗಲ, ಪ್ರಾಧ್ಯಾಪಕರಾದ ಡಾ.ಶಿವಾಜಿ.ಗುಡಾಜಿ, ರಾಮಕೃಷ್ಣ ಇಲಕಲ್, ಮಹೇಶ ಚನ್ನಂಗಿ, ಪೆಂಟೇದ, ವಿವೇಕ ಕುರಗುಂದ, ಗಂಗಾಧರ ಹನಮಸಾಗರ, ವ್ಹಿ.ಎಸ್.ನಂದಿಹಳ್ಳಿ, ನಾಗಯ್ಯ. ಹುಲೆಪ್ಪನವರಮಠ, ಮಂಜುನಾಥ ಕರಿಶಿದ್ದನವರ, ಪ್ರಭಾವತಿ ಲದ್ದಿಮಠ, ಸೌಮ್ಯ ರಾಘವೇಂದ್ರ, ರಾಜೇಶ್ವರಿ. ಕಳಸಣ್ಣವರ ಹಾಗೂ ಬೆಳ್ಳಿಚುಕ್ಕಿ ಮಹಿಳಾ ವೇದಿಕೆಯ ಸರ್ವ ಸದಸ್ಯರು, ವಿದ್ಯಾರ್ಥಿಗಳು ಹಾಜರಿದ್ದರು.

ಶಿಕ್ಷಕಿ ವೈಶಾಲಿ ಅಳಗುಂಡಿ ಪ್ರಾರ್ಥಿಸಿದರು, ಮಂಜುನಾಥ ಕಳಸಣ್ಣವರ ನಿರೂಪಿಸಿದರು. ರಾಘವೇಂದ್ರ ಸ್ವಾಗತಿಸಿದರು, ಎಸ್.ಎಮ್. ನಂದಿಹಳ್ಳಿ ವಂದಿಸಿದರು.

ಕಿರುಸುದ್ದಿ

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮನವಿ

ಚಿಕ್ಕೋಡಿ: ಪಟ್ಟಣದಲ್ಲಿ ಕರ್ನಾಟಕ ಸ್ಲಂ ಜನರ ಸಂಘಟನೆಯಿಂದ ಸೋಮವಾರ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಚಿಕ್ಕೋಡಿ ತಹಶೀಲ್ದಾರ್ ರಾಜೇಶ ಬುರ್ಲಿ ಅವರಿಗೆ ಮನವಿ ಸಲ್ಲಿಸಲಾಯಿತು.

ವಲಸೆ ಕಾರ್ಮಿಕರು ಹಾಗೂ ನಗರದ ಬಡ ಜನರಿಗಾಗಿ ಜನಪರ ನಗರ ವಸತಿ ಯೋಜನೆ ರೂಪಿಸಬೇಕು. ವಸತಿಯನ್ನು ಮೂಲಭೂತ ಹಕ್ಕಾಗಿ ಮಾನ್ಯತೆಗೊಳಿಸಿ 'ಎಲ್ಲರಿಗೂ ಮನೆ' ಯೋಜನೆ ಜಾರಿಗೊಳಿಸಬೇಕು. ಬಲವಂತದ ತೆರವು ಕಾರ್ಯಾಚರಣೆ ಕೈಬಿಡಬೇಕು. ಪುನರ್ವಸತಿ ಇಲ್ಲದೆ ಯಾವುದೇ ಮನೆ ಧ್ವಂಸಗೊಳಿಸಬಾರದು. ಬೆಂಗಳೂರು ನಗರದ ಕೋಗಿಲು ಬಡಾವಣೆಯ ಎಲ್ಲ ಸಂತ್ರಸ್ತ ಕುಟುಂಬಗಳಿಗೆ ತಕ್ಷಣ ಪುನರ್ವಸತಿ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ಸ್ಲಂ ಜನರ ಸಂಘಟನೆಯ ಮುಖಂಡ ನಾಮದೇವ ಹಿರೇಕೋಡಿ, ಮಿಲನ ಗಂಗಾಯಗೋಳ, ಶ್ರೀನಾಥ ಕಬ್ಬೂರೆ, ಮಲ್ಲಪ್ಪ ಜೀವಣೆ, ಸತ್ಯವ್ವ ಹಂಜಿ ಇದ್ದರು.

ನಾಗೇಶ ಜೆ. ನಾಯಕಗೆ ಮೌಲ್ಯ ಸಾಹಿತ್ಯ ಸಮ್ಮಾನ ಪ್ರಶಸ್ತಿ



ಸವದತ್ತಿ: ಪಟ್ಟಣದ ಶಿವಬಸವ ನಗರದ ಶಿಕ್ಷಕ, ಕವಿ, ವಿಮರ್ಶಕ ನಾಗೇಶ ಜೆ. ನಾಯಕ ಅವರಿಗೆ ರಾಜ್ಯಮಟ್ಟದ 'ಮೌಲ್ಯ ಸಾಹಿತ್ಯ ಸಮ್ಮಾನ' ಪ್ರಶಸ್ತಿ ಲಭಿಸಿದೆ. ರಾಮದುರ್ಗದ ಸಾಮಾಜಿಕ ಸೇವಾ ಪ್ರತಿಷ್ಠಾನವು ಮೌಲ್ಯಸಂಪದ ವಾರಪತ್ರಿಕೆಯ 21 ನೇ ವಾರ್ಷಿಕೋತ್ಸವದ ಅಂಗವಾಗಿ ನಾಡಿನ ಸಾಧಕರಿಗೆ ಕೊಡಮಾಡುವ ಪ್ರಶಸ್ತಿ ಇದಾಗಿದ್ದು, ನಾಗೇಶ ಜೆ. ನಾಯಕ ಅವರ ಸಾಹಿತ್ಯಿಕ ಸಾಧನೆಗೆ ಈ ಗೌರವ ಪುರಸ್ಕಾರ ಲಭಿಸಿದೆ. ಮೇ 24 ರಂದು ಸವದತ್ತಿಯ ಶಿರಸಂಗಿ ವೇದಮಾತಾ ಗಾಯತ್ರಿ ಸಂಸ್ಕೃತ ಗುರುಕುಲ ಕಲ್ಯಾಣ ಮಂಟಪದಲ್ಲಿ ನಡೆಯುವ ಸಮಾರಂಭದಲ್ಲಿ ರಾಮದುರ್ಗದ ಶಾಸಕರಾದ ಅಶೋಕ ಪಟ್ಟಣ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕಳೆದ 25 ವರ್ಷಗಳಿಂದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡುತ್ತಿರುವ ನಾಗೇಶ್ ನಾಯಕ 27 ಕೃತಿಗಳನ್ನು ರಚಿಸಿದ್ದಾರೆ. ಸಹೃದಯ ಸಾಹಿತ್ಯ ಪ್ರತಿಷ್ಠಾನ ಸ್ಥಾಪಿಸಿ ಅತ್ಯುತ್ತಮ ಕವನ ಸಂಕಲನಗಳಿಗೆ ರಾಜ್ಯಮಟ್ಟದ 'ಸಹೃದಯ ಕಾವ್ಯ ಪ್ರಶಸ್ತಿ' ಯನ್ನು ಕೊಡಮಾಡುತ್ತಿದ್ದಾರೆ. ದಸರಾ ಉತ್ಸವ, ರನ್ನ ಉತ್ಸವ, ಕಿತ್ತೂರು ಉತ್ಸವ, ಹಂಪಿ ಉತ್ಸವ, ಇಟಗಿ ಉತ್ಸವ, ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ಆಳ್ವಾಸ್ ನುಡಿಸಿರಿ ಸಮ್ಮೇಳನ, ದೂರದರ್ಶನ, ರೇಡಿಯೋ ಕಾರ್ಯಕ್ರಮ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಕವಿತೆ ವಾಚನ ಮಾಡಿದ್ದಾರೆ. ನಾಡಿನ ಪ್ರತಿಷ್ಠಿತ ಅಮ್ಮ ಪ್ರಶಸ್ತಿ, ಸಂಚಯ ಕಾವ್ಯ ಪುರಸ್ಕಾರ, ಸಂಕ್ರಮಣ ಕಾವ್ಯ ಪ್ರಶಸ್ತಿ, ಆಜೂರು ಪುಸ್ತಕ ಪ್ರಶಸ್ತಿ, ಕಸಾಪ ದತ್ತಿ ಪ್ರಶಸ್ತಿ, ಇಂಚಲ ಕಾವ್ಯ ಪ್ರಶಸ್ತಿ, ಅಡ್ವೈಸರ್ ಪ್ರಶಸ್ತಿ, ದಸಾಪ ಪುಸ್ತಕ ಪ್ರಶಸ್ತಿ, ಸಿರಿಗನ್ನಡ ಪುಸ್ತಕ ಪ್ರಶಸ್ತಿ, ಬೆಳ್ಳಿ ಸಂಭ್ರಮ ಗಜಲ್ ಕಾವ್ಯ ಪ್ರಶಸ್ತಿ, ತಾಲೂಕಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಸಂದಿವೆ. ಚಂದನ ಟಿ.ವಿ.ಯ ಬೆಳಗು, ಶುಭೋದಯ ಕಾರ್ಯಕ್ರಮದ ನೇರ ಸಂದರ್ಶನದಲ್ಲಿ ಪಾಲ್ಗೊಂಡಿದ್ದಾರೆ.

ಯಶಸ್ವಿಯಾಗಿ ನಡೆದ ಕಳಸಾರೋಹಣ



ಯಮಕನಮರಡಿ: ಸಮೀಪದ ದಾದಾಬಾನಹಟ್ಟಿ ಗ್ರಾಮದ ಜಾಗೃತ ದೇವತೆ ಶಕ್ತಿ ಸ್ವರೂಪಿಣಿ ಆದ ಶ್ರೀ ಲಕ್ಷ್ಮೀದೇವಿ ಮಂದಿರದ ನೂತನ ಶಿಖರದ ಕಳಸಾರೋಹಣ ಸಮಾರಂಭ ಯಶಸ್ವಿಯಾಗಿ ನಡೆಯಿತು.

ಸಾನ್ನಿಧ್ಯವನ್ನು ಹತ್ತರಗಿ ಕಾರಿಮಠದ ಗುರು ಸಿದ್ಧೇಶ್ವರ ಸ್ವಾಮೀಜಿ ಹಾಗೂ ಯಮಕನಮರಡಿ ಹತ್ತರಗಿ ಹರಿಮಂದಿರದ ಆನಂದ ಮಹಾರಾಜ್ ಗೋಸಾವಿ ಅವರು ವಹಿಸಿ ಕಳಸ ಪೂಜೆ ನೆರವೇರಿಸಿ ಹೋಮ ಹವನ ಇತ್ಯಾದಿ ಕಾರ್ಯಕ್ರಮಗಳು ನೆರವೇರಿಸಿದರು. ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಶೆಟ್ಟೆಪ್ಪ ಜಮಕೋಳಿ, ಉಪಾಧ್ಯಕ್ಷ ನಾರಾಯಣ ಪವಾರ, ಕಾರ್ಯದರ್ಶಿ ಮಂಜುನಾಥ್ ಓಮನವರ್, ಖಜಾಂಚಿ ಈರಣ್ಣ ಕ ಘಸ್ತಿ, ಸದಸ್ಯರಾದ ಲಗಮಣ್ಣ ಜಮಕೋಳಿ, ರಮೇಶ್ ಡೊಳ್ಳಿ, ಮಹಾದೇವ ಢಂಗ, ವಸಂತ ಗಸ್ತಿ, ಬಸವರಾಜ ಗಸ್ತಿ, ಪರಸಪ್ಪ ಶಿರನಗಿ, ಅಜ್ಜಪ್ಪ ಅತ್ಯಾಳಿ, ಲಗಮಣ್ಣ ಬರಗಾಲಿ, ಜಗದೀಶ ಪವಾರ್, ಭೀಮಪ್ಪ ಚನ್ನಬಸವಣ್ಣವರ, ಮಲ್ಲಪ್ಪ ಮಜತಿ, ರವೀಂದ್ರ ಗಸ್ತಿ, ನಾಗೇಂದ್ರ ಮಜತಿ, ಈರಪ್ಪಣ್ಣ ಘಸ್ತಿ ಹಾಗೂ ಗ್ರಾಮದ ಸಕಲ ಭಕ್ತಾದಿಗಳು ಹತ್ತರಗಿಯಿಂದ ಬಂದಿರುವ ಎಲ್ಲ ಭಕ್ತಾದಿಗಳು ಉಪಸ್ಥಿತರಿದ್ದು ಕಳಸಾರೋಹಣ ನೆರವೇರಿಸುವಲ್ಲಿ ಯಶಸ್ವಿಯಾದರು.



ಚಿಕ್ಕೋಡಿ: ಪಟ್ಟಣದಲ್ಲಿ ಕರ್ನಾಟಕ ಸ್ಲಂ ಜನರ ಸಂಘಟನೆಯಿಂದ ಸೋಮವಾರ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಚಿಕ್ಕೋಡಿ ತಹಶೀಲ್ದಾರ್ ರಾಜೇಶ ಬುರ್ಲಿ ಅವರಿಗೆ ಮನವಿ ಸಲ್ಲಿಸಲಾಯಿತು.

ಉಜ್ವಲ ಭವಿಷ್ಯಕ್ಕೆ ಏಕಚಿತ್ತದ ಅಧ್ಯಯನ ಅವಶ್ಯ

ಯಮಕನಮರಡಿ: ಸ್ಥಳೀಯ ಸಿಈಎಸ್ ವಾಣಿಜ್ಯ ಮಹಾವಿದ್ಯಾಲಯ ಸನ್ 25-26ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವು ಶನಿವಾರ ಕಾಲೇಜಿನ ಸಭಾಭವನದಲ್ಲಿ ಯಶಸ್ವಿಯಾಗಿ ನಡೆಯಿತು.

ಆರಂಭದಲ್ಲಿ ಪ್ರಾಚಾರ್ಯ ಕುಮಾರಿ ಅರುಣ ಸೂಜಿ ಅವರು ಸ್ವಾಗತಿಸಿ ಪರಿಚಯ ಭಾಷಣ ಮಾಡಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಐಎಎಸ್ ಭಾರತೀಯ ಆಡಳಿತ ಸೇವ ತರಬೇತಿದಾರರು ಕಿರಣ್ ಕಮತೆ ಆಗಮಿಸಿ ಮಾತನಾಡಿ, ವಿದ್ಯಾರ್ಥಿಗಳು ಮುಂದಿನ ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿ ಕೊಳ್ಳಬೇಕಾದರೆ ಏಕ ಚಿತ್ತದಿಂದ ಅಧ್ಯಯನ ಮಾಡಿ ಹೆಚ್ಚಿನ ಅಂಕಗಳನ್ನು ಪಡೆಯಿರಿ. ಮುಂದಿನ ತಮ್ಮ ಯುಪಿಎಸ್ ಐಪಿಎಸ್ ಐಎಎಸ್ ಪದವಿಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿ ಸದರಿ ಸಿಈಎಸ್ ಸಂಸ್ಥೆಗೆ ಹೆಸರು ತರಬೇಕೆಂದು ಹೇಳಿದರು.

ಈಗಾಗಲೇ ಸಿಈಎಸ್ ಸಂಸ್ಥೆಯಿಂದ ವಿದ್ಯೆ ಪಡೆದ ವಿದ್ಯಾರ್ಥಿಗಳು ವಿದೇಶಗಳಲ್ಲಿ ಉನ್ನತ ಸ್ಥಾನಗಳಲ್ಲಿ ನೌಕರಿ ಮಾಡುವದರ ಜೊತೆಗೆ ನಮ್ಮ ಸಂಸ್ಥೆಯ ದೇಶದ ಹೆಸರು ತಂದವರಾಗಿದ್ದಾರೆ ಆದರಂತೆ ತಾವುಗಳು ಉತ್ತಮ ವಿದ್ಯಾವಂತರಾಗಿ ಹೊರಹೊಮ್ಮಬೇಕೆಂದು ಹೇಳಿದರು.

ಸಂಸ್ಥೆಯ ಉಪಾಧ್ಯಕ್ಷರಾದ ಈರಣ್ಣ ದುಗ್ಗಾಣ್ಣಿ, ಮೋಹನ್ ತುಬಚಿ, ಪ್ರಾಚಾರ್ಯ ವಿ.ಬಿ. ನಾಶಿಪೂಡಿ, ನಿವೃತ್ತಿ ಪ್ರಾಚಾರ್ಯ ಅವಲಕ್ಕಿ, ಹಾಗೂ ಉಪನ್ಯಾಸಕಿಯರ ಬಳಗ ಉಪಸ್ಥಿತರಿದ್ದು, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಪಾರಿತೋಷಕ ವಿತರಣಾ ಸಮಾರಂಭವು ನಡೆಯಿತು.



ಯಮಕನಮರಡಿ: ಸ್ಥಳೀಯ ಸಿಈಎಸ್ ವಾಣಿಜ್ಯ ಮಹಾವಿದ್ಯಾಲಯ ಸನ್ 25-26ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವು ಶನಿವಾರ ಕಾಲೇಜಿನ ಸಭಾಭವನದಲ್ಲಿ ಯಶಸ್ವಿಯಾಗಿ ನಡೆಯಿತು.

ಪ್ರಾಚೀನ ಹಸ್ತ ಪ್ರತಿಗಳ ಸಮೀಕ್ಷೆ, ಡಿಜಿಟಲೀಕರಣ

ಬೆಳಗಾವಿ: ಬೆಳಗಾವಿ ವಲಯದ ಜ್ಞಾನ ಭಾರತಂ ಮಿಷನ್ ತಂಡದ ಸಹಯೋಗದಲ್ಲಿ ಜ್ಞಾನ ಭಾರತಂ ಮಿಷನ್ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿ ಜಿಲ್ಲೆಯಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ತಾಳೆ ಗ್ರಂಥಗಳು ಹಸ್ತಲಿಪಿಗಳು ಹಾಗೂ ಪ್ರಾಚೀನ ದಾಖಲೆಗಳ ಮಾಹಿತಿಯನ್ನು ಶೀಘ್ರವಾಗಿ ನೀಡಬೇಕೆಂದು ಹಾಗೂ ಡಿಜಿಟಲೀಕರಣ ಕಾರ್ಯಕ್ಕೆ ಸಂಬಂಧಿತ ಅಧಿಕಾರಿಗಳು ಸಹಕರಿಸಬೇಕೆಂದು ಜಿಲ್ಲಾಧಿಕಾರಿ ಮೊಹಮ್ಮದ ರೋಶನ್ ತಿಳಿಸಿದರು.



ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪ್ರವಾಸೋದ್ಯಮ ಇಲಾಖೆ ವತಿಯಿಂದ ಕರ್ನಾಟಕದ ಪ್ರಾಚೀನ ಹಸ್ತ ಪ್ರತಿಗಳ ಸಮೀಕ್ಷೆಯಡಿ ಡಿಜಿಟಲೀಕರಣ ಜೂನ್ -2026ರ ಅಂತ್ಯದ ವರೆಗೆ ನಡೆಯಲಿದೆ ಎಂದರು.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ದೇಶಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು ಹಾಗೂ ಐತಿಹಾಸಿಕ ದಾಖಲೆಗಳನ್ನು ಸಂರಕ್ಷಿಸಿ ಡಿಜಿಟಲೀಕರಣ ಮಾಡುವ ಕೆಲಸ ನಡೆಯುತ್ತಿದೆ. ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಶಾಶ್ವತವಾಗಿ ಉಳಿಸುವುದರ ಜೊತೆಗೆ ಸಾರ್ವಜನಿಕರಿಗೆ ಒಂದೇ ರಾಷ್ಟ್ರೀಯ ವೇದಿಕೆ ಮೂಲಕ ಪ್ರವೇಶ ಕಲ್ಪಿಸುವುದಾಗಿದೆ ಎಂದು ತಿಳಿಸಿದರು.

ಈ ಯೋಜನೆಯಡಿ ಹಸ್ತಪ್ರತಿಗಳ ಸಮೀಕ್ಷೆ, ಸಂರಕ್ಷಣೆ, ರಕ್ಷಣೆ, ಡಿಜಿಟಲೀಕರಣ, ನೋಂದಣಿ, ವಿಮರ್ಶಾತ್ಮಕ ಸಂಪಾದನೆ ಮತ್ತು ಮೊಬೈಲ್ ಅಪ್ಲಿಕೇಶನ್ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ. ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಿರುವ ಅಪ್ಲಿಕೇಶನ್ ಮೂಲಕ ದೇಶಾದ್ಯಂತ ಇರುವ ಹಸ್ತಪ್ರತಿಗಳ ಮಾಹಿತಿಯನ್ನು ಅಪ್ ಲೋಡ್ ಮಾಡಿ ರಾಷ್ಟ್ರೀಯ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಹಂಚಿಕೊಳ್ಳುವ ಯೋಜನೆ ರೂಪಿಸಲಾಗಿದೆ.

ಈ ಯೋಜನೆಯ ಜಿಲ್ಲಾಮಟ್ಟದ ಸಂಯೋಜಕರಾಗಿ ಡಾ. ಭೀಮಾನಂದ ಬಿ.ಎಚ್-8660973934, ಶ್ರೀನಿವಾಸ ಹುಬ್ಬಳ್ಳಿ-ಸದಸ್ಯರು-9606520140, ರುದ್ರಪ್ಪ ಎನ್ ಸವದಿ ಸದಸ್ಯರು-8147339464, ಸುರ್ಣಕಿತ್ತೂರ-ಸದಸ್ಯರು-8867515490 ರವರಿಗೆ ಸಂಬಂಧಿಸಿದ ಅಧಿಕಾರಿಗಳು, ಗ್ರಂಥಾಲಯಗಳು, ದೇವಾಲಯುಗಳು, ಮಠಗಳು, ಸೂಫಿ ಸಂತರ ಮಠಾಧೀಶರು, ಶಿಕ್ಷಣ ಸಂಸ್ಥೆಗಳು ಹಾಗೂ ಸಾರ್ವಜನಿಕ ಮನೆಗಳಲ್ಲಿ, ಖಾಸಗಿ ಸಂಗ್ರಹಗಳಲ್ಲಿ ಹಸ್ತಪ್ರತಿಗಳ ಗುರುತಿಸುವಿಕೆ, ಸಂಗ್ರಹ ಸ್ಥಳಗಳಿಗೆ ಪ್ರವೇಶ ಕಲ್ಪಿಸಿ ಸಮೀಕ್ಷೆಗೆ ಸಹಕಾರ ಒದಗಿಸಬೇಕು.

ಡಿಜಿಟಲೀಕರಣ ಮತ್ತು ಪಟ್ಟಿಮಾಡುವಿಕೆ ಕಾರ್ಯಗಳಿಗೆ ಸಹಾಯ, ಸ್ಥಳೀಯ ಸಂಸ್ಥೆಗಳು ಹಾಗೂ ಸಂರಕ್ಷಕರಲ್ಲಿ ಜಾಗೃತಿ ಮೂಡಿಸುವಿಕೆ, ಅಮೂಲ್ಯವಾದ ಪ್ರಾಚೀನ ಹಸ್ತ ಪ್ರತಿಗಳ ಮಾಹಿತಿಯನ್ನು ಈ ಯೋಜನೆಯಡಿ ಹಸ್ತಪ್ರತಿಗಳನ್ನು ಮರು ಪರಿಶೀಲಿಸಿ ಸಾರ್ವಜನಿಕರು ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

ಅಪರ ಜಿಲ್ಲಾಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರು ಹಾಗೂ ಬೆಳಗಾವಿ ವಲಯದ ಜ್ಞಾನ ಭಾರತಂ ಮಿಷನ್ ತಂಡದ ಸದಸ್ಯರು, ಜಿಲ್ಲಾ ಪ್ರವಾಸೋದ್ಯಮ ಸಮಾಲೋಚಕರು ಉಪಸ್ಥಿತರಿದ್ದರು.

ಮೊಬೈಲ್ ದಾಸರಾಗದೇ ಪುಸ್ತಕ ಪ್ರೇಮಿಯಾಗಿ

ಕಾಗವಾಡ: ಆಧುನಿಕ ಯುಗದಲ್ಲಿ ಮೊಬೈಲ್ ದಾಸರಾಗುವುದಕಿಂತ ಪುಸ್ತಕ ಪ್ರೇಮಿಯಾಗುವುದು ಜೀವನದ ಬಹುದೊಡ್ಡ ಸಾಧನೆ ಎಂದು ಅಥಣಿ ಎಸ್‌ಎಸ್‌ಎಂಎಸ್ ಕಾಲೇಜು ಉಪನ್ಯಾಸಕ ಅಶೋಕ ಕಾಂಬಳೆ ಹೇಳಿದರು.

ಸೋಮವಾರ ತಾಲೂಕಿನ ಐನಾಪೂರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಐನಾಪುರ ಆಯೋಜಿಸಿದ ಸನ್ 2025-26 ಸಾಲಿನ ಸಾಂಸ್ಕೃತಿಕ, ಕ್ರೀಡೆ, ವಿವಿಧ ಚಟುವಟಿಕೆಗಳ ಸಮಾರೋಪ ಮತ್ತು ಬಿಎ, ಬಿಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವನ್ನು ದೀಪ ಪ್ರಜ್ವಲಿಸುವಮೂಲಕಉದ್ಘಾಟಿಸಿಮಾತನಾಡಿದ ಅವರು, ಪದವಿ ಶಿಕ್ಷಣ ಎಂದರೆ ಪಠ್ಯ ಪುಸ್ತಕದ ಜ್ಞಾನಕಷ್ಟೇ ಸಿಮೀತವಲ್ಲ ಅದೊಂದು ಕನಸನ್ನು ನನಸಾಗಿಸುವ ವೇದಿಕೆ ಅದು ದಿಕ್ಸೂಚಿ ಶಿಕ್ಷಣದೊಂದಿಗೆ ಸಂಸ್ಕಾರ ಸೇರಿದಾಗ ಮಾತ್ರ ವ್ಯಕ್ತಿತ್ವ ಪರಿಪೂರ್ಣವಾಗುತ್ತದೆ. ಯಾರು ಹೊಸದನ್ನು ಸೃಷಿಸಬಲ್ಲರೋ ಅವರು ಸ್ಪರ್ಧಾತ್ಮಕ ಜಗತ್ತಿನಲ್ಲಿ ಉಳಿಯ ಬಲ್ಲರೋ ಮೌಲ್ಯಗಳ ಜತೆಗೆ ಬಂದವರು ಮೌಲ್ಯಗಳನ್ನು ಉಳಿಸುತ್ತಾರೆ. ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚು ಗಮನಹರಿಸಬೇಕು ಓದು ಮಾತ್ರ ನಿಮ್ಮ ಬದುಕನ್ನು ರೂಪಿಸುತ್ತದೆ ಎಂದರು.

ಅಧ್ಯಕ್ಷತೆಯನ್ನು ವಹಿಸಿದ ಪ್ರಾಚಾರ್ಯ ಎನ್.ಕೆ. ಮಾಂಗ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವೃತ್ತಿ ಜೀವನದಲ್ಲಿ ಪ್ರಾಮಾಣಿಕತೆ, ನೈತಿಕ ಮೌಲ್ಯಗಳು ಮಾನವೀಯತೆಯ ಗುಣಗಳನ್ನು ಮೈಗೂಡಿಸಿಕೊಂಡು ಅಧ್ಯಯನದಲ್ಲಿ ತೊಡಗಿದರೆ ಬದುಕು ಉಜ್ವಲವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಮುರಗೇಪ್ಪ ಮಹಾಜನ, ಸ್ವಾತಿ ಪಾಟೀಲ, ಪ್ರಕಾಶ ಕೋರ್ಬು, ಮಹೇಶ ಸೋಲ್ಲಾಪುರ ಆರ್.ಬಿ ಬಸನ್ನವರ, ಶಂಕರ ನಡೋಣಿ, ಸುದರ್ಶನ ಚೇಂತೆನ್ನವರ, ಅರವಿಂದ ಕಾರ್ಚಿ, ವೇದಿಕೆಯ ಮೇಲಿದರು. ಉಪನ್ಯಾಸಕಿ ಶಾಂತಾ ಬಂಗಾರಿ, ಉಪನ್ಯಾಸಕ ಪರಶುರಾಮ ಹರಳೆ, ಕಪೀಲ ಕಾಂಬಳೆ, ಸುಧೀರ ಬೇಡರ, ಕುತುಬುದ್ದಿನ ವಾಗನಗೇರಿ, ಎಲ್ಲ ಭೋಧಕರು, ಸಿಬ್ಬಂದಿಗಳು ವಿದ್ಯಾರ್ಥಿ, ವಿದ್ಯಾರ್ಥಿ ನಿಯರು ಇದ್ದರು. ಕು ಪ್ರೀಯಾ ಗಾಣಿಗೇರ,ರಕ್ಷಿತಾ ದೇಸಾಯಿ, ನಿರೂಪಿಸಿದರು. ಪ್ರೊ.ಶ್ರುತಿ ಹೆಚ್ ಸ್ವಾಗತಿಸಿದರು. ಪ್ರೊ.ಪಿ ಎಮ್ ಚೌಗಲಾ ಪರಿಚಯಿಸಿದರು. ಉಪನ್ಯಾಸಕ ಸೊಹಲ್ ಸತ್ತಿಕರ ವಂದಿಸಿದರು.



ಮೂಡಲಗಿ ಮಾನವ ಹಕ್ಕುಗಳ ಆಯೋಗದ ಉದ್ಘಾಟನೆ

ಮೂಡಲಗಿ: ರಾಷ್ಟ್ರೀಯ ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯ ಆಯೋಗದ ಜಿಲ್ಲಾ ಘಟಕ ಬೆಳಗಾವಿ, ತಾಲೂಕಾ ಘಟಕ ಮೂಡಲಗಿ ಹಾಗೂ ತಾಲೂಕು ಕಾನೂನು ಸೇವೆಗಳ ಸಮಿತಿ ಇವರ ಸಂಯುಕ್ತ ಆಶ್ರಯದಲ್ಲಿ ಮಾನವ ಹಕ್ಕುಗಳ ಮತ್ತು ಸಾಮಾಜಿಕ ನ್ಯಾಯ ಆಯೋಗದ ಉದ್ಘಾಟನಾ ಸಮಾರಂಭ ಹಾಗೂ ಕಾನೂನು ಅರಿವು-ನೆರವು ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮವನ್ನು ಹಿರಿಯ ಶ್ರೇಣಿ ದಿವಾನಿ ಹಾಗೂ ಜೆ.ಎಮ್.ಎಫ.ಸಿ ನ್ಯಾಯಾಧೀಶೆಶಾಂತಮ್ಮಮಲ್ಲಿಕಾರ್ಜುನಗೌಡ ಪಿ. ಉದ್ಘಾಟಿಸಿ ಕಾನೂನು ನೆರವಿನ ಪ್ರಾಮುಖ್ಯತೆಯನ್ನು ವಿವರಿಸಿದರು.

ರಾಷ್ಟ್ರೀಯ ಮಾನವ ಹಕ್ಕುಗಳ ಮತ್ತು ಸಾಮಾಜಿಕ ನ್ಯಾಯ ಆಯೋಗದ ಬೆಳಗಾವಿ ಜಿಲ್ಲಾ ಅಧ್ಯಕ್ಷ ಅಶೋಕ ಕೆಂಗನ್ನವರ ಹಾಗೂ ತಹಶೀಲ್ದಾರ್ ಶ್ರೀಶೈಲ ಗುಡುಮೆ ಅವರು ಜಂಟಿಯಾಗಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ದತ್ತಾತ್ರೇಯಬೋಧ ಸ್ವಾಮೀಜಿ ಹಾಗೂ ಶ್ರೀ ಶ್ರೀಧರಬೋಧ ಸ್ವಾಮೀಜಿ ಅವರ ನೇತೃತ್ವದಲ್ಲಿ ಮಾತೋಶ್ರೀ ಡಾ. ಕಾವ್ಯ ಅಮ್ಮನವರು ವಹಿಸಿ ಆಶೀರ್ವಚನ ನೀಡಿದ್ದರು.

ಮುಖ್ಯ ಅತಿಥಿಗಳಾಗಿ ವೈಧ್ಯಾಧಿಕಾರಿ ಡಾ. ಭಾರತಿ ಕೋಣಿ, ಸುನೀತಾ ಐಹೊಳೆ, ವೈಶಾಲಿ ಬರಬರೆ,ವಿನೋದ ಪಾಟೀಲ, ರೂಪಾ ಕಾಂಬಳೆ, ಸವಿತಾ ಕಾಂಬಳೆ, ಇಂದಿರಾ ಬೋವಿ ಹಾಗೂ ವಿ.ಎಚ್ ಬಾಲರೆಡ್ಡಿ ಉಪಸ್ಥಿತರಿದ್ದರು. ತಾಲೂಕಾ ಘಟಕದ ಅಧ್ಯಕ್ಷೆ ಉಜ್ವಲಾ ಕುರಣೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ತಾಲೂಕು ಮುಖ್ಯ ಕಾರ್ಯದರ್ಶಿ ಶ್ರೀದೇವಿ ಭಸ್ಮೆ ಸೇರಿದಂತೆ ಪದಾಧಿಕಾರಿಗಳಾದ ಸುಶೀಲಾ ಕೌಜಲಗಿ, ಶ್ರೀದೇವಿ ಮುಗದುಮ್ಮ, ಮಹಾದೇವಿ ಕುದರಿ, ಲಕ್ಷ್ಮೀ ಪಿರೋಜಿ, ರಾಜಶ್ರೀ ಅಡಿಬಟ್ಟಿ, ಶಿಲ್ಪಾಶ್ರೀ ದೊಡ್ಡವಾಡ, ಜ್ಯೋತಿ ಧವಳೇಶ್ವರ, ಕಸ್ತೂರಿ ಹೆಗ್ಗಾನಿ, ಸವಿತಾ ಪಾಟೀಲ್ ರೂಪಾ ಸೋನವಾಲ್ಕರ್, ರಾಜೇಶ್ವರಿ ಕಂಕನವಾಡಿ, ಲಕ್ಷ್ಮಿ ಪಿರೋಜಿ ಅಪರ್ಣ ಬಳಿಗಾರ ಡಾ ಸುಭಾಸ ಕುರಣೆ ಹಾಗೂ ಚಂದ್ರಕಾಂತ ಭಸ್ಮೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.ವಿದ್ಯಾ ಜುಂಜರವಾಡ ಸ್ವಾಗತಿಸಿದರು,ಶಶಿರೇಖಾ ಬೆಳ್ಳಕ್ಕಿ ಕಾರ್ಯಕ್ರಮ ನಿರೂಪಿಸಿದರು.



ಶಾಲಾ ಸಿದ್ಧತಾ ಮೇಳ ತರಬೇತಿ ಕಾರ್ಯಾಗಾರ

ಹುಕ್ಕೇರಿ: ಮಗುವಿನ ಮೊದಲ ಔಪಚಾರಿಕ ಕಲಿಕಾ ಕೇಂದ್ರ ಅಂಗನವಾಡಿ. ಇಲ್ಲಿ ಅಕ್ಷರ ಕಲಿಕೆಗಿಂತ ಮೊದಲು ಆಟ, ಹಾಡು, ಕಥೆ ಮೂಲಕ ಮಗುವನ್ನು ಕಲಿಕೆಗೆ ಸಿದ್ಧಗೊಳಿಸಬೇಕು ಎಂದು ಸಿಡಿಪಿಒ ಹೊಳೆಪ್ಪ ಎಚ್. ಹೇಳಿದರು.

ಪಟ್ಟಣದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಭಾಭವನದಲ್ಲಿ ನಡೆದ 'ಶಾಲಾ ಸಿದ್ಧತಾ ಮೇಳ' ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಚಿಕ್ಕ ವಯಸ್ಸಿನಲ್ಲಿ ಸಿಗುವ ಪೌಷ್ಟಿಕ ಆಹಾರ, ಪ್ರೀತಿ, ಸುರಕ್ಷತೆ ಮತ್ತು ಉತ್ತೇಜಕ ವಾತಾವರಣವು ಮುಂದಿನ ಶಿಕ್ಷಣಕ್ಕೆ ಭದ್ರ ಬುನಾದಿ. ಭಾಷೆ, ಸಾಮಾಜಿಕ ಕೌಶಲ್ಯ, ಯೋಚನಾ ಶಕ್ತಿ ಬೆಳೆಯಲು ಮೊದಲ 6 ವರ್ಷಗಳು ಬಹಳ ಮುಖ್ಯ. ಈ ಅವಧಿ ತಪ್ಪಿದರೆ ಮತ್ತೆ ಸಿಗುವುದಿಲ್ಲ. ಅಂಗನವಾಡಿ ಕೇವಲ ಊಟ ಕೊಡುವ ಕೇಂದ್ರವಲ್ಲ. ಮಗುವಿನ ದೈಹಿಕ, ಮಾನಸಿಕ, ಭಾವನಾತ್ಮಕ ಬೆಳವಣಿಗೆಗೆ ಇದು ಮೊದಲ ಮೆಟ್ಟಿಲು. ಹಾಗಾಗಿ ಅಂಗನವಾಡಿಯನ್ನು 'ಮೊದಲ ಶಾಲೆ' ಎಂದು ಪರಿಗಣಿಸಿ ಕಾರ್ಯಕರ್ತೆಯರು ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದರು.



ಶಿಶು ಅಭಿವೃದ್ಧಿ ಸಹಾಯಕ ಯೋಜನಾಧಿಕಾರಿ ಕಮಲಾ ಹಿರೇಮಠ ಮಾತನಾಡಿ, ಚಿಕ್ಕಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಸಂಸ್ಕಾರ, ಶಿಕ್ಷಣದ ಜೊತೆಗೆ ಶಿಸ್ತಿನ ಜಾಗೃತಿಯೂ ಅಗತ್ಯಎಂದು ಹೇಳಿದರು.

ಸಾವಯುವ, ತಂತ್ರಜ್ಞಾನ ಆಧಾರಿತ ಶಿಕ್ಷಣ ಪಡೆಯಿರಿ: ಶಾಸಕ ಸವದಿ

ಕೊಕಟನೂರ: ವಿದ್ಯಾರ್ಥಿಗಳು ಸಾವಯವ ಹಾಗೂ ತಂತ್ರಜ್ಞಾನ ಆಧಾರಿತ ಶಿಕ್ಷಣ ಪಡೆದು ಕೃಷಿ ಚಟುವಟಿಕೆಯಲ್ಲಿ ತೊಡಗಬೇಕು ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಸಮೀಪದ ಕೊಕಟನೂರ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಲ್ಲಿ ಸೋಮವಾರ ಆಯೋಜಿಸಲಾದ ಪ್ರಸಕ್ತ ಸಾಲಿನ ಸಾಂಸ್ಕೃತಿಕ, ಕ್ರೀಡೆ ರಾಷ್ಟ್ರೀಯ ಸೇವಾ ಯೋಜನೆ ಸೌಟ್ಸ್ ಮತ್ತು ಗೈಡ್ಸ್, ರಡ್ ಕ್ರಾಸ್ ಚಟುವಟಿಕೆ ಸಮಾರೋಪ, ಅಂತಿಮ ವರ್ಷದ ಬಿಎ, ಬಿಕಾಂ, ಬಿಎಸ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ಕಾಲೇಜು ಸಭಾಂಗಣ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಹೈನುಗಾರಿಕೆ, ಮೀನುಗಾರಿಕೆ, ರೇಷ್ಮೆ, ತೋಟಗಾರಿಕೆ ಬೆಳೆಗಳನ್ನು ಬೆಳೆದು ಜೀವನ ರೂಪಿಸಿಕೊಳ್ಳಬೇಕು, ಶಿಕ್ಷಣದಲ್ಲಿ ಕೌಶಲ್ಯ, ನೈಪುಣ್ಯತೆ ಅಳವಡಿಸಿಕೊಳ್ಳಬೇಕು. ಕೃತಕ ಬುದ್ಧಿ ಮತ್ತೆ (ಎಐ) ಇನ್ನೂ ಜಗತ್ತನ್ನು ಆಳಲಿದೆ. ಮಾನವ ಸಂಪನ್ಮೂಲ ಬಳಕೆ ಕಡಿಮೆಯಾಗಲಿದೆ. ವೈದ್ಯ, ಅಭಿಯಂತರ, ಐಟಿ, ಬಿಟಿ ಕ್ಷೇತ್ರದಲ್ಲಿ ಗಣನೀಯ ಹೊಡೆತ ಬಿಳಲಿದೆ. ಇದರಿಂದ ನಿರುದ್ಯೋಗ ಸಮಸ್ಯೆ ಮತ್ತಷ್ಟು ಹೆಚ್ಚಲಿದೆ, ಈಗಾಗಲೇ ರಾಜ್ಯದಲ್ಲಿ 3 ಲಕ್ಷ ಹುದ್ದೆಗಳು ಖಾಲಿ ಇವೆ. ಎಲ್ಲವನ್ನೂ ತುಂಬಲು ಸಾಧ್ಯವಿಲ್ಲ, ಕೊಕಟನೂರ ಗ್ರಾಮದಲ್ಲಿ 125 ಎಕರೆ ಜಮೀನನ್ನು ಕೈಗಾರಿಕೆ ಅಭಿವೃದ್ಧಿ ಪಡಿಸಲು ಇಲಾಖೆಗೆ ಜಮೀನು ಹಸ್ತಾಂತರಿಸಲಾಗಿದೆ. ಸಣ್ಣ ಹಾಗೂ ಗುಡಿ ಕೈಗಾರಿಕೆ ಸ್ಥಾಪಿಸಲು ಯುವಕರು ಮುಂದೆ ಬಂದರೆ ಸಹಾಯಧನ ನೀಡಲಾಗುವುದು ಎಂದರು.

ಕೆಪಿಸಿಸಿ ಸದಸ್ಯ ಶ್ಯಾಮರಾವ ಪೂಜಾರಿ ಮಾತನಾಡಿ, ಶಾಸಕ ಲಕ್ಷ್ಮಣ ಸವದಿಯವರು ಅಥಣಿ ಕ್ಷೇತ್ರದ ಜನರ ಉಜ್ವಲ ಭವಿಷ್ಯಕ್ಕಾಗಿ ನೀರಾವರಿ, ಕೃಷಿ, ಶಿಕ್ಷಣ, ರಸ್ತೆ, ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಕರ್ಯ ಒದಗಿಸಿ ಅವರ ಬಾಳಿಗೆ ಬೆಳಕಾಗಿದ್ದಾರೆ ಎಂದರು,



ಪ್ರಚಾರ್ಯ ಡಾ, ಪ್ರಭಾಕರ ಖ್ಯಾಡಿ ಅಧ್ಯಕ್ಷತೆ ವಹಿಸಿದ್ದರು, ಈ ವೇಳೆ, ಮುಖಂಡರಾದ ಶಿವಾನಂದ ದಿವಾನಮಳ, ವಿಶಾಲ ದೇಸಾಯಿ, ಸುರೇಶ ಪೂಜಾರಿ, ದಯಾನಂದ ಎನ್.ಎಲ್, ಡಾ, ವಿದ್ಯಾಶ್ರೀ ಕೋಲಕಾರ, ಪಿಯುಸಿ ಪ್ರಾಚಾರ್ಯ ಸುರೇಶ ನಾಯಿಕ, ಪ್ರೌಢಶಾಲೆ ಉಪಪ್ರಾಚಾರ್ಯ ಅಬ್ದುಲ್ ಹಮೀದ್, ಅರ್ಜುನ. ಶಾನವ್ವ ಪೂಜಾರಿ. ಆರ್ ಕಾವರೆ. ಪೂಜಾರಿ, ಸದಾಶಿವ ಹೂಟಿ, ಸುಭಾಷ್ ಸೋಣಕರ್. ಚಂದು ಶರಣ, ಪ್ರವೀಣ್ ತುಬಚಿ. ಮಹಾದೇವ ಕುಂಬಾರ. ಸೇರಿದಂತೆ ಹಲವರು ಇದ್ದರು, ವಿಜಯ ಬಡಿಗೇರ ಸ್ವಾಗತಿಸಿದರು, ಹುಸೇನಸಾಬ ಗಡಕರಿ ನಿರೂಪಿಸಿ ವಂದಿಸಿದರು.

ಗಲಗಿನಮಡ ಗ್ರಾಮದಲ್ಲಿ ನೀರಿನ ಕೊರತೆ: ಸಾರ್ವಜನಿಕರ ಆಕ್ರೋಶ

ಉಳವಯ್ಯ ಹಿರೇಮಠ

ಚನ್ನಮ್ಮನ ಕಿತ್ತೂರು: ಬೇಸಿಲಿನ ಬೇಗೆಯಲ್ಲಿ ಜನರಿಗೆ ಕುಡಿಯಲು ನೀರಿಲ್ಲದೇ ಕಂಗಾಲಾಗಿ ಗುಟುಕು ನೀರು ಹುಡುಕಾಟಕ್ಕೆ ಗ್ರಾಮಸ್ಥರು ಹೊಲ, ಗದ್ದೆಗಳತ್ತ ಮುಖ ಮಾಡಿ ತಿರುಗುವಂತಾಗಿದೆ.

ತಾಲೂಕಿನ ಕುಲವಳ್ಳಿ ಗ್ರಾಪಂ ವ್ಯಾಪ್ತಿಯ ಗಲಿಗಿನಮಡ ಗ್ರಾಮದಲ್ಲಿ ಸುಮಾರು ಆರು ನೂರು ಜನಸಂಖ್ಯೆ ಇರುವ ಈ ಗ್ರಾಮಕ್ಕೆ ನೀರಿನ ಅಭಾವವಿದ್ದು, ಈ ಗ್ರಾಮದಲ್ಲಿ ಒಂದು ಕೊಳವೆ ಭಾವಿ ಇದ್ದು ಅದು ಕೆಲ ದಿವಸಗಳಿಂದ ಸ್ಥಗಿತವಾಗಿದ್ದು ನಂತರ ಅದರ ದುರಸ್ತಿಗೆ ಮತ್ತು ನೀರು ವ್ಯವಸ್ಥೆಗೆ ಅಧಿಕಾರಿಗಳು ಮುಂದಾಗಿಲ್ಲವೆಂದು ಗ್ರಾಮಸ್ಥರು ದೂರುತ್ತಿದ್ದಾರೆ. ಗ್ರಾಮಸ್ಥರು ಕೊಳವೆ ಬಾವಿಗಳಿದ್ದ ಜಮೀನಿಗೆ ಹೋಗಿ ಒಂದೊಂದು ಕೊಡ ನೀರನ್ನು ತಂದು ಜೀವನ ನಡೆಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದನ ಕರುಗಳಿಗಂತು ಮನೆಯಲ್ಲಿ ನೀರನ್ನು ಕುಡಿಸುವುದು ದೂರದ ಮಾತಾಗಿದೆ. ಜಮೀನಿನಲ್ಲಿರುವ ಕೊಳವೆ ಭಾವಿಗಳು ಕಡಿಮೆ ನೀರನ್ನು ಹೊರ ಚಲ್ಲುತ್ತಿರುವುದರಿಂದ ತಮ್ಮ ಬೆಳೆಗಳಿಗೆ ನೀರು ಸಾಕಾಗುತ್ತಿಲ್ಲ ಜನರಿಗೆಲ್ಲಿ ನೀರು ದೊರೆಯಬೇಕು.



ಸರ್ಕಾರವು ಕುಡಿಯುವ ನೀರಿಗಾಗಿ ಸಾಕಷ್ಟು ಖರ್ಚು ಮಾಡುತ್ತಿದೆ. ಶಾಸಕ ಬಾಬಾಸಾಹೇಬ ಪಾಟೀಲ ಇವರು ಬೇಸಿಗೆ ಪೂರ್ವದಲ್ಲಿ ಮತ್ತು ಬೇಸಿಗೆಯಲ್ಲಿ ಅಧಿಕಾರಿಗಳ ಸಭೆಗಳನ್ನು ನಡೆಸಿ ಕುಡಿಯಲು ನೀರಿನ ಅಭಾವವಾಗುವ ಮುನ್ಸೂಚನೆ ಕಂಡು ಬರುವ ಗ್ರಾಮಗಳಿಗೆ ಕೊರತೆಯಾಗುವ ಪೂರ್ವದಲ್ಲಿಯೇ ನೀರಿನ ವ್ಯವಸ್ಥೆ ಕಂಡುಕೊಳ್ಳಿ ಯಾರೂ ನೀರಿನ ತೊಂದರೆ ಅನುಭವಿಸಬಾರದೆಂದು ವ್ಯವಸ್ಥೆಯ ಮೂಲಗಳನ್ನು ತಿಳಿಸಿದರೂ ಅಧಿಕಾರಿಗಳು ಮಾತ್ರ ಹಿಂದೇಟು ಹಾಕುತ್ತಿರುವುದು ಖೇದಕರ ಸಂಗತಿ.

ಈ ಗ್ರಾಮದ ಜನರಿಗೆ ಕುಡಿಯಲು ನೀರಿಲ್ಲದಿದ್ದರೆ ಯಾವುದೇ ಮೂಲದಿಂದಾರೂ ನೀರನ್ನು ಒದಗಿಸುವದು ಅಧಿಕಾರಿಗಳ ಕರ್ತವ್ಯ ಸಾರ್ವಜನಿಕರು ರೊಚ್ಚಿಗೇಳುವ ಮುನ್ನ ಬೇಗನೆ ಕುಡಿಯುವ ನೀರನ್ನು ಒದಗಿಸಬೇಕು.

> **ಈ ಗ್ರಾಮಕ್ಕೆ ಕುಡಿಯುವ ನೀರಿಗೆ ತಕ್ಷಣ ಖಾಸಗಿಯವರ ಕೊಳವೆ ಬಾವಿಯ ಮೂಲಕ ನೀರನ್ನು ಕೊಡುವ ವ್ಯವಸ್ಥೆ ಮಾಡಲಾಗುವುದು ನಂತರ ನೂತನವಾಗಿ ಒಂದು ಕೊಳವೆ ಬಾವಿಯನ್ನು ಕೊರೆಯಲು ವ್ಯವಸ್ಥೆ ಕಲ್ಪಿಸಲಾಗುವುದು ಸಾರ್ವಜನಿಕರಿಗೆ ನೀರಿನ ಕೊರತೆಯಾಗದಂತೆ ನೋಡಿಕೊಳ್ಳುತ್ತೇವೆ.**
>
> ■ ನಿಂಗಪ್ಪ ಮಸಳಿ. ತಾಪಂ ಇಒ. ಚನ್ನಮ್ಮನ ಕಿತ್ತೂರು.

ಗ್ರಾಮಗಳ ಅಭಿವೃದ್ಧಿಗೆ ಶಾಸಕರ ಪ್ರಾಮಾಣಿಕ ಪ್ರಯತ್ನ: ಕೌಜಲಗಿ

ಬೈಲಹೊಂಗಲ: ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಶಾಸಕರು ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದು, ಗ್ರಾಮಸ್ಥರ ಬೇಡಿಕೆಯಂತೆ ಹಂತ ಹಂತವಾಗಿ ಅಗತ್ಯ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಯುವ ಮುಖಂಡ ಬಸವರಾಜ ಕೌಜಲಗಿ ಹೇಳಿದರು.

ಅವರು ಮತಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಒಟ್ಟು 1 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಕಾಮಗಾರಿಗಳಿಗೆ ಶಾಸಕ ಮಹಾಂತೇಶ ಕೌಜಲಗಿ ಅವರ ಅನುಪಸ್ಥಿತಿಯಲ್ಲಿ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಗ್ರಾಮೀಣ ಭಾಗದ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ. ಜನರು ಎದುರಿಸುತ್ತಿರುವ ರಸ್ತೆ, ಒಳಚರಂಡಿ ಹಾಗೂ ಸಂಪರ್ಕ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವುದು ನಮ್ಮ ಮುಖ್ಯ ಗುರಿ. ಯಾವುದೇ ಗ್ರಾಮವೂ ಅಭಿವೃದ್ಧಿಯಿಂದ ಹಿಂದೆ ಉಳಿಯಬಾರದುಎಂಬಉದ್ದೇಶದಿಂದ ಈಕಾಮಗಾರಿಗಳನ್ನು ಹಂತಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.



ರಸ್ತೆ ಮೂಲಸೌಕರ್ಯ ಉತ್ತಮವಾದರೆ ಕೃಷಿ ಉತ್ಪನ್ನಗಳ ಸಾಗಣೆ ಸುಲಭವಾಗುತ್ತದೆ, ಶಿಕ್ಷಣ ಹಾಗೂ ಆರೋಗ್ಯ ಸೇವೆಗಳಿಗೂ ಸುಲಭ ಪ್ರವೇಶ ಸಾಧ್ಯವಾಗುತ್ತದೆ. ಆದ್ದರಿಂದ ಗ್ರಾಮೀಣ ರಸ್ತೆ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದೆ" ಎಂದು ಅವರು ಅಭಿಪ್ರಾಯಪಟ್ಟರು.

ಶಾಸಕ ಮಹಾಂತೇಶ ಕೌಜಲಗಿ ಅವರ ಮಾರ್ಗದರ್ಶನದಲ್ಲಿ ಕ್ಷೇತ್ರದ ಎಲ್ಲ ಗ್ರಾಮಗಳಲ್ಲಿ ಸಮಾನ ಅಭಿವೃದ್ಧಿ ಸಾಧಿಸುವ ಗುರಿ ಹೊಂದಲಾಗಿದೆ ಎಂದು ಅವರು ತಿಳಿಸಿದರು.

ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ತರಿಸಿ, ಬಾಕಿ ಉಳಿದ ರಸ್ತೆ ಹಾಗೂ ಮೂಲಸೌಕರ್ಯ ಕಾಮಗಾರಿಗಳನ್ನು ಕೂಡ ವೇಗವಾಗಿ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಗ್ರಾಮಸ್ಥರು ಶಾಸಕ ಮಹಾಂತೇಶ ಕೌಜಲಗಿ ಅವರಿಗೆ ಕೃತಜ್ಞತೆ ಸಲ್ಲಿಸಿದರು. ಯುವ ಮುಖಂಡ ಬಸವರಾಜ ಕೌಜಲಗಿ ಅವರನ್ನು ಸತ್ಕರಿಸಿದರು. ಮಹೇಶ ಬೆಲ್ಲದ, ದಾದಾಪೀರ ಜಮಾದಾರ, ಸಂಗಪ್ಪ ಬೆಳಗಾವಿ, ಪ್ರಶಾಂತ ಪಟ್ಟಣಶೆಟ್ಟಿ ಸೇರಿದಂತೆ ಚುನಾಯಿತ ಪ್ರತಿನಿಧಿಗಳು, ಗ್ರಾಮದ ಹಿರಿಯರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

> **ಮತಕ್ಷೇತ್ರದ ಮುರಗೋಡ ಗ್ರಾಮದ ರಾಮಾಪೂರ ತಾಂಡೆಯಲ್ಲಿ ಸುಮಾರು 21 ಲಕ್ಷ ವೆಚ್ಚದ ಸಿಸಿ ರಸ್ತೆ ಕಾಮಗಾರಿ, ಇಂಗಳಗಿ ಗ್ರಾಮದಲ್ಲಿ ಸುಮಾರು 50 ಲಕ್ಷ ವೆಚ್ಚದ ಸಿಸಿ ರಸ್ತೆ ಕಾಮಗಾರಿ, ಹೊಸೂರು ಗ್ರಾಮದಲ್ಲಿ ಸುಮಾರು 29 ಲಕ್ಷ ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಗ್ರಾಮೀಣ ಭಾಗದ ರಸ್ತೆ ಸಂಪರ್ಕವನ್ನು ಸುಧಾರಿಸಿ ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಮೂಲಸೌಕರ್ಯ ಅಭಿವೃದ್ಧಿಗೆ ಮತ್ತಷ್ಟು ವೇಗ ನೀಡಲಾಗುತ್ತಿದೆ.**
>
> ■ ಬಸವರಾಜ ಕೌಜಲಗಿ. ಯುವ ಮುಖಂಡ

ಕಿರುಸುದ್ದಿ

ನೀರು ಪೂರೈಕೆಯಲ್ಲಿ ವ್ಯತ್ಯಯ

ಕೆರೂರ: ಪಟ್ಟಣಕ್ಕೆ ಆಲಮಟ್ಟಿ ಜಲಾಶಯದಿಂದ ಸರಬರಾಜು ಆಗುವ ಕುಡಿಯುವ ನೀರಿನ ಪೂರೈಕೆಯಲ್ಲಿ ಎರಡು ಮೂರು ದಿನ ವ್ಯತ್ಯಾಸ ಆಗಲಿದೆ. ಗುಳೇದಗುಡ್ಡ ತಾಲ್ಲೂಕಿನ ತೂಗುಣಸಿ ಕ್ರಾಸ್ ಹತ್ತಿರ ರವಿವಾರ ಸುರಿದ ಗಾಳಿ ಮಳೆಗೆ ವಿದ್ಯುತ್ ಕಂಬಗಳು ನೆಲಕಚ್ಚಿದ ಕಾರಣ ನೀರು ಪೂರೈಕೆಯಲ್ಲಿ ವ್ಯತ್ಯಾಸ ಆಗಲಿದೆ. ವಿದ್ಯುತ್ ಕಂಬಗಳು ದುರಸ್ಥಿ ಮುಗಿದ ನಂತರ ನೀರು ಸರಬರಾಜು ಮಾಡಲಾಗುವುದು,ಸಾರ್ವಜನಿಕರು ಎರಡು ಮೂರು ದಿನಗಳವರೆಗೆ ತಮ್ಮ ತಮ್ಮ ಓಣಿಯ ಹತ್ತಿರವಿರುವ ಬೋರವೆಲ್ ನೀರನ್ನು ಬಳಸಬೇಕು ಹಾಗೂ ದುರಸ್ತಿ ಕಾರ್ಯಕ್ಕೆ ಸಹಕರಿಸಲು ಕೋರಲಾಗಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರಮೇಶ ಮಾಡಬಾಳ ತಿಳಿಸಿದ್ದಾರೆ.

ಕೇಂದ್ರ ಸಚಿವ ಜೋಶಿ ಹೇಳಿಕೆಗೆ ಖಂಡನೆ

ಬಾಗಲಕೋಟೆ: ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧೀ ಅವರನ್ನು ಮಹಮ್ಮದ್ ಅಲಿ ಜಿನ್ನಾ ಜೊತೆ ಹೋಲಿಸಿ ನೀಡಿರುವ ಹೇಳಿಕೆ ಅತ್ಯಂತ ಖಂಡನೀಯ. ಬೇಜವಾಬ್ದಾರಿ ಹಾಗೂ ರಾಜಕೀಯ ದಿವಾಳಿತನದ ಪರಮಾವಧಿಯಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜ ಹದ್ಲಿ ತಿಳಿಸಿದ್ದಾರೆ.



ದೇಶದ ಏಕತೆ, ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಿಗಾಗಿ ನಿರಂತರ ಹೋರಾಟ ನಡೆಸುತ್ತಿರುವ ರಾಹುಲ್ ಗಾಂಧೀಯವರ ಬಗ್ಗೆ ಇಂತಹ ಕೀಳುಮಟ್ಟದ ಆರೋಪ ಮಾಡುವುದು ಬಿಜೆಪಿಯ ಹತಾಶ ಮನಸ್ಥಿತಿಯನ್ನು ತೋರಿಸುತ್ತದೆ. ಜನರ ಸಮಸ್ಯೆಗಳಾದ ಬೆಲೆ ಏರಿಕೆ, ನಿರುದ್ಯೋಗ, ರೈತರ ಸಂಕಷ್ಟ, ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯಗಳಿಂದ ಜನರ ಗಮನ ಬೇರೆಡೆ ಸೆಳೆಯಲು ಬಿಜೆಪಿ ನಾಯಕರು ಉದ್ದೇಶಪೂರ್ವಕವಾಗಿ ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಜವಾಬ್ದಾರಿಯುತ ಕೇಂದ್ರ ಸಚಿವರಾಗಿರುವ ಪ್ರಹ್ಲಾದ ಜೋಶಿಯವರು ತಮ್ಮ ಹೇಳಿಕೆಗೆ ತಕ್ಷಣವೇ ದೇಶದ ಜನರ ಕ್ಷಮೆ ಕೇಳಬೇಕು. ಇಲ್ಲವಾದರೆ ಜನತೆ ಪ್ರಜಾಪ್ರಭುತ್ವದ ಮಾರ್ಗದಲ್ಲಿ ತಕ್ಕ ಉತ್ತರ ನೀಡಲಿದ್ದಾರೆ ಎಂದಿದ್ದಾರೆ.

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್ ಕೆಜಿ-ಯುಕೆಜಿ ಪ್ರಾರಂಭ

ಜಮಖಂಡಿ: ತಾಲೂಕಿನ 89 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ (ಪೂರ್ವ ಪ್ರಾಥಮಿಕ ವರ್ಗಗಳ) ಶಾಲೆಗಳನ್ನು 2026-27ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸಣ್ಣವರ ತಿಳಿಸಿದ್ದಾರೆ. ಬಡ ಮಕ್ಕಳು ಶಿಕ್ಷಣ ದಿಂದ ವಂಚಿತ ವಾಗಬಾರದು ಹಾಗೂ ಖಾಸಗಿ ಶಾಲೆಗಳ ದುಬಾರಿ ಶುಲ್ಕಭರಿಸಲು ಸಾಧ್ಯವಾಗದ ಪಾಲಕರಿಗೆ ಅನುಕೂಲ ಕಲ್ಪಿಸಲು ಸರ್ಕಾರ ಯೋಜನೆ ಜಾರಿಗೊಳಿಸಿದೆ. ತಾಲೂಕಿನಲ್ಲಿ ಕಳೆದ 2 ವರ್ಷಗಳಿಂದ ಎಸ್‌ಡಿಎಂಸಿ ಹಾಗೂ ಸಾರ್ವಜನಿಕರ ಸಹಕಾರ ದಿಂದ 23 ಶಾಲೆಗಳಲ್ಲಿ ಪೂರ್ವಪ್ರಾಥಮಿಕ ತರಗತಿಗಳು ಪ್ರಾರಂಭವಾಗಿವೆ. (ಪಿಎಬಿ) ಯೋಜನಾ ಅನುಮೋದನೆ ಮಂಡಲಿ 60;40 ಅನುಪಾತದಲ್ಲಿ 30 ಶಾಲೆಗಳು, ಪಿಎಂಶ್ರೀ ಯೋಜನೆ ಅಡಿಯಲ್ಲಿ 5, ಕರ್ನಾಟಕ ಪಬ್ಲಿಕ್ ಸ್ಕೂಲ್ 2, ರಾಜ್ಯ ವಲಯದಿಂದ 29 ಹೀಗೆ ಒಟ್ಟು 66 ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ತರಗತಿಗಳು ಪ್ರಾರಂಭ ವಾಗಲಿವೆ. 3ವರ್ಷ 10 ತಿಂಗಳ ಮಕ್ಕಳು ಎಲ್‌ಕೆಜಿ ಹಾಗೂ 4 ವರ್ಷ 10 ತಿಂಗಳ ವಯೋಮಿತಿಯ ಮಕ್ಕಳು ಯುಕೆಜಿಗೆ ಅರ್ಹರಾಗಿರುತ್ತಾರೆ. ಅಲ್ಲದೇ 5 ವರ್ಷ 10 ತಿಂಗಳು ವಯಸ್ಸಿನ ಮಕ್ಕಳು 1ನೇ ತರಗತಿಗೆ ಪ್ರವೇಶ ಪಡೆಯಬಹುದಾಗಿದೆ. ಮಕ್ಕಳ ಭವಿಷ್ಯದ ಶಿಕ್ಷಣಕ್ಕೆ ಅನುಕೂಲ ವಾಗಲಿದ್ದು ಸರ್ಕಾರದ ಯೋಜನೆಯನ್ನು ಪಾಲಕರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಬಿಇಓ ಅಶೋಕ ಬಸಣ್ಣವರ ಮನವಿ ಮಾಡಿದ್ದಾರೆ.

ಮಹಾಂತೇಶ ಹಳಬರ ನಿಧನ

ಹುನಗುಂದ: ತಾಲೂಕಿನ ಬೆಳಗಲ್ಲ ಗ್ರಾಮದ ನಿವಾಸಿ ಹಾಗೂ ತಾಲೂಕು ಕಾಂಗ್ರೆಸ್ ಓಬಿಸಿ ಘಟಕದ ಉಪಾಧ್ಯಕ್ಷ ಮಹಾಂತೇಶ ನಿಂಗಪ್ಪ ಹಳಬರ(50) ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಮೂವರು ಸಹೋದರರು, ನಾಲ್ವರು ಸಹೋದರಿಯರು ಹಾಗೂ ಅಪಾರ ಬಂಧು ಬಳಗ ಇದ್ದಾರೆ.





ಗಲಗಲಿ: ಹಿಂದೂ ಜನಜಾಗೃತಿ ಸಮಿತಿಯಿಂದ ಹರ್-ಘರ್ ಯೋಧ ಎಂಬ ಅಭಿಯಾನದ ಮೂಲಕ ಉಚಿತ ಶೌರ್ಯ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭ ಸಿದ್ಧೇಶ್ವರ ಮಂಗಲ ಭವನದಲ್ಲಿ ನೆರವೇರಿತು. ಹಿಂದೂ ಜನಜಾಗೃತಿ ಸಮಿತಿ ಪ್ರಶಿಕ್ಷಣ ವರ್ಗ ಪ್ರಮುಖರು ಸಾಗರ ದಳವಾಯಿ ಮಾರ್ಗದರ್ಶನ ನೀಡಿದರು. ಶಿವಾಜಿ ಶಿಂದೆ, ಸಂತೋಷ ಶಿಂಧೆ, ಹರೀಶ ದೇಶಪಾಂಡೆ, ಚಿದಾನಂದ ಅಂದವಗೋಳ, ಕುಮಾರ್ ಹಾಗೂ ಗೀತಾ ಶಿಂಧೇ, ಲಕ್ಷ್ಮೀ ಶಿಂಧೆ, ಪಲ್ಲವಿ ಟೋನಪೆ ಪಾಲ್ಗೊಂಡಿದ್ದರು.

ಮಡಿಲಕ್ಕಿ ತುಂಬುವ ಕಾರ್ಯಕ್ರಮ

ಗುಳೇದಗುಡ್ಡ: ದೇವಿಯ ರೂಪಗಳು ಬೇರೆ ಬೇರೆಯಾದರೂ ದೇವಿ ಒಬ್ಬಳೇ. ಬಾದಾಮಿಯಲ್ಲಿರುವ ಬನಶಂಕರಿ ತಾಯಿಯಾಗಲಿ, ಇಲ್ಲಿರುವ ಕನ್ನಿಕಾಪರಮೇಶ್ವರಿಯಾಗಿ ಇಬ್ಬರೂ ಒಂದೇ. ಸಮಾಜದ ವತಿಯಿಂದ ಸುಮಂಗಲಿಯರಿಗೆ ಮಡಿಲಕ್ಕಿ ತುಂಬುವ ಕಾರ್ಯಕ್ರಮ ಮಾಡುವ ತಾಯಿ ಸ್ವರೂಪಿನ ಮಹಿಳೆಯನ್ನು ಆದರಿಸಿದ್ದು ಶ್ಲಾಘನೀಯ ಎಂದರು. ಪಟ್ಟಣದ ವಾಸವಿ ದೇವಸ್ಥಾನದಲ್ಲಿ ಆರ್ಯವೈಶ್ಯ ಸೇವಾಸಮಿತಿ, ವಾಸವಿ ಮಹಿಳಾ ಮಂಡಳಿ ಹಾಗೂ ವಾಸವಿ ಯುವ ಜನ ಸಂಘಗಳ ವತಿಯಿಂದ ಅಧಿಕ ಜೇಷ್ಠ ಮಾಸದ ಪ್ರಯುಕ್ತ ಹಮ್ಮಿಕೊಂಡಿದ್ದ ಸತ್ಯನಾರಾಯಣ ಪೂಜೆ, ಸುಮಂಗಲಿಯರಿಗೆ ಮಡಿಲಕ್ಕಿ ತುಂಬ ಕಾರ್ಯಕ್ರಮದಲ್ಲಿ ಮಾತನಾಡಿದರು. ಆರ್ಯವೈಶ್ಯ ಸಮಾಜದ ಮಹಿಳೆಯರು ಶಾಸಕರ ಪತ್ನಿ ರೋಹಿಣಿ ಭೀಮಸೇನ ಚಿಮ್ಮನಕಟ್ಟಿ ಸುಮಂಗಲಿಯರಿಗೆ ಹಸಿರು ಬಳೆ ತೊಡಿಸಿ, ಮಡಿಲಕ್ಕಿ ತುಂಬಿದರು. ಇದಕ್ಕೂ ಮೊದಲು ಬೆಳಿಗ್ಗೆ ಸತ್ಯನಾರಾಯಣ ಪೂಜೆ ಕೈಗೊಳ್ಳಲಾಯಿತು. ಆರ್ಯವೈಶ್ಯ ಸಮಾಜದ ಅಧ್ಯಕ್ಷ ಹನಮಂತಪ್ಪ ಅಗಡಿ, ನವೀನ ಧಾರವಾಡ, ಶ್ರೀಕಾಂತ ಧಾರವಾಡ, ಮಹೇಶ ಬಿಜಾಪೂರ, ರಾಜು ಸಂಗಮ, ಫಕೀರಪ್ಪ ತಳವಾರ, ಚಿದಾನಂದಸಾ ಕಾಟವಾ, ಹನಮೇಶ ತಾವರಗೇರಿ, ಪ್ರಕಾಶ ಬೋನಗೇರಿ, ಮಂಜುನಾಥ ಧಾರವಾಡ, ಜಗದೀಶ ಹೇಮಾದ್ರಿ, ವೆಂಕಟೇಶ ನಾರಾಯಣಕೇರಿ, ಅನುಪಮಾ ಧಾರವಾಡ, ಮಂಜುಳಾ ಧಾರವಾಡ, ಸುಜಾತಾ ಬೋನಗೇರಿ, ರಶ್ಮೀ ಬಿಜಾಪುರ, ಅನಿತಾ ಬಿಜಾಪುರ, ಶ್ರೀಲಕ್ಷ್ಮೀ ತಾವರಗೇರಿ ಇದ್ದರು.



ಗುಳೇದಗುಡ್ಡ: ಪಟ್ಟಣದ ವಾಸವಿ ದೇವಸ್ಥಾನದಲ್ಲಿ ಆರ್ಯವೈಶ್ಯ ಸೇವಾಸಮಿತಿ, ವಾಸವಿ ಮಹಿಳಾ ಮಂಡಳಿ ಹಾಗೂ ವಾಸವಿ ಯುವ ಜನ ಸಂಘಗಳ ವತಿಯಿಂದ ಅಧಿಕ ಜೇಷ್ಠ ಮಾಸದ ಪ್ರಯುಕ್ತ ಹಮ್ಮಿಕೊಂಡಿದ್ದ ಸತ್ಯನಾರಾಯಣ ಪೂಜೆ, ಸುಮಂಗಲಿಯರಿಗೆ ಮಡಿಲಕ್ಕಿ ತುಂಬುವ ಕಾರ್ಯಕ್ರಮ ನಡೆಯಿತು. ಆರ್ಯವೈಶ್ಯ ಸಮಾಜದ ಅಧ್ಯಕ್ಷ ಹನಮಂತಪ್ಪ ಅಗಡಿ, ನವೀನ ಧಾರವಾಡ, ಶ್ರೀಕಾಂತ ಧಾರವಾಡ, ಮಹೇಶ ಬಿಜಾಪೂರ, ರಾಜು ಸಂಗಮ, ಫಕೀರಪ್ಪ ತಳವಾರ, ಚಿದಾನಂದಸಾ ಕಾಟವಾ, ತಾವರಗೇರಿ ಇದ್ದರು.

ಉತ್ತಮ ಆಡಳಿತ ನೀಡಿದ ಬಾಡಗಂಡಿ ಗ್ರಾಮ ಪಂಚಾಯತಿ

ಗಾಂಧಿ ಗ್ರಾಮ ಪುರಸ್ಕಾರ ಪ್ರದಾನ

ಬೀಳಗಿ: ತಾಲೂಕಿನ ಬಾಡಗಂಡಿ ಗ್ರಾಮ ಪಂಚಾಯತಿ 2024-25ನೇ ಸಾಲಿನ 'ಗಾಂಧಿ ಗ್ರಾಮ' ಪುರಸ್ಕಾರಕ್ಕೆ ಆಯ್ಕೆಯಾಗಿದೆ. ಆರ್ಥಿಕ ಶಿಸ್ತು, ನೈರ್ಮಲ್ಯ ನಿರ್ವಹಣೆಯೊಂದಿಗೆ ಉತ್ತಮ ಆಡಳಿತ ಮತ್ತು ಕಾರ್ಯಸಾಧನೆ ಮಾಡಿರುವರು. ಗ್ರಾಮೀಣಾಭಿವೃದ್ಧಿ ಯೋಜನೆಗಳ ಸಮರ್ಪಕ ಅನುಷ್ಠಾನ, ಆಡಳಿತ ನಿರ್ವಹಣೆಯಲ್ಲಿ ಪಾರದರ್ಶಕತೆ, ಗ್ರಾಪಂ ವ್ಯಾಪ್ತಿಯ ಜನರಿಗೆ ಒದಗಿಸಿರುವ ಮೂಲ ಸೌಕರ್ಯ ಹಾಗೂ ಸೇವೆಗಳ ಜೊತೆಗೆ ಉತ್ತಮ ಆಡಳಿತ ನೀಡಿದ್ದನ್ನು ಪರಿಗಣಿಸಲಾಗಿದೆ.

ಬಾಡಗಂಡಿ ಗ್ರಾಪಂ ವ್ಯಾಪ್ತಿಯಲ್ಲಿ ಬಾಡಗಂಡಿ ಮತ್ತು ರೊಳ್ಳಿ ಗ್ರಾಮಗಳನ್ನು ಹೊಂದಿದ್ದು, ಒಟ್ಟು 7772 ಜನಸಂಖ್ಯೆ ಒಳಗೊಂಡಿರುತ್ತದೆ. ವೈಯಕ್ತಿಕ ಶೌಚಾಲಯ ನಿರ್ಮಾಣ, ಬೀದಿ ದೀಪ ನಿರ್ವಹಣೆ, ಶುದ್ಧ ಕುಡಿಯುವ ನೀರಿನ ಘಟಕ, ಸಮರ್ಪಕ ಕುಡಿಯುವ ನೀರಿನ ಪೂರೈಕೆ, ಗ್ರಾಮಗಳ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ.

ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ವೈಯಕ್ತಿಕ ಒಡೆತನದ ಗುಂಪು ಶೌಚಾಲಯಗಳನ್ನು ನಿರ್ಮಿಸಿ ಸಾರ್ವಜನಿಕರ ಬಳಕೆಗೆ ನೀಡಲಾಗಿದೆ. ಈ ಮೂಲಕ ಪ್ರತಿ ಕುಟುಂಬಕ್ಕೊಂದು ಶೌಚಾಲಯ ಹೊಂದಲು ಕ್ರಮವಹಿಸಲಾಗಿದೆ. ಕೂಸಿನ ಮನೆ ನಿರ್ಮಾಣ. ಆರೋಗ್ಯ ಶಿಬಿರ ಆಯೋಜನೆ, ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳ ವಿತರಣೆ, ಆವರಣದಲ್ಲಿ ವಿವಿಧ ಸಸಿಗಳನ್ನು ನೆಡಲಾಗಿದೆ. ಅಂಗನವಾಡಿ ಮತ್ತು ಶಾಲೆಗಳಿಗೆ ಶೌಚಾಲಯ ನಿರ್ಮಾಣ, ನೀರಿನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ. ರೊಳ್ಳಿಯಲ್ಲಿ 2, ಬಾಡಗಂಡಿ ಗ್ರಾಮದಲ್ಲಿ 1 ಒಟ್ಟು 3 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸಾರ್ವಜನಿಕರಿಗೆ ಸ್ಥಾಪಿಸಲಾಗಿದೆ. ಶಾಲಾ ಮಕ್ಕಳ ಗ್ರಾಮಸಭೆ, ವಿಕಲಚೇತನರ ಗ್ರಾಮಸಭೆ ಮಾಡಲಾಗಿದೆ.

ಪಂಚತಂತ್ರದ ಆನ್‌ಲೈನ್ ರಾಂಕಿಂಗನಲ್ಲಿ ಬಾಡಗಂಡಿ ಗ್ರಾಪಂ ರಾಜ್ಯಬಾಡಗಂಡಿ ಪ್ರಥಮ ಸ್ಥಾನದಲ್ಲಿದೆ, ಸಿಬ್ಬಂದಿ ವೇತನ ಸಮಯಕ್ಕೆ ಸರಿಯಾಗಿ ಮಾಡಲಾಗಿದೆ. 2024-25ನೇ ಸಾಲಿನ ಕರವಸೂಲಾತಿಯಲ್ಲಿ ಉತ್ತಮ ಪ್ರಗತಿ ಗುರುತಿಸಿ ಜಿಪಂ ಸಿಇಓ ಶಶಿಧರ ಕುರೇರ ಪ್ರಶಂಸನಾ ಪತ್ರ ನೀಡಿ ಗೌರವಿಸಿದ್ದಾರೆ.

ಉದ್ಯೋಗ ಖಾತರಿ ಯೋಜನೆಯಲ್ಲಿ ಕಾಲುವೆ ಸ್ವಚ್ಛತೆ, ರೈತರ ಹೊಲಗಳಿಗೆ ಸವಳು-ಜವಳು, ಬದು ನಿರ್ಮಾಣ, ವೈಯಕ್ತಿಕ ಕಾಮಗಾರಿಗಳನ್ನು ಸಮರ್ಪಕವಾಗಿ ಕೈಗೊಳ್ಳಲಾಗಿದೆ. ಗ್ರಾಪಂ ವ್ಯಾಪ್ತಿಯಲ್ಲಿ 5 ಸರ್ಕಾರಿ ಶಾಲೆಗಳು, 7 ಅಂಗನವಾಡಿ ಕೇಂದ್ರಗಳಿದ್ದು, ಸುಸಜ್ಜಿತವಾದ ಮಕ್ಕಳ ಸ್ನೇಹಿ ಡಿಜಿಟಲ್ ಗ್ರಂಥಾಲಯವನ್ನು ನಿರ್ಮಾಣ ಮಾಡಲಾಗಿದೆ. ಮನೆ-ಮನೆಗೆ ಸ್ವಚ್ಛವಾಹಿನಿ ವಾಹನದ ಮೂಲಕ ತೆರಳಿ ಕಸ ಸಂಗ್ರಹಣೆ ಮಾಡಿ ಸಮರ್ಪಕ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ.



> ನಮ್ಮ ಗ್ರಾಮ ಪಂಚಾಯತಿಗೆ ಗಾಂಧಿ ಗ್ರಾಮ ಪುರಸ್ಕಾರ ದೊರಕಿದ್ದು, ಬಹಳ ಸಂತಸದ ವಿಷಯ. ಪುರಸ್ಕಾರ ಪಡೆಯಲು ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗಿದೆ. ಪುರಸ್ಕಾರದ ಪ್ರೋತ್ಸಾಹ ಧನದ ಹಣವನ್ನು ಹೆಚ್ಚಿನ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲಾಗುವುದು.
>
> ■ **ಗೋವಿಂದಪ್ಪ ಅಳ್ಳಿಕಟ್ಟಿ**, ಆಡಳಿತಾಧಿಕಾರಿಗಳು

> ಬಾಡಗಂಡಿ ಮತ್ತು ರೊಳ್ಳಿ ಗ್ರಾಮದ ಹಿರಿಯರು, ಸಾರ್ವಜನಿಕರು, ಗ್ರಾಪಂ ಆಡಳಿತಾಧಿಕಾರಿಗಳ ಸಹಕಾರ ಹಾಗೂ ತಾಪಂ, ಜಿಪಂ ಅಧಿಕಾರಿಗಳ ಮಾರ್ಗದರ್ಶನದಿಂದ ಗ್ರಾಪಂ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ಮುತುವರ್ಜಿಯಿಂದ ಕಾರ್ಯನಿರ್ವಹಿಸಿದ್ದರ ಫಲವಾಗಿ ಗಾಂಧಿ ಗ್ರಾಮ ಪರುರಸ್ಕಾರ ದೊರೆಯಲು ಸಾಧ್ಯವಾಗಿದೆ.
>
> ■ **ಜಿ.ಕೆ.ಬಗಲಿ,**
> ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು

ಶಿಕ್ಷಣ ವ್ಯಕ್ತಿಯ ಜೀವನದ ಅವಿಭಾಜ್ಯ ಅಂಗ

ಮುಧೋಳ: ಶಿಕ್ಷಣ ವ್ಯಕ್ತಿಯ ಜೀವನದ ಅವಿಭಾಜ್ಯ ಅಂಗ. ಅದು ಜಗತ್ತಿನ ಎಲ್ಲ ಬೇಕುಗಳನ್ನು ದಕ್ಕಿಸಿಕೊಳ್ಳಲು ನಮ್ಮ ಬಳಿ ಇರುವ ಸಮರ್ಥ ಆಯುಧವಾಗಿದೆ ಎಂದು ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಹೇಳಿದರು. ನಗರದ ವಿಜಯ ಅಂತಾರಾಷ್ಟ್ರೀಯ ಶಾಲೆಯ ಆವರಣದಲ್ಲಿ ಎಂಆರ್‌ಎನ್ (ನಿರಾಣಿ) ಫೌಂಡೇಶನ್ ಹಮ್ಮಿಕೊಂಡ ಎಂಆರ್‌ಎನ್ ಜ್ಞಾನ ಸಂಜೀವಿನಿ ಯೋಜನೆಯಡಿ 2ನೇ ವರ್ಷದ ಶೈಕ್ಷಣಿಕ ದತ್ತು ಯೋಜನೆಗೆ ಚಾಲನೆ ನೀಡಿ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಿಟ್ ವಿತರಿಸಿ ಮಾತನಾಡಿದ ಅವರು ಪ್ರತಿ ಮಗುವು ಈ ರಾಷ್ಟ್ರದ ಆಸ್ತಿಯಾಗಿದೆ. ಮಗುವನ್ನು ತಂದೆ-ತಾಯಿ ಶ್ರದ್ಧೆಯಿಂದ ಬೆಳೆಸಿದಂತೆ, ಸಮಾಜವು ತನ್ನ ಸಾಮಾಜಿಕ ಜವಾಬ್ದಾರಿ ಅರಿತು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತದೆ ಎಂದು ಹೇಳಿದರು.

ಬಾಗಲಕೋಟೆ ಡಿಡಿಪಿಐ ಅಜಿತ್ ಮನ್ನಿಕೇರಿ ಮಾತನಾಡಿ, ಶಿಕ್ಷಣಕ್ಕೆ ಮಕ್ಕಳ ಬಡತನ ಅಡ್ಡಿಯಾಗಬಾರದು. ಪ್ರತಿ ವಿದ್ಯಾರ್ಥಿಯಲ್ಲೂ ಅಗೋಚರ ಪ್ರತಿಭೆ ಇದೆ. ಅದನ್ನು ಹೊರತೆಗೆದಾಗ ಮಗವಿನ ಶೈಕ್ಷಣಿಕ ವಿಕಾಸ ಸಾಧ್ಯ. ಮನಸ್ಸಿದ್ದಲ್ಲಿ ಮಾರ್ಗವಿದೆ. ಇದನ್ನು ಅರಿತು ಮಕ್ಕಳು ಸಾಧನೆಗೆ ಸಜ್ಜಾಗಬೇಕು. ಯಾವ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು ಎಂಬ ನಿರಾಣಿ ಸಹೋದರರ ಕಾಳಜಿ ಅಪೂರ್ವವಾದದ್ದು. ಈ ಯೋಜನೆ ಪ್ರತಿಫಲ ಭವಿಷ್ಯದಲ್ಲಿ ಹೆಚ್ಚು-ಹೆಚ್ಚು ವಿದ್ಯಾರ್ಥಿಗಳಿಗೆ ಲಭಿಸಲಿ ಎಂದು ಆಶಿಸಿದರು. ಎಂಆರ್‌ಎನ್ (ನಿರಾಣಿ) ಫೌಂಡೇಶನ್ ಕಾರ್ಯನಿರ್ವಾಹಕ ವಹಿಸಿ ಮಾತನಾಡಿ, ಗ್ರಾಮೀಣ ಭಾಗದ ಮಕ್ಕಳು ಬೆಳೆ ನಿರ್ದೇಶಕ ಸಂಗಮೇಶ ನಿರಾಣಿ ಅಧ್ಯಕ್ಷತೆ ಯಬೇಕು. ಅವರು ಐಎಎಸ್ ಮಾಡಬೇಕು. ಉದ್ಯಮಿಯಾಗಬೇಕು. ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು. ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ನಿರ್ಣಾಯಕ ಪಾತ್ರ ವಹಿಸಬೇಕು ಇದು ಸಹೋದರ ಮುರುಗೇಶ ನಿರಾಣಿಯವರ ಹಂಬಲವಾಗಿದೆ. ಇದರ ಪ್ರತಿಫಲವಾಗಿ ಈ ಯೋಜನೆ ರೂಪಗೊಂಡಿದೆ ಎಂದರು.

ಜಿ.ಕೆ.ಮಠದ, ಪಿ.ಎನ್.ಪಾಟೀಲ, ಸಿ.ಪಿ.ಜನವಾಡ, ಡಿ.ಎಂ.ದಾಸರ, ಭೀಮಶಿವ ಎಗದುಮ್ಮ, ರಾಜು ಟಂಕಸಾಲಿ, ರಾಜು ಬಿಸರಡ್ಡಿ, ಶ್ರೀಶೈಲ ದಬಾಡಿ, ಸುರೇಶ ಕೊಲ್ಹಾರ, ಬಿಆರ್‌ಸಿ ಅವಟಿ, ನ್ಯಾಮಗೌಡ್ರ, ದಾಸರೆಡ್ಡಿ, ವೆಂಕಣ್ಣ ಗಿಡ್ಡಪ್ಪನವರ, ಐ.ಜಿ.ನ್ಯಾಮಗೌಡ್ರ, ಬಸವರಾಜ ಮಹಾಲಿಂಗೇಶ್ವರ ಮಠ, ಗಿರೀಶ ಅನಿಖಿಂಡಿ ಉಪಸ್ಥಿತರಿದ್ದರು.



ಶಿಕ್ಷಣ ರಂಗದಲ್ಲಿ ಉತ್ತಮ ಸಾಧನೆ ಮಾಡಿ

ಬೀಳಗಿ: ವಿದ್ಯಾರ್ಥಿಗಳು ತಮ್ಮ ಜೀವನ ರೂಪಿಸಿಕೊಳ್ಳಲು ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಟ್ಟು, ಮಾನವೀ ಮೌಲ್ಯ ಅಳವಡಿಸಿಕೊಂಡು ಶಿಕ್ಷಣ ರಂಗದಲ್ಲಿ ಉತ್ತಮ ಸಾಧನೆ ಮಾಡಿ ಸಮಾಜದ ಆಸ್ತಿಯಾಗಬೇಕು ಎಂದು ಕ್ಷೇತ್ರ ಸಮನ್ವಯಾಧಿಕಾರಿ ಶಿವಾಜಿ ಕಾಂಬಳೆ ಹೇಳಿದರು.

ಪಟ್ಟಣದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಸಮುದಾಯ ಭವನದಲ್ಲಿ ಬೀಳಗಿ ತಾಲೂಕು ಛಲವಾದಿ ಒಕ್ಕೂಟದ ಆಶ್ರಯದಲ್ಲಿ ನಡೆದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಾಂಶುಪಾಲ ಡಿ.ಎಂ.ಚಲವಾದಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಬೇಕು. ನಾವು ಶಿಕ್ಷಣ ಪಡೆಯುವ ಸಮಯದಲ್ಲಿ ಸರಿಯಾದ ವ್ಯವಸ್ಥೆ ಇರಲಿಲ್ಲ, ಆದರೆ ಇಂದು ಸರ್ಕಾರ ಶಿಕ್ಷಣ ಕಲಿಕೆಗೆ ಸಾಕಷ್ಟು ಸೌಲಭ್ಯ ನೀಡಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರರವರು ಮನುಕೂಲಕ್ಕೆ ಮಾದರಿಯ ಸಂವಿಧಾನ ಬರೆದರೂ ಕೂಡಾ ಅನೇಕ ರಾಜಕೀಯ ನಾಯಕರು ಅವರಿಗೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಲಿಲ್ಲ. ಕೆಲವರು ಅಂತು ಅಂಬೇಡ್ಕರ ರವರ ಭಾವಚಿತ್ರ ಇಟ್ಟುಕೊಂಡು ಲಾಭ ಪಡೆದುಕೊಳ್ಳುತ್ತಿದ್ದಾರೆ. ಸಮಾಜ ಭಾಂಧವರು ತಮ್ಮ ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡಿ ಎಂದು ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಿಲಯ ಪಾಲಕ ಗುರುನಾಥ ತಳವಾರ ವಿಶೇಷ ಉಪನ್ಯಾಸ ನೀಡಿದರು.

ಛಲವಾದಿ ಸಮಾಜದ ಜಿಲ್ಲಾಧ್ಯಕ್ಷ ಪ್ರೇಮನಾಥ ಗರಸಂಗಿ, ಮುಖಂಡರಾದ ಪಡಿಯಪ್ಪ ಕಳ್ಳಿಮನಿ, ಬಸವರಾಜ ಹಳ್ಳದಮನಿ, ಹಣಮಂತ ಗಚ್ಚಿನಮನಿ, ಸಮಾಜ ಕಲ್ಯಾಣ ಇಲಾಖೆ ನಿಲಯ ಪಾಲಕ ರಾಜೇಂದ್ರ, ಬೀಳಗಿ, ಶಿವಪ್ಪ ಚಲವಾದಿ, ಮಹಾದೇವಪ್ಪ ಚಲವಾದಿ, ಹುಸೇನ ಚಲವಾದಿ, ಪತ್ರಕರ್ತರಾದ ಚನ್ನಬಸು ಚಲವಾದಿ, ತಿಪ್ಪಣ ಚಲವಾದಿ, ಸಂತೋಷ ಕಳ್ಳಿಮನಿ ಸೇರಿದಂತೆ ಮತ್ತಿತರಿದ್ದರು.



ಸಮಾಜ ಒಪ್ಪುವಂತಹ ಗೌರವಯುತ ಜೀವನ ನಡೆಸಿ

ಕಲಾದಗಿ: ಹಳೆಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣ, ವೃತ್ತಿ ಜೀವನದ ಅನುಭವಗಳನ್ನು ಸಮಾಜದ ಒಳಿತಿಗಾಗಿ ಧಾರೆ ಎರೆಯಬೇಕು. ನಮ್ಮ ಸಂಸ್ಥೆಯಿಂದ ಶಿಕ್ಷಣ ಪಡೆದವರು ಸಂಸ್ಕೃತಿ, ಸಂಸ್ಕಾರ, ಆಚಾರ, ವಿಚಾರ ಹಾಗೂ ಸಾಮಾಜಿಕ ನೈತಿಕತೆ ಬಗ್ಗೆ ಹೆಚ್ಚು ಕಾಳಜಿ ಇತ್ತು. ಬದಲಾದ ಕಾಲಘಟ್ಟದಲ್ಲಿ ಇವು ಮಾಯವಾಗುತ್ತಿವೆ ಎಂದು ಹಣ್ಣು ಬೆಳೆಗಾರರ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ವಿ.ಜಿ.ದೇಶಪಾಂಡೆ ಹೇಳಿದರು.

ಗ್ರಾಮದ ಹಣ್ಣುಬೆಳೆಗಾರರ ಪ್ರೌಢ ಶಾಲೆಯ ಸಭಾ ಭವನದಲ್ಲಿ ನಡೆದ 2004-05ನೇ ಸಾಲಿನ 10ನೇ ತರಗತಿಯ ವಿದ್ಯಾರ್ಥಿ ಬಳಗದಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿ, ನಿಮ್ಮ ನಿತ್ಯ ಜೀವನದ ಬದುಕಿನಲ್ಲಿ ನಿಮಗೆ ಕಲಿಸಿದ ಶಿಕ್ಷಕರನ್ನು ತಲೆತಗ್ಗಿಸುವಂತೆ ಮಾಡದೇ ಸುತ್ತಮುತ್ತಲಿನ ಸಮಾಜ ಒಪ್ಪುವಂತಹ ಗೌರವಯುತ ಜೀವನ ನಡೆಸಿ ಎಂದರು. ಶಾಲೆಯಲ್ಲಿ ಅನೇಕ ವರ್ಷಗಳವರೆಗೆ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದ ಎಂ.ಆರ್.ದೇಶಪಾಂಡೆ, ಬಿ.ಎಲ್.ವಾಸನದ, ಸುಶಿಲೇಂದ್ರ ಕುಂದರಗಿ, ಎಸ್.ಎಂ.ಸೂಳಿಕೇರಿ, ಎಂ.ವೈ.ಹುಲ್ಲಿಕೇರಿ, ಯು.ಬಿ.ಕಾಂಬಳೆ, ಟಿ.ಎನ್.ನರಸನ್ನವರ, ಶಿಕ್ಷಕಿ ಧಾರವಾಡ ಮಾತನಾಡಿ, ಈ ಶಾಲೆಯಲ್ಲಿ ತಾವು ಪಡೆದ ಅನೇಕ ಅನುಭವಗಳನ್ನು ಸ್ಮರಿಸಿಕೊಂಡ ಇವರುಗಳು ಈ ಹಣ್ಣು ಬೆಳೆಗಾರರ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದ ಅನುಭವವೇ ಇವತ್ತು ನಾವುಗಳು ಸರ್ಕಾರಿ ಶಾಲೆಯ ಶಿಕ್ಷರಾಗಿ ಸೇವೆ ಸಲ್ಲಿಸಲು ಪ್ರೇರಣೆ ನೀಡಿದೆ ಎಂದರು. ಶಾಲೆಯ ಅಧ್ಯಕ್ಷ ಕೆ.ಟಿ.ಪಾಟೀಲ ಮಾತನಾಡಿದರು. ಹಣ್ಣು ಬೆಳೆಗಾರರ ಸಂಸ್ಥೆಯ ಉಪಾದ್ಯಕ್ಷ ಎಸ್.ಬಿ.ಅಂಗಡಿ, ಗೌರವಾದ್ಯಕ್ಷ ಕೆ.ಎಲ್.ಬಿಲಕೇರಿ, ಎಸ್.ಆರ್.ವಾಘ, ಎಂ.ಸಿ.ಅಂಗಡಿ, ಪ್ರೌಢ ಶಾಲೆ ಮುಖ್ಯೋಪಾದ್ಯಾಯ ಆರ್.ವಿ.ಜಾಧವ, ಶ್ರೀಕಾಂತ ಕೆರಕಲಮಟ್ಟಿ, ಶಿಕ್ಷರು ಇದ್ದರು. ಹಳೆ ವಿದ್ಯಾರ್ಥಿ ಪ್ರವೀಣ ಅರಕೇರಿ ಮಾತನಾಡಿದರು. ಪ್ರಿಯಾ ದೊಡಮನಿ ಸ್ವಾಗತಿಸಿ ಸನ್ಮಾನಿಸಿದರು. ವಿನೋದ ದೇಶಮುಖ ನಿರೂಪಿಸಿದರು. ಹೊಳಬಸು ಮುನ್ನೊಳ್ಳಿ ವಂದಿಸಿದರು.



ಸಮಾಜದಲ್ಲಿ ಥಲಸ್ಸೆಮಿಯಾ ರೋಗದ ಜಾಗೃತಿ ಮುಖ್ಯ

ಬಾಗಲಕೋಟೆ: ವಿಶ್ವ ಥಲಸ್ಸೆಮಿಯಾ ದಿನಾಚರಣೆ ಅಂಗವಾಗಿ ಮಕ್ಕಳ ಆರೋಗ್ಯ ನರ್ಸಿಂಗ್ ವಿಭಾಗದ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ಥಲಸ್ಸೆಮಿಯಾ ಜಾಗೃತಿ ಕಾರ್ಯಕ್ರಮ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಪ್ರವೀಣ ಪಾಟೀಲ ಮಾತನಾಡಿ, ಥಲಸ್ಸೆಮಿಯಾ ಒಂದು ಅನುವಂಶಿಕ ರಕ್ತ ರೋಗವಾಗಿದ್ದು, ಇದರ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಮುಖ್ಯ. ರಕ್ತದಾನ ಮತ್ತು ಸಮಯಕ್ಕೆ ಸರಿಯಾದ ಚಿಕಿತ್ಸೆ ಮೂಲಕ ರೋಗಿಗಳ ಜೀವನವನ್ನು ಉತ್ತಮಗೊಳಿಸಬಹುದು ಎಂದು ತಿಳಿಸಿದರು.

ಸಹ ಪ್ರಾಧ್ಯಾಪಕ ಸವಿತಾ ಅಂಗಡಿ ಮಾತನಾಡಿ, ಥಲಸೆಮಿಯಾ ತಡೆಗಟ್ಟಲು ಮದುವೆಗೆ ಮುನ್ನ ರಕ್ತ ಪರೀಕ್ಷೆ ಹಾಗೂ ಜನರಲ್ಲಿ ಅರಿವು ಅಗತ್ಯವಾಗಿದೆ.



ವಿದ್ಯಾರ್ಥಿಗಳು ಸಮಾಜದಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಪಾಲ್ಗೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮ ಸಂಯೋಜಕ ಉಪನ್ಯಾಸಕ ಗುರುಸಿದ್ದಯ್ಯ ಹಿರೇಮಠ ಮಾತನಾಡಿ, ಪ್ರತಿ ವರ್ಷ ಥಲಸೆಮಿಯಾ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆ ಯುವಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದು ಮುಖ್ಯ. ರಕ್ತದಾನವು ಜೀವ ಉಳಿಸುವ ಮಹತ್ವದ ಸೇವೆಯಾಗಿದೆ ಎಂದರು.

ಉಪನ್ಯಾಸಕ ಸುಷ್ಮಾ ಗುಂಡನಪಳ್ಳೆ ಮಾತನಾಡಿ, ಥಲಸೆಮಿಯಾ ರೋಗಿಗಳಿಗೆ ನಿರಂತರ ಚಿಕಿತ್ಸೆ ಮತ್ತು ಮಾನಸಿಕ ಬೆಂಬಲ ಅಗತ್ಯ. ಸಮಾಜದ ಪ್ರತಿಯೊಬ್ಬರೂ ರೋಗಿಗಳ ಬಗ್ಗೆ ಕಾಳಜಿ ವಹಿಸಬೇಕು ಎಂದು ಹೇಳಿದರು. ಉಪನ್ಯಾಸಕ ಈರಪ್ಪ ಮಗದುಮ್ ಮಾತನಾಡಿ, ಥಲಸೆಮಿಯಾ ಬಗ್ಗೆ ಸರಿಯಾದ ಮಾಹಿತಿ ಜನರಿಗೆ ತಲುಪಿದರೆ ಈ ರೋಗದ ಪರಿಣಾಮವನ್ನು ಕಡಿಮೆ ಮಾಡಬಹುದು. ಯುವಕರು ರಕ್ತದಾನದ ಮೂಲಕ ಮಾನವೀಯತೆ ಮೆರೆಯಬೇಕು ಎಂದು ಹೇಳಿದರು. ಸ್ನೇಹಾ ಕುಂಬಾರ, ಪ್ರಿಯಾಂಕಾ ತಳವಾರ, ಮಹಾಲಕ್ಷ್ಮೀ, ಬಿಎಸ್ಸಿ ನರ್ಸಿಂಗ್ 3ನೇ ವರ್ಷದ ಮತ್ತು ಜಿಎನ್ಎಂ ನರ್ಸಿಂಗ್ 2ನೇ ವರ್ಷದ ವಿದ್ಯಾರ್ಥಿಗಳು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಂಬೇಡ್ಕರರ ತತ್ವ ಅಳವಡಿಸಿಕೊಳ್ಳಿ: ಮೇಟಿ

ಅಮೀನಗಡ: ಡಾ.ಬಿ.ಆರ್.ಅಂಬೇಡ್ಕರರ ತತ್ವಗಳನ್ನು ಮತ್ತು ಮಹೋನ್ನತ ವಿಚಾರಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಬಾಗಲಕೋಟೆ ಮತಕ್ಷೇತ್ರದ ಶಾಸಕ ಉಮೇಶ ಎಚ್.ಮೇಟಿ ಹೇಳಿದರು.

ಸಮೀಪದ ಮಾದಾಪೂರ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಮಾಜ ಅಭಿವೃದ್ಧಿ ಸಂಘ (ರಿ), ಮಾದಾಪುರ ಆಶ್ರಯದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಅಂಬೇಡ್ಕರ್ ಅವರ ಭವ್ಯ ಪುತ್ಥಳಿ ಅನಾವರಣ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ದೇಶದಲ್ಲಿ ಇಂದು ಮನುಷ್ಯರನ್ನು ಮನುಷ್ಯರಾಗಿ ನೋಡಲು ಸಾಧ್ಯವಾಗಿರುವುದು ಕೇವಲ ಬಾಬಾಸಾಹೇಬರು ಬರೆದ ಶ್ರೇಷ್ಠ ಸಂವಿಧಾನದಿಂದ ಮಾತ್ರ. ಸಂವಿಧಾನವು ಪ್ರತಿಯೊಬ್ಬರಿಗೂ ಸಮಾನತೆ ಮತ್ತು ಘನತೆಯ ಬದುಕನ್ನು ಕಲ್ಪಿಸಿಕೊಟ್ಟಿದೆ ಎಂದರು. ಸತ್ಯ ಶೋಧಕ ಸಂಘದ ರಾಜ್ಯಾಧ್ಯಕ್ಷ ಪರಶುರಾಮ ಮಹಾರಾಜನವರ ಮಾತನಾಡಿ, ಅಂಬೇಡ್ಕರ್ ಜಯಂತಿ ಕೇವಲ ಡಿಜೆ, ಹಾಡುಗಳಿಗೆ ಕುಣಿಯುವ ಆಚರಣೆಯನ್ನಾಗಿ ಮಾಡಬೇಡಿ. ಅವರ ತತ್ವಗಳನ್ನು ಅನುಸರಿಸುವ ನೈಜ ಅನುಯಾಯಿಗಳಾಗಬೇಕು. ಅವರ ವೈಚಾರಿಕ ಚಿಂತನೆಗಳನ್ನು ಪ್ರತಿಯೊಬ್ಬರೂ ತಮ್ಮ ಮನೆ-ಮನಗಳಲ್ಲಿ ಆಚರಣೆಗೆ ತರಬೇಕು ಎಂದರು.



ಇಂದೋ-ಜಪಾನ್ ಇಂಟರ್ ನ್ಯಾಷನಲ್ ಚಾರಿಟೇಬಲ್‌ನ ತಕ್ಷಶಿಲಾ ಮಹಾ ಬುದ್ಧವಿಹಾರದ ಬಂತೇಜಿ ಪ್ರಜ್ಞಾ ಬೋಧಿ ಥೇರೋ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಹಿರೇಮಾಗಿಯ ಗ್ರಾಪಂ ಮಾಜಿ ಅಧ್ಯಕ್ಷೆ ನೀಲವ್ವ ಮಾಂತಪ್ಪ ಹುಲ್ಲಿಕೇರಿ ಅಧ್ಯಕ್ಷತೆ ವಹಿಸಿದ್ದರು. ಬಾಗಲಕೋಟೆ ವಿವಿ ಕುಲಸಚಿವ ಸೋಮಲಿಂಗ ಗೆಣ್ಣೂರ, ಹುನಗುಂದ ವಿಭಾಗದ ಪೊಲೀಸ್ ಉಪಾಧೀಕ್ಷಕ ಸಂತೋಷ ಬನಹಟ್ಟಿ, ನಿವೃತ್ತ ಹಿರಿಯ ಲೆಕ್ಕ ಪರಿಶೋಧಕ ಸದಾಶಿವ ಮಾಗಿ, ಇಲಕಲ್ಲನ ಅಂಬೇಡ್ಕರ್ ಸೇವಾ ಸಂಘದ ಅಧ್ಯಕ್ಷ ಶರಣಪ್ಪ ಆಮುದಿಹಾಳ, ಮಾಜಿ ಜಿಪಂ ಅಧ್ಯಕ್ಷ ಬಾಯಕ್ಕ ಮೇಟಿ, ಬಸವಂತಪ್ಪ ಮೇಟಿ, ಮಾಜಿ ಸದಸ್ಯ ಬಸವಂತಪ್ಪ ಅಂತರತಾನಿ, ರಮೇಶ ಹುಲ್ಲಿಕೇರಿ, ಶಿಕ್ಷಕ ಧರ್ಮಣ್ಣ ಚಲವಾದಿ, ಶಿಕ್ಷಕರಾದ ಜಂಬಣ್ಣ ಯ ಹುಲ್ಲಿಕೇರಿ, ಜಿ.ಎಸ್.ಘಟ್ಟಿಗನೂರ ಉಪಸ್ಥಿತರಿದ್ದರು.

ಬಡವರಿಗೆ ಶಾದಿಮಹಲ್ ಕಟ್ಟಡ ನಿರ್ಮಾಣ

ಕೆರೂರ: ಪಟ್ಟಣದ ಶಾದಿ ಮಹಲ್ ಕಟ್ಟಡವು ಕೇವಲ ಬಾಡಿಗೆಗಾಗಿ ನಿರ್ಮಾಣವಾಗಬಾರದು. ನಾವು ನೀಡುವ ಅನುದಾನದಿಂದ ಸಾವಿರಾರು ಬಡ ಕುಟುಂಬಗಳಿಗೆ ಅನುಕೂಲವಾಗಲಿದೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಪಟ್ಟಣದ ಅಂಜುಮನ್ ಕಮೀಟಿಯವರು ಹಮ್ಮಿಕೊಂಡಿದ್ದ ಸನ್ಮಾನ ಸ್ವೀಕರಿಸಿ ಮಾತನಾಡಿ, ಪಟ್ಟಣದ ಕಿಲ್ಲಾ ಪೇಟೆಯಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಬೃಹತ್ ಶಾದಿ ಮಹಲ್ ಕಟ್ಟಡ ನಿರ್ಮಾಣವಾಗಲಿದ್ದು, ಸಮಾಜಕ್ಕೆ ಇದರ ಸದುಪಯೋಗವಾಗಲಿ ಎಂದರು ಮತ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ 40 ಕೋಟಿ ರೂ. ಅನುದಾನ ನೀಡಿದ್ದು, ಇದರಲ್ಲಿ ಹೆಚ್ಚಿನ ಒತ್ತು ಶಿಕ್ಷಣಕ್ಕೆ ನೀಡಿದ್ದೇನೆ ಎಂದರು.ಅಂಜುಮನ್ ಕಮೀಟಿ ಕಾರ್ಯದರ್ಶಿ ಉಮರ್ ಫಾರೂಕ್ ಪೆಂಡಾರಿ ಮಾತನಾಡಿ, ಸುಮಾರು ವರ್ಷಗಳಿಂದ ಕನಸಾಗಿ ಉಳಿದಿದ್ದ ಶಾದಿಮಹಲ್ ಕಟ್ಟಡವು ಇಂದು ಶಾಸಕರ ಸತತ ಪ್ರಯತ್ನದಿಂದ ನನಸಾಗಿದೆ. ಸಮುದಾಯದವರು ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿ, ಶೀಘ್ರವೇ ಕಟ್ಟಡವನ್ನು ಪೂರ್ಣಗೊಳಿಸಿ ಶಾಸಕರಿಂದ ಉದ್ಘಾಟಿಸೋಣ ಎಂದು ಹೇಳಿದರು. ಅಂಜುಮನ್ ಕಮೀಟಿ ಅಧ್ಯಕ್ಷ ಮೋದಿನಸಾಬ ದೊಡಕಟ್ಟಿ, ಉಪಾಧ್ಯಕ್ಷ ಇಸ್ಮಾಯಿಲ್ ಮುಲ್ಲಾ, ಜಿಪಂ ಮಾಜಿ ಸದಸ್ಯ ಡಾ.ಎಂ.ಜಿ.ಕಿತ್ತಲಿ, ಉಸ್ಮಾನ ಅತ್ತಾರ, ಉಸ್ಮಾನ ಮುಲ್ಲಾ, ಪಪಂ ಮುಖ್ಯಾಧಿಕಾರಿ ರಮೇಶ ಮಾಡಬಾಳ, ಪಪಂ ಇಂಜಿನಿಯರ್ ಎಂ.ಐ.ಹೊಸಮನಿ ಇತರರು ಇದ್ದರು.



ತುರ್ತು ಚಿಕಿತ್ಸಾ ವಾಹನ ವಿತರಿಸಿದ ರೋಟರಿ ಸಂಸ್ಥೆ

ಜಮಖಂಡಿ: ಸ್ಥಳೀಯ ರಾಮತೀರ್ಥ ರೋಟರಿ ಸಂಸ್ಥೆಯ ವತಿಯಿಂದ 44 ಲಕ್ಷ ರೂ. ಮೌಲ್ಯದ ಅತ್ಯಾಧುನಿಕ ಐಸಿಯು ಕಾರ್ಡಿಯಾಕ್ ರುಗ್ಣವಾಹನವನ್ನು ಸಿದ್ಧಿವಿನಾಯಕ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ಆವರಣದಲ್ಲಿ ನಡೆದ ಸಮಾರಂಭದಲ್ಲಿ 2024-25ನೇ ಸಾಲಿನ ರೋಟರಿಯ ಜಿಲ್ಲಾ ಗವರ್ನರ ಶೈರದ್ ಪೈ ಹಾಗೂ ರೋಟರಿ ರಾಮತೀರ್ಥ ಅಧ್ಯಕ್ಷ ಕಿರಣ ಜಾಲಿಹಾಳ ವಾಹನವನ್ನು ಆಸ್ಪತ್ರೆಯ ಆಡಳಿತ ಮಂಡಳಿಗೆ ಹಸ್ತಾಂತರಿಸಿದರು.

ಜಿಲ್ಲಾ ಗವರ್ನರ ಶರದ್ ಪೈ ಮಾತನಾಡಿ, ಗ್ರಾಮೀಣ ಪ್ರದೇಶದ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ರೋಟರಿ ಸಂಸ್ಥೆ ತುರ್ತು ಚಿಕಿತ್ಸಾ ವಾಹನವನ್ನು ವಿತರಿಸಿದೆ. ರೋಟರಿ ಸೇವಾ ಸಂಸ್ಥೆಯಾಗಿದ್ದು ಸಮಾಜ ಸೇವೆಗೆ ಅನೇಕ ಅನುಕೂಲತೆಗಳನ್ನು ಪ್ರತಿವರ್ಷ ಮಾಡಿ ಕೊಡುತ್ತದೆ ಎಂದು ತಿಳಿಸಿದರು. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಬಡಿಗೇರ ಮಾತನಾಡಿ, ಸರ್ಕಾರದೊಂದಿಗೆ ಖಾಸಗಿ ಒಡೆತನದ ಆಸ್ಪತ್ರೆಗಳು ಹಾಗೂ ಸೇವಾ ಸಂಘಟನೆಗಳು ಕೈಜೋಡಿಸಿದಾಗ ಗ್ರಾಮೀಣ ಭಾಗದ ಜನರಿಗೆ ಸರಿಯಾದ ಸಮಯಕ್ಕೆ ಆರೋಗ್ಯ ಸೇವೆ ಒದಗಿಸಬಹುದಾಗಿದೆ ಎಂದು ತಿಳಿಸಿದರು.

ಕಿರಣ ಜಾಲಿಹಾಳ ಮಾತನಾಡಿ, ತಮ್ಮ ಅಧಿಕಾರ ಅವಧಿಯಲ್ಲಿ ಸಮಾಜಕ್ಕೆ ಶಾಶ್ವತ ಯೋಜನೆ ರೂಪಿಸುವ ಉದ್ದೇಶದಿಂದ ಐಸಿಯು ಕಾರ್ಡಿಯಾಕ್ ಅಂಬ್ಯುಲೆನ್ಸ್ ಯೋಜನೆ ಕೈಗೆತ್ತಿ ಕೊಳ್ಳಲಾಗಿತ್ತು. ಸದಸ್ಯರ ಸಹಕಾರ ಹಾಗೂ ರೋಟರಿಯ ಬೆಂಬಲ ಹಾಗೂ ಸಾರ್ವಜನಿಕರ ಪ್ರೋತ್ಸಾಹ ದಿಂದ ಯೋಜನೆ ಯಶಸ್ವಿ ಯಾಗಿದೆ ಎಂದು ತಿಳಿಸಿದರು.



ರೋಟರಿ ಅಧ್ಯಕ್ಷ ರಾಜಶೇಖರ ವಾರದ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಆರೋಗ್ಯ, ಶಿಕ್ಷಣ ಹಾಗೂ ಸಮಾಜ ಮುಖಿ ಕಾರ್ಯಕ್ರಮಗಳನ್ನು ಇನ್ನಷ್ಟು ವಿಸ್ತರಿಸಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಗವರ್ನರ ಅಶೋಕ ನಾಯಕ, ಸಹಾಯಕ ಗವರ್ನರ ನಾರಾಯಣ ಹೆರಕಲ್ ಮಾತನಾಡಿದರು. ಆರ್.ಪಿ.ನ್ಯಾಮಗೌಡ, ವೈದ್ಯರ ಸಂಘ, ಸೇರಿದಂತೆ ವಿವಿಧ ಸಂಸ್ಥೆಗಳ ಪದಾಧಿಕಾರಿಗಳು ಗಣ್ಯರು ಭಾಗವಹಿಸಿದ್ದರು. ಎಸ್.ವೈ.ಪಾಟೀಲ್ ಹಾಗೂ ಚಿದಾನಂದ ಸಿದ್ಧಾಪೂರ ಮಠ ನಿರೂಪಿಸಿದರು. ಮಲ್ಲಿಕಾರ್ಜುನ ಜಿರಲಿ ವಂದಿಸಿದರು.



ಆಲಮೇಲ: ಪಟ್ಟಣದಲ್ಲಿ ಬಿರುಗಾಳಿ ಸಹಿತ ಮಳೆಯಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಪಟ್ಟಣದಲ್ಲಿ ನೀರಿನ ಸಮಸ್ಯೆ ಉಂಟಾಗಿದ್ದರಿಂದ ಸಾವಳಗಿ ಶಿವಲಿಂಗೇಶ್ವರ ದೇವಸ್ಥಾನದ ಹತ್ತಿರ ಇರುವ ಬೋರವಲ್‌ಗೆ ಜನರು ನೀರು ತುಂಬಿಕೊಳ್ಳುತ್ತಿರುವ ದೃಶ್ಯ

ಕಾಲುವೆಗಳಿಗೆ ಶೀಘ್ರ ನೀರು ಹರಿಸಲು ಮನವಿ

ಕೊಲ್ಹಾರ: ಮುಳವಾಡ ಏತ ನೀರಾವರಿ ಸ್ಕೀಮ್ 1 ಮತ್ತು 2 ಪ್ರಾರಂಭಿಸಿ ಕೂಡಲೇ ಕಾಲುವೆಗಳಿಗೆ ನೀರು ಹರಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ತಾಲೂಕಿನ ಮಟ್ಟಿಹಾಳ ಕ್ರಾಸ್ ಹತ್ತಿರದ ಕೃಷ್ಣ ಭಾಗ್ಯ ಜಲನಿಗಮದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕೊಲ್ಹಾರ ತಾಲೂಕು ಅಧ್ಯಕ್ಷ ಸೋಮು ಬಿರಾದರ್ ಮಾತನಾಡಿ, ಜನ ಜಾನುವಾರುಗಳಿಗೆ ನೀರಿನ ಸಮಸ್ಯೆ ಆಗುತ್ತಿದೆ. ಮತ್ತು ಅಂತರ್ಜಲ ಕುಸಿ ಯುತ್ತಿರುವುದರಿಂದ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ, ಬಬಲೇಶ್ವರ, ಕೊಲ್ಹಾರ ತಾಲೂಕಿನ ರೈತರ ಜಮೀನುಗಳಿಗೆ ಹಾಗೂ ಜಾನುವಾರುಗಳಿಗೆ ಕುಡಿಯಲು ನೀರಿನ ಅಭಾವವಾಗಿರುವುದರಿಂದ ಈಗಾಗಲೇ ಆಲಮಟ್ಟಿ ಅಣೆಕಟ್ಟೆಯ ಸಾಕಷ್ಟು ನೀರು ಸಂಗ್ರಹವಿದ್ದು ಕಾರಣ ತಾವುಗಳು ನೀರಿನ ಸಮರ್ಪಕ ಬಳಕೆಗಾಗಿ ರೈತರ ಜಮೀನುಗಳಿಗೆ ಮತ್ತು ಜನಜಾನುವಾರಗಳಿಗೆ ನೀರಿನ ಹೆಚ್ಚಿನ ಸೌಲಭ್ಯ ಕಲ್ಪಿಸುವ ಸಲುವಾಗಿ ಮುಳವಾಡ ಏತ ನೀರಾವರಿಯ ಹಂತ 1 ಮತ್ತು 2 ನೀರು ಹರಿಸಿ ಕೆರೆ,ಹಳ್ಳಕೊಳ್ಳಗಳನ್ನು ತುಂಬಿಸುವ ಮುಲಕ ರೈತರಿಗೆ ಹಾಗೂ ಮೇವಿನ ಸಲುವಾಗಿ ಜನಜಾನುವಾರುಗಳಿಗೆ ಅನುಕೂಲ ಮಾಡಿಕೊಡಬೇಕು ಎಂದರು. ಕೆಬಿಜೆಎನ್‌ಎಲ್ ಅಧಿಕಾರಿ ಗೋವಿಂದ ರಾಠೋಡ, ತಹಶೀಲ್ದಾರ್ ಸಂತೋಷ ಮ್ಯಾಗೇರಿ, ಕೊಲ್ಹಾರ, ಪಿಎಸ್ಐ ಅಶೋಕ ನಾಯಕ ರೈತರು ಇದ್ದರು.



ಕೊಲ್ಹಾರ: ಮುಳವಾಡ ಏತ ನೀರಾವರಿ ಸ್ಕೀಮ್ 1 ಮತ್ತು 2 ಪ್ರಾರಂಭಿಸಿ ಕೂಡಲೇ ಕಾಲುವೆಗಳಿಗೆ ನೀರು ಹರಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ತಾಲೂಕಿನ ಮಟ್ಟಿಹಾಳ ಕ್ರಾಸ್ ಹತ್ತಿರದ ಕೃಷ್ಣ ಭಾಗ್ಯ ಜಲನಿಗಮದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕಿರುಸುದ್ದಿ

ಮೃತರ ಕುಟಂಬಕ್ಕೆ ಸಾಂತ್ವನ



ಸಿಂದಗಿ: ಈ ವಯಸ್ಸಿನಲ್ಲಿ ಹೆತ್ತವರನ್ನು ಕಳೆದುಕೊಂಡ ಮಗುವಿಗೆ ಆರ್ಥಿಕ ಆಸರೆಗಿಂತ ಹೆಚ್ಚಾಗಿ ಸಾಮಾಜಿಕ ಭದ್ರತೆಯ ಅಗತ್ಯವಿದೆ. ಮಗುವಿನ ಶಿಕ್ಷಣಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಫೌಂಡೇಶನ್ ವತಿಯಿಂದ ಅಗತ್ಯವಿರುವ ಸಂಪೂರ್ಣ ಶೈಕ್ಷಣಿಕ ಜವಾಬ್ದಾರಿ ವಹಿಸಿಕೊಳ್ಳುತ್ತೇನೆ ಎಂದು ಸಿಂದಗಿ ವಿಧಾನಸಭಾ ಬಿಜೆಪಿ ಮುಖಂಡ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ ಭರವಸೆ ನೀಡಿದರು. ಆಲಮೇಲ ತಾಲೂಕಿನ ಮೋರಟಗಿ ಗ್ರಾಮದಲ್ಲಿ ಸುರಿದ ಅಕಾಲಿಕ ಗಾಳಿ-ಮಳೆಯ ಭೀಕರ ಆರ್ಭಟಕ್ಕೆ ಮನೆಯ ಮೇಲ್ಚಾವಣಿ ಕುಸಿದು ಸಾವನ್ನಪ್ಪಿದ ಗುರುನಾಥ ಬಡಿಗೇರ ಅವರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಮಾತನಾಡಿದ ಅವರು, ಪ್ರಕೃತಿಯ ವಿಕೋಪಕ್ಕೆ ಇಡೀ ಕುಟುಂಬವೇ ಬಲಿಯಾಗಿರುವುದು ಅತ್ಯಂತ ನೋವು ತರುವ ಸಂಗತಿ. ತಂದೆ-ತಾಯಿ, ಅಕ್ಕ-ತಂಗಿಯನ್ನು ಕಳೆದುಕೊಂಡ ವಿರೇಶನ ಸ್ಥಿತಿ ಮತ್ತಾರಿಗೂ ಬರದಿರಲಿ. ವಿರೇಶನ ಮುಂದಿನ ಶೈಕ್ಷಣಿಕ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಬಿಎಸ್‌ಬಿ ಫೌಂಡೇಶನ್ ವತಿಯಿಂದ ಕುಟುಂಬಕ್ಕೆ ರೂ.25ಸಾವಿರ ಧನಸಹಾಯ ಮಾಡಲಾಗುತ್ತಿದೆ ಎಂದರು. ವಿಶ್ವಕರ್ಮ ಸಮಾಜದ ಶ್ರೀರಾಮಚಂದ್ರ ಸ್ವಾಮಿಗಳು, ಸಿಂದಗಿ ತಾಲೂಕು ಗಾಣಿಗ ಸಮಾಜದ ಮಾಜಿ ಅಧ್ಯಕ್ಷ ಮಲ್ಲಣ್ಣ ಮನಗೂಳಿ, ಬಿಜೆಪಿ ಪಕ್ಷದ ಕಾರ್ಯಕರ್ತ ನವೀನಕುಮಾರ ನೇಲ್ಲಗಿ, ತಮ್ಮಣ್ಣಗೌಡ ಬೋನಾಳ, ವಿಶ್ವನಾಥ ಬೆಳಗುಂಪಿ, ಅನಿಲ ಕೋಣಶಿರಸಗಿ, ಇರ್ಫಾನ ಜಾಲಿಗೀಡ, ಕನ್ನಯ ಕರಿಗೊಂಡ, ಈರಣ್ಣ ವಿಶ್ವಕರ್ಮ, ಭಗವಂತ್ರಾಯ ಕಕ್ಕಳಮೇಲಿ, ರಾವುತರಾಯ ಗುಗ್ಗರಿ ಇದ್ದರು.

ಎಲ್ಲೆಂದರಲ್ಲಿ ತ್ಯಾಜ್ಯ ಎಸೆದರೆ, ಕಾನೂನು ಕ್ರಮ

ವಿಜಯಪುರ: ಮಾಂಸ ಮಾರಾಟದ ವರ್ತಕರು-ಉದ್ದಿಮೆದಾರರು ಇತರೆ ತ್ಯಾಜ್ಯವನ್ನು ಬೀದಿಯಲ್ಲಿ ಅಥವಾ ವರಾಂಡದಲ್ಲಿ ಎಸೆಯುವುದು ಹಾಗೂ ಹಾಕುವುದನ್ನು ಮಹಾನಗರ ಪಾಲಿಕೆ ನಿಷೇಧಿಸಿದ್ದು, ಆದಾಗ್ಯೂ ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವುದು ಕಂಡು ಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪಾಲಿಕೆ ಪರಿಸರ ವಿಭಾಗದ ಕಾರ್ಯಪಾಲಕ ಅಭಿಯಂತರರು ಎಚ್ಚರಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ತ್ಯಾಜ್ಯ ಉತ್ಪಾದಿಸುವ ಪ್ರತಿಯೊಬ್ಬ ನಾಗರಿಕರು, ಉದ್ದಿಮೆದಾರರು ಎಲ್ಲೆಂದರಲ್ಲಿ ತ್ಯಾಜ್ಯ ವಿಸರ್ಜಿಸದೆ ತ್ಯಾಜ್ಯ ವಿಂಗಡಣೆ ಮಾಡಬೇಕು. ವಿಂಗಡಣೆ ಮಾಡಿದ ತ್ಯಾಜ್ಯವನ್ನು ಮಹಾನಗರ ಪಾಲಿಕೆ ದಿನನಿತ್ಯ ಕಳುಹಿಸಿಕೊಡುವ ತ್ಯಾಜ್ಯ ವಾಹನಕ್ಕೆ ಹಾಕಬೇಕು. ಇನ್ನೊಂದೆಡೆ ಬೀದಿ ನಾಯಿಗಳಿಗೆ ಪಾಲಿಕೆ ಸ್ಥಾಪಿಸಿರುವ ಫೀಡಿಂಗ್ ಝೋನ್‌ಗಳಿಗೆ ಉಪಹಾರದ ರೂಪದಲ್ಲಿ ಹಾಕಬೇಕು. ಆದರೆ ಕಳೆದ ಕೆಲ ದಿನಗಳಿಂದ ತ್ಯಾಜ್ಯವನ್ನು ಮಹಾನಗರಪಾಲಿಕೆಯ ವಾಹನಕ್ಕೆ ವಿಲೇವಾರಿ ಮಾಡದೇ ತ್ಯಾಜ್ಯವನ್ನು ರಸ್ತೆ ಬದಿ, ಖಾಲಿ ನಿವೇಶನ, ಸಾರ್ವಜನಿಕ ಇತರೆ ಸ್ಥಳಗಳಲ್ಲಿ ಸಾರ್ವಜನಿಕರು ಎಸೆಯುತ್ತಿದ್ದಾರೆ. ಮಾಂಸ ಮಾರಾಟದ ವರ್ತಕರು ಮಾಂಸದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿಗೊಳಿಸದೆ ಮಾಂಸದ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯುತ್ತಿರುವುದರಿಂದ ಅನೈರ್ಮಲ್ಯತೆಯೊಂದಿಗೆ ಬೀದಿನಾಯಿಗಳ ಆಕ್ರಮಣಕಾರಿ ಪ್ರವೃತ್ತಿ ಹೆಚ್ಚಳವಾಗಿದೆ. ಹಾಗಾಗಿ ಮಟನ್ ಮತ್ತು ಚಿಕನ್ ಉದ್ದಿಮೆದಾರರು ತಮ್ಮ ಬಳಿ ಸಂಗ್ರಹವಾಗುವ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಹಾಕದೇ ಪಾಲಿಕೆಯ ವಾಹನಕ್ಕೆ ಹಾಕುವುದು ಕಡ್ಡಾಯ. ಒಂದು ವೇಳೆ ತಪ್ಪಿದಲ್ಲಿ ದಂಡ ವಿಧಿಸಿ. ಕರ್ನಾಟಕ ಪೌರ ಅಧಿನಿಯಮ 1976 ರೀತ್ಯ ಕಾನೂನು ಕ್ರಮಕ್ಕೆಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಚನ್ನಪ್ಪ ಬಾಲಗೊಂಡ ನಿಧನ



ಕೊಲ್ಹಾರ: ಪಟ್ಟಣದ ಗಾಣಿಗ ಸಮಾಜದ ಹಿರಿಯರಾದ ಚನ್ನಪ್ಪ ಬಸಪ್ಪ ಬಾಲಗೊಂಡ(72) ಸೋಮವಾರ ನಿಧನರಾದರು. ಮೃತರಿಗೆ ಕೊಲ್ಹಾರ ಪಟ್ಟಣ ಪಂಚಾಯತಿ ನಿಕಟಪೂರ್ವ ಉಪಾಧ್ಯಕ್ಷ ಬಸಪ್ಪ ಬಾಲಗೊಂಡ ಸೇರಿದಂತೆ ಪತ್ನಿ, ಪುತ್ರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂದುಬಳಗ ಇದ್ದಾರೆ.

ಮಹಾಂತೇಶ ಬಿರಾದಾರ



ಮುದ್ದೇಬಿಹಾಳ: ರಾಮನಗೌಡ ಬಿರಾದಾರ ಅಡತಿ ವ್ಯಾಪಾರಸ್ಥರ ಪುತ್ರ ಮಹಾಂತೇಶ ರಾ.ಬಿರಾದಾರ ನಿಧನರಾಗಿದ್ದಾರೆ.

ಜಿಪಂ ಮುಖ್ಯ ಕಾರ್ಯನಿರ್ವಹಕಾಧಿಕಾರಿ ರಿಷಿ ಆನಂದ ಸೂಚನೆ

ರೋಗಿಗಳಿಗೆ ಸಕಾಲಕ್ಕೆ ಚಿಕಿತ್ಸೆ ನೀಡಿ

ವಿಜಯಪುರ: ಪ್ರತಿ ರೋಗಿಗೂ ಸಮರ್ಪಕ ಮತ್ತು ಗುಣಮಟ್ಟದ ಚಿಕಿತ್ಸೆ ಸಕಾಲಕ್ಕೆ ನೀಡಬೇಕು. ಯಾವುದೇ ರೀತಿಯ ನಿರ್ಲಕ್ಷ್ಯಕ್ಕೆ ಅವಕಾಶ ನೀಡಬಾರದು ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಕಾಧಿಕಾರಿ ರಿಷಿ ಆನಂದ ಹೇಳಿದರು.

ಜಿಲ್ಲೆಯ ಮನಗೂಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೋಮವಾರ ದಿಢೀರ್ ಭೇಟಿ ನೀಡಿ, ಕೇಂದ್ರದ ಕಾರ್ಯನಿರ್ವಹಣೆ ಹಾಗೂ ಸೇವೆಗಳ ಗುಣಮಟ್ಟವನ್ನು ಸಮಗ್ರವಾಗಿ ಪರಿಶೀಲಿಸಿದ ಬಳಿಕ ಸೂಚನೆ ನೀಡಿದರು.

ಔಷಧ ಲಭ್ಯತೆ ಖಚಿತಪಡಿಸಿಕೊಳ್ಳಬೇಕು. ಅವಶ್ಯಕ ಔಷಧಗಳು ಸದಾ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ರೋಗಿಗಳಿಗೆ ಹೊರಗೆ ಔಷಧ ಖರೀದಿಸಲು ತೊಂದರೆ ಆಗಬಾರದು ಎಂದರು.

ರಕ್ತ ಪರೀಕ್ಷೆ ಸೇರಿದಂತೆ ಎಲ್ಲ ತಪಾಸಣೆಗಳನ್ನು ಶೀಘ್ರ ಮತ್ತು ನಿಖರವಾಗಿ ಪೂರ್ಣಗೊಳಿಸುವಂತೆ ಕ್ರಮ ವಹಿಸಬೇಕು. ಆರೋಗ್ಯ ಕೇಂದ್ರದ ಒಳ ಹಾಗೂ ಹೊರ ಭಾಗಗಳಲ್ಲಿ ಸ್ವಚ್ಛತೆ ಕಾಪಾಡಿ, ರೋಗಿಗಳಿಗೆ ಆರೋಗ್ಯಕರ ವಾತಾವರಣ ಒದಗಿಸಬೇಕು ಎಂದರು. ಸಿಬ್ಬಂದಿಗಳು ಸಮಯಕ್ಕೆ ಸರಿಯಾಗಿ ಆರೋಗ್ಯ ಕೇಂದ್ರದಲ್ಲಿ ಹಾಜರಿದ್ದು, ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ಜವಾಬ್ದಾರಿಯಿಂದ ನಿರ್ವಹಿಸಬೇಕು. ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಗೌರವಪೂರ್ಣ ಮತ್ತು ಸ್ನೇಹಪೂರ್ಣ ಸೇವೆ ಒದಗಿಸಬೇಕು ಎಂದರು.



ಒಳರೋಗಿ ಮತ್ತು ಹೊರರೋಗಿಗಳ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಿ, ದಿನನಿತ್ಯದ ಮಾಹಿತಿಯನ್ನು ನವೀಕರಿಸಬೇಕು. ಕುಡಿಯುವ ನೀರು, ವಿದ್ಯುತ್, ಶೌಚಾಲಯ ಸೇರಿದಂತೆ ಎಲ್ಲ ಮೂಲಭೂತ ಸೌಲಭ್ಯಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು ಎಂದು ಅವರು ಪರಿಶೀಲನೆ ವೇಳೆ ಆರೋಗ್ಯ ಕೇಂದ್ರದ ಸ್ವಚ್ಛತೆ ಹಾಗೂ ವ್ಯವಸ್ಥೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಳಿಕ ಸಿಇಒ ರಿಷಿ ಆನಂದ ಅವರು, ಕೇಂದ್ರದಲ್ಲಿನ ರಕ್ತ ತಪಾಸಣಾ ಘಟಕ, ರಕ್ತ ಪರೀಕ್ಷಾ ಸೌಲಭ್ಯ, ಸಿಬ್ಬಂದಿ ಹಾಜರಾತಿ, ದಾಖಲೆಗಳು, ಆರೋಗ್ಯ ಕೇಂದ್ರದ ಸ್ವಚ್ಛತೆ, ಒಳರೋಗಿ ಹಾಗೂ ಹೊರರೋಗಿಗಳ ವಾರ್ಡ್‌ಗಳನ್ನು ವೀಕ್ಷಿಸಿದರು. ಜೊತೆಗೆ, ಲೇಬರ್ ವಾರ್ಡ್, ಔಷಧ ವಿತರಣಾ ಕೇಂದ್ರ, ಸಿಸಿಟಿವಿ ವ್ಯವಸ್ಥೆ ಪರಿಶೀಲಿಸಿದರು.

ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ದೀಪಕ್ ಮಾತನಾಡಿ, ಕೇಂದ್ರದಲ್ಲಿ ಲಭ್ಯವಿರುವ ಆರೋಗ್ಯ ಸೇವೆಗಳು, ಸಿಬ್ಬಂದಿ ವ್ಯವಸ್ಥೆ, ರೋಗಿಗಳ ನಿರ್ವಹಣೆ ಹಾಗೂ ಸೌಲಭ್ಯಗಳ ಬಗ್ಗೆ ವಿವರಿಸಿದರು. ಬಳಿಕ ಜಿಪಂ ಸಿಇಒ ಅವರು, ಚಿಕಿತ್ಸೆಗೆ ಆಗಮಿಸಿದ್ದ ಫಲಾನುಭವಿಗಳೊಂದಿಗೆ ನೇರ ಸಂವಾದ ನಡೆಸಿದರು. ಚಿಕಿತ್ಸೆಯ ಸಮಯಪಾಲನೆ, ಔಷಧ ಲಭ್ಯತೆ, ತಪಾಸಣೆಗಳ ವೇಗ ಮತ್ತು ಮೂಲಭೂತ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಚಿಕಿತ್ಸೆಯ ಸಮಯಪಾಲನೆ, ಔಷಧ ಲಭ್ಯತೆ, ಮೂಲ ಸೌಲಭ್ಯದ ಮಾಹಿತಿ ಪಡೆದುಕೊಂಡರು. ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ದೀಪಕ ಇದ್ದರು.

ಮನಗೂಳಿ ಹಿರೇಮಠ ಪರಂಪರೆ ಹೊಂದಿದ ಮಠ

ಬಸವನಬಾಗೇವಾಡಿ: ಮನಗೂಳಿ ಹಿರೇಮಠ ಭವ್ಯ ಗುರು ಪರಂಪರೆಗೆ ಇತಿಹಾಸವನ್ನು ಹೊಂದಿರುವ ಶ್ರೀಮಠ ಬಡ ಮಕ್ಕಳಿಗೆ ಶಿಕ್ಷಣ, ಆಶ್ರಯ, ದಾಸೋಹ ಮತ್ತು ಬಡವರ ಕಲ್ಯಾಣಕ್ಕಾಗಿಯೇ ಕಲ್ಯಾಣ ಮಂಟಪ ನಿರ್ಮಾಣ ಮಾಡಿದ್ದು ಸಂತಸದ ವಿಚಾರ ಎಂದು ಮುತ್ತಗಿ ಹಿರೇಮಠದ ವೀರರುದ್ರಮುನಿ ಸ್ವಾಮೀಜಿ ಹೇಳಿದರು.

ತಾಲೂಕಿನ ಮನಗೂಳಿ ಸಂಸ್ಥಾನ ಹಿರೇಮಠದ ಲಿಂ.ಸಂಗನಬಸವ ಸ್ವಾಮೀಜಿಯವರ 43ನೇ ಪುಣ್ಯಾರಾಧನೆ ಹಾಗೂ ಜಗದ್ಗುರು ಡಾ.ಮಹಾಂತ ಶಿವಾಚಾರ್ಯ ಸ್ವಾಮೀಜಿಯವರ 13ನೇ ಯಾತ್ರಾ ಮಹೋತ್ಸವ ನಿಮಿತ್ತ ಮಠದಿಂದ ಊರಿನ ಪ್ರಮುಖ ಬೀದಿಗಳಲ್ಲಿ ಅಡ್ಡ ಪಲ್ಲಕ್ಕಿ ಮಹೋತ್ಸವ ಮತ್ತು ಶಿವಶರಣೆ ಅಕ್ಕಮಹಾದೇವಿಯವರ ಪುರಾಣ ಮಹಾಮಂಗಲ ಮತ್ತು ಧರ್ಮ ಸಭೆ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಯರನಾಳ ವಿರಕ್ತಮಠದ ಗುರು ಸಂಗನಬಸವ ಸ್ವಾಮೀಜಿ ಸಾನಿಧ್ಯವಹಿಸಿ ಮಾತನಾಡಿ, ಮನಗೂಳಿ ಹಿರೇಮಠದ ಪ್ರಸ್ತುತ ಪೀಠಾಧ್ಯಕ್ಷ ಅಭಿನವ ಸಂಗನಬಸವ ಸ್ವಾಮೀಜಿಯವರು ಅವಳಿ ಜಿಲ್ಲೆಯ ಭಕ್ತರ ಮನಸ್ಸನ್ನು ಗೆದ್ದಿರುವ ಯುವ ಸ್ವಾಮೀಜಿಯವರು ಮಠದಲ್ಲಿ ಸುಮ್ಮನೆ ಕುಳಿತುಕೊಳ್ಳದೆ ಕಾಲಿಗೆ ಚಕ್ರ ಕಟ್ಟಿಕೊಂಡು ಭಕ್ತರ ಊರಿಗೆ ಹೋಗಿ ಅವರೆಲ್ಲ ಕಾರ್ಯಕ್ರಮದಲ್ಲಿ ಭಾಗವಹಿಸುವಂತ ಕ್ರಿಯಾಶೀಲರು ಎಂದು ಹೇಳಿದರು.

ಹಿರೇಮಠದ ಶಿವಪ್ರಕಾಶ ಶಿವಾಚಾರ್ಯರು, ಕನ್ನೊಳ್ಳಿ ಹಿರೇಮಠ ಸಿದ್ದಲಿಂಗ ಶಿವಾಚಾರ್ಯರು ಸಾನಿಧ್ಯ ವಹಿಸಿದರು. ಶ್ರೀಮಠದ ಅಭಿನವ ಸಂಗನಬಸವ ಶಿವಾಚಾರ್ಯ ನೇತೃತ್ವವಹಿಸಿದ ಮಹಾಸ್ವಾಮೀಜಿ ಮಾತನಾಡಿ ಲಿಂಗೈಕ್ಯ ಉಭಯ ಪೂಜ್ಯರು ಏನು ಕನಸು ಕಟ್ಟಿದರು ಅದನ್ನು ಭಕ್ತರ ಸಹಾಯದಿಂದ ಶ್ರೀಮಠದ ಸೇವೆಯನ್ನು ಮಾಡುತ್ತಿದ್ದೀನೆ ಎಂದು ಹೇಳಿದರು.

ಜಿಪಂ ಮಾಜಿ ಅಧ್ಯಕ್ಷ ಚಂದ್ರಶೇಖರಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಸೋಮನಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿದರು. ಚೆನ್ನಪ್ಪಗೌಡ ಬಿರಾದಾರ ಮುಳವಾಡ, ಮಲ್ಲು ಕಲಾದಗಿ, ಎಸ್.ಎಸ್. ಮೂಡಲಗಿಗೋರ್ಪಡೆ,ಶಂಕರಗೌಡಪಾಟೀಲ ಯರನಾಳ, ವಿ.ಎಸ್.ಪಾಟೀಲ ಬಬಲೇಶ್ವರ, ಭುವನೇಶ್ವರಿ ಆಲ್ಗೊಂಡ, ಉಮೇಶ ಕೌಲಗಿ, ವೈದ್ಯರಾದ ಡಾ.ಗಜೇಂದ್ರ ಮೈಶಾಳಿ, ಸುರೇಶ ಚಿಮ್ಮಲಿಗಿ, ಮಾಂತೇಶ ಕಲ್ಯಾಣಿ, ಅಣ್ಣಪ್ಪ ಐನೂರು, ಎಸ್.ಐ.ಗೆಣ್ಣೂರ, ಮಾಂತೇಶ ಮನಗೂಳಿ, ಮಲ್ಲು ಇದ್ದರು.



ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ವಿಜಯಪುರ: ಹಿಂದೂಗಳು ಒಗ್ಗಟ್ಟಾಗಿ ಹೆಚ್ಚಿನ ಪ್ರಮಾಣದಲ್ಲಿ ಮತದಾನ ಮಾಡಿದರಿಂದಲೇ ನಾನು ಎರಡು ಬಾರಿ ಶಾಸಕನಾಗಿ ಆಯ್ಕೆಯಾಗಿ ನಿರೀಕ್ಷೆ ಮೀರಿ ವಿಜಯಪುರ ನಗರವನ್ನು ಅಭಿವೃದ್ಧಿ ಮಾಡಲು ಸಾಧ್ಯವಾಗಿದೆ. ಹೀಗಾಗಿ ಮುಂಬರುವ ಚುನಾವಣೆ ದೃಷ್ಟಿಯಿಂದ ಪ್ರತಿಯೊಬ್ಬರ ಮನೆಯಲ್ಲಿಯೂ 18 ವರ್ಷ ಮೇಲ್ಪಟ್ಟವರು ತಪ್ಪದೆ ಮತದಾರರ ಪಟ್ಟಿಗೆ ಹೆಸರು ಸೇರಿಸಿಕೊಳ್ಳಬೇಕು ಎಂದು ಹೇಳಿದರು.

ಇಲ್ಲಿನ ವಾರ್ಡ್ ನಂ.22ರ ವಿವೇಕ ನಗರ ಪೂರ್ವ ಭಾಗದ ಈಶ್ವರ ಗುಡಿ ಹತ್ತಿರ ಕನಕದಾಸ ಬಡಾವಣೆ, ವಿವೇಕ ನಗರ ಪೂರ್ವ ಭಾಗದಲ್ಲಿ ಸನ್ 2025-26ನೇ ಸಾಲಿನ ನಗರಾಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿ ಯೋಜನೆಯಡಿಯಲ್ಲಿ 1.36 ಕೋಟಿ ರೂ. ಅನುದಾನದಲ್ಲಿ ಕೈಗೊಂಡ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ನಗರದಲ್ಲಿ ರಸ್ತೆ, ಒಳಚರಂಡಿ ನಿರ್ಮಾಣದ ಜೊತೆಗೆ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ಅತ್ಯುತ್ತಮ ಗಾಳಿ ಬಿಸುವ ನಗರಗಳ ಪಟ್ಟಿಯಲ್ಲಿ ದೇಶದಲ್ಲೇ ವಿಜಯಪುರ ನಗರ 4ನೇ ಸ್ಥಾನದಲ್ಲಿದೆ. ಈ ಮೂಲಕ ವಿಜಯಪುರ ನಗರವು ದೇಶದ ಗಮನಸೆಳೆದಿದೆ. ಜೊತೆಗೆ ಎಲ್ಲ ಸಮುದಾಯಗಳ ಸಮುದಾಯ ಭವನಗಳ ನಿರ್ಮಾಣ, ದೇವಸ್ಥಾನಗಳ ಜೋಣೋದ್ಧಾರ, ಶಾಲಾ ಕೊಠಡಿಗಳನ್ನು ಸಹ ನಿರ್ಮಿಸಲಾಗಿದೆ. ನಗರದಲ್ಲಿ ಶಾಂತಿ ನೆಲೆಸುವಂತೆಯೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಮಹಿಳೆಯರು ಯಾರ ಭಯವಿಲ್ಲದೆ ತರಕಾರಿ ಖರೀದಿಸುವ ಜೊತೆಗೆ ನಿರ್ಭಯವಾಗಿ ನಗರದಲ್ಲಿ ಸಂಚರಿಸುತ್ತಾರೆ ಎಂದು ತಿಳಿಸಿದರು.

ವಿವಿಧ ಉದ್ಯಾನಗಳ ಅಭಿವೃದ್ಧಿ ಮತ್ತು ಹೈಮಾಸ್ಟ್‌ಗಳ ಅಳವಡಿಕೆ ಕಾಮಗಾರಿಗೆ ಭೂಮಿಪೂಜೆ, ನಂತರ ವಾರ್ಡ್ ನಂ.21ರಲ್ಲಿ ಸನ್ 2025-26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಿಸಲಾದ 15 ಲಕ್ಷ ರೂ. ಅನುದಾನದಲ್ಲಿ ಗುರುಪಾದೇಶ್ವರ ನಗರದ ಯೋಗಿಶ್ವರ ಯಾಜ್ಞವಲ್ಕ ಋಷಿಗಳ ಮಂದಿರ ನಿರ್ಮಾಣ ಕಾಮಗಾರಿಗೆ ಹಾಗೂ ಕುಮುದಾ ನಗರದಲ್ಲಿ 20 ಲಕ್ಷರೂ. ಮೊತ್ತದಲ್ಲಿ ಸವಿತಾ ಸಮಾಜ ಸಂಘದ ಸಮುದಾಯ ಭವನ ಕಟ್ಟಣ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು. ಮಹಾನಗರ ಪಾಲಿಕೆ ಸದಸ್ಯರಾದ ಪ್ರೇಮಾನಂದ ಬಿರಾದಾರ, ಮಲ್ಲಿಕಾರ್ಜುನ (ಕುಮಾರ) ಗಡಗಿ, ಮುಖಂಡರಾದ ಎ.ಡಿ.ದೇಶಪಾಂಡೆ, ಸತೀಶ ಕುಲಕರ್ಣಿ, ಶಂಕರ ಭಟ್ ಅಗ್ನಿಹೋತ್ರಿ, ಲಕ್ಷ್ಮೀಕಾಂತ ಕುಲಕರ್ಣಿ ಇದ್ದರು.



ಶಿಕ್ಷಣ ಸಚಿವರು ಸೂತ್ರದ ಗೊಂಬೆ: ಅರುಣ ಶಹಾಪುರ

ವಿಜಯಪುರ: ಸಮವಸ್ತ್ರದ ವಿಷಯದಲ್ಲಿ ಶಿಕ್ಷಣ ಸಚಿವರು ಸೂತ್ರದ ಗೊಂಬೆ ಆಗಿದ್ದಾರೆ, ಈ ವಿಷಯದಲ್ಲಿ ಇದನ್ನೇ ಹೇಳು ಎಂದು ಅವರಿಗೆ ನಿರ್ದೇಶನ ಬರುತ್ತಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಾಪುರ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊನ್ನೆ ನಡೆದ ಪತ್ರಿಕಾಗೋಷ್ಠಿಯಲ್ಲಿಯೂ ಸಹ ಪಕ್ಕದಲ್ಲಿ ಕುಳಿತ ಶಾಸಕ ರಿಜ್ವಾನ್ ಅರ್ಷದ್ ಇದನ್ನು ಹೇಳಿ ಎಂದು ಹೇಳಿಕೊಡುತ್ತಿದ್ದರು ಎಂದರು. ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ಸಮವಸ್ತ್ರ ಇದೆ, ಎಲ್ಲರೂ ಒಂದೇ ಎಂಬ ಭಾವನೆ ಬರಲು ಸಮವಸ್ತ್ರ ಪದ್ಧತಿ ಇದೆ, ಆದರೆ ಶಾಲೆಗಳಲ್ಲಿ ವಸ್ತ್ರಗಳನ್ನು ಇರಿಸಿಕೊಂಡು ಮತ ರಾಜಕಾರಣದಲ್ಲಿ ಕಾಂಗ್ರೆಸ್ ತೊಡಗಿದೆ, ಭಾರತೀಯ ಸಂವಿಧಾನದ ಸಮ ಭಾವವನ್ನು ಹಾಳು ಮಾಡುತ್ತಿದೆ ಎಂದರು.

ಸಮವಸ್ತ್ರ ಸಂಹಿತೆ ಸಂಬಂಧಿಸಿದಂತೆ ಮೂರು ವರ್ಷದ ಹಿಂದಿನ ಸುತ್ತೋಲೆ ಈಗ ಏಕೆ ರದ್ದುಗೊಳಿಸಿದ್ದೀರಿ ನಿಗದಿಪಡಿಸಿದ ಸಮವಸ್ತ್ರದ ಜೊತೆಗೆ ಸೀಮಿತ ಸಂಪ್ರದಾಯದ ವಸ್ತ್ರಗಳನ್ನು ಧರಿಸುವ ಧ್ವಂಧ್ವ ನೀತಿ ಏನಿದು? ಶಾಲೆಗಳು ಶಾಲೆಗಳಾಗಿ ಇರಲಿ. ಶಾಲೆ ಎಂದರೆ ವಿದ್ಯೆಯ ತಾಣ. ಅದನ್ನು ನಿಮ್ಮ ಕಲುಷಿತ ರಾಜಕಾರಣದ ತಾಣವಾಗಿಸಬೇಡಿ ಎಂದರು.

ಆರ್.ವಿ.ದೇಶಪಾಂಡೆ, ಬಸವರಾಜ ರಾಯರೆಡ್ಡಿ, ಟಿ.ಬಿ.ಜಯಚಂದ್ರ ಅವರಿಗೆ ಮಂತ್ರಿಗಿರಿ ಒಲಿದಿಲ್ಲ, ನಿಮಗೆ ಅವಕಾಶ ದೊರಕಿದೆ ಒಣ ರಾಜಕಾರಣಕ್ಕೆ ನಿಮ್ಮ ಮಂತ್ರಿಗಿರಿ ಬಳಸಿಕೊಳ್ಳಬೇಡಿ ಎಂದು ಮಧು ಬಂಗಾರಪ್ಪ ಅವರಿಗೆ ಕಿವಿಮಾತು ಹೇಳಿದರು.



ಸರ್ಕಾರಿ ಶಾಲೆ ಮುಚ್ಚುತ್ತಿವೆ, ಶಿಕ್ಷಕರ ಕೊರತೆ ವ್ಯಾಪಕವಾಗಿದೆ, ಸಾವಿರಾರು ಹುದ್ದೆಗಳು ಖಾಲಿ ಇವೆ, ವರ್ಗ ಕೋಣೆಗಳು ದುಸ್ಥಿತಿಯ ಆಗರವಾಗಿವೆ, ಶಾಲಾ ಅಭಿವೃದ್ಧಿ ನೀಡಲು ಹಣವಿಲ್ಲ, ಹೀಗಾಗಿ ಸಾಲ ಪಡೆದುಕೊಳ್ಳಲು ಪಬ್ಲಿಕ್ ಶಾಲೆ ಎಂಬ ಲೇಬಲ್ ಅಂಟಿಸುವ ಕೆಲಸ ಮಾಡುತ್ತಿದೆ, ಇದು ವೈಫಲ್ಯ ಮುಚ್ಚಿಕೊಳ್ಳುವ ಕಾರಣದಿಂದ ಸಮವಸ್ತ್ರ ವಿಷಯ ಮುನ್ನೆಲೆಗೆ ಬಂದಿದೆ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಬಿಜೆಪಿ ಮುಖಂಡರಾದ ಈರಣ್ಣ ರಾವೂರ, ಭೀಮಾಶಂಕರ ಹದನೂರ, ಸಾಬು ಮಾಶ್ಯಾಳ, ವಿಜಯ ಜೋಶಿ ಇದ್ದರು.

ವಿದ್ಯಾರ್ಥಿಗಳಿಗೆ ನಿರಂತರ ಪರಿಶ್ರಮ ಅಗತ್ಯ: ಕಮತಿ

ಝಳಕಿ: ವಿದ್ಯಾರ್ಥಿಗಳು ನಿರಂತರ ಶ್ರಮ ಅಚಲ ಛಲ ಮತ್ತು ಕಷ್ಟಗಳೆದುರು ನಗುವ ಬಂಡಾಯದ ಮನೋಭಾವವಿದ್ದಾಗ ಮಾತ್ರ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯುವಕರು ಹೊಸ ಇತಿಹಾಸ ಸೃಷ್ಟಿಸಲು ಸಾಧ್ಯ ಎಂದು ಎ.ಎಸ್.ಪಾಟೀಲ ವಾಣಿಜ್ಯ ಮಹಾವಿದ್ಯಾಲಯ ವಿಜಯಪುರ ಪ್ರಾಂಶುಪಾಲ ಡಾ.ಸಿದ್ದೇಶ್ವರ ಕಮತಿ ಹೇಳಿದರು.

ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 2025-26ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಎನ್ಎಸ್ಎಸ್ ರೆಡ್ ಕ್ರಾಸ್, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ವಿವಿಧ ಚಟುವಟಿಕೆಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಸಿದ್ದೇಶ್ವರ ಸ್ವಾಮೀಜಿಯವರ ಭಾವ ಚಿತ್ರಕ್ಕೆ ಪೂಜ ಸಲ್ಲಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಬದಲಾಗುತ್ತಿರುವ ಕಾಲಘಕ್ಕೆ ತಕ್ಕಂತೆ ತಮ್ಮನ್ನು ತಾವು ನಿರಂತವಾಗಿ ಮರುಸೃಷ್ಟಿ ಮಾಡಿಕೊಳ್ಳಬೇಕು.

ಗ್ರಾಪಂ ಮಾಜಿ ಅಧ್ಯಕ್ಷ ಸಣ್ಣಪ್ಪ ತಳವಾರ ಮಾತನಾಡಿ, ವಿದ್ಯಾರ್ಥಿಗಳೆಲ್ಲ ತಂದೆ ತಾಯಿ ಗುರುಹಿರಿಯರಿಗೆ ಹಾಗೂ ಸಮಾಜಕ್ಕೆ ಹೆಸರು ತರುವ ಕೆಲಸ ಮಾಡಲು ನೀಮ್ಮ ಬದುಕು ಉನ್ನತವಾಗಿ ರೂಪಿಸಲು ಪೋಷಕರು ಪಡುತ್ತಿರುವ ಶ್ರಮಕ್ಕೆ ತಕ್ಕ ಗೌರವ ತಂದುಕೊಂಡಬೇಕು ಬಹಳಷ್ಟು ಓದಿನ ನಂತರ ಸರ್ಕಾರಿ ಹುದ್ದೆಯಲ್ಲಿ ಹಾಗೂ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು. ಶ್ರೀಮಂತ ಸಾಹುಕಾರ ಕಾಪಸೆ ಮಾತನಾಡಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ವಿವೇಕನಂದ ಉಘಡೆ, ಶ್ರೀಮಂತ ಸಾಹುಕಾರ ಕಾಪಸೆ, ಪಿಡಿಒ ಲಕ್ಷ್ಮಣ ಪಾಟೀಲ, ಡಾ.ಸಂತೋಷ ದಂಡ್ಯಾಗೋಳ, ಗುರುಣ್ಣಗೌಡ ಪಾಟೀಲ, ಅನೀಲ ಬಿರಾದಾರ, ಸಚೀನ ಮಂಚಚಲಕರ, ಸಮೀರಾ, ತಾಜ್ ಬಾಬಾ, ಬಾಪುಗೌಡ, ಸ್ಫೂರ್ತಿ, ಬಸವರಾಜ, ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಗೌರವ, ಸ್ಥಾನ ಸಿಕ್ಕಿಲ್ಲ: ನಾಡಗೌಡ

ಮುದ್ದೇಬಿಹಾಳ: ಮುದ್ದೇಬಿಹಾಳ-ತಾಳಿಕೋಟೆ ವ್ಯಾಪ್ತಿಯ 1.9 ಟಿಎಂಸಿ ನೀರಿನಿಂದ ಕೆರೆಗಳನ್ನು ತುಂಬಿಸಲಾಗುತ್ತದೆ. ಬೆಳೆದು ನಿಂತಿರುವ ಬೆಳೆಗಳು ಒಣಗಿ ಹೋಗಬಾರದು. ರೈತರು ನಷ್ಟ ಅನುಭವಿಸಬಾರದು ಎನ್ನುವ ದೃಷ್ಟಿಯಿಂದ ಕೃಷ್ಣಾ ಮೇಲ್ದಂಡೆ ಯೋಜನಾ ಅಧಿಕಾರಿಗಳ ಜೊತೆಗೆ ನಿರಂತರ ಸಂಪರ್ಕದಲ್ಲಿದ್ದೇನೆ ಎಂದು ಶಾಸಕ ಸಿ.ಎಸ್.ನಾಡಗೌಡ ಹೇಳಿದರು.

ಹುಡ್ಕೋ ಬಡಾವಣೆಯಲ್ಲಿರುವ ತಮ್ಮ ಗೃಹ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಆಲಮಟ್ಟಿ ಡ್ಯಾಮ್‌ಗೆ ನಮ್ಮ ಭಾಗದ ರೈತರ ಜಮೀನು ಅಧಿಕ ಹೋಗಿವೆ.ಚಿಮ್ಮಲಗಿಏತನೀರಾವರಿಪೂರ್ವ ಮತ್ತು ಪಶ್ಚಿಮ ಕಾಲುವೆಗಳಿಗೆ ನೀರು ಹಂಚಿಕೆ ಪ್ರಮಾಣ ಹೆಚ್ಚಿಗೆ ನೀಡಬೇಕು. ಕೆಲವರು ರಾಜಕೀಯ ಮಾಡುತ್ತಿದ್ದಾರೆ ಮಾಡಲಿ. ಮುಂದಿನ ವಾರ ನೀರು ಬಿಡುವಾಗ ಕೆರೆಗಳಿಗೆ ನೀರು ತುಂಬಿಸಿ. ದನ-ಕರುಗಳಿಗೆ, ಪಕ್ಷಿಗಳಿಗೆ ಕುಡಿಯಲು ಬಿಡಲಾಗುತ್ತದೆ ಎಂದಿದ್ದಾರೆ. ಸಚಿವ ಸಂಪುಟದ ಬಗ್ಗೆ ಮಾತನಾಡಿದ ಶಾಸಕ ನಾಡಗೌಡರು, ಈ ಬಾರಿ ನನಗೆ ಸಚಿವ ಸಂಪುಟದಲ್ಲಿ ಅವಕಾಶ ಸಿಗುತ್ತದೆ ಎಂಬ ಭರವಸೆ ಇದೆ. ಉತ್ತರ ಕರ್ನಾಟಕದ ಯಾವ ಕೋಟಾದಲ್ಲಿ ನಮಗೆ ಸಚಿವ ಸ್ಥಾನ ಸಿಗಬೇಕು ಅದು ಸಿಕ್ಕಿಲ್ಲ ನಮ್ಮ ಕೋಟಾದಲ್ಲಿ ಎಚ್.ಕೆ ಪಾಟೀಲ ಅವರ ಹೆಸರು ಮುನ್ನೆಲೆಗೆ ಬರುತ್ತದೆ. ಇಲ್ಲಿವರೆಗೂ ನಮಗೆ ಸಿಗಬೇಕಾದ ಗೌರವ ಸ್ಥಾನ ಸಿಕ್ಕಿಲ್ಲ, ಇದೀಗ ಕೆಲವರಿಗೆ ಸಚಿವ ಸ್ಥಾನ ನೀಡುತ್ತೀರಿ. ಅವರು ಹೇಳಿದವರಿಗೆ ಸ್ಥಾನ ನೀಡುತ್ತಿರಿ ಹೀಗೆ ಮಾಡುವುದರಿಂದ ಪಕ್ಷಕ್ಕೆ ದಕ್ಕೆ ಉಂಟಾಗುತ್ತಿದೆ. ಈ ಬಗ್ಗೆ ಪಕ್ಷ ಗಮನ ಹರಿಸಬೇಕು. ಮೂಲ ಕಾಂಗ್ರೆಸ್ಸಿಗರಿಗೆ ಗೌರ ಕೊಡುವ ಕೆಲಸವಾಗಬೇಕು ಎಂದರು.



ಅಕ್ರಮ ವಿದ್ಯುತ್ ಸಂಪರ್ಕ ಕಡಿತಕ್ಕೆ ಒತ್ತಾಯ

ನಾಲತವಾಡ: ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಪ್ರತ್ಯೇಕ ವಿದ್ಯುತ್ ಮಾರ್ಗಕ್ಕೆ ಅಕ್ರಮವಾಗಿ ಸ್ಥಳಿಯ ಹೆಸ್ಕಾಂನವರೇ ಹಲವು ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಅಂಶ ಬೆಳಕಿಗೆ ಬಂದಿದೆ. ಅಕ್ರಮ ಸಂಪರ್ಕಗಳಿಗೆ ಸಾಥ್ ನೀಡಿದ ಹೆಸ್ಕಾಂನವರ ವಿರುದ್ದ ಶೀಘ್ರವೇ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಹಾಗೂ ಪ.ಪಂ ಗೆ ಸಂಭಂದಿಸಿದ ವಿದ್ಯುತ್ ಸಂಪರ್ಕಕ್ಕೆ ಹಲವು ಗ್ರಾಮಗಳ ಸಂಪರ್ಕಗಳನ್ನು ಒದಗಿಸಿದ್ದ ವಿಷಯ ಗೊತ್ತಿದ್ದರೂ ಕೈಕಟ್ಟಿ ಕುಳಿತಿರುವ ಪ.ಪಂ ಯವರನ್ನು ವಿಚಾರಣೆಗೊಳಪಡಿಸಬೇಕು ಎಂದು ಒತ್ತಾಯಿಸಿ ನವ ಕರ್ನಾಟಕ ರಾಜ್ಯ ಭ್ರಷ್ಟಾಚಾರ ನಿರ್ಮೂಲನಾ ವೇದಿಕೆಯ ಸಂಘಟಕರು ಸ್ಥಳಿಯ ತಹಶೀಲ್ದಾರ ಎನ್.ಬಿ.ದೊರೆ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಸುಮಾರು 20 ವರ್ಷಗಳಿಂದಲೂ ಈ ಅಕ್ರಮ ನಡೆದಿದೆ. ಖುದ್ದು ಹೆಸ್ಕಾಂನವರೇ ಇಂತಹ ಕೃತ್ಯ ಎಸೆಗುತ್ತಿದ್ದಾರೆ, ಹಲವಾರು ಬಾರೀ ಪ.ಪಂ ಯವರು ಸಂಕರ್ಪಗಳನ್ನು ಕಡಿತಗೊಳಿಸಿ ಎಂದು ಮನವಿ ಮಾಡಿದರೂ ಹೆಸ್ಕಾಂನವರು ಜಪ್ಪೆನ್ನುತ್ತಿಲ್ಲ ಎಂದು ಪ.ಪಂ ಯವರೇ ಆರೋಪಿಸುತ್ತಿದ್ದಾರೆ, ಬೇಸಿಗೆಯಲ್ಲಿ ನೀರಿನ ಕೊರತೆ ಅನುಭವಿಸುತ್ತೀರುವ ಪಟ್ಟಣದಲ್ಲಿ ವಿದ್ಯುತ್ ಕೈಕೊಡುತ್ತಿದೆ, ನೀರಿನ ಟ್ಯಾಂಕ್ ತುಂಬಲು ಆಗುತ್ತಿಲ್ಲ ಎನ್ನುವ ಉತ್ತರ ಕೊಡುತ್ತೀರುವ ಪ.ಪಂ ಯವರ ನಡೆ ಬೇಸರ ವ್ಯಕ್ತವಾಗಿದೆ, ಪ.ಪಂ ಯ ಕುಡಿಯುವ ನೀರು ಸರಬರಾಜಿಗೆ ಸಂಭಂದಿಸಿದ ವಿದ್ಯುತ್ ಸಂಪರ್ಕಕ್ಕೆ ಅಳವಡಿಸಿ ಅಕ್ರಮ ಸಂಪರ್ಕಗಳನ್ನು ತೆರವುಗೊಳಿಸಿ ಸಂಘಟಕರಿಗೆ ಒಂದು ವಾರದೊಳಗೆ ಉತ್ತರ ನೀಡಿ ಎಂದು ಮನವಿ ಸಲ್ಲಿಸಿದರು.

ತಾಲೂಕಾಧ್ಯಕ್ಷ ಮೈಬೂಬ ಕುಳಗೇರಿ, ಮಹಾಂತೇಶ ಸ್ಥಾವರಮಠ, ಭೀಮಣ್ಣ ಲೊಟಗೇರಿ ಸೇರಿದಂತೆ ಸ್ಥಳಿಯರಿದ್ದರು.



ಮೇ 31ರಂದು ಸನ್ಮಾನ

ಇಂಡಿ: ಪ್ರಸಕ್ತ ವರ್ಷ 2025-26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 75 ಕ್ಕೂ ಹೆಚ್ಚು ಅಂಕ ಪಡೆದ ವಿಶ್ವಕರ್ಮ ಸಮುದಾಯದ ಇಂಡಿ ತಾಲೂಕಿನ ಸೇರಿದಂತೆ ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಸಲಾಗುವದು ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜ ಇಂಡಿ ಘಟಕದ ಅಧ್ಯಕ್ಷ ರಮೇಶ ಪೊದ್ದಾರ ಹೇಳಿದರು. ನಗರದ ಉಡುಪಿ ಹಾಟೇಲ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಾ ಪುರಸ್ಕಾರ ಮೇ 31ರಂದು ಬೆಂಗಳೂರಿನ ಟೌನಹಾಲದಲ್ಲಿ ನಡೆಯುವದು. ಕೆ.ಪಿ. ನಂಜುಂಡಿ ಇವರ ಸಾರಥ್ಯದಲ್ಲಿ ಕಾರ್ಯಕ್ರಮ ನಡೆಯಲಿದ್ದು ಆಸಕ್ತ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅರ್ಜಿಗಳನ್ನು ಪಡೆದು ಸಲ್ಲಿಸಬೇಕು. ಪಿಯುಸಿ ಮತ್ತು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 75ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ರಮೇಶ ಪೋದ್ದಾರ 9449417303ಗೆ ಸಂಪರ್ಕಿಸಲು ಕೋರಿದ್ದಾರೆ. ದಿನೇಶ ಪೊದ್ದಾರ, ಗೋಪಾಲ ಪೊದ್ದಾರ, ರಾಘು ಲಾಳಸಂಗಿ, ಸುರೇಶ ಪೋದ್ದಾರ, ಗೋಪಾಲ ಪೊದ್ದಾರ, ಪವನ ಚಾಕೂರ, ರಾಘವೇಂದ್ರ ಲಾಳಸಂಗಿ, ಶ್ರೀಧರ ಪತ್ತಾರ ಮತ್ತಿತರಿದ್ದರು.

ಕಿರುಸುದ್ದಿ

ಮೃತ ರೈತನ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ

ಕಲಬುರಗಿ: ಜಿಲ್ಲೆಯ ಸೇಡಂ ತಾಲೂಕಿನ ಜಾಕನಪಲ್ಲಿಯಲ್ಲಿ ಸಿಡಿಲಿಗೆ ಸಾವನ್ನಪ್ಪಿರುವ ರೈತ ಆಶಪ್ಪ ತಂದೆ ನರಸಪ್ಪ ಕುಟುಂಬಕ್ಕೆ ತಾಲೂಕಾಡಳಿತ ವತಿಯಿಂದ ಐದು ಲಕ್ಷ ರೂ.ಗಳ ಪರಿಹಾರ ಚೆಕ್ ಅನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ ವಿತರಿಸಿದರು.

ಪ್ರಕೃತಿ ವಿಕೋಪದ ಮುಂದೆ ಜಾಗೃತರಾಗಿ ಮುನ್ನೆಚ್ಚರಿಕೆಯಿಂದ ಇರಬೇಕು. ಜೊತೆಗೆ ಬೇಕಾದ ಜಾಗೃತಿ ಕ್ರಮಗಳನ್ನು ಅಳವಡಿಸಿಕೊಂಡು ಹೊಲ, ಗದ್ದೆಗಳಿಗೆ ತೆರಳಬೇಕೆಂದರು. ಮೃತ ರೈತ ಆಶಾಪ್ಪ ಅವರ ಪತ್ನಿ ಹಾಗೂ ಮಕ್ಕಳಿಗೆ ಸಾಂತ್ವನದ ಮಾತುಗಳಾಡಿ ಸಚಿವರು ಧೈರ್ಯ ತುಂಬಿದರು.

ತಹಶೀಲ್ದಾರ್ ಶ್ರೇಯಾಂಕ ಧನಶ್ರೀ ಸೇರಿದಂತೆ ಮುಖಂಡರು ಹಾಗೂ ಕುಟುಂಬಸ್ಥರು, ಗ್ರಾಮಸ್ಥರಿದ್ದರು.

ಹನುಮೇಶ ಜಾಗೀರದಾರಗೆ ಡಾ.ಅಂಬೇಡ್ಕರ್ ಪ್ರಶಸ್ತಿ

ಸಿಂಧನೂರು: ನಗರದ ಬ್ರಾಹ್ಮಣ ಸಮಾಜದ ಯುವ ಮುಖಂಡರು ಹಾಗೂ ಬ್ರಾಹ್ಮಣ ಸಮಾಜದ ಜಿಲ್ಲಾ ಸಹ ಕಾರ್ಯದರ್ಶಿ ಹನುಮೇಶ ಜಾಗೀರದಾರ ಅವರ ಸಾಮಾಜಿಕ ಸೇವೆಯನ್ನು ಗುರುತಿಸಿ ಚೆನ್ನೈನ ಭಾರತೀಯ ವೇದಿಕೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಶ್ರೇಷ್ಠತಾ ಪ್ರಶಸ್ತಿ ಲಭಿಸಿದೆ. ಹನುಮೇಶ್ ಜಾಗೀರದಾರ ಅವರು ಹೈದರಾಬಾದ್, ಬೆಂಗಳೂರು, ಬಳ್ಳಾರಿ, ರಾಯಚೂರು, ಮುದಗಲ್ ಮತ್ತಿತರ ಕಡೆಗಳಿಗೆ ಹೋಗಿ 46 ಜನರಿಗೆ ರಕ್ತದಾನ ಮಾಡಿದ್ದಾರೆ ಹಾಗೂ ಇದಲ್ಲದೆ ಧಾರ್ಮಿಕ, ಸಾಮಾಜಿಕ ಸೇವೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರಿಂದ ಅವರ ಸೇವೆಯನ್ನು ಗುರುತಿಸಿ ಡಾ.ಅಂಬೇಡ್ಕರ್ ಜಯಂತ್ಯೋತ್ಸವ ನಿಮಿತ್ತ ಚೆನ್ನೈನ ಎಂ.ಜಿ.ಆರ್.ಸಭಾಂಗಣದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ನಂತರ ಮಾತನಾಡಿದ ಹನುಮೇಶ ರವರು ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಲಭಿಸಿರುವುದು ನನಗೆ ಅತೀವ ಸಂತಸ ತಂದಿದೆ. ಅಷ್ಟೇ ಅಲ್ಲದೆ ಇದರಿಂದ ನನಗೆ ಮತ್ತಷ್ಟು ಜವಾಬ್ದಾರಿ ಹೆಚ್ಚಾಗಿದೆ ಎಂದು ತಿಳಿಸಿದರು.



ಗಾಯಾಳು ಯೋಗಕ್ಷೇಮ ವಿಚಾರಿಸಿದ ಶ್ರೀರಾಮುಲು



ಕೊಪ್ಪಳ: ಮುನಿರಾಬಾದ್ ಬಳಿಯ ರಾಷ್ಟ್ರೀಯ ಹೆದ್ದಾರಿಯ ಸೇತುವೆ ಮೇಲಿಂದ ಟ್ರ್ಯಾಕ್ಟರ್ ಕೆಳಗೆ ಬಿದ್ದ ಘಟನೆಯಲ್ಲಿ ಗಾಯಗೊಂಡಿರುವವರನ್ನು ಮಾಜಿ ಸಚಿವ ಬಿ.ಶ್ರೀರಾಮುಲು ಭೇಟಿಯಾಗಿ ಯೋಗಕ್ಷೇಮ ವಿಚಾರಿಸಿದರು. ಭಾನುವಾರ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ವೈದ್ಯರಿಗೆ ತಿಳಿಸಿದರು.

ಈ ವೇಳೆ ಮಾತನಾಡಿದ ಅವರು, ಮೃತರ ಕುಟುಂಬಕ್ಕೆ ಪ್ರತಿ ವ್ಯಕ್ತಿಗೂ 10 ಲಕ್ಷ ರೂಪಾಯಿ ಪರಿಹಾರವನ್ನು ಸರ್ಕಾರ ನೀಡಬೇಕು. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಇಂತಹ ದುರ್ಘಟನೆಗಳು ಮತ್ತೆ ಮರುಕಳಿಸದಿರಲಿ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಗುಳಗಣ್ಣನವರ್, ಬಿಜೆಪಿ ಮುಖಂಡ ಡಾ.ಕೆ.ಬಸವರಾಜ್, ಗ್ರಾಮೀಣ ಮಂಡಲದ ಅಧ್ಯಕ್ಷ ವೀರೇಶ್ ಸಜ್ಜನ್, ನಗರ ಮಂಡಲದ ಅಧ್ಯಕ್ಷ ಅಮರೇಶ್ ಮುರಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಹೆಸರೂರು, ಮತ್ತು ಮಹೇಶ್ ಅಂಗಡಿ, ಚನ್ನಬಸವ ಗಾಳಿ, ದೇವರಾಜ್, ರಘು ಚಕ್ರವರ್ತಿ, ಪ್ರದೀಪ್ ಹಿಟ್ನಾಳ, ಬಾಬು ರಾವ್, ರಾಜು ವಸ್ತ್ರದ, ಶಂಕರ್ ನರೇಗಲ, ಪಂಪಯ್ಯ ಹಿರೇಮಠ್, ನೀಲಕಂಠಯ್ಯ ಹಿರೇಮಠ್, ಮಾರುತಿ ಅಲ್ಲಾನಗರ, ಸಿದ್ದು ಪಾಟೀಲ್, ರಮೇಶ್ ಕವಲೂರ, ಹಾಗೂ ಪಕ್ಷದ ಮುಖಂಡರು ಭಾಗವಹಿಸಿದ್ದರು.

ಶೇಖರಪ್ಪ ನಿಧನ



ಕುಕನೂರು: ಪಟ್ಟಣದ ವಿನೋಬಾ ನಗರದ ಶೇಖರಪ್ಪ ಅಂದಾನಪ್ಪ ಮೆಣಸಿನಕಾಯಿ (98) ಎಂಬುವರು ಅನಾರೋಗ್ಯದಿಂದ ಸೋಮವಾರ ನಿಧನರಾಗಿದ್ದಾರೆ. ಮೃತರಿಗೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಲಿದೆ.



ಕಲಬುರಗಿ: ಜಿಲ್ಲೆಯ ಸೇಡಂ ತಾಲೂಕಿನ ಜಾಕನಪಲ್ಲಿಯಲ್ಲಿ ಸಿಡಿಲಿಗೆ ಸಾವನ್ನಪ್ಪಿರುವ ರೈತ ಆಶಪ್ಪ ತಂದೆ ನರಸಪ್ಪ ಕುಟುಂಬಕ್ಕೆ ತಾಲೂಕಾಡಳಿತ ವತಿಯಿಂದ ಐದು ಲಕ್ಷ ರೂ.ಗಳ ಪರಿಹಾರ ಚೆಕ್ ಅನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ ವಿತರಿಸಿದರು.

ಅರ್ಹರಿಗೆ ಸರ್ಕಾರದ ಯೋಜನೆ ತಲುಪಿಸಿ

ರಾಯಚೂರು: ಸರ್ಕಾರದ ಯೋಜನೆಗಳನ್ನು ಬುಡಕಟ್ಟು ಸಮುದಾಯದ ಅರ್ಹ ಫಲಾನುಭವಿಗಳ ಮನೆ ಮನೆಗೆ ತಲುಪಿಸುವ ಮೂಲಕ ಅವರನ್ನು ಆರ್ಥಿಕ ಹಾಗೂ ಸಾಮಾಜಿಕವಾಗಿ ಮುಖ್ಯ ವಾಹಿನಿಗೆ ತರುವ ಕಾರ್ಯ ಆಗಬೇಕೆಂದು ಅಪರ ಜಿಲ್ಲಾಧಿಕಾರಿ ಶಿವಾನಂದ ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಧರ್ತಿ ಆಭಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನ ಕಾರ್ಯಕ್ರಮದಡಿ ಜನ್ ಭಾಗೀದಾರ ಸಬ್ಸೆ ದೂರ, ಸಬ್ಸೆ ಪೆಹ್ಲೆ ಅಭಿಯಾನ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಭಿಯಾನದಲ್ಲಿ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಆಯುಷ್ಮಾನ್ ಭಾರತ ಕಾರ್ಡ್, ಜಾತಿ ಪ್ರಮಾಣ ಪತ್ರ, ಪಿಎಂ ಕಿಸಾನ್ ಕ್ರೆಡಿಟ್ ಕಾರ್ಡ್, ಜನಧನ್ ಬ್ಯಾಂಕ್ ಖಾತೆ, ಸಾಮಾಜಿಕ ಭದ್ರತಾ ಯೋಜನೆಗಳಾದ ವೃದ್ಧಾಪ್ಯ ಪಿಂಚಣಿ, ವಿಧವಾ ಪಿಂಚಣಿ, ದಿವ್ಯಾಂಗ ಪಿಂಚಣಿ ಹಾಗೂ ಉದ್ಯೋಗ ಮತ್ತು ಜೀವನೋಪಾಯ ಯೋಜನೆಗಳಾದ ಪಿಎಂ ವಿಶ್ವಕರ್ಮ, ಮುದ್ರಾ ಸಾಲಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಹೇಳಿದರು.

ಸಿಡಾಕ್ ಜಂಟಿ ನಿರ್ದೇಶಕ ಜಿ.ಯು.ಹುಡೇದ್, ಡಿಹೆಚ್ಒ ಡಾ.ಸುರೇಂದ್ರ ಬಾಬು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶಿವಮಾನ್ಯಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಶರಣಮ್ಮ ಸೇರಿದಂತೆ ಇತರರಿದ್ದರು.



ರಾಯಚೂರು: ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಧರ್ತಿ ಆಭಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನ ಕಾರ್ಯಕ್ರಮದಡಿ ಜನ್ ಭಾಗೀದಾರ ಸಬ್ಸೆ ದೂರ, ಸಬ್ಸೆ ಪೆಹ್ಲೆ ಅಭಿಯಾನ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ ಮಾತನಾಡಿದರು.

ತಿಪ್ಪನಾಳ ಗ್ರಾಮಸ್ಥರಲ್ಲಿ ಆತಂಕ | ಕ್ರಮಕ್ಕೆ ಆಗ್ರಹ

ನೆಲಕ್ಕುರುಳಿದ ಪವನ ವಿದ್ಯುತ್ ಯಂತ್ರ

ಶಿವಮೂರ್ತಿ ಇಟಗಿ

ಯಲಬುರ್ಗಾ: ತಾಲೂಕಿನ ಗಾಣದಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ತಿಪ್ಪನಾಳ ಗ್ರಾಮದ ಜಮೀನೊಂದರಲ್ಲಿ ನಿರ್ಮಿಸಿದ್ದ ಖಾಸಗಿ ಕಂಪನಿಯೊಂದು ನಿರ್ಮಿಸಿದ್ದ ಸುಜಲಾನ (ಸೇರೆಂಟಿಕಾ) ಕಂಪನಿ ಒಡೆತನದ ಬೃಹತ್ ಗಾತ್ರದ ಪವನ ವಿದ್ಯುತ್ ಯಂತ್ರ (ಫ್ಯಾನ್) ಶುಕ್ರವಾರ ಮಧ್ಯರಾತ್ರಿ ಮುರಿದು ಬಿದ್ದಿದೆ.

ಶುಕ್ರವಾರ ರಾತ್ರಿ 1 ಗಂಟೆ ಸಮಯದಲ್ಲಿ ಈ ಘಟನೆ ಜರುಗಿದೆ. ಹಗಲು ಹೊತ್ತಿನಲ್ಲಿ ಈ ಘಟನೆ ಆಗಿದ್ದರೆ ಸುತ್ತಮುತ್ತಲಿನ ಜಮೀನಿನಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ರೈತರ ಮೇಲೆ ಬಿದ್ದಿದ್ದರೆ ಭಾರೀ ಅನಾಹುತವಾಗುತ್ತಿತ್ತು. ಇದು ಮಧ್ಯರಾತ್ರಿ ಆಗಿರುವುದರಿಂದ ರೈತರು ನಿಟ್ಟುಸಿರು ಬಿಡುವಂತಾಗಿದೆ. ಕಳೆದ ಒಂದು ವರ್ಷದ ಹಿಂದೆ ತಾಲೂಕಿನ ಮಸಾರಿ ಭಾಗದಲ್ಲಿ ಸುಮಾರು 60 ರಿಂದ 70 ಕಡೆ ರೈತರ ಜಮೀನಿನಲ್ಲಿ ಪವನ್ ವಿದ್ಯುತ್ ಘಟಕ ನಿರ್ಮಿಸಿದ್ದಾರೆ.

ಈ ಕೆಲಸ ಕಳೆದ ಎರಡು ಮೂರು ತಿಂಗಳು ಹಿಂದೆ ಮುಗಿದಿದ್ದು ಕಾಮಗಾರಿ ಪ್ರಾರಂಭ ಮಾಡುವ ಮುನ್ನ ಸಂಬಂಧಪಟ್ಟ ಇಲಾಖೆಯಿಂದ ನವೀಕರಿಸಬಹುದಾದ ನಿಯಮಗಳನ್ನು ಪಾಲಿಸದೆ ಕಂಬ ಅಳವಡಿಸುವ ಸಮಯದಲ್ಲಿ ಸಮರ್ಪಕ ರೀತಿಯಲ್ಲಿ ಜೋಡಣೆ ಹಾಗೂ ಬುನಾದಿ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಭದ್ರಗೊಳಿಸದೆ ಇರುವುದರಿಂದ ವಿದ್ಯುತ್ ಕಂಬ ಮುರಿದು ಬಿದ್ದಿರುವುದಕ್ಕೆ ಸಾಕ್ಷಿ ಎನ್ನಲಾಗುತ್ತಿದೆ.

ತಾಲೂಕಿನ ಕೆಲವು ಕಡೆಗಳಲ್ಲಿ ಫ್ಯಾನುಗಳನ್ನು ರಸ್ತೆಯ ಪಕ್ಕದಲ್ಲಿ ಗ್ರಾಮಕ್ಕೆ ಹತ್ತಿರದಲ್ಲಿ ನಿರ್ಮಿಸಿರುವುದರಿಂದ ಗಾಳಿಯ ಶಬ್ದದಿಂದ ಗ್ರಾಮದ ಜನತೆಗೆ ರಾತ್ರಿ ನಿದ್ದೆ ಇಲ್ಲದಂತಾಗಿದೆ. ಕೆಲವು ಕೃಷಿ ಭೂಮಿಯಲ್ಲಿ ವಿಂಡ್ ಫ್ಯಾನ್ ನಿರ್ಮಾಣ ಮಾಡಿದ್ದರಿಂದ ಯಾವಾಗ ನಮ್ಮ ಮೇಲೆ ಮುರಿದು ಬೀಳುತ್ತದೆ ಎನ್ನುವ ಭಯದಲ್ಲಿ ಗ್ರಾಮಸ್ಥರು ಹಾಗೂ ರೈತರು ನಿತ್ಯ ಆತಂಕಕ್ಕೆ ಈಡಾಗಿದ್ದಾರೆ.



ಇನ್ನೂ ಜಮೀನಿಗೆ ಬೇಸಾಯಕ್ಕೆ ತೆರಳಿದಾಗ ಅನಾಹುತವಾದರೆ ಯಾರು ಹೊಣೆ ಎಂದು ರೈತರು ತಾಲೂಕು ಆಡಳಿತಕ್ಕೆ ಇಡೀ ಶಾಪ ಹಾಕುತ್ತಿದ್ದಾರೆ. ಜಿಲ್ಲಾಡಳಿತ ನವೀಕರಿಸಬಹುದಾದ ಇಂಧನ ನೀತಿ 2022-27 ನಿಯಮದ ಪ್ರಕಾರ ವಿಂಡ್ ಫ್ಯಾನ್ ನಿರ್ಮಾಣ ಮಾಡುವುದಕ್ಕೆ ಜಿಲ್ಲಾಡಳಿತ ಸಂಬಂಧಪಟ್ಟ ಕಂಪನಿಯ ಮುಖ್ಯಸ್ಥರಿಗೆ ಸೂಚನೆ ನೀಡುವುದಕ್ಕೆ ಮುಂದಾಗಬೇಕು. ಈಗಾಗಲೇ ತಾಲೂಕಿನಲ್ಲಿ ಸಾಕಷ್ಟು ಕಂಪನಿ ಫ್ಯಾನ್ ನಿರ್ಮಿಸಿದ್ದು ಸಾಮಾಜಿಕವಾಗಿ ನಿಗದಿಪಡಿಸಿದ ಸಿಎಸ್ಆರ್ ಅನುದಾನದಲ್ಲಿ ವಿಂಡ್ ಫ್ಯಾನ್ ನಿರ್ಮಾಣದ ಅವಧಿಯಲ್ಲಿ ಭಾರಿ ಗಾತ್ರದ ವಾಹನ ಸಂಚಾರ ಮಾಡಿದ್ದರಿಂದ ತಾಲೂಕಿನ ರಸ್ತೆಗಳು ಸಂಪೂರ್ಣ ಹಾಳಾಗಿ ಹೋಗಿವೆ. ದುರಸ್ತಿ ಮಾಡುವುದಕ್ಕೆ ಮುಂದಾಗಬೇಕು ಹಾಗೂ ಗ್ರಾಪಂಗೆ ತೆರಿಗೆ ಪಾವತಿ ಮಾಡದೆ ಗ್ರಾಪಂನಿಂದ ಎನ್ಒಸಿ ಪಡೆದುಕೊಳ್ಳದೆ ವಿಂಡ್ ಫ್ಯಾನ್ ನಿರ್ಮಾಣ ಮಾಡಿದ್ದಾರೆ. ಸಂಬಂಧಪಟ್ಟ ಇಲಾಖೆ ಖಾಸಗಿ ಕಂಪನಿಯವರಿಗೆ ದಂಡ ಹಾಕಿ ತೆರಿಗೆ ಸಂಗ್ರಹ ಮಾಡುವುದಕ್ಕೆ ಮುಂದಾಗಬೇಕು ಗ್ರಾಮಸ್ಥರ ಆಗ್ರಹವಾಗಿದೆ.

> **ತಾಲೂಕಿನ ಮಸಾರಿ ಭಾಗದಲ್ಲಿ ನಿರ್ಮಾಣ ಮಾಡಿದ ಫಲವತ್ತಾದ ರೈತರ ಕೃಷಿ ಭೂಮಿಯಲ್ಲಿ ಖಾಸಗಿ (ಸೇರೆಂಟಿಕಾ) ಕಂಪನಿಯು ಮಧ್ಯವರ್ತಿಗಳ ಮುಖಾಂತರ ಭೂಮಿಯನ್ನು ಖರೀದಿ ಮಾಡಿ ರೈತರಿಗೆ ಪರಿಹಾರ ನೀಡುವುದರಲ್ಲಿ ಮೋಸ ಮಾಡಿದೆ. ಹೆಚ್ಚಿನ ಪರಿಹಾರ ಕೇಳಿದರೆ ರೈತರ ಮೇಲೆ ದಬ್ಬಾಳಿಕೆ ಮಾಡಿಸಿ ಕೆಲಸ ಮುಗಿಸಿ ಹೋಗಿದ್ದಾರೆ. ನವೀಕರಿಸಬಹುದಾದ ಇಂಧನ ನೀತಿ 2022-27 ನಿಯಮ ತಾಲೂಕಿನಲ್ಲಿ ಸಂಪೂರ್ಣ ಉಲ್ಲಂಘನೆ ಆಗಿದೆ. ವಿಂಡ್ ಫ್ಯಾನ್ ನಿರ್ಮಾಣವಾಗಿರುವುದು. ಯಾವಾಗ ಬೇಕಾದರೂ ಬೀಳಬಹುದು ಎನ್ನುವ ಜೀವ ಭಯದಲ್ಲಿ ರೈತರಿದ್ದಾರೆ.**
> ■ ಶರಣಪ್ಪ ಗುಂಗಾಡಿ, ಸಮಾಜ ಸೇವಕ, ಬೇವೂರು

ಕೇಂದ್ರದ ಗಮನ ಸೆಳೆಯಲು ದೇವೇಗೌಡರ ನಿರ್ಧಾರ: ಸಿವಿಸಿ

ಕೊಪ್ಪಳ/ಬೆಂಗಳೂರು: ಕೊಪ್ಪಳದಲ್ಲಿನ ಕೈಗಾರಿಕೆಗಳು ನಿರಂತರವಾಗಿ ನಿಯಮಾವಳಿಗಳನ್ನು ಉಲ್ಲಂಘಿಸುತ್ತಿರುವ ವಿಷಯವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಗಮನಕ್ಕೆ ತಂದು ಸೂಕ್ತ ಕ್ರಮಕ್ಕೆ ಆಗ್ರಹಿಸುವುದಾಗಿ ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ ತಿಳಿಸಿದ್ದಾರೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ್ ತಿಳಿಸಿದ್ದಾರೆ.

ಸೋಮವಾರ ದೇವೇಗೌಡರ ಬೆಂಗಳೂರಿನ ಪದ್ಮನಾಭನಗರದ ನಿವಾಸದಲ್ಲಿ ಭೇಟಿಯಾಗಿ ಈ ಕುರಿತು ಅವರು ಮನವಿ ಸಲ್ಲಿಸಿದರು.

ತಮ್ಮ ಮನವಿಗೆ ಸ್ಪಂದಿಸಿದ ಕುಮಾರಸ್ವಾಮಿಯವರ ಮಧ್ಯಸ್ಥಿಕೆಯಿಂದಾಗಿ ಕೇಂದ್ರ ಸರಕಾರದ ಒಂಬತ್ತು ತಜ್ಞರ ತಂಡ 2024 ಡಿ.11, 12 ಹಾಗೂ 13 ರಂದು 14 ಕೈಗಾರಿಕಾ ಘಟಕಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ನಿಯಮಾವಳಿಗಳು ಉಲ್ಲಂಘನೆ ಆಗಿರುವುದನ್ನು, ಕೊಪ್ಪಳದ ಪರಿಸರ, ಆರೋಗ್ಯ ಮತ್ತು ಕೃಷಿ ಕ್ಷೇತ್ರದ ಅವನತಿಯನ್ನು ತಂಡ ತನ್ನ ವರದಿಯಲ್ಲಿ ಉಲ್ಲೇಖಿಸಿತು. ನಿರ್ದಿಷ್ಟ ಕ್ರಮಗಳನ್ನು ಸೂಚಿಸಿ ಅವುಗಳನ್ನು ಆರು ತಿಂಗಳುಗಳ ಒಳಗಾಗಿ ಅನುಷ್ಠಾನಗೊಳಿಸುವಂತೆ ಕೊಪ್ಪಳ ಜಿಲ್ಲಾ ಆಡಳಿತ ಹಾಗೂ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತು.

ಒಂದುವರೆ ವರ್ಷವಾದರೂ ಕೈಗಾರಿಕಾ ಆಡಳಿತ ಮಂಡಳಿಗಳು ಹಾಗೂ ರಾಜ್ಯ ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಕೊಪ್ಪಳದಲ್ಲಿ ಕಾರ್ಖಾನೆಗಳ ವಿರುದ್ಧ ನಡೆಯುತ್ತಿರುವ ಧರಣಿ 200 ದಿನಗಳನ್ನು ಪೂರೈಸಿದೆ. ಕೈಮೀರುತ್ತಿರುವ ಪರಿಸ್ಥಿತಿಯನ್ನು ಗಮನಿಸಿ, ಕೊಪ್ಪಳದ ಉಳಿವಿಗಾಗಿ ಕೇಂದ್ರ ಸರಕಾರದ ಮಧ್ಯಪ್ರವೇಶಕ್ಕೆ ಆಗ್ರಹಿಸಬೇಕೆಂದು ಮನವಿ ಪತ್ರದಲ್ಲಿ ತಿಳಿಸಿದ್ದಾಗಿ ಸಿವಿಸಿ ಹೇಳಿದ್ದಾರೆ.



ಕೊಪ್ಪಳದ ಪರಿಸ್ಥಿತಿ ತಮ್ಮ ಹಾಗೂ ಕುಮಾರಸ್ವಾಮಿಯವರ ಗಮನದಲ್ಲಿದೆ. ಬಹುತೇಕ ವಿಷಯಗಳು ರಾಜ್ಯ ಸರಕಾರದ ವ್ಯಾಪ್ತಿಗೆ ಬರುತ್ತವೆ. ಕೆಲವೊಮ್ಮೆ ರಾಜ್ಯ ಸರಕಾರ ತನ್ನ ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಿದರೆ ಕೇಂದ್ರ ಸರಕಾರದ ಮಧ್ಯಸ್ಥಿಕೆ ಅನಿವಾರ್ಯವಾಗಬಹುದು. ಕೊಪ್ಪಳ ಜನತೆಯ ಬೇಡಿಕೆ ಹಾಗೂ ಉಲ್ಲಂಘನೆ ಕುರಿತು ಕೇಂದ್ರ ಸರಕಾರದ ಗಮನ ಸೆಳೆದು ಸೂಕ್ತ ಕ್ರಮಕ್ಕೆ ಆಗ್ರಹಿಸುವುದಾಗಿ ದೇವೇಗೌಡರು ಭರವಸೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಎಕರೆಗೆ 5 ಲಕ್ಷ ರೂ. ಪರಿಹಾರಕ್ಕೆ ಆಗ್ರಹ

ಕೊಪ್ಪಳ: ಇತ್ತೀಚಿಗೆ ಸಂಭವಿಸಿದ ಭಾರೀ ಗಾಳಿ ಮತ್ತು ಮಳೆಯಿಂದ ಹಾನಿಗೊಳಗಾದ ರೈತರ ಪ್ರತಿ ಎಕರೆಗೆ 5 ಲಕ್ಷ ರೂ. ಪರಿಹಾರ ನೀಡಬೇಕೆಂದು ಜೆಡಿಎಸ್ ಜಿಲ್ಲಾಧ್ಯಕ್ಷ ಸುರೇಶ್ ಭೂಮರಡ್ಡಿ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಸೋಮವಾರ ಜೆಡಿಎಸ್ ಪಕ್ಷದ ಮುಖಂಡರ ನಿಯೋಗದೊಂದಿಗೆ

ತಾಲೂಕಿನ ಹ್ಯಾಟಿ, ಮೆಳ್ಳಿಕೇರಿ, ಮುದ್ದಾಬಳ್ಳಿ ಭಾಗಗಳ ಹೊಲಗಳಿಗೆ ಭೇಟಿ ನೀಡಿ ಮಳೆಯಿಂದ ಉಂಟಾದ ಹಾನಿಯನ್ನು ಪರಿಶೀಲಿಸಿ ಅವರು ಮಾತನಾಡಿದರು.

ಸುಮಾರು 150 ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದ್ದ ಬಾಳೆ, ಕಬ್ಬು, ಎಲೆಬಳ್ಳಿ ಹಾಗೂ ಇತರೆ ಬೆಳೆಗಳು ಸಂಪೂರ್ಣವಾಗಿ ನೆಲ ಕಚ್ಚಿವೆ. ಕೃಷಿ ಚಟುವಟಿಕೆಗಳಿಗಾಗಿ ರೈತರು ಇಡೀ ವರ್ಷ ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸಿದ್ದಾರೆ. ಕಟಾವಿಗೆ ಬಂದಿದ್ದ ಬೆಳೆಗಳು ಹಾಳಾಗಿದ್ದರಿಂದ ರೈತರು ಭಾರಿ ಪ್ರಮಾಣದ ನಷ್ಟ ಅನುಭವಿಸಿದ್ದಾರೆ ಎಂದು ಹೇಳಿದರು.

ಕನಿಷ್ಠ ಪಕ್ಷ ಪ್ರತಿ ಎಕರೆಗೆ 5 ಲಕ್ಷ ರೂಪಾಯಿ ಪರಿಹಾರ ಘೋಷಣೆ ಆಗಬೇಕು. ನಿಯಮಾವಳಿಗಳ ನೆಪದಲ್ಲಿ ಹಣ ಬಿಡುಗಡೆಗೆ ವಿಳಂಬ ಮಾಡಬಾರದು. ಶಾಸಕರು ಹಾಗೂ ಅಧಿಕಾರಿಗಳು ಸಮೀಕ್ಷೆ ನಡೆಸಿ ವರದಿ ಸಿದ್ಧ ಪಡಿಸಿದ್ದಾರೆ. ಆದಷ್ಟು ಶೀಘ್ರದಲ್ಲಿ ಪರಿಹಾರ ನಿಧಿ ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ತಲುಪಬೇಕು. ಅತಿರೇಕದ ಘಟನೆಗಳು ಸಂಭವಿಸುವ ಮೊದಲೇ ಜಿಲ್ಲಾಡಳಿತ ಎಚ್ಚೆತ್ತುಕೊಳ್ಳಬೇಕು ಎಂದು ಒತ್ತಾಯಿಸಿದರು.

ನಿಯೋಗವು ಹ್ಯಾಟಿ ಗ್ರಾಮದ ರೈತರಾದ ಈಶಪ್ಪ ಎಡ್ರಮನಹಳ್ಳಿ, ವೆಂಕಣ್ಣ ಡಂಬಳ್ಳಿ, ಕೊಟ್ರೇಶ ಸಣ್ಣ ಮುದಿಯಪ್ಪನವರ್, ವೆಂಕಣ್ಣ ಸಣ್ಣ ಮುದಿಯಪ್ಪನವರ್, ಮಲ್ಲಯ್ಯ ಗಣಚಾರಿ, ಬಸಣ್ಣ ಸಿಗ್ನಳ್ಳಿ, ಸಂತೋಷ ಸಿಗ್ನಳ್ಳಿ ಅವರ ಜಮೀನುಗಳಿಗೆ ಭೇಟಿ ಕೊಟ್ಟು ರೈತರೊಂದಿಗೆ ಮಾತುಕತೆ ನಡೆಸಿತು.

ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಏಣಿಗಿ, ತಾಲೂಕು ಜೆಡಿಎಸ್ ಎಸ್ಸಿ ಘಟಕದ ತಾಲೂಕು ಅಧ್ಯಕ್ಷ ಸುರೇಶ ಪೂಜಾರಿ, ಜಿಲ್ಲಾ ಕೈಗಾರಿಕಾ ಅಧ್ಯಕ್ಷ ಮಾರುತಿಗೌಡ ಪೊಲೀಸ್ ಪಾಟೀಲ, ನಗರ ಘಟಕ ಅಧ್ಯಕ್ಷ ಸೋಮುನಗೌಡ ಹೊಗಾರನಾಳ, ಜೆಡಿಎಸ್ ಜಿಲ್ಲಾ ಯುವ ಘಟಕದ ಅಧ್ಯಕ್ಷ ರವಿ ಮೇದಾರ, ಜಿಲ್ಲಾ ಮುಖಂಡರಾದ ಪ್ರಕಾಶರೆಡ್ಡಿ ಬಸರಗಿಡದ, ಮಂಜುನಾಥ ರೊಡ್ಡರ ಇತರರಿದ್ದರು.



ಪಟ್ಟಣಕ್ಕೆ ಸಮರ್ಪಕ ನೀರು ಪೂರೈಕೆಯಲ್ಲಿ ವಿಫಲ: ಆರೋಪ

ಮಾನ್ವಿ: ಪಟ್ಟಣದಲ್ಲಿ ಬೇಸಿಗೆಯಲ್ಲಿ ಜನರಿಗೆ ಅಗತ್ಯವಾದ ಶುದ್ಧವಾದ ಕುಡಿಯುವ ನೀರನ್ನು ಪೂರೈಸುವಂತೆ ಅನೇಕ ಬಾರಿ ಮನವಿ ಸಲ್ಲಿಸಿದರು ಕೂಡ ಯಾವುದೆ ಕ್ರಮಕ್ಕೆಗೊಳ್ಳದೆ ಇರುವುದು ತಾಲೂಕು ಆಡಳಿತ ಸಂಪೂರ್ಣವಾಗಿ ನಿಷ್ಕ್ರಿಯಗೊಂಡಿರುವುದನ್ನು ಸೂಚಿಸುತ್ತದೆ. ಪುರಸಭೆ ಅಧಿಕಾರಿಗಳು ಶುದ್ಧ ನೀರು ಪೂರೈಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಮಾಜಿ ಶಾಸಕ ಗಂಗಾಧರ ನಾಯಕ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪುರಸಭೆ ಮುಖ್ಯಾಧಿಕಾರಿಗಳಿಗೆ ಹಾಗೂ ತಹಶೀಲ್ದಾರ್ ಸೇರಿದಂತೆ ಜಿಲ್ಲಾಧಿಕಾರಿಗಳಿಗೆ ಮತ್ತು ಪುರಸಭೆ ಆಡಳಿತಾಧಿಕಾರಿಗಳಾಗಿರುವ ಜಿಲ್ಲಾ ಸಹಾಯಕ ಉಪವಿಭಾಗಾಧಿಕಾರಿಗಳಿಗೆ ರಾಜ್ಯ ಸರ್ಕಾರ ಪಟ್ಟಣದ 50ಸಾವಿರ ಜನಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪಟ್ಟಣದ 27 ವಾರ್ಡ್‌ಗಳಿಗೆ ನಿರಂತರವಾಗಿ ಕುಡಿಯುವ ನೀರನ್ನು ಒದಗಿಸುವುದಕ್ಕೆ 73 ಕೋಟಿ ವೆಚ್ಚದಲ್ಲಿ ಅಮೃತ-2 ಯೋಜನೆಯನ್ನು ಮಂಜೂರು ಮಾಡಿದರು ಕೂಡ ಕಾಮಗಾರಿ ಪ್ರಗತಿಯು ವಿಳಂಬಗತಿಯಲ್ಲಿ ಸಾಗುತ್ತಿದೆ. ರಬ್ಬಣಕಲ್ ಕುಡಿಯು ನೀರಿನ ಕೆರೆಗೆ ನೀರು ಪೂರೈಸುವ ಕಾಲುವೆಗೆ ಅಕ್ಕಪಕ್ಕದ ಮನೆಯವರು ಚರಂಡಿ ನೀರು ಬಿಡುತ್ತಿರುವುದರಿಂದ ಕೆರೆಯು ನೀರು ಕಲುಷಿತಗೊಂಡು ಜನರ ಆರೋಗ್ಯದ ಮೇಲೆ ಪರಿಣಾಮವಾಗುತ್ತಿದೆ ಎಂದರು.



ಪಟ್ಟಣದ ಅಲ್ಪ ಸಂಖ್ಯಾತ ವಾರ್ಡ್‌ಗಳಲ್ಲಿ ನಿರ್ಮಿಸಲಾದ ಸಿ.ಸಿ.ರಸ್ತೆ ಕಳಪೆ ಗುಣಮಟ್ಟದಿಂದ ಕೂಡಿದು. ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಹಾಗೂ ಉತ್ತಮ ಆಡಳಿತ ನೀಡುವಲ್ಲಿ ವಿಫಲರಾಗಿರುವ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಮುಂದಿನ ದಿನಗಳಲ್ಲಿ ಬಿಜೆಪಿ ಮಾನ್ವಿ ಮಂಡಲ ವತಿಯಿಂದ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಮಾಜಿ ಮಾನ್ವಿ ಮಂಡಲಾ ಅಧ್ಯಕ್ಷರಾದ ಜಿ.ಸುಧಾಕರ್ ಮಾತನಾಡಿದರು. ರಾಯಪ್ಪ ವಕೀಲರು, ಜಗದೀಶ ಒತ್ತೂರು, ಶ್ರೀನಿವಾಸ, ಈರಣ್ಣ, ಶರಣಯ್ಯಸ್ವಾಮಿ, ರವಿಪಾಟೀಲ, ಉಮಾಪತಿ ನಾಯಕ, ಕುಮಾರಸ್ವಾಮಿ ಮೇದಾ, ಕರೀಂಸಾಬ್,ವೆಂಕಟೇಶಪ್ಪ, ಭಾಸ್ಕರ್ ಜಗ್ಲಿ ಇದ್ದರು.

ಕರವೇಯಿಂದ ಉಚಿತ ಟೋಪಿ ವಿತರಣೆ

ಸಿಂಧನೂರು: ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ಅಧ್ಯಕ್ಷ ಮಂಜುನಾಥ ಗಾಣಗೇರ ನೇತೃತ್ವದಲ್ಲಿ ಶುಕ್ರವಾರ ನಗರದ ಬಸ್ ನಿಲ್ದಾಣ, ಎಪಿಎಂಸಿ ಸೇರಿದಂತೆ ವಿವಿಧ ಕಡೆಗಳಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಟೋಪಿಗಳನ್ನು ವಿತರಿಸಲಾಯಿತು. ಸಂಘಟನೆಯ ತಾಲೂಕು ಘಟಕದ ಅಧ್ಯಕ್ಷ ಮಂಜುನಾಥ ಗಾಣಗೇರ ಮಾತನಾಡಿ, ಕಳೆದ ಹಲವು ದಿನಗಳಿಂದ ಬಿಸಿಲಿನ ತಾಪಮಾನ 40 ಡಿಗ್ರಿಗೂ ಹೆಚ್ಚು ಇದೆ.ಹೀಗಾಗಿ ಕೆಲಸ ಕಾರ್ಯಗಳಿಗಾಗಿ ಸಂಚರಿಸಲು ಸಾರ್ವಜನಿಕರು ಪರಿತಪಿಸುತ್ತಿದ್ದಾರೆ. ಮಧ್ಯಾಹ್ನ 12 ಗಂಟೆ ಸುಮಾರು ಹೊರಗಡೆ ನಡೆದಾಡುವುದೇ ದುಸ್ತರ ಎನ್ನುವಂತಾಗಿದೆ. ಹಾರೂನ್ ಪಾಷಾ ಜಾಗೀರ್‌ದಾರ, ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದ ಕಾರ್ಯಾಧ್ಯಕ್ಷ ಡಾ.ಚನ್ನಬಸವಸ್ವಾಮಿ ಹಿರೇಮಠ, ವನಸಿರಿ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಅಮರೇಗೌಡ ಮಲ್ಲಾಪುರ, ಕೆಪಿಸಿಸಿ ಮಹಿಳಾ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ನಾಗವೇಣಿ.




ಎಸ್.ಪಾಟೀಲ, ಕರವೇ ಕನ್ನಡಸೇನೆ ರಾಜ್ಯ ಕಾರ್ಯಾಧ್ಯಕ್ಷ ಉಮೇಶಗೌಡ ಅರಳಹಳ್ಳಿ, ಸಂಘಟನೆಯ ಪ್ರಮುಖರಾದ ಬೀರಪ್ಪ ಹಾಲಾಪುರ,ಶರಣಬಸವ ನಾಯಕ, ಶ್ರೀಕಾಂತ್ ಜವಳಿ, ಯಲ್ಲಪ್ಪ ಕೋಣದ, ಅಶೋಕ, ಮಲ್ಲಿಕಾರ್ಜುನ ಕುನ್ನಟಗಿ, ಸಿದ್ರಾಮೇಶ ಸುಲ್ತಾನಾಪುರ, ಮಲ್ಲಪ್ಪ ಕುರಿ, ನಿಂಗರಾಜ ವಿರುಪಾಪುರ, ಆದಿ ಹಿರೇಮಠ, ವಿಶ್ವನಾಥ ಕಾವೇರಿ ಹೋಟೆಲ್, ರಾಜು, ಚನ್ನಬಸವಸ್ವಾಮಿ ಹಿರೇಮಠ, ಭಾನು ಸೋಮಲಾಪುರ ಇತರರಿದ್ದರು.

ಅಪಾಯದ ಅಂಚಿನಲ್ಲಿ ಯುಕೆಪಿ ಕ್ಯಾಂಪ್ ವಿದ್ಯುತ್ ಲೈನ್?

ಮಲ್ಲಿಕಾರ್ಜುನ ಗುತ್ತೇದಾರ

ಹುಣಸಗಿ: ಪಟ್ಟಣದ ಯುಕೆಪಿ ಕ್ಯಾಂಪ್ ಪ್ರದೇಶದಲ್ಲಿ ಹುಣಸಗಿ ಪಟ್ಟಣದಿಂದ ಬಲಶೆಟ್ಟಿಹಾಳ ಹಾಗೂ ರಾಜನಕೋಳೂರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ವಿದ್ಯುತ್ ಮೇನ್ ಲೈನ್ ಹಲವಾರು ವರ್ಷಗಳಿಂದ ಸಮರ್ಪಕ ನಿರ್ವಹಣೆ ಕಾಣದೆ ಅಪಾಯದ ಹಂತ ತಲುಪಿದೆ. ಅನೇಕ ವಿದ್ಯುತ್ ಕಂಬಗಳು ನೆಲದತ್ತ ಬಾಗಿದ್ದು, ವಿದ್ಯುತ್ ತಂತಿಗಳು ಜೋತಾಡುತ್ತಿರುವ ಪರಿಣಾಮ ಸಾರ್ವಜನಿಕರಲ್ಲಿ ಭೀತಿ ಮೂಡಿದೆ.

ಪ್ರಸ್ತುತ ಯುಕೆಪಿ ಕ್ಯಾಂಪ್‌ನ ನೀಲಕಂಠೇಶ್ವರ ದೇವಸ್ಥಾನದ ಮುಂಭಾಗದಲ್ಲಿರುವ ವಿದ್ಯುತ್ ಕಂಬಗಳ ಸ್ಥಿತಿ ಅತ್ಯಂತ ಆತಂಕಕಾರಿ ಎನ್ನಲಾಗಿದೆ. ದೇವಸ್ಥಾನ ಪ್ರದೇಶದಲ್ಲಿ ಪ್ರತಿದಿನ ಮದುವೆ ಸಮಾರಂಭಗಳು, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಸಾರ್ವಜನಿಕ ಸಭೆಗಳು ನಡೆಯುತ್ತಿದ್ದು, ಸಾವಿರಾರು ಜನರು ಓಡಾಡುತ್ತಾರೆ. ಹಾಗೂ ಇದೆ ಪ್ರದೇಶದಲ್ಲಿ ಶಾಲೆಯೊಂದು ಇದ್ದು, ಆ ಶಾಲಾ ಮೈದಾನದಲ್ಲಿ ಕಂಬಗಳು ಬಾಗಿ ನಿಂತಿವೆ. ಇಂತಹ ಜನಸಂದಣಿ ಪ್ರದೇಶದಲ್ಲೇ ಅಪಾಯಕಾರಿಯಾಗಿ ವಿದ್ಯುತ್ ತಂತಿಗಳು ಹಾದು ಹೋಗುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



ಇದೇ ಪ್ರದೇಶದಲ್ಲಿ ಶಾಲೆ ಹಾಗೂ ಕಾಲೇಜುಗಳು ಇರುವುದರಿಂದ ವಿದ್ಯಾರ್ಥಿ ಗಳು ಪ್ರತಿದಿನ ಇದೇ ಮಾರ್ಗದಲ್ಲಿ ಸಂಚರಿಸುತ್ತಿದ್ದಾರೆ. ಬೆಳಗಿನ ಸಮಯದಲ್ಲಿ ಸಾರ್ವಜನಿಕರು ವಾಕಿಂಗ್ ಮಾಡುವ ಸ್ಥಳವೂ ಇದಾಗಿದ್ದು, ಯಾವುದೇ ಕ್ಷಣದಲ್ಲಿ ಅವಘಡ ಸಂಭವಿಸುವ ಭೀತಿ ಕಾಡುತ್ತಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಗಾಳಿ ಹಾಗೂ ಮಳೆ ಸಂದರ್ಭದಲ್ಲಿ ಮರದ ಕೊಂಬೆಗಳು ವಿದ್ಯುತ್ ತಂತಿಗಳಿಗೆ ತಾಗುವ ಸಾಧ್ಯತೆ ಹೆಚ್ಚಿದ್ದು, ಅಪಾಯ ಮತ್ತಷ್ಟು ಹೆಚ್ಚಾಗಿದೆ.

ಈಗಾಗಲೇ ಹುಣಸಗಿ ಪಟ್ಟಣದಲ್ಲಿ ಹಲವೆಡೆ ಹಳೆಯ ವಿದ್ಯುತ್ ತಂತಿಗಳು ಕತ್ತರಿಸಿ ನೆಲಕ್ಕೆ ಬಿದ್ದ ಪರಿಣಾಮ ಹಲವು ದುರ್ಘಟನೆಗಳು ನಡೆದಿರುವುದನ್ನು ಸಾರ್ವಜನಿಕರು ನೆನಪಿಸಿಕೊಂಡಿದ್ದಾರೆ. ಆದರೂ ಸಂಬಂಧಪಟ್ಟ ಅಧಿಕಾರಿಗಳು ಶಾಶ್ವತ ಪರಿಹಾರ ಕ್ರಮ ಕೈಗೊಂಡಿಲ್ಲ ಎಂಬ ಆರೋಪ ಕೇಳಿಬರುತ್ತಿದೆ.

ಆದ್ದರಿಂದ ಜೆಸ್ಕಾಂ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ, ಜೀರ್ಣಾವಸ್ಥೆಯಲ್ಲಿರುವ ವಿದ್ಯುತ್ ಕಂಬಗಳನ್ನು ಬದಲಾಯಿಸುವುದು ಜೋತಾಡುತ್ತಿರುವ ತಂತಿಗಳನ್ನು ಸರಿಪಡಿಸುವುದು ಹಾಗೂ ಮರಗಳ ಕೊಂಬೆಗಳನ್ನು ತೆರವುಗೊಳಿಸುವುದು ಸಾಧ್ಯವಾದಲ್ಲಿ ಮೇನ್ ಲೈನ ಸ್ಥಳ ಬದಲಾವಣೆ ಮಾಡುವ ಮೂಲಕ ಸಂಭವನೀಯ ಅನಾಹುತಗಳನ್ನು ತಪ್ಪಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

> **ಕಂಬಗಳು ನೆಲಕ್ಕೆ ಬಾಗಿದ್ದು, ತಂತಿಗಳು ಜೋತಾಡುತ್ತಿದ್ದು ಯಾವ ಸಮಯದಲ್ಲಿ ಏನಾಗುತ್ತದೆ? ಎನ್ನುವ ಭಯದಲ್ಲಿ ಇದ್ದೇವೆ. ಜೆಸ್ಕಾಂ ಅಧಿಕಾರಿಗಳು ಕೂಡಲೇ ಇದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕು.**
> ■ ಗುರುಸ್ವಾಮಿ ಹಿರೇಮಠ, ಸ್ಥಳೀಕರು

ರೇಷ್ಮೆ ಬೆಳೆಗಾರರಿಗೆ ಸಲಕರಣೆ ವಿತರಣೆ

ಕುಷ್ಟಗಿ: ಪಟ್ಟಣದ ಶಾಸಕರ ಕಾರ್ಯಾಲಯದಲ್ಲಿ ರೇಷ್ಮೆ ಬೆಳೆಗಾರ ಸಿಲ್ಕ್ ಸಮಗ್ರ-200 ಯೋಜನೆಯಡಿ ರೇಷ್ಮೆ ಬೆಳೆಗಾರರಿಗೆ ಸಲಕರಣೆಗಳು ಹಾಗೂ ಸೋಂಕು ನಿವಾರಕರಗಳನ್ನು ಸೋಮವಾರ ವಿಪ ಮುಖ್ಯಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ವಿತರಿಸಿದರು.

ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಸಿ.ಎಚ್.ಮುದಗಲ್ ಮಾತನಾಡಿ, ತಾಲೂಕಿನಲ್ಲಿ 315 ರೇಷ್ಮೆ ಬೆಳೆಗಾರರು ಇದ್ದು, ಸುಮಾರು 740 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಸಲಾಗಿದೆ. ತಾಲೂಕಿನ 4 ಹೋಬಳಿಗಳ ಪೈಕಿ, ರೈತರು ರೇಷ್ಮೆ ಬೆಳೆಯುತ್ತಿದ್ದು, ಬೆಳೆಗಾರರಿಗೆ ನೆರವಾಗಲಿ ಎನ್ನುವ ಹಿತ ದೃಷ್ಟಿಯಿಂದ ಸಿಲ್ಕ್ ಯೋಜನೆಯಡಿ ಅನ್ನದಾತರಿಗೆ ಸಲಕರಣೆಗಳನ್ನು ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು. ರೇಷ್ಮೆ ಇಲಾಖೆ ಉಪನಿರ್ದೇಶಕ ಸಿ.ಎಲ್.ಸತೀಶ್, ರೇಷ್ಮೆ ವಿಸ್ತರಣಾಧಿಕಾರಿ ಡಾ.ಚಂದ್ರಕಲಾ, ತಾಪಂ ಇಒ ಪಂಪಾಪತಿ ಹಿರೇಮಠ, ವಿಸ್ತಾರಣಾ ಕೇಂದ್ರದ ತಾಂತ್ರಿಕ ಅಧಿಕಾರಿಗಳು, ಸಿಬ್ಬಂದಿ, ರೇಷ್ಮೆ ಬೆಳೆಗಾರರು ಪಾಲ್ಗೊಂಡಿದ್ದರು.



ಕಿರುಸುದ್ದಿ

ಮೇ 20ರಿಂದ ಧಾರ್ಮಿಕ ಕಾರ್ಯಕ್ರಮ

ಸುರಪುರ: ನಗರದ ಹೊರವಲಯದಲ್ಲಿರುವ ವೆಂಕಟಾಪುರ ಗ್ರಾಮದ ಸಿದ್ಧಿ ಪುರುಷ ಅಯ್ಯಣ್ಣ ಶರಣರ ಸಿದ್ದಾಶ್ರಮದಲ್ಲಿ ಲೋಕ ಕಲ್ಯಾಣಾರ್ಥವಾಗಿ ಹಾಗೂ ಅಧಿಕ ಮಾಸದ ಅಂಗವಾಗಿ ಮೇ 20ರಿಂದ 22ರವರೆಗೆ ವಿವಿಧ ಧಾರ್ಮಿಕ ಹೋಮ, ಯಾಗ ಹಾಗೂ ಪೂಜಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಅಯ್ಯಣ್ಣ ಶರಣರ ಸುಪುತ್ರ ವಿಶ್ವಾರಾಧ್ಯರು ತಿಳಿಸಿದ್ದಾರೆ.

ಮೇ 20ರಂದು ಬೆಳಿಗ್ಗೆ 7 ಗಂಟೆಗೆ ಗಂಗಾ ಪೂಜೆ, ಗೋವುಗಳ ಪೂಜೆ ಹಾಗೂ ಅಯ್ಯಣ್ಣ ಶರಣರ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ನಡೆಯಲಿದೆ. ಬೆಳಿಗ್ಗೆ 9 ಗಂಟೆಗೆ ಗಣ ಹೋಮ ಜರುಗಲಿದ್ದು, ಬಳಿಕ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಅದೇ ದಿನ ಸಂಜೆ 5 ಗಂಟೆಗೆ ಮಹಾಮೃತ್ಯುಂಜಯ ಹೋಮ ನಡೆಯಲಿದೆ ಎಂದು ತಿಳಿಸಿದ್ದಾರೆ. ಮೇ 21ರಂದು ಬೆಳಿಗ್ಗೆ 9 ಗಂಟೆಗೆ ಚಂಡಿಕಾ ಯಾಗ ಏರ್ಪಡಿಸಲಾಗಿದ್ದು, ಬಳಿಕ ಭಕ್ತರಿಗೆ ಮಹಾಪ್ರಸಾದ ವಿತರಣೆ ನಡೆಯಲಿದೆ. ಸಂಜೆ 5 ಗಂಟೆಗೆ ರುದ್ರಯಾಗ ಜರುಗಲಿದೆ ಎಂದು ಮಾಹಿತಿ ನೀಡಿದ್ದಾರೆ. ಮೇ 22ರಂದು ಬೆಳಿಗ್ಗೆ 9 ಗಂಟೆಗೆ ಸುದರ್ಶನ ಯಾಗ ನಡೆಯಲಿದ್ದು, ಅಬ್ಬೆತುಮಕೂರಿನ ಡಾ.ಗಂಗಾಧರ ಶ್ರೀಗಳ ಸಮ್ಮುಖದಲ್ಲಿ ಪೂರ್ಣಾಹುತಿ ನೆರವೇರಲಿದೆ. ನಂತರ ಭಕ್ತರಿಗೆ ಮಹಾಪ್ರಸಾದ ವ್ಯವಸ್ಥೆ ನೆರವೇರಲಿದೆ ಎಂದು ತಿಳಿಸಿದ್ದಾರೆ.

ತುಂಗಭದ್ರಾ ನೀರು ಖಾಸಗಿ ಕಾರ್ಖಾನೆಗಳಿಗೆ ಪೂರೈಸದಂತೆ ಆಗ್ರಹ

ವಿಜಯನಗರ: ತುಂಗಭದ್ರಾ ಜಲಾಶಯದಲ್ಲಿ ನೀರಿನ ಮಟ್ಟ ಗಣನೀಯವಾಗಿ ಕುಸಿದಿರುವುದರಿಂದ, ಲಭ್ಯವಿರುವ ಉಳಿಕೆ ನೀರನ್ನು ಕೇವಲ ಸಾರ್ವಜನಿಕರ ಹಾಗೂ ಜಾನುವಾರುಗಳ ಕುಡಿಯುವ ಉದ್ದೇಶಕ್ಕೆ ಮಾತ್ರ ಮೀಸಲಿಡಬೇಕು ಮತ್ತು ರಾಯ ಬಸವ ಕಾಲುವೆಗೆ ಹರಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸಿದೆ.ಈ ಕುರಿತು ಸಂಘದ ಪ್ರಮುಖರು ಸೋಮವಾರ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಕಡು ಬೇಸಿಗೆ ಹಿನ್ನೆಲೆಯಲ್ಲಿ ಜನಸಾಮಾನ್ಯರಿಗೆ ನೀರಿನ ತತ್ವಾರ ಉಂಟಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ಆದ್ದರಿಂದ ಜಿಲ್ಲೆಯ ಪ್ರಮುಖ ಖಾಸಗಿ ಉದ್ದಿಮೆಗಳಾದ ಜೆಎಸ್‌ಡಬ್ಲ್ಯೂ, ಬಿಎಂಎಂ, ಎಸ್‌ಎಲ್‌ಆರ್, ಕಿರ್ಲೋಸ್ಕರ್ ಸೇರಿದಂತೆ ಇತರೆ ಭಾರಿ ಕಾರ್ಖಾನೆಗಳಿಗೆ ತುಂಗಭದ್ರಾ ಜಲಾಶಯದಿಂದ ನೀರು ಪೂರೈಸುತ್ತಿರುವುದನ್ನು ತಕ್ಷಣವೇ ಸ್ಥಗಿತಗೊಳಿಸಬೇಕು. ಯಾವುದೇ ಕಾರಣಕ್ಕೂ ನೀರು ಪೋಲಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.


ರಾಕೀ ರೇಂಜರ್ ಕ್ರಿಕೆಟ್ ತಂಡ ಮೊದಲ ಸ್ಥಾನ

ಕುರುಗೋಡು: ಸಮೀಪದ ನೆಲ್ಲುಡಿ ಗ್ರಾಪಂನ ಶಾಂತಿಗರದಲ್ಲಿ ರಾಕೀ ರೇಂಜರ್ ಕ್ರಿಕೆಟ್ ತಂಡ ಮೊದಲ ಸ್ಥಾನ ಜಯಶಾಲಿಯಾಗಿತು.ಈ ವೇಳೆ ಕಂಪ್ಲಿ ಶಾಸಕ ಜೆಎನ್ ಗಣೇಶ್ ವಿಜೇತ ತಂಡಕ್ಕೆ ಪ್ರಸಸ್ತಿ ನೀಡಿ ಮಾತನಾಡಿ, ನಮ್ಮ ದೇಶದಲ್ಲಿ ಅತ್ಯಂತ ಜನಪ್ರಿಯ ಕ್ರೀಡೆಯಾಗಿ ಹೊರ ಹೊಮ್ಮತಲಿದ್ದು ಕ್ರಿಕೆಟ್ ಹುಮ್ಮತ್ತಿರುವುದು ಸಂತಸ ಆದರೆ ಭವಿಷ್ಯ ದಿನಮಾನಗಳಲ್ಲಿ ಗ್ರಾಮೀಣ ಭಾಗದ ಪ್ರತಿಭೆಗಳು ರಾಜ್ಯ ಮತ್ತು ರಾಷ್ಟ್ರವನ್ನು ಪ್ರತಿಸುವ ಮೂಲಕ ಕ್ರೀಡೆಗೆ ತಮ್ಮದಾಗಿರ ತಕ್ಕಂತಹ ಕೊಡುಗೆಯನ್ನು ನೀಡಬೇಕು ಎಂದರು. ವಿನ್ನರ್ ತಂಡಕ್ಕೆ 20 ಸಾವಿರ, ರನ್ನರ್ ಅಪ್ ತಂಡಕ್ಕೆ ಎಸ್‌ಎನ್ ಆರ್ ಪವರ್ ಹಿಟ್ಟರ್ಸ್ 10 ಸಾವಿರ ಬಹುಮಾನ ವಿತರಿಸಲಾಯಿತು. ಯುವ ಮುಖಂಡ ಕೊನಾಂಕಿ ರಘು ಮಾತನಾಡಿ, ಕ್ರಿಕೆಟ್ ಟೂರ್ನಿ ಹಮ್ಮಿಕೊಳ್ಳುವ ಮೂಲಕ ಆರೋಗ್ಯ ಉತ್ಸಹ ಮತ್ತಷ್ಟು ಬಾಂಧವ್ಯಗಳು ಗಟ್ಟಿಗೊಳಲು ಸಹಾಯಕವಾಗಿದೆ ಎಂದರು.ಈ ವೇಳೆ ಯುವ ಮುಖಂಡರಾದ ಪ್ರವೇಜ್, ಸುಧಕರ, ಕೊಂಡಯ್ಯ, ಅಲ್ಲಾಸಾಮು, ನಾಗರಾಜ, ಕಾಸಿಂ ಹುಸೇನ್, ರಘು, ವೆಂಕಟೇಶ್, ಕೊಂಡಯ್ಯ, ರವಿ, ಕೋಟ್ರೇಶ್, ಗೋವಿಂದಪ್ಪ, ಕ್ರೀಡೆಯ ಮುಖ್ಯ ಕಾರ್ಯ ನಿರ್ವಹಕರು, ತಂಡದ ನಾಯಕರು, ವ್ಯವಸ್ಥಾಪಕರು ಸ್ಥಳಿಯ ಕ್ರೀಡಾ ಪ್ರೇಮಿಗಳು ಪಾಲ್ಗೊಂಡಿದ್ದರು.

ನಿಧನ ಸುದ್ದಿ

ವಿ.ಚೆನ್ನಾಪ್ರಪ್ಪ

ಹಗರಿಬೊಮ್ಮನಹಳ್ಳಿ: ತಾಲೂಕಿನ ಉಪನಾಯಕನಹಳ್ಳಿ ಗ್ರಾಮದ ಹಾಲುಮತ ಸಮಾಜದ ಹಿರಿಯ ಮುಖಂಡರು, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ವಿ.ಚೆನ್ನಾಪ್ರಪ್ಪ (86) ನಿಧನರಾಗಿದ್ದಾರೆ. ಸೋಮವಾರ ಸಂಜೆ ಗ್ರಾಮದ ಸಾರ್ವಜನಿಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು. ಅವರಿಗೆ ನಾಲ್ವರು ಪುತ್ರರು, ಓರ್ವ ಪುತ್ರಿ ಇದ್ದು, ಅಪಾರ ಬಂಧುಗಳನ್ನು ಅಗಲಿದ್ದಾರೆ.





ಬಳ್ಳಾರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ವಿಭಾಗ ಹಾಗೂ ಕೌಲ್ ಬಜಾರ್‌ನ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆಶ್ರಯದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಡೆಂಘೀ ದಿನಾಚರಣೆ ಜಾಗೃತಿ ಜಾಥಾ ಕಾರ್ಯಕ್ರಮ ನಡೆಯಿತು.

ಡೆಂಘೀ ನಿಯಂತ್ರಣಕ್ಕೆ ಕೈಜೋಡಿಸಿ: ಡಿಎಚ್‌ಒ

ಬಳ್ಳಾರಿ: ಮನೆಯಲ್ಲಿ ನೀರು ಸಂಗ್ರಹಿಸುವ ಪರಿಕರಗಳನ್ನು ಸರಿಯಾಗಿ ಮುಚ್ಚದಿದ್ದರೆ, ಅಂತಹ ನೀರಿನಲ್ಲಿ ಈಡಿಸ್ ಸೊಳ್ಳೆಗಳು ಮೊಟ್ಟೆಯಿಟ್ಟು ಸಂತತಿ ವೃದ್ಧಿಸುತ್ತವೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಮನೆಯ ಸುತ್ತಮುತ್ತ ಸ್ವಚ್ಛತೆ ಕಾಪಾಡುವುದರೊಂದಿಗೆ, ಇಲಾಖೆ ಡೆಂಗ್ಯೂ ನಿಯಂತ್ರಣ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಡಿಎಚ್‌ಒ ಡಾ.ಯಲ್ಲಾ ರಮೇಶಬಾಬು ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ವಿಭಾಗ ಹಾಗೂ ಕೌಲ್ ಬಜಾರ್‌ನ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆಶ್ರಯದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಡೆಂಘೀ ದಿನಾಚರಣೆ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಮಾತನಾಡಿ, ಮನೆಯ ಹೊರಗೆ ಅನಗತ್ಯವಾಗಿ ಮಳೆ ನೀರು ನಿಲ್ಲುವ ಬೀಸಾಡಿದ ಟೈರ್, ತಗಡಿನ ಟಿನ್, ಪ್ಲಾಸ್ಟಿಕ್ ಕಪ್, ಹೂವಿನ ಕುಂಡ ಹಾಗೂ ಫ್ರಿಡ್ಜ್‌ನ ಹಿಂಭಾಗದಲ್ಲಿ 7 ದಿನಗಳಿಗಿಂತ ಹೆಚ್ಚು ಕಾಲ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು ಎಂದರು. ಈ ವೇಳೆ ಮಹಾನಗರ ಪಾಲಿಕೆ ಸದಸ್ಯ ಡಿ.ಸುಕುಂ, ಟಿ.ರಿಯಾಜ್ ಅಹಮ್ಮದ್, ವೈದ್ಯಾಧಿಕಾರಿ ಡಾ.ರೇವಣಸಿದ್ದಪ್ಪ, ಎನ್‌ವಿಬಿಡಿಸಿಪಿ ಕನ್ಸಲ್ಟಂಟ್ ಪ್ರತಾಪ, ಪ್ರಭಾರಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಷಿದ್ ಬೇಗಮ್, ಜಿಲ್ಲಾ ಮತ್ತು ತಾಲೂಕು ಮಟ್ಟದ ಮೇಲ್ವಿಚಾರಕರು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆರೋಗ್ಯ ನಿರೀಕ್ಷಕರು, ಆಶಾ ಕಾರ್ಯಕರ್ತೆಯರು ಇತರರು ಉಪಸ್ಥಿತರಿದ್ದರು.



ಕುರುಗೋಡು: ಸಮೀಪದ ನೆಲ್ಲುಡಿ ಗ್ರಾಪಂನ ಶಾಂತಿಗರದಲ್ಲಿ ರಾಕೀ ರೇಂಜರ್ ಕ್ರಿಕೆಟ್ ತಂಡ ಮೊದಲ ಸ್ಥಾನ ಜಯಶಾಲಿಯಾಗಿತು.ಯುವ ಮುಖಂಡರಾದ ಪ್ರವೇಜ್, ಸುಧಕರ, ಕೊಂಡಯ್ಯ, ಅಲ್ಲಾಸಾಮು, ನಾಗರಾಜ, ಕಾಸಿಂ ಹುಸೇನ್, ರಘು, ವೆಂಕಟೇಶ್, ಕೊಂಡಯ್ಯ, ರವಿ, ಕೋಟ್ರೇಶ್, ಗೋವಿಂದಪ್ಪ ಇತರರಿದ್ದರು.

ಎಸ್ಸಿ-ಎಸ್ಟಿ ಆಯೋಗದ ಅಧ್ಯಕ್ಷ ಡಾ.ಮೂರ್ತಿ ಸೂಚನೆ

ಪರಿಶಿಷ್ಟರ ಕಲ್ಯಾಣಕ್ಕೆ ಆದ್ಯತೆ ನೀಡಿ

ಬಳ್ಳಾರಿ: ಯೋಜನೆಗಳ ಪ್ರಗತಿ ವರದಿಯನ್ನು ಕೇವಲ ಕಾಗದದ ಮೇಲೆ ಸೀಮಿತಗೊಳಿಸದೆ, ಕ್ಷೇತ್ರ ಮಟ್ಟದಲ್ಲಿ ಪರಿಶೀಲನೆ ನಡೆಸಬೇಕು. ಎಸ್ಸಿ/ಎಸ್ಟಿ ಸಮುದಾಯದ ಕಲ್ಯಾಣಕ್ಕಾಗಿ ಎಷ್ಟು ಸಭೆಗಳನ್ನು ನಡೆಸಲಾಗಿದೆ ಮತ್ತು ಕೈಗೊಂಡಿರುವ ಯೋಜನೆಗಳ ಫಲಿತಾಂಶವೇನು ಎಂಬುದರ ಬಗ್ಗೆ ಆಯೋಗದ ಕಚೇರಿಗೆ ನಿಯಮಿತವಾಗಿ ವರದಿ ಸಲ್ಲಿಸಬೇಕು ಎಂದು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ ಎಲ್. ಹೇಳಿದರು.

ನಗರದ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಸೋಮವಾರ ವಿವಿಧ ಇಲಾಖೆಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು ಆಯೋಜಿಸಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಗಳಿಗೆ, ವಿಶೇಷವಾಗಿ ಟಿಎಸ್‌ಪಿ ಅಡಿಯಲ್ಲಿ ಹೆಚ್ಚಿನ ಅನುದಾನ, ಸೌಲಭ್ಯಗಳು ಮತ್ತು ಕಾರ್ಯಕ್ರಮಗಳ ಅವಶ್ಯಕತೆಯಿದೆ. ಯೋಜನೆಗಳ ಅನುಷ್ಠಾನಕ್ಕೆ ಸರಿಯಾದ ಕ್ರಿಯಾ ಯೋಜನೆ ಹಾಗೂ ಹೆಚ್ಚುವರಿ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಬೇಕು ಎಂದು ತಿಳಿಸಿದರು.

ದೀರ್ಘಕಾಲದಿಂದ ಅರಣ್ಯ ಭೂಮಿ ಅಥವಾ ಸರ್ಕಾರಿ ಜಾಗದಲ್ಲಿ ವಾಸಿಸುತ್ತಿರುವ ಭೂರಹಿತ ಜನರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸಬಾರದು. ಈ ಕುರಿತು ಪ್ರಧಾನ ಕಾರ್ಯದರ್ಶಿ ಈಗಾಗಲೇ ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ. ಪರ್ಯಾಯವಾಗಿ ಅವರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯಗಳಿಂದ ಬರುವ ದೂರುಗಳು ಹಾಗೂ ಕುಂದುಕೊರತೆಗಳನ್ನು ಮುಂಬರುವ ದಿನಗಳಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು ಎಂದು ಸೂಚಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಾಂಗದವರು ವಾಸಿಸುವ ಕಾಲೋನಿಗಳಲ್ಲಿ ಸಿ.ಸಿ. ರಸ್ತೆ, ಚರಂಡಿ ಹಾಗೂ ಕುಡಿಯುವ ನೀರಿನ ಸೌಕರ್ಯ ಒದಗಿಸಲು ಹೆಚ್ಚಿನ ಆದ್ಯತೆ ನೀಡಬೇಕು. ನಗರ ಸ್ಥಳೀಯ ಸಂಸ್ಥೆಗಳಾದ ಬಳ್ಳಾರಿ ಮಹಾನಗರ ಪಾಲಿಕೆ, ನಗರಸಭೆ ಹಾಗೂ ವಿವಿಧ ಪುರಸಭೆಗಳು ತಮ್ಮ ತೆರಿಗೆ ನಿಧಿಯ ನಿಗದಿತ ಪಾಲನ್ನು ಎಸ್‌ಸಿ-ಎಸ್‌ಟಿ ಜನಾಂಗದ ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ್, ಆಯೋಗದ ಸದಸ್ಯ ದಿವಾಕರ ಎನ್., ಗೀತಾ ಥಾವಂಶಿ, ಕಾರ್ಯದರ್ಶಿ ಡಾ.ಶಿವರಾಮು, ಎಚ್.ಎಸ್.ಸಂಶೋಧನಾ ಅಧಿಕಾರಿ ಸಿಂಘು ರಘು ಎಚ್.ಎಸ್., ಡಿಸಿ ನಾಗೇಂದ್ರ ಪ್ರಸಾದ್ ಕೆ., ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್, ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್, ಬಳ್ಳಾರಿ ವಲಯ ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ. ಎನ್.ಬಸವರಾಜ, ಮಹಾನಗರ ಪಾಲಿಕೆಯ ಆಯುಕ್ತ ಪಿ.ಎಸ್.ಮಂಜುನಾಥ್ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.



ಹಣ ದುರುಪಯೋಗಕ್ಕೆ ತಡೆ

ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಬಿಡುಗಡೆಯಾಗುವ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಿರುವ ಅಥವಾ ದುರುಪಯೋಗ ಪಡಿಸಿಕೊಂಡಿರುವ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುವುದು. ಯಾವ ಯಾವ ಕಾಮಗಾರಿಗಳು ಎಷ್ಟೆಷ್ಟು ವೆಚ್ಚದಲ್ಲಿ ನಡೆದಿವೆ ಎಂಬ ಬಗ್ಗೆ ಸಂಪೂರ್ಣ ಪಾರದರ್ಶಕತೆ ಇರಬೇಕು. ಎಲ್ಲ ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡಿರುವ ಕಾಮಗಾರಿಗಳ ಬಳಿ ಕಡ್ಡಾಯವಾಗಿ ನಾಮಫಲಕಗಳನ್ನು ಅಳವಡಿಸಬೇಕು ಎಂದು ಈಗಾಗಲೇ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ ಎಂದು ಡಾ.ಮೂರ್ತಿ ಎಲ್. ಸ್ಪಷ್ಟಪಡಿಸಿದರು.

ಶೈಕ್ಷಣಿಕ ಗುಣಮಟ್ಟ ಹೆಚ್ಚಳಕ್ಕೆ ಬದ್ಧ: ಜಗದೀಶ್

ಹಗರಿಬೊಮ್ಮನಹಳ್ಳಿ: ಶಾಲಾ ಪ್ರಾರಂಭ ಹಂತದಲ್ಲಿನ 'ಸೇತುಬಂಧ' ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿ ಹಾಗೂ ಏಕರೂಪವಾಗಿ ರೂಪಿಸುವ ಮೂಲಕ ತಾಲೂಕಿನ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು 'ಹೊಸ ದಿಕ್ಕು-ನವ ಹೆಜ್ಜೆ'ಯೋಜನೆಯಡಿಯಲ್ಲಿ ಸೇತುಬಂಧದ ಕಲಿಕಾಂಶದ ಆಧಾರದಲ್ಲಿ ಪ್ರಶ್ನೆಪತ್ರಿಕೆಗಳನ್ನು ರೂಪಿಸಲಾಗಿದೆ ಎಂದು ಬಿಇಒ ಜಗದೀಶ ಎಸ್.ಎಸ್. ಹೇಳಿದರು.

ಅವರು ತಾಲೂಕಿನ ಬಿಆರ್‌ಸಿಯಲ್ಲಿ ಪ್ರಶ್ನೆಪತ್ರಿಕೆಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಸೇತುಬಂಧವು ಹಿಂದಿನ ತರಗತಿಯ ಕಲಿಕಾಫಲ ಮತ್ತು ಮುಂದಿನ ತರಗತಿಯ ಕಲಿಕಾ ಸಾಮರ್ಥ್ಯಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿಯೇ ವಿನೂತನವಾದ 4 ರಿಂದ 8ನೇ ತರಗತಿಯ ಮಕ್ಕಳಿಗಾಗಿ,ತಾಲೂಕಿನನುರಿತಸಂಪನ್ಮೂಲ ವ್ಯಕ್ತಿಗಳು ಮತ್ತು ಎಲ್ಲಾ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸೇತುಬಂಧದ ನೈದಾನಿಕ ಹಾಗೂ ಸಾಫಲ್ಯ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲಾಗಿದೆ. ಇದು ತಾಲೂಕಿನ ಎಲ್ಲ ಶಾಲೆಗಳ ಶಿಕ್ಷಕರಿಗೆ ಉಪಯುಕ್ತವಾದುದಾಗುವುದರ ಜೊತೆಗೆ ಶೈಕ್ಷಣಿಕ ರಂಗದಲ್ಲಿ ಹೊಸ ಮೈಲುಗಲ್ಲಾಗಿದೆ ಎಂದು ಹೇಳಿದರು.

ಬಿಆರ್‌ಸಿ ಪ್ರಭಾಕರ ಎಂ.ಎಸ್. ಮಾತನಾಡಿ, ಸಂವಿಧಾನದ ಆಶಯಗಳಾದ 'ಸಾರ್ವತ್ರಿಕ ಅವಕಾಶ', 'ಸಾರ್ವತ್ರಿಕ ದಾಖಲಾತಿ', 'ಸಾರ್ವತ್ರಿಕ ಉಳಿಕೆ' ಮತ್ತು 'ಸಾರ್ವತ್ರಿಕ ಕಲಿಕೆ' ಎಂಬ ಇಲಾಖೆಯ ಯೋಜನೆಗೆ ಕಲಿಕಾ ಅವಕಾಶ, ಕಲಿಕಾರ್ಥಿಯ ಅನುಭವ, ಪೂರ್ವಜ್ಞಾನ, ವೈಯಕ್ತಿಕ ವಿಭಿನ್ನತೆ ಮುಂತಾದ ಕಾರಣಗಳಿಂದ ಮಕ್ಕಳಲ್ಲಿ ಕಲಿಕಾ ಮಟ್ಟದಲ್ಲಿ ವ್ಯತ್ಯಾಸಗಳು ಅಥವಾ ಕೊರತೆಗಳು ಕಂಡುಬರುತ್ತವೆ ಎಂದರು.

ನೌಕರರ ಸಂಘದ ಅಧ್ಯಕ್ಷ ಎಂಪಿಎಂ ಮಂಜುನಾಥ, ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ರವಿಚಂದ್ರನಾಯ್ಕ್, ಶಿಕ್ಷಕರ ಸಂಘದ ಅಧ್ಯಕ್ಷ ಹ್ಯಾಟಿ ಲೋಕಪ್ಪ, ಕಾರ್ಯದರ್ಶಿ ಬಿ.ಕೊಟ್ರಪ್ಪ, ಮು.ಗು. ಸಂಘದ ಅಧ್ಯಕ್ಷ ಚಂದ್ರಪ್ಪ, ಜಿಪಿಟಿ ಸಂಘದ ಕಾರ್ಯದರ್ಶಿಕೆ.ಗಾಳೆಪ್ಪ,ಸಂಪನ್ಮೂಲವ್ಯಕ್ತಿ ಎಸ್.ಕೊಟ್ರೇಶ್, ಎಪಿಎಫ್‌ನ ಸಂತೋಷ ಅವರು ಮಾತನಾಡಿದರು. ಬಿಆರ್‌ಪಿ ಡಾ.ಪರಮೇಶ್ವರಯ್ಯ ಸೊಪ್ಪಿಮಠ ಅವರು ಕಾರ್ಯಕ್ರಮದ ಯೋಚನೆ, ಯೋಜನೆ ಮತ್ತು ಅನುಷ್ಠಾನ ಕುರಿತು ಮಾಹಿತಿ ಹಂಚಿಕೊಂಡರು. ಎಲ್ಲ ಇಸಿಒ, ಬಿಆರ್‌ಪಿ, ಸಿಆರ್‌ಪಿ ಉಪಸ್ಥಿತರಿದ್ದರು.



ತಾಯಂದಿರು ತಾಳ್ಮೆಯ ಸಾಕಾರ ಮೂರ್ತಿಗಳು

ಕೊಟ್ಟೂರು: ತಾಳ್ಮೆಯನ್ನು ಮೈಗೂಡಿಸಿಕೊಂಡಿರುವ ತಾಯಂದಿರು ಸಾಕಾರ ಮೂರ್ತಿಗಳಾಗಿರುವುದಲ್ಲದೇ ಮಕ್ಕಳಿಗೆ ಸಂಸ್ಕಾರ ಕಲಿಸುವ ಮೊದಲ ಗುರುಗಳಾಗಿದ್ದಾರೆಂದು ಹೂವಿನಹಡಗಲಿ ಗವಿಮಠದ ಡಾ.ಹಿರಿಯ ಶಾಂತವೀರ ಸ್ವಾಮೀಜಿ ಹೇಳಿದರು.

ಪಟ್ಟಣದ ಕೊಟ್ಟೂರೇಶ್ವರ ಕಲ್ಯಾಣ ಮಂಟಪದಲ್ಲಿ ಚಿಕ್ಕೇನಕೊಪ್ಪ ಶರಣರ ಬಳಗ ಆಯೋಜಿಸಿದ್ದ ಚನ್ನವೀರಣ ಶರಣರ 31ನೇ ಸ್ಮರಣೋತ್ಸವ ಹಾಗೂ ಉಡಿ ತುಂಬುವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಭಾನುವಾರ ಮಾತನಾಡಿದರು.

ತಮ್ಮ ಬದುಕಿನುದಕ್ಕೂ ಕುಟುಂಬ ಮತ್ತು ಸಮಾಜಕ್ಕಾಗಿ ಜೀವನವನ್ನು ಮುಡಿಪಾಗಿಟ್ಟ ಹೇಮರೆಡ್ಡಿ ಮಲ್ಲಮ್ಮ, ಸಜ್ಜಲಗುಡ್ಡ ಶರಣಮ್ಮ, ಅಕ್ಕಮಹಾದೇವಿ ಸೇರಿದಂತೆ ಅನೇಕ ಶರಣೆಯರು ಇಂದಿನ ಮಹಿಳೆಯರಿಗೆ ಆದರ್ಶರಾಗಿದ್ದಾರೆ. ಚಿಕ್ಕೇನಕೊಪ್ಪ ಚನ್ನವೀರ ಶರಣರು ಸಹ ತಮ್ಮ ಬದುಕಿನಲ್ಲಿ ಧಾರ್ಮಿಕ, ಆಧ್ಯಾತ್ಮತೆಗಳನ್ನು ರೂಢಿಸಿಕೊಂಡು ಮಹಾನ್ ಶರಣರಾಗಿದ್ದಾರೆ. ಅಂತಹ ಶರಣ ಜೀವನವನ್ನು ನಾವೆಲ್ಲಾ ಆದರ್ಶವಾಗಿರಿಸಿಕೊಂಡು ನಡೆಯಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಕೊಟ್ಟೂರು ಕಟ್ಟೇಮನಿ ಹಿರೇಮಠದ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವಿಶ್ವಕ್ಕೆ ಮಾದರಿಯಾಗಿರುವ ದೇಶದ ಕೌಟುಂಬಿಕ ವ್ಯವಸ್ಥೆಯನ್ನು ವಿದೇಶಗಳಿಂದ ಅಧ್ಯಯನಕ್ಕಾಗಿ ಪ್ರವಾಸಿಗರು ಬರುತ್ತಿದ್ದಾರೆ. ಚಿಕ್ಕೇನಕೊಪ್ಪದ ಚನ್ನವೀರ ಶರಣರು ಸಾಮಾನ್ಯರಂತೆ ಬದುಕಿ ಭಕ್ತರಿಗೆ ಜೀವನದ ನುಡಿಗಳನ್ನು ಹೇಳುತ್ತಿದ್ದರು. ಅವರ ಜೀವನ ಆದರ್ಶಮಯ. ಅವರು ಸದಾ ನಮ್ಮೊಂದಿಗೆ ಇದ್ದಾರೆ ಎಂದರು. ಚನ್ನವೀರ ಶರಣರ ಬಳಗದ ಕಾರ್ಯದರ್ಶಿ ದೇವರಮನಿ ಕರಿಯಪ್ಪ ಪ್ರಾಸ್ತಾವಿಕ ಮಾತನಾಡಿದರು. ಸದಸ್ಯ ಟಿ.ಕೆ. ಸಿದ್ಧರಾಮೇಶ್ವರ ವರದಿ ವಾಚಿಸಿದರು. ಹೊಂಬಾಳೆ ಮಂಜುನಾಥ ನಿರ್ವಹಿಸಿದರು. ಶರಣರ ಬಳಗದ ಅನುರಾಧಮ್ಮ, ಡಿ.ಮಂಗಳ ವಚನ ಸಂಗೀತ ಸೇವೆ ಸಲ್ಲಿಸಿದರು. ಬಳಗದ ಅಧ್ಯಕ್ಷ ದೇವರಮನಿ ಗುರುರಾಜ, ಪ್ರಮುಖರಾದ, ನಾಗರಾಜ, ಸಿದ್ದಣ್ಣ, ಪಿನಾಕಪಾಣಿ, ಮಲ್ಲಿಕಾರ್ಜುನ, ಶಿವಕುಮಾರ, ಸುರೇಶಗೌಡ ಇತರರಿದ್ದರು. ನಂತರ 100ಕ್ಕೂ ಹೆಚ್ಚು ಮಹಿಳೆಯರಿಗೆ ಉಡಿ ತುಂಬಲಾಯಿತು.



ಶಾಲೆ ವಿಲೀನಕ್ಕೆ ಗ್ರಾಮಸ್ಥರಿಂದ ತೀವ್ರ ವಿರೋಧ

ಬಳ್ಳಾರಿ: ತಾಲೂಕಿನ ಕೊರಲ್ಗುಂದಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಕೆಪಿಎಸ್ ಶಾಲೆಗೆ ವಿಲೀನ ಮಾಡುವು ಕ್ರಮ ಖಂಡಿಸಿ ಇಲ್ಲಿನ ಎಐಡಿಎಸ್‌ಒ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದಲ್ಲಿ ನೂರಾರು ಪಾಲಕರು ಗ್ರಾಮದಲ್ಲಿ ಪ್ರತಿಭಟನೆ ನಡೆಸಿ ಶಾಲಾ ಮುಖ್ಯಗುರುಗಳ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಶಾಲೆ ಮುಚ್ಚಿದಲ್ಲಿ ನೂರಾರು ತಳ ಸಮುದಾಯದ ಮಕ್ಕಳು ಶಿಕ್ಷಣದಿಂದ ವಂಚಿರಾಗಲಿದ್ದಾರೆ, ಕೆಪಿಎಸ್ ಮ್ಯಾಗ್ನೆಟ್ ಯೋಜನೆಯು ಸರ್ಕಾರಿ ಶಾಲೆ ಮುಚ್ಚುವ ಹುನ್ನಾರ ಹೊಂದಿರುವ ಯೋಜನೆಯಾಗಿದೆ. ಇದರ ವಿರುದ್ಧ ನಮ್ಮ ಹೋರಾಟ ಮುಂದುವರೆಯಲಿದೆ. ಸರ್ಕಾರ ಜನರ ವಿರೋಧದ ನಡುವೆಯೂ ಈ ಯೋಜನೆ ಅನುಷ್ಠಾನಕ್ಕೆ ತಂದು, ಬಡ ಮಕ್ಕಳ ಶಿಕ್ಷಣಕ್ಕೆ ಕೊಳ್ಳಿ ಇಡುತ್ತಿದೆ. ಕೊರಲಗುಂದಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಇಂತಹ ಶಾಲೆ ಮುಚ್ಚುವುದು ಸರಿಯಲ್ಲ, ಈ ಶಾಲೆಗೆ ಅಗತ್ಯ ಕಟ್ಟಡ ಸಂಖ್ಯೆ ಹೆಚ್ಚಿಸಿ, ಶಿಕ್ಷಕರ ನೇಮಕ ಮಾಡಿ, ಉತ್ತಮ ಶಿಕ್ಷಣ ನೀಡಲು ಸರ್ಕಾರ ಮುಂದಾಗಬೇಕು. ವಿರೋಧದ ನಡುವೆಯೂ ಶಾಲೆಯನ್ನು ಕೆಪಿಎಸ್ ಶಾಲೆಗೆ ವಿಲೀನ ಮಾಡಿದ್ದಲ್ಲಿ ಹೋರಾಟದ ಸ್ವರೂಪ ಬದಲಾಗಲಿದೆ ಎಂದು ಗ್ರಾಮಸ್ಥರು ಎಚ್ಚರಿಸಿದರು.



ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ನಾಗರತ್ನ ಎಸ್.ಜಿ., ಕೊರಲಗುಂದಿಯ ಗಾದಿಲಿಂಗ, ಸೋಮಶೇಖರ್, ಸಮೀರ್, ಎಸ ಡಿಎಂಸಿ ಅಧ್ಯಕ್ಷ ವೀರೇಶ್, ಪ್ರಸನ್ನ, ಶಿವಪ್ಪ, ಮಾರುತಿ, ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಕಂಬಳಿ ಮಂಜುನಾಥ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಜ್ಞಾನವೇ ವ್ಯಕ್ತಿಯ ನಿಜವಾದ ಆಸ್ತಿ: ಸುಬ್ರಹ್ಮಣ್ಯ

ವಿಜಯನಗರ: ಮಾಹಿತಿ ಜ್ಞಾನವಾಗಿ, ಜ್ಞಾನ ತಿಳುವಳಿಕೆಯಾಗಿ ಪರಿವರ್ತನೆಯಾಗಬೇಕು. ಜ್ಞಾನವೇ ವ್ಯಕ್ತಿಯ ನಿಜವಾದ ಆಸ್ತಿ. ಹೆಚ್ಚಿನ ಅರಿವು ತಿಳುವಳಿಕೆಯನ್ನು ಪಡೆದುಕೊಳ್ಳಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ಕುವೆಂಪು ವಿಶ್ವವಿದ್ಯಾಲಯದ ಸಹಾಯಕ ಕುಲಸಚಿವ ಹಾಗೂ ಮಾಹಿತಿಹಕ್ಕು ನೋಡಲ್ ಅಧಿಕಾರಿ ಸುಬ್ರಹ್ಮಣ್ಯ ಎಚ್.ಎನ್. ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಉಪಕುಲಸಚಿವರು, ಆಡಳಿತ ಶಾಖೆ ಮತ್ತು ಮಾಹಿತಿ ಕೇಂದ್ರದ ಸಹಯೋಗದಲ್ಲಿ ಪಂಪ ಸಭಾಂಗಣದಲ್ಲಿ ಮಾಹಿತಿ ಹಕ್ಕು ಕಾಯ್ದೆ-2005ರ ಜಾಗೃತಿ ಮತ್ತು ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡದರು.



ಇಂದಿನ ಕಾಲದಲ್ಲಿ ನಮಗೆ ಅಗತ್ಯವಾದ ಮಾಹಿತಿಯು ಬಹುಪಾಲು ಸಾಮಾಜಿಕ ಜಾಲತಾಣಗಳ ಮೂಲಕ ಲಭ್ಯವಾಗುತ್ತಿದೆ. ಮಾಹಿತಿಯನ್ನು ಯಾವ ಸಂದರ್ಭದಲ್ಲಿ, ಯಾವ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂಬ ಅರಿವು ಅಗತ್ಯವಾಗಿದೆ. ಮಾಹಿತಿ ಕೇವಲ ಮಾಹಿತಿ ಆಗಿ ಉಳಿಯದೇ, ಅದು ಜ್ಞಾನವಾಗಿ ಪರಿವರ್ತನೆಯಾಗಬೇಕು. ಜ್ಞಾನವೇ ವ್ಯಕ್ತಿಯ ನಿಜವಾದ ಆಸ್ತಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಕುಲಸಚಿವ ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಅಧ್ಯಕ್ಷತೆವಹಿಸಿ ಮಾತನಾಡ, ಇಂದಿನ ಕಾಲಘಟ್ಟದಲ್ಲಿ ಕಾನೂನುಗಳ ಅರಿವು ಪ್ರತಿಯೊಬ್ಬರಿಗೂ ಅತ್ಯಂತ ಅಗತ್ಯವಾಗಿದೆ, ಸರಳವಾಗಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಹಾಗೂ ಮುಂದೆ ಸಂಭವಿಸಬಹುದಾದ ದೊಡ್ಡ ಅನಾಹುತಗಳನ್ನು ತಪ್ಪಿಸಲು ಕಾನೂನಿನ ಕುರಿತು ಸಮಗ್ರ ತಿಳುವಳಿಕೆ ಇರಬೇಕು ಎಂದು ಅಭಿಪ್ರಾಯಪಟ್ಟರು.

ಮಾಹಿತಿ ಕೇಂದ್ರದ ಮುಖ್ಯಸ್ಥ ಶಕುಂತಲಾ ಚೌಡನಾಯ್ಕ, ಉಪಕುಲಸಚಿವ ಬಿ.ಗುರುಬಸಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪರಂಪರೆ ಉಳಿವಿಗೆ ಹಸ್ತಪ್ರತಿಗಳ ಡಿಜಿಟಲೀಕರಣ ಅಗತ್ಯ

ವಿಜಯನಗರ: ಹಸ್ತ ಪ್ರತಿಗಳಿರುವ ಮನೆಗಳಿಗೆ ತೆರಳಿ, ಕುಟುಂಬದವರ ಮನವೊಲಿಸಿ ಅವುಗಳನ್ನು ಸಂಗ್ರಹಿಸುವ ಕಾರ್ಯ ಅತ್ಯಂತ ಸವಾಲಿನದ್ದಾಗಿದೆ. ಇಂತಹ ಅಮೂಲ್ಯ ಪರಂಪರೆಯ ಪ್ರತೀಕವಾಗಿರುವ ಹಸ್ತ ಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ, ಕೇಂದ್ರ ಸಂಸ್ಕೃತಿ ಇಲಾಖೆ, ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಆಶ್ರಯದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ಆಯೋಜಿಸಿದ್ದ 'ಕರ್ನಾಟಕದ ಪ್ರಾಚೀನ ಹಸ್ತಪ್ರತಿಗಳ ಸಮೀಕ್ಷೆ ಹಾಗೂ ಡಿಜಿಟಲೀಕರಣ ವಿಜಯನಗರ ಜಿಲ್ಲೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ಸರ್ಕಾರ 'ಜ್ಞಾನ ಭಾರತಂ ಮಿಷನ್' ಅಡಿಯಲ್ಲಿ 'ಕರ್ನಾಟಕದ ಪ್ರಾಚೀನ ಹಸ್ತಪ್ರತಿಗಳ ಸಮೀಕ್ಷೆ ಹಾಗೂ ಡಿಜಿಟಲೀಕರಣ' ಕಾರ್ಯವನ್ನು ಕೈಗೆತ್ತಿಕೊಂಡಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಅಷ್ಟು ಸುಲಭದ ಕೆಲಸವಲ್ಲ. ಕನ್ನಡ ವಿಶ್ವವಿದ್ಯಾಲಯದಲ್ಲಿ ಅನೇಕರು ತಮ್ಮ ಕುಟುಂಬ ಮತ್ತು ವೈಯಕ್ತಿಕ ಬದುಕಿನ ಅನೇಕ ಸಂದರ್ಭಗಳನ್ನು ತ್ಯಜಿಸಿ ಈ ಅಮೂಲ್ಯವಾದ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಿಸುವ ಕೆಲಸ ನಿಜಕ್ಕೂ ಅಭಿನಂದನೀಯ ಎಂದರು.

ಅಧ್ಯಕ್ಷತೆಯನ್ನು ಕನ್ನಡ ವಿಶ್ವವಿದ್ಯಾಲಯದ ಕುಲಪತಿ



ಡಾ.ಡಿ.ವಿ.ಪರಮಶಿವಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಹಿಂದೆ ಹಸ್ತಪ್ರತಿಗಳನ್ನು ಓದುವುದು ಅಷ್ಟು ಸುಲಭವಾಗಿರಲಿಲ್ಲ, ಆದರೆ ಇಂದು ಬೆಳೆದಿರುವ ತಂತ್ರಜ್ಞಾನದಿಂದ ಅವುಗಳನ್ನು ಸುಲಭವಾಗಿ ಓದಿ ಅಧ್ಯಯನ ಮಾಡುವ ಅವಕಾಶ ದೊರಕಿದೆ. ಕನ್ನಡ ಸೇರಿದಂತೆ ವಿವಿಧ ಲಿಪಿಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿವೆ ಎಂದು ತಿಳಿಸಿದರು.ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ವಿಜಯನಗರ ಜಿಲ್ಲೆಯ ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಿರ್ದೇಶಕ ಡಾ. ಆರ್. ಶೇಜೇಶ್ವರ್ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಡಿ.ನಾಗರಾಜ್, ಹಾಗೂ ವಿವಿಧ ವಿಭಾಗಗಳ ಡೀನರು ಉಪಸ್ಥಿತರಿದ್ದರು.

ಕುರುಗೋಡು ಪುರಸಭೆ ಅಧ್ಯಕ್ಷ ಮಂಜುನಾಥ

ಕುರುಗೋಡು: ಪುರಸಭೆಯ 9 ತಿಂಗಳ ಅವಧಿಗಾಗಿ ನೂತನ ಅಧ್ಯಕ್ಷರಾಗಿ ಜಿ.ಮಂಜುನಾಥ, ಉಪಾಧ್ಯಕ್ಷರಾಗಿ ನಾಗವೇಣಿ ಅವರು ಸೋಮವಾರ ಪುರಸಭೆ ಕಚೇರಿಯಲ್ಲಿ ಸದಸ್ಯರ ಸಮ್ಮುಖದಲ್ಲಿ ಪದಗ್ರಹಣ ಮಾಡಿದರು.

ಈ ವೇಳೆ ಮಾತನಾಡಿದ ಪುರಸಭೆ ಅಧ್ಯಕ್ಷ ಮಂಜುನಾಥ, ಪುರಸಭೆಯ ಅಧ್ಯಕ್ಷ ಸ್ಥಾನದಲ್ಲಿ ನನ್ನ ಅಲ್ಪ ಅವಧಿಯಲ್ಲಿ ಇಟ್ಟು ಆಯ್ಕೆ ಮಾಡಿದ ನಮ್ಮ ನಾಯಕರು ಹಾಗೂ ಶಾಸಕರು ಆದ ಜೆ ಎನ್ ಗಣೇಶ ಅವರ ಮಾರ್ಗದರ್ಶನ ಈ ಸ್ಥಾನದಲ್ಲಿ ಕೂಡಲು ಅವಕಾಶ ಕಲ್ಪಿಸಿದ್ದು ಅವರು ಋಣ ತಿರಿಸಲಾಗದು ಅಲ್ಲದೆ ಸರ್ವ ಸದಸ್ಯರು ನನಗೆ ಬೆಂಬಲ ನೀಡಿದ್ದು, ಮುಂದಿನ ದಿನಗಳಲ್ಲಿ ಇರುವ ಅಲ್ಪ ಸಮಯದಲ್ಲಿ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಪುರಸಭೆ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಹೆಚ್ಚಿನ ಅಭಿವೃದ್ಧಿ ಮಾಡುವ ಮೂಲಕ ಸಾರ್ವಜನಿಕರ ಸೇವೆ ಮಾಡುವೆ ಎಂದು ಹೇಳಿದರು. ನಂತರ ಸದಸ್ಯರು ಹಾಗೂ ಸ್ನೇಹಿತರು ನೂತನ ಅಧ್ಯಕ್ಷ ಉಪಾಧ್ಯಕ್ಷರಿಗೆ ಹಾರ ಹಾಕಿ ಸನ್ಮಾನ ಮಾಡಿ ಶುಭ ಕೋರಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಬಸವರಾಜ ಸದಸ್ಯರಾದ ನಂ.3 ನಾಗರಾಜ್, ಅಂಡಿಜೋಗಿ ಸುಂಕಪ್ಪ ಇತರರಿದ್ದರು.



ಪೊರಕೆ ಹಿಡಿದು ಜಾಗೃತಿ ಮೂಡಿಸಿದ ಶಾಸಕ

ಕೂಡ್ಲಿಗಿ: 'ನಮ್ಮ ಶಾಸಕರು ಮನೆ ಮನೆಗೆ, ನಮ್ಮ ಸರ್ಕಾರ ಮನೆ ಬಾಗಿಲಿಗೆ'' ಎಂಬ ವಿನೂತನ ಜನಸ್ಪಂದನ ಕಾರ್ಯಕ್ರಮದ ಅಂಗವಾಗಿ ಶಾಸಕ ಡಾ.ಶ್ರೀನಿವಾಸ್ ಎನ್.ಟಿ. ಅವರು ಸೋಮವಾರ ಇಡೀ ದಿನ ಕ್ಷೇತ್ರದಲ್ಲಿ ಬಿಡುವಿಲ್ಲದ ಪ್ರವಾಸ ಕೈಗೊಂಡರು.

ಒಂದೇ ದಿನದಲ್ಲಿ ಸ್ವಚ್ಛತಾ ಶ್ರಮದಾನ, ಜನಸ್ಪಂದನ ಹಾಗೂ ಕೋಟ್ಯಂತರ ರೂಪಾಯಿ ವೆಚ್ಚದ ವಿವಿಧ ಪ್ರಗತಿ ಪರಿಶೀಲನೆ, ಉದ್ಘಾಟನೆ ಮತ್ತು ಭೂಮಿ ಪೂಜೆ ನೆರವೇರಿಸುವ ಮೂಲಕ ಕ್ಷೇತ್ರದಲ್ಲಿ ಅಭಿವೃದ್ಧಿಯ ಹೊಸ ಕ್ರಾಂತಿಗೆ ಮುನ್ನುಡಿ ಬರೆದಿದ್ದಾರೆ.

ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡುವ ಮುನ್ನ, ಬೆಳಿಗ್ಗೆ 8 ಗಂಟೆಗೆ ತಾಲೂಕಿನ ಸಕಲಾಪುರಹಟ್ಟಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಶಾಸಕ ಸ್ವತಃ ಮುಂಚೂಣಿಯಲ್ಲಿ ನಿಂತು ಶ್ರಮದಾನ ಮಾಡಿದರು.



ಈ ವೇಳೆ ಮಾತನಾಡಿದ ಶಾಸಕ, ಪ್ರತಿಯೊಬ್ಬರೂ ತಮ್ಮ ಮನೆ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡರೆ ಮಾರಕ ರೋಗರುಜಿನಗಳಿಂದ ದೂರವಿರಬಹುದು. ಸ್ವಚ್ಛತೆಯೇ ಆರೋಗ್ಯಕರ ಸಮಾಜಕ್ಕೆ ಮುನ್ನುಡಿ'' ಎಂದು ಕರೆ ನೀಡಿದರು.

ಇದೇ ಗ್ರಾಮದಲ್ಲಿ 12.50 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ನಿರ್ಮಾಣ ಹಾಗೂ 20 ಲಕ್ಷ ರೂ. ವೆಚ್ಚದ ನೂತನ ಅಂಗನವಾಡಿ ಕೇಂದ್ರದ ಕಟ್ಟಡ ಉದ್ಘಾಟನೆಯನ್ನು ನೆರವೇರಿಸಲಾಯಿತು.

ಇಒ ನರಸಪ್ಪ, ತಾಲೂಕು ನೌಕರರ ಸಂಘದ ಅಧ್ಯಕ್ಷ ವೆಂಕಟೇಶ, ಪಿಡಿಒ ನಿಂಗಪ್ಪ, ಎನ್‌ಆರ್‌ಎಲ್‌ಎಂ ಸಿಬ್ಬಂದಿ, ವಿವಿಧ ಇಲಾಖೆಗಳ ಅಭಿಯಂತರರು ಹಾಗೂ ಪ್ರಮುಖ ಮುಖಂಡರಾದ ಹರೀಶ್, ವೆಂಕಟೇಶ, ಮನೋಜ್, ಮಾರಪ್ಪ, ಕಂಡಕ್ಟರ್ ಬಸವರಾಜ, ಉಪ್ಪಾರ ವೆಂಕಟೇಶ, ಮುಂಜಣ್ಣ, ತಳವಾರ ಶರಣಪ್ಪ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಹಸ್ರಾರು ಸಾರ್ವಜನಿಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.